CC-O. In Public Domain. Digitized by eGangotri

ತ್ರಿ ಮ ತ ಸ್ಥ

ಸಂಧ್ಯಾವಂದನೆ

* ಸುಧಾರ್ಥಿ, ಹಾಸನ

ಸನಾತನ ಧರ್ಮವು ದ್ವಿಜರಿಗೆ ವಿಧಿಸಿರುವ
ಒಂದು ನಿತ್ಯಕರ್ಮ 'ಸಂಧ್ಯೋಪಾಸನೆ'.
ಸಂಧ್ಯೋಪಾಸನೆಯ ನಂತರವೇ ದ್ವಿಜರು
ತಮ್ಮ ಜೀವನದ ಮೂಲ ಗುರಿಯನ್ನು
ಸಾಧಿಸಬೇಕೆಂದು ಶಾಸ್ತ್ರಗಳು ಸಾರುತ್ತಿವೆ.
ಇಂಥ ಸಾಧನೆ ನಡೆಸದಿದ್ದರೆ ದ್ವಿಜರ
ಮನೆಯಲ್ಲಿ ಹುಟ್ಟಿದ್ದು ನಿಜವಾಗಿಯೂ ವ್ಯರ್ಥ.
ಈಗಲೂ ಕಾಲ ಮಿಂಚಿಲ್ಲ; ಇಂದಿನಿಂದಲೇ
ಸಂಧ್ಯೋಪಾಸನೆಗೆ ಪ್ರಾರಂಭಿಸಿ.

ಸಂಧ್ಯೋಪಾಸನೆಗೆ ಸಂಬಂಧಿಸಿದಂತೆ
ಋಗ್ಯಜುಸ್ಸಾಮ ಶಾಖೆಯ ದ್ವಿಜರಿಗೆ
ಇದೊಂದು ಉತ್ತಮವಾದ ಮಾರ್ಗದರ್ಶಿ.

ಗಾಯತ್ರೀ ಸೇವಾ ಪ್ರತಿಷ್ಠಾನ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಿಮತಸ್ಥ

ಸಂಧ್ಯಾವಂದನೆ

ಸಂಧ್ಯೋಪಾಸನೆಯ ಒಂಭತ್ತು ಪುಸ್ತಕಗಳ ಸಮೀಕ್ಷೆ; ಮತ್ತು
ಸಂಧ್ಯೋಪಾಸನೆಯ ಮಂತ್ರಗಳಿಗೆ ಕನ್ನಡ ತಾತ್ಪರ್ಯ ಸಹಿತವಾದ ಪರಿಷ್ಕೃತ ಕ್ರಮ

(ಋಗ್ಯಜುಸ್ಸಾಮ ವೇದದವರಿಗೆ)

ಲೇಖಕ :

ಸುಧಾರ್ಥಿ, ಹಾಸನ

SRI VIDYA BHARATHI
BOOK CENTRE
Bharathi Street
SRINGERI-577 139.

ಗಾಯತ್ರೀ ಸೇವಾ ಪ್ರತಿಷ್ಠಾನ
ಬೃಂದಾವನ (ಹಿಮ್ಮನೆ), ೧೫, ರಂಗರಾವ್ ರಸ್ತೆ
ಶಂಕರಪುರ, ಬೆಂಗಳೂರು–೫೬೦ ೦೦೪

Sri Vidyabharathi Book Centre, Sringeri

CC-O. In Public Domain. Digitized by eGangotri

THRIMATASTHA SANDHYAAVANDANE—
[A Litreary Analysis of 9 Different Books on Sandhyopaasane and A Modified System of Sandhyaavandane with Kannada commentary]
Analyst : SUDHARTHI, HASSAN
Published By : GAYATHRI SEVAA PRATISHTAANA
'Brindavan' (out-House), No. 15, Ranga Rao Road
Shankarapura, Bangalore-560 004

Year : 1992 Pages : 128 Price : Rs. 12-00

ಪ್ರಥಮ ಮುದ್ರಣ : ೧೯೯೨
ಕೃತಿಸ್ವಾಮ್ಯ : ಧರ್ಮಾರ್ಥವಾಗಿ ಬಳಸುವವರದು
ಮುಖಪುಟ ವಿನ್ಯಾಸ : ಕೆ. ಆರ್. ಶಂಕರನಾರಾಯಣ
ಮುಖಪುಟ ರಚನೆ : ಎಸ್. ಆರ್. ಪಾಟೀಲ್

ಬೆಲೆ : ಹನ್ನೆರಡು ರೂಪಾಯಿಗಳು

ಓದುಗರಿಗೆ ಸೂಚನೆ : ನಾವು ಮುದ್ರಿಸಿರುವ ಮುಖಬೆಲೆಯನ್ನು ಯಾವ ಕಾರಣದಿಂದಲೂ ಬದಲಿಸುವಂತಿಲ್ಲ. ಚೀಟಿ ಅಂಟಿಸುವ ಅಥವಾ ತಿದ್ದುವ ಮೂಲಕ ನಮ್ಮ ಪ್ರಕಾಶನಗಳ ಯಾವುದೇ ಪುಸ್ತಕವನ್ನು ಹೆಚ್ಚು ಬೆಲೆಗೆ ಮಾರಾಟ ಮಾಡುವ ವರ್ತಕರ ವಿರುದ್ಧ ಸ್ಥಳೀಯ ಪೊಲೀಸರಲ್ಲಿ ದೂರು ಸಲ್ಲಿಸಬೇಕಾಗಿ ಓದುಗರಿಗೆ ಸೂಚನೆ. —ಗಾಯತ್ರೀ ಸೇವಾ ಪ್ರತಿಷ್ಠಾನ : ಅನಂತ ಪ್ರಕಾಶನ : ಕೋ.ವಾ. ಕಾರಂತ ಸಾಹಿತ್ಯಮಾಲೆ, ನಂ. ೧೫, ರಂಗರಾವ್ ರಸ್ತೆ, ಬೆಂಗಳೂರು-೪

ಮುದ್ರಕರು :
ಶ್ರೀ ಶಕ್ತಿ ಗಣೇಶ್ ಪ್ರಿಂಟರ್ಸ್
ನಂ. ೧೪೩, ರಿಸರ್ವಾಯರ್ ರಸ್ತೆ,
ಬಸವನಗುಡಿ, ಬೆಂಗಳೂರು-೫೬೦೦೦೪

Sri Vidyabharathi Book Centre, Sringeri

CC-O. In Public Domain. Digitized by eGangotri

ನಾ ದೇವಾಂಶೋ ದದಾತ್ಯನ್ನಂ ನಾ ರುದ್ರಃ ಕ್ರವಂಪಾತಕಃ
ನಾ ಋಷಿಃ ಕುರುತೇ ಕಾವ್ಯಂ ನಾವಿಷ್ಣುಃ ಪೃಥ್ವೀಪತಿಃ

—ಮಹಾಭಾರತ

ಅರ್ಪಣೆ

ಸರ್ವಶಕ್ತನ ಸೃಷ್ಟಿಲೀಲೆಯ
ನಿಟ್ಟುನಿಯಮವನರುಹಿನರರಿಗೆ
'ಸರ್ವೇಜನಾಃ ಸುಖಿನೋ ಭವಂತು
ಸಮಸ್ತ ಸನ್ಮಂಗಳಾನಿ ಭವಂತು'
ಎಂಬ ಸದಾಶಯವನುಸುರಿ
ಒರೆದು ಹರಸಿಹ ಸಾಸಿರದ ಸಂಖ್ಯೆಯ
ಸಾಧು-ಸಂತರ, ಗುರು ಪರಂಪರೆಯ
ಋಷಿ-ಮುನಿಗಳ ಋಣವ ಸಲಿಸಲು
ಸುಧೆಯನರ್ಥಿಸುವವನು ನೀಡಿದ
ಶುದ್ಧ ಹೃದಯದ ಶ್ರದ್ಧಾಭಕ್ತಿಯುಕ್ತ

ಆತ್ಮ ಕುಸುಮಾಂಜಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃತಜ್ಞತೆಗಳು

ಇದೊಂದು ಧರ್ಮಪ್ರಚಾರದ ಪ್ರೇರಣೆಗೊಳಪಟ್ಟು ರಚಿತವಾದ ಕೃತಿ. ಇದರಲ್ಲಿ ನನ್ನದೆಂಬುದೇನೂ ಇಲ್ಲ. ಇದರ ರಚನೆಗೆ ನಾನೆಂಬುದು ನಿಮಿತ್ತ ಮಾತ್ರ. ನನ್ನಿಂದ ಈ ಕಾರ್ಯವಮಾಡಿಸಿದ ಸರ್ವಶಕ್ತನಿಗೆ ನಾನು ನಿತ್ಯ ಕೃತಜ್ಞ. ಸಮೀಕ್ಷೆಯಲ್ಲಿ ನನಗೆ ಅಗತ್ಯವಿದ್ದ ಒಂದೆರಡು ಕೃತಿಗಳನ್ನು ಸ್ವಯಿಚ್ಛೆಯಿಂದ ಒದಗಿಸುವ ಕೃಪೆಮಾಡಿದ ಶ್ರೀ ಕೋಟ ವಾಸುದೇವ ಕೇಶವ ಕಾರಂತರಿಗೂ, ಗೆಳೆಯ ಶ್ರೀ ಸಿ. ಡಿ. ಶ್ರೀನಿವಾಸನ್ ಅವರಿಗೂ, ನನ್ನಿಂದ ಇಂಥ ಕಾರ್ಯಸಾಧನೆಗಾಗಿ ಸದಾ ಪ್ರೇರಕಗಳಾಗಿರುವ ನನ್ನ ಶ್ರೀಮಂತಿ ಗಿರಿಜೆಗೂ ನಾನು ಕೃತಜ್ಞನಾಗಿರುವುದು ಅತ್ಯವಶ್ಯಕ.

ಸುಧಾರ್ಥಿ, ಹಾಸನ

ದಿನಾಂಕ : ೫-೨-೧೯೭೨
ಶಂಕರಪುರ, ಬೆಂಗಳೂರು-೪

ಪರಿವಿಡಿ

೧. ಮೊದಲ ಮಾತು ೫
೨. ಪೀಠಿಕೆ ೧೧
೩. ಸೂಚನೆಗಳು ೨೧
೪. ವಿವಿಧ ಕ್ರಮಗಳ ಸಮೀಕ್ಷೆ ೨೮
೫. ತ್ರಿಮತಸ್ಥ ಸಂಧ್ಯಾವಂದನೆ ೪೧
೬. ತಾತ್ಪರ್ಯ ಸಹಿತ ಸಂಕ್ಷಿಪ್ತ ವಿವರಣೆ ೬೬
೭. ಯುಕ್ತಾಯುಕ್ತ ವಿಚಾರ ೯೩
೮. ಹಿನ್ನುಡಿ ೯೬
೯. ಗಾಯತ್ರೀ ಸೇವಾ ಪ್ರತಿಷ್ಠಾನ ೧೦೫
೧೦. ಜನಿವಾರದ ವಿಚಾರ ೧೧೪
೧೧. ಬ್ರಾಹ್ಮ[illegible] ೧೨೧

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲ ಮಾತು

ವ್ಯಕ್ತಿಜೀವನದ ಪ್ರತಿಯೊಂದು ವ್ಯವಹಾರವೂ ಕೇವಲ ನಂಬಿಕೆಯೊಂದನ್ನು ಅವಲಂಬಿಸಿಯೇ ಮುಂದುವರೆಯುವುದಾಗಿದೆ. ನಂಬಿಕೆಯ ಮೂಲಬೆಂಬಲವಿಲ್ಲದಿದ್ದರೆ ನಮ್ಮ ಜೀವನದಲ್ಲಿ ಯಾವುದೇ ವ್ಯವಹಾರದ ಸಮರ್ಪಕ ಚಲಾವಣೆಯೂ ಸಾಧ್ಯವಿಲ್ಲ. ನಮ್ಮ ಜೀವನದಲ್ಲಿ ಈ ನಂಬಿಕೆಯ ಸ್ಥಾನವೇನೆಂಬುದನ್ನು ವಿಶ್ಲೇಷಿಸುತ್ತ ಹೋದರೆ, ಅದರ ವ್ಯಾಪ್ತಿಯು ವಿಸ್ತಾರವಾಗುತ್ತ ಹೋಗಿ, ಅನತಿಕಾಲದೊಳಗಾಗಿಯೇ ಅದು ಸರ್ವವ್ಯಾಪಿ ಎಂಬ ಅನುಭವವು ನಮ್ಮ ಅಂತರ್ಯಕ್ಕೆ ದೊರೆಯುತ್ತದೆ.

"ನಮ್ಮ ಜೀವನದಲ್ಲಿ ನಾವು ಏನನ್ನು ಬೇಕಾದರೂ ಸಾಧಿಸುತ್ತೇವೆ" ಎಂಬ ಭಾವನೆಯು ನಮ್ಮ ದೇಹ ಹಾಗೂ ಆತ್ಮಶಕ್ತಿಯ ವಿಚಾರದಲ್ಲಿ ನಮಗಿರುವ ಅಪಾರ ನಂಬಿಕೆಯ ಪ್ರತೀಕ. "ಭಗವಂತನ ಕೃಪೆ ಇಲ್ಲದೇ ನಾವೇನು ಮಾಡಲು ಸಾಧ್ಯ? ಎಲ್ಲವೂ ಅವನಿಚ್ಛೆ" ಎಂಬ ಭಾವನೆಯು ದೈವಶಕ್ತಿಯ ಬಗ್ಗೆ ನಮಗಿರುವ ಆಳವಾದ ನಂಬಿಕೆಯ ಪ್ರತೀಕ. ಈ ಎರಡೂ ಸನ್ನಿವೇಶಗಳಲ್ಲಿ ನಾವು ಕಾಣುವ ನಂಬಿಕೆಯು ಪರಸ್ಪರ ವಿರುದ್ಧವಾದುವುಗಳು. ಆದರೂ ಕೂಡ ಇಂಥ ನಂಬಿಕೆಗಳಲ್ಲಿ ಅಚಲವಾದ ವಿಶ್ವಾಸವನ್ನಿರಿಸಿದವರು ತಮ್ಮ ಜೀವಿತಾವಧಿಯಲ್ಲಿ ಸಾಕಷ್ಟು ಉನ್ನತಿ ಹೊಂದುವ ವಿಚಾರವು ಸರ್ವವಿದಿತ.

ಪ್ರತಿಯೊಂದು ಜೀವಜಂತುವಿಗೂ ಅದರ ಸಣ್ಣಪುಟ್ಟ ಇಚ್ಛೆಗಳು ಕೈಗೂಡಿದಾಗ ಉಂಟಾಗುವ ಮನೋಸ್ಥಿತಿಯೇ 'ಆನಂದ'. ಈ ರೀತಿಯ ಆನಂದವು ತಾತ್ಕಾಲಿಕ, ಕ್ಷಣಿಕ. ಇದನ್ನು ಹೊಂದಿದ ಕೆಲವೇ ಸಮಯದ ನಂತರ ಅದರ ತೀವ್ರತೆಯು ಕಡಿಮೆಯಾಗಿ, ಪುನಃ ಹೊಸ ಹೊಸ ಆನಂದದ ಆಕಾಂಕ್ಷೆ ತಲೆದೋರುತ್ತದೆ. ಇಂಥ ಆನಂದದ ತೀವ್ರತೆಯು ಹಂತಹಂತವಾಗಿ ಮೇಲೇರುತ್ತ ಕೊನೆಗೆ 'ಪರಮಾನಂದ'ದ ವ್ಯಾಪ್ತಿಗೆ ವಿಸ್ತರಿಸುತ್ತದೆ. ಈ ಪರಮಾನಂದದ ಸ್ಥಿತಿಯು ಶಾಶ್ವತವಾದುದು. ಪರಿಪೂರ್ಣವಾದುದು. ಇಂಥ ಶಾಶ್ವತವಾದ ಪರಮಾನಂದವನ್ನು ಹೊಂದುವುದೇ ಪ್ರತಿಯೊಂದು ಜೀವಿಯ ಜೀವಿತದ ಮಹಾನ್‌ಗುರಿ ಎಂದು ನಮ್ಮ ವೇದೋಪನಿಷತ್ತುಗಳು ಸಾರುತ್ತಿವೆ. **ಅಹಂ ಬ್ರಹ್ಮಾಸ್ಮಿ ಎಂಬ ಪರಿಪೂರ್ಣ ಜ್ಞಾನಸ್ವರೂಪವೇ ಶಾಶ್ವತವಾದ ಪರಮಾನಂದದ ಸ್ಥಿತಿ ಎಂಬುದನ್ನರಿತು, ಅಂಥ ಸ್ಥಿತಿಯನ್ನು**

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಂದುವ ಗುರಿಹೊತ್ತು ಸಾಧನೆ ನಡೆಸಬೇಕಾದುದು ನಮ್ಮೆಲ್ಲರ ಜೀವಿತದ ಮುಖ್ಯ ಕರ್ತವ್ಯ.

ಲೌಕಿಕ ಸುಖ–ಸೌಲಭ್ಯಗಳಿಂದ ದೊರೆಯುವ ಆನಂದವು ಶಾಶ್ವತವಾದುದಲ್ಲವೆಂಬುದನ್ನರಿತನಂತರ, ಶಾಶ್ವತವಾದ ಪರಮಾನಂದವನ್ನು ಹೊಂದಲು ಪ್ರಯತ್ನಿಸಬೇಕೆಂಬ ವಿಚಾರವು ಎಂಥವರ ಅಂತರಂಗಕ್ಕೂ ವೇದ್ಯವಾಗುತ್ತದೆ. ಅಂಥ ಪರಮಾನಂದದ ಪದವಿ ಪಡೆಯಲು ಶಾಸ್ತ್ರೋಕ್ತವಾಗಿ ಜೀವನ ಸಾಗಿಸುವುದರ ವಿನಃ ಬೇರೊಂದು ಮಾರ್ಗವೇ ಇಲ್ಲ.

ನಮ್ಮ ಕಣ್ಣಿಗೆ ಕಾಣಿಸದ, ಅನುಭವಕ್ಕೆ ಬಾರದ, ನಮ್ಮ ಅಂತರಂಗದಲ್ಲಿ ಉಂಟಾಗುವ ಸಮಸ್ಯೆಗಳಿಗೆ ಸೂಕ್ತವಾದ ಸಮಾಧಾನ ನೀಡಲಾಗದ ಶಾಸ್ತ್ರೋಕ್ತ ಕ್ರಮವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ನಮಗೆ ಸಾಧ್ಯವೇ ಇಲ್ಲವೆಂದು ಇಂದಿನ ಬಹುಪಾಲು ಬುದ್ಧಿಶಾಲಿಗಳು ತೀರ್ಮಾನಿಸುವುದು ಸಹಜ. ಆದರೆ ಇದು ಸರಿಯಾದ ತೀರ್ಮಾನವಲ್ಲ. ಜಗತ್ತಿನಲ್ಲಿ ಯಾವುದೇ ಸಿದ್ಧಾಂತವೂ ಅನುಭವರಹಿತವಾಗಿ ಹುಟ್ಟಿದುದಲ್ಲ.

ಪಾರಮಾರ್ಥಿಕ, ಲೌಕಿಕ, ಸಾಮಾಜಿಕ, ರಾಜಕೀಯ ಇತ್ಯಾದಿ ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರತಿಯೊಂದು ಸಿದ್ಧಾಂತಕ್ಕೂ ಅದರ ಹಿನ್ನೆಲೆಯಲ್ಲಿ ತನ್ನದೇ ಆದ ಅನುಭವ ಇದ್ದೇ ಇರುತ್ತದೆ. ಇಂಥ ಅನುಭವದ ಪ್ರಾಮಾಣಿಕತೆ, ತೀವ್ರತೆ ಹಾಗೂ ವ್ಯಾಪಕತೆಯನ್ನವಲಂಬಿಸಿ, ಸಂಬಂಧಿಸಿದ ಸಿದ್ಧಾಂತವು ಜನರಲ್ಲಿ ಪ್ರಚಾರಕ್ಕೆ ಬರುತ್ತದೆ.

ಪಾರಮಾರ್ಥಿಕ ಸಿದ್ಧಾಂತಗಳು ಅಪೌರುಷೇಯ, ಅನಾದಿ, ಅನಂತ, ಅಪಾರ. ಈ ಕಾರಣದಿಂದಾಗಿ ಇವುಗಳು ಪ್ರಶ್ನಾತೀತವೆನಿಸುವ ಮಹತ್ವವನ್ನು ಹೊಂದಿವೆ. ಉಳಿದ ಕ್ಷೇತ್ರಗಳ ಸಿದ್ಧಾಂತಗಳು ಮಾನವ ನಿರ್ಮಿತವಾದವುಗಳಾದುದರಿಂದ ಅವುಗಳ ಮಹತ್ವವು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವುದು ಸಹಜ. ಉಳಿದ ಕ್ಷೇತ್ರಗಳಿಗೆ ಸಂಬಂಧಿಸಿದ ಸಿದ್ಧಾಂತಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ವಿಚಾರ ಏನೇ ಇರಲೀ ; ಪಾರಮಾರ್ಥಿಕ ಸಿದ್ಧಾಂತಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಸಾಹಸಕ್ಕೆ ಕೈಹಾಕುವವರಿಗಂತೂ ಅಸಾಧಾರಣವಾದ ಆತ್ಮಶಕ್ತಿ ಇರಲೇಬೇಕು. ಅಂಥವರು ಮಾತ್ರ ಇಂಥ ಪರೀಕ್ಷೆಗೆ ಕೈಹಾಕುತ್ತಾರೆ. ತಮ್ಮ ಸಾಮರ್ಥ್ಯ, ಸಾಧನೆಗನುಗುಣವಾದ ಪರೀಕ್ಷೆ ನಡೆಸಿ ಫಲಿತಾಂಶವನ್ನೂ ಪಡೆಯುತ್ತಾರೆ. ಈ ರೀತಿಯ ಫಲಿತಾಂಶ ಪಡೆಯುವ ದಿಸೆಯಲ್ಲಿ ಕೆಲವೊಂದು ನಿರ್ದಿಷ್ಟ ಕರ್ತವ್ಯಗಳನ್ನು ಪಾಲಿಸಲೇಬೇಕಾದುದು ಅತ್ಯವಶ್ಯಕ. ಅವು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳ ಪೈಕಿ ದ್ವಿಜರ ಮನೆಯಲ್ಲಿ ಜನಿಸಿದವರೆಲ್ಲರೂ ಉಪನಯನಾನಂತರ ಪ್ರತಿ ದಿನವೂತಪ್ಪದೆ ಆಚರಿಸಲೇಬೇಕಾದ ತ್ರಿಕಾಲಸಂಧ್ಯಾವಂದನೆಯು ಒಂದು ಪ್ರಾಥ ಮಿಕ ಕರ್ತವ್ಯವಾಗಿದೆ. ಇಂಥ ಪ್ರಾಥಮಿಕ ಕರ್ತವ್ಯವನ್ನೂ ಸಮರ್ಪಕವಾಗಿ ನಿರ್ವಹಿಸದಿರುವವರಿಗೆ ಪಾರಮಾರ್ಥಿಕ ಸಿದ್ಧಾಂತಗಳನ್ನು ಪ್ರಶ್ನಿಸುವ ಅಧಿಕಾರ ವಾಗಲೀ, ಪರೀಕ್ಷಿಸುವ ಅರ್ಹತೆ ಅಥವಾ ಸಾಮರ್ಥ್ಯವಾಗಲೀ ದೊರೆಯು ವುದು ಅಸಂಭವದ ವಿಚಾರ.

ತಾತ್ಕಾಲಿಕವಾದ ಅಲ್ಪ ಸುಖ ಸಂತೋಷಗಳ ಜಾಲದಲ್ಲಿ ಸಿಕ್ಕಿ ತೊಳ ಲಾಡುತ್ತಿರುವ ಇಂದಿನ ದ್ವಿಜಸಮೂಹಕ್ಕೆ ಪಾರಮಾರ್ಥಿಕ ಗುರಿಸಾಧನೆಗಳ ಒಲವು ಬಹಳವಾಗಿ ಕ್ಷೀಣಿಸಿದೆ. ಅವರು ದೈನಂದಿನ ಜೀವನಕ್ರಮದಲ್ಲಿ ಕ್ರಮ ಬದ್ಧವಾದ ಸಂಧ್ಯಾವಂದನೆಯನ್ನು ತ್ಯಜಿಸಿ, ಅಂತ್ಯಜರಿಗಿಂತಲೂ ಹೀನವಾದ ಜೀವನಕ್ರಮವನ್ನು ಅನುಸರಿಸತೊಡಗಿದ್ದೇ ಇದಕ್ಕೆ ಮೂಲಕಾರಣ.

ಈ ಭೂಮಂಡಲದ, ಅದರಲ್ಲೂ ನಮ್ಮ ರಾಷ್ಟ್ರದ ಇಂದಿನ ಸಾಮಾಜಿಕ ಪರಿಸರವು ಅತ್ಯಂತ ಕ್ಲೇಶದಾಯಕವಾಗಿದ್ದು, ಯುವಜನತೆಯ ಭವಿಷ್ಯ ಜೀವನವು ಕರಾಳಕಾರ್ಗತ್ತಲಿನ ಕೂಪವಾಗಿದೆ. ಇದು ಯಾರೋ ಒಬ್ಬಿಬ್ಬರ ಜೀವನದ ಸಾಮಾನ್ಯ ಪ್ರಶ್ನೆಯಲ್ಲ. ಇಡೀ ರಾಷ್ಟ್ರದ ಯುವಜನತೆಯ ಜ್ವಲಂತ ಸಮಸ್ಯೆ. ಇದನ್ನು ಪರಿಹರಿಸುವ ದಿಸೆಯಲ್ಲಿ ಮೊದಲ ಹೆಜ್ಜೆ ಇಡ ಬೇಕಾದ ಹೊಣೆಗಾರಿಕೆಯು ದ್ವಿಜರಮನೆಗಳಲ್ಲಿ ಹುಟ್ಟಿಬೆಳೆದಿರುವ ಯುವ ಜನತೆಯ ಮೇಲೆ ಹೆಚ್ಚಾಗಿದೆ. ಇವರು ದಿಟ್ಟತನದಿಂದ, ತಾಳ್ಮೆಯಿಂದ ಈ ಹೊಣೆಗಾರಿಕೆಯನ್ನು ನಿರ್ವಹಿಸಿದಲ್ಲಿ ಅವರ ಜೀವನವು ಪರಮಾನಂದದ ಪಥ ದಲ್ಲಿ ಸಾಗುವ ಅವಕಾಶ ಪಡೆಯುತ್ತದೆ.

ಜೀವನಚಕ್ರದಲ್ಲಿ ಗಮಿಸುವ ಯಾವುದೇ ಪಥವಾಗಿರಲೀ, ಹಿಂದಿರುವ ವರು ತಮಗಿಂತ ಮುಂದಿರುವವರನ್ನು ಅನುಕರಿಸುವುದು ಸ್ವಾಭಾವಿಕ ಸಂಗತಿ. ದ್ವಿಜಸಮೂಹಕ್ಕೆ ಸೇರಿದ ಯುವಜನಾಂಗವು ತಮ್ಮ ಜೀವಿತೋದ್ದೇಶವನ್ನು ಸೂಕ್ತವಾಗಿ ಮನಗೊಂಡು, ಶಾಸ್ತ್ರೋಕ್ತ ಕ್ರಮದಲ್ಲಿ ಜೀವಿಸುವ ನಿರ್ಧಾರ ಮಾಡಿ, ತಮ್ಮ ಜೀವನಕ್ರಮವನ್ನು ಪುನರ್ರೂಪಿಸಿಕೊಂಡು, ಆತ್ಮೋನ್ನತಿಯ ಹಾದಿ ಹಿಡಿದರೆ ; ಅವರನ್ನು ಅನುಕರಿಸಿ, ಅನುಸರಿಸುವ ಉಳಿದ ಯುವ ಜನತೆಯೂ ಸ್ವಾಭಾವಿಕವಾಗಿಯೇ ಸಾರ್ಥಕಜೀವನ ಪಥದತ್ತ ಧಾವಿಸುತ್ತಾರೆ. ಆಗ ರಾಷ್ಟ್ರದ ಜೀವನಪ್ರವಾಹವು ಅಸತ್ಯದಿಂದ ಸತ್ಯದೆಡೆಗೆ; ಅಂಧಃಕಾರದಿಂದ ದಿವ್ಯಜ್ಯೋತಿಯೆಂಡೆಗೆ ; ನರಕದಿಂದ ನಾಕದೆಡೆಗೆ, ಮರಣದಿಂದ ಅಮೃತತ್ತ್ವದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಡೆಗೆ ತನಗೆತಾನೇ ಪ್ರವಹಿಸುತ್ತದೆ. ಇದೊಂದು ಸ್ವಾಭಾವಿಕವಾದ ನಿತ್ಯ ಸತ್ಯ. ಇದನ್ನು ಯಾರು ಬೇಕಾದರೂ ಪರೀಕ್ಷಿಸಬಹುದು.

ನಮಗೆ ಒಲವಿಲ್ಲದ ಯಾವುದೇ ವಿಚಾರದಲ್ಲೂ ವಿಶೇಷವಾದ ಆಸಕ್ತಿ ವಹಿಸಿ, ನಮ್ಮನ್ನು ನಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು ನಮಗೆ ಸುಲಭವಾದ ಕಾರ್ಯವೇನಲ್ಲ. ಈ ರೀತಿ ತೊಡಗಿಸಿಕೊಳ್ಳಬೇಕಾದರೆ ನಮಗೆ ಅಭ್ಯಾಸದ ಬಲವಿರಬೇಕು. ಸಂಧ್ಯಾವಂದನೆಯಂಥ ಶಾಸ್ತ್ರೋಕ್ತವಾದ ನಿತ್ಯ ಕರ್ಮವನ್ನು ಸಮರ್ಪಕವಾಗಿ ಆಚರಿಸಬೇಕಾದರೂ ನಮಗೆ ಅನುಭವ, ಅಭ್ಯಾಸ ಇರಲೇಬೇಕು. ಈ ನಿತ್ಯಕರ್ಮವನ್ನು ಹೊಸದಾಗಿ ಆಚರಿಸುವವರಿಗಂತೂ ಇದು ತುಂಬಾ ಕಠಿಣವೆನಿಸುವ ಕಾರ್ಯವಾಗಿ ಭಾಸವಾಗುವುದು ಸಹಜ. ಇದರೊಂದಿಗೆ ನಮ್ಮ ದ್ವಿಜಸಮೂಹದಲ್ಲಿ ಬಹಳ ಹಿಂದಿನಿಂದ ಇಂದಿನವರೆವಿಗೂ ಬೆಳೆದುಬಂದಿರುವ ಸ್ವಾಭಾವಿಕವಾದ ವೈವಿಧ್ಯತೆಯೊಂದಿಗೆ, ಕೆಲವೊಂದು ಅವಿವೇಕಪೂರ್ಣವಾದ ಪ್ರತ್ಯೇಕತೆಯೂ ಸೇರಿಕೊಂಡು, ಸಂಧ್ಯಾವಂದನೆಯ ಕ್ರಮವು ಸರ್ವತ್ರ ಏಕರೂಪದ್ದೆಂಬ ಸತ್ಯಾಂಶವನ್ನೇ ತೊಡೆದು ಹಾಕಿದೆ.

ದ್ವಿಜಸಮೂಹವೆಲ್ಲವೂ ಸರ್ವತ್ರ ಆಚರಿಸಬಹುದಾದಂಥ ಸಮರ್ಪಕವೂ ಸ್ಪಷ್ಟವೂ, ಅರ್ಥಪೂರ್ಣವೂ ಆದಂಥ ಕ್ರಮವನ್ನು ಪ್ರಚಾರಪಡಿಸದೇ ಇದ್ದಲ್ಲಿ ಈ ನಿತ್ಯಕರ್ಮವು ಸಾರ್ವತ್ರಿಕವಾಗಿ, ವ್ಯಾಪಕವಾಗಿ ಪುನರಾಚರಣೆಗೆ ಬರುವುದು ಬಹಳ ಕಷ್ಟದ ವಿಚಾರ.

ದ್ವಿಜಸಮೂಹದಲ್ಲಿ ಇಂದು ಪ್ರಚಲಿತವಿರುವ ಹಲವಾರು ಮತ ಸಂಪ್ರದಾಯಗಳ ಕ್ರಮಾನುಸರಣೆಯಿಂದಾಗಿ ಅವುಗಳ ಪೈಕಿ ಕೆಲವು ನೂತನ ಸಂಪ್ರದಾಯದವರಿಗೆ ತಮ್ಮ ಸಂಪ್ರದಾಯವೇ ಸರ್ವಶ್ರೇಷ್ಠ. ಉಳಿದವು ನಿಷ್ಪ್ರಯೋಜಕವಾದವು ಎಂಬ ಅನುಚಿತವಾದ ಹೀನಭಾವನೆ ಬೆಳೆದುಬಂದಿರುವುದರಿಂದಾಗಿ ಸಂಧ್ಯಾವಂದನೆಯಂಥ ನಿತ್ಯವಿಧಿಯ ವಿಚಾರದಲ್ಲೂ ಸಾರ್ವತ್ರಿಕವಾದ ಏಕರೂಪವನ್ನು ಗುರುತಿಸಿ ಆಚರಿಸಲು ಅವಕಾಶವಿಲ್ಲವಾಗಿದೆ. ದ್ವಿಜಸಮೂಹದ ಆತ್ಮೋದ್ಧಾರದ ಪಥದಲ್ಲಿ ಇದೊಂದು ದೊಡ್ಡ ದುರಂತವಾಗಿ ಪರಿಣಮಿಸಿದೆ. ಇದನ್ನು ತಡೆಗಟ್ಟಬೇಕಾದುದು ವಿವೇಕಿಗಳು ನಿರ್ವಹಿಸಬೇಕಾದ ಆದ್ಯಕರ್ತವ್ಯ. ಧಾರ್ಮಿಕ ವಿಚಾರದಲ್ಲಿ ಸಮನ್ವಯ ಸಾಧಿಸಬೇಕಾದ ಸನ್ನಿವೇಶ ಬಂದಾಗಲೆಲ್ಲ ನಮ್ಮ ಸಮಾಜದಲ್ಲಿ ಕೆಲವು ಮತಪಂಥಗಳ ಮುಂದಾಳುಗಳ ಅಂತರ್ಯುದ್ಧದಲ್ಲಿ ಸಂಪ್ರದಾಯ ಶರಣತೆಯು ಮುಂಕುಕವಿದು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಿವೇಕಪೂರ್ಣವೆಂಬುದು ಸ್ಪಷ್ಟವಿದ್ದರೂ, ಪರಂಪರಾಗತವಾಗಿ ಬೆಳೆದು ಬಂದ ಸಂಪ್ರದಾಯವನ್ನು ಮುರಿಯುವುದೆಂತು ? ಎಂಬ ದಿಗಿಲು ಹುಟ್ಟುತ್ತದೆ. ಈ ಕಾರಣದಿಂದಾಗಿ ಸರ್ವ ಸಮಂಜಸವೆನಿಸುವ ಆರೋಗ್ಯಪೂರ್ಣವಾದ ಚರ್ಚೆಯಾಗಲೀ, ನಿರ್ಣಯವಾಗಲೀ, ಆಚರಣೆಯಾಗಲೀ ಸಾಧ್ಯವೇ ಆಗುವುದಿಲ್ಲ. ಇಂದಿನ ಪರಿಸರದಲ್ಲಿ ಇಂಥದೊಂದು ಬದಲಾವಣೆ ಅನಿವಾರ್ಯ. ಈ ಕಾರಣದಿಂದಾಗಿ ಸಂಧ್ಯೋಪಾಸನೆಗೆ ನೆರವಾಗಲು ಇಂದು ಸುಲಭವಾಗಿ ದೊರೆಯುವ ಸುಮಾರು ೯ ಬೇರೆ ಬೇರೆ ಸಂಪ್ರದಾಯಗಳ ಕೃತಿಗಳನ್ನು ಕ್ರೋಢೀಕರಿಸಿ, ನನ್ನ ಸೀಮಿತ ಅನುಭವದ ಇತಿಮಿತಿಯೊಳಗೆ ವಿವೇಚಿಸಿ, ಸಮೀಕ್ಷಿಸಿ "ತ್ರಿಮತಸ್ಥ ಸಂಧ್ಯಾವಂದನೆ" ಎಂಬ ಈ ಕಿರುಹೊತ್ತಿಗೆಯನ್ನು ರೂಪಿಸಿದ್ದೇನೆ.

ಸಂಧ್ಯಾವಂದನೆಯನ್ನು ಆಚರಿಸುವ ವಿಚಾರವಾಗಿ ನಮ್ಮಲ್ಲಿ ರೂಢಿಯಲ್ಲಿರುವ ನಿಯಮಗಳು ಹಲವಾರಿರಬಹುದು. ಈಗ ಹೊಸದಾಗಿ ಸಂಧ್ಯಾವಂದನೆಯನ್ನು ಪ್ರಾರಂಭಿಸುವವರು ಖಂಡಿತವಾಗಿಯೂ ಅಂಥ ನಿಯಮ ಕಟ್ಟುಪಾಡುಗಳನ್ನು ಕುರಿತು ಚಿಂತಿಸಬೇಕಾದುದೂ ಇಲ್ಲವೆಂಬುದು ನನ್ನ ಸ್ವಾನುಭವದ ಸಲಹೆ.

ಸಂಧ್ಯಾವಂದನೆಯ ಮೂಲ ಉದ್ದೇಶವೇನು ? ಬಳಕೆಯಾಗಿರುವ ಮಂತ್ರಗಳು ಯಾವುವು ? ಆ ಮಂತ್ರಗಳ ಅರ್ಥ ಅಥವಾ ತಾತ್ಪರ್ಯ ಏನು? ಎಂಬುದನ್ನು ಸ್ಪಷ್ಟವಾಗಿ ತಿಳಿದನಂತರ ನಿಮ್ಮ ಅಂತರಂಗದಲ್ಲಿ ಸಂಧ್ಯಾವಂದನೆಯನ್ನಾಚರಿಸುವ ಒಲವು ಉಂಟಾದಲ್ಲಿ ಆ ಕ್ಷಣದಿಂದಲೇ ನಿಶ್ಚಿಂತೆಯಿಂದ, ನಿರ್ಭಯವಾಗಿ ಈ ನಿತ್ಯಕರ್ಮವನ್ನು ಆಚರಿಸುವ ಕ್ರಮವನ್ನು ರೂಢಿಗೆ ತನ್ನಿ. ಸ್ನಾನ, ಸ್ಥಳ, ಸಮಯ, ಶುದ್ಧಶುದ್ಧಾತೆ ಮುಂತಾದ ವಿಚಾರವಾಗಿ ತಲೆಕೆಡಿಸಿಕೊಳ್ಳಲೇಬೇಡಿ. ಜಪದ ಸಂಖ್ಯೆಯನ್ನು ಎಣಿಸುವ ವಿಚಾರ ಕುರಿತೂ ಗೊಂದಲಕ್ಕೊಳಗಾಗಬೇಡಿ. ಇಲ್ಲಿ ಸೂಚಿಸಿರುವ ಕ್ರಮದಲ್ಲಿ, ನಿಮ್ಮಿಂದ ಸಾಧ್ಯವಾದಷ್ಟು ನಿಮ್ಮ ಆತ್ಮಕ್ಕೆ ಸಂತೋಷವೆನಿಸುವಷ್ಟು ಪ್ರಗತಿ ಸಾಧಿಸಿ, ಮಂತ್ರಭಾಗವು ಪೂರ್ಣವಾಗಿ ನಿಮ್ಮ ಹೃದ್ಗತವಾಗುವ ವೇಳೆಗೆ ; ಸಂಪ್ರದಾಯಾನುಸಾರವಾಗಿ, ಸಮಸ್ತ ನಿಯಮಗಳನ್ನೂ ಅಳವಡಿಸಿಕೊಂಡು ಶಾಸ್ತ್ರೋಕ್ತ ಕ್ರಮದಲ್ಲಿಯೇ ಈ ನಿತ್ಯಕರ್ಮವನ್ನು ಅನುಷ್ಠಾನ ಮಾಡಬೇಕೆಂಬ ಪ್ರೇರಣೆ ; ಹಂಬಲ ನಿಮ್ಮಲ್ಲಿ ಉಂಟಾಗುತ್ತದೆ. ಆಗ ಈ ವಿಚಾರವಾಗಿ ಮಾಹಿತಿ ತಿಳಿದವರಿಂದ ಮಾರ್ಗದರ್ಶನ ಪಡೆದು, ಅವರಿಂದ ಸಮರ್ಪಕವಾಗಿ ಕಲಿತು,

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರಿಗೆ ಸೂಕ್ತವಾದ ಗುರುದಕ್ಷಿಣೆ ಸಲ್ಲಿಸಿರಿ. ಗುರು ಮುಖೇನ ಕಲಿಯದೇ ಇಂಥ ಸಾಧನೆಗಳಲ್ಲಿ ಸಿದ್ಧಿದೊರೆಯದೆಂಬ ಮುಖ್ಯ ವಿಚಾರವನ್ನು ನೆನಪಿನಲ್ಲಿಡಿ. ಯಾವುದೇ ತಪ್ಪು ಗ್ರಹಿಕೆಯಿಂದ ಭೀತಿಗೊಳಗಾಗಬೇಡಿ. ಸಾಧನೆಯ ಹಂತದಲ್ಲಿ ಪ್ರಾಮಾಣಿಕವಾದ ಕಳಕಳಿಯಿಂದ ನಾವು ಮುನ್ನಡೆಯುವಾಗ ಉಂಟಾಗುವ ನಿಯಮಗಳ ಉಲ್ಲಂಘನೆಯನ್ನು ದಯಾಳುವಾದ ಭಗವಂತನು ಖಂಡಿತವಾಗಿಯೂ ಕ್ಷಮಿಸುತ್ತಾನೆ. ಶಿಕ್ಷಿಸುವುದಿಲ್ಲ. ನಮ್ಮ ಅಂತರಂಗವು ಧರ್ಮದ ರಹಸ್ಯ ತಿಳಿದು ಅದನ್ನು ಪೂರ್ಣವಾಗಿ ಆಚರಿಸುವ ಸಾಮರ್ಥ್ಯ ಪಡೆದಾಗ ಸ್ವಾಭಾವಿಕವಾಗಿಯೇ ನಮ್ಮಲ್ಲಿ ಧರ್ಮೋಲ್ಲಂಘನೆಯ ಗುಣನಾಶವಾಗುತ್ತದೆ. ಅಲ್ಲಿಯವರೆವಿಗೂ ನಾವು ನಮ್ಮ ವಿವೇಚನೆಯನ್ನು ಬಳಸಿಕೊಂಡು ಮುನ್ನಡೆಯಲು ಭಯಪಡಬೇಕಾದ ಅಗತ್ಯವಿಲ್ಲ.

ಇಂಥ ಒಂದು ಕ್ರಾಂತಿಕಾರಿ ನಿಲುವು ಇಂದು ನಮ್ಮಲ್ಲಿ ಅತ್ಯಗತ್ಯ. ಹಾಗಲ್ಲದೇ ಕೇವಲ ಅಂಧಶ್ರದ್ಧೆಯಿಂದ, ಸಂಪ್ರದಾಯ ಶರಣತೆಗೆ ಹೆದರಿ, ಲೌಕಿಕ ಅನಾನುಕೂಲತೆಗಳ ನೆಪವೊಡ್ಡಿ, ನಾವು ಕ್ರಿಯಾಶೂನ್ಯರಾದರೆ, ನಮ್ಮ ಇಂದಿನ ಬ್ರಾಹ್ಮಣ ಜನ್ಮ ವ್ಯರ್ಥಮಾತ್ರವಲ್ಲ ; ಮುಂದಿನ ಲಕ್ಷಾಂತರ ಜನ್ಮಗಳ ತೊಳಲಾಟ ಅನಿವಾರ್ಯ. ಈ ಸತ್ಯಸಂಗತಿಯನ್ನು ಮನಗೊಂಡು ವಿವೇಕಿಗಳು ಈ ಪ್ರಯತ್ನದ ಬಗ್ಗೆ ಶ್ರದ್ಧೆವಹಿಸಿ, ತಮ್ಮ ಆತ್ಮೋದ್ಧಾರಕ್ಕೆ ತಾವೇ ಸ್ವಇಚ್ಛೆಯಿಂದ ಮುಂದಾಗುವರೆಂದು ನಂಬಿದ್ದೇನೆ.

ಸಂಧ್ಯಾವಂದನೆಯ ವಿಚಾರವಾಗಿ ಸ್ವಲ್ಪ ಮಾತ್ರವೂ ಮಾಹಿತಿ ತಿಳಿಯದವರ ಉಪಯೋಗಕ್ಕಾಗಿ ನಾನು ಈ ಕಿರು ಹೊತ್ತಿಗೆಯನ್ನು ಬರೆದಿದ್ದೇನೆ. ಸಮರ್ಪಕವಾದ ಮಾಹಿತಿ ತಿಳಿದವರಿಗೆ ಇದೇನೂ ಮಹತ್ವದ ವಿಚಾರವೆನಿಸದೆಂಬುದು ಸ್ವಾಭಾವಿಕ ಸಂಗತಿ.

ಧಾರ್ಮಿಕ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ಜ್ಞಾನವು ತೀರಾ ಸೀಮಿತವಾದುದು. ಈ ಕೃತಿಯಲ್ಲಿ ಸಂಬಂಧಿಸಿದ ವಿಚಾರಗಳನ್ನು ಕುರಿತು ನಾನು ಬರೆದಿರುವುದಕ್ಕೆಲ್ಲ ದಿ॥ ಕೋಟ ವಾಸುದೇವ ಕಾರಂತರ ಬರಹಗಳಿಂದ ಪಡೆದ ಪ್ರೇರಣೆಯೇ ಮೂಲ ಆಧಾರ. ನಿರೂಪಣೆಯ ಸನ್ನಿವೇಶದಲ್ಲಿ ತಲೆದೋರಿರಬಹುದಾದ ನ್ಯೂನತೆಗಳಿಗೆ ಮಾತ್ರ ನಾನು ಹೊಣೆಗಾರ. ಅಂಥ ನ್ಯೂನತೆಗಳನ್ನು ತಿಳಿದವರು ಉದಾರವಾಗಿ ತಿದ್ದಿ, ಕ್ಷಮಿಸಬೇಕಾದುದು ಅವರ ಕರ್ತವ್ಯ. ಈ ಕೃತಿ ರಚನೆಯ ಸನ್ನಿವೇಶದಲ್ಲಿ ಬಳಸಿರುವ ಸಾಹಿತ್ಯ ಕೃತಿಗಳ ಕರ್ತೃಗಳೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಇದೊಂದು ಧಾರ್ಮಿಕವಿಚಾರ ಹಾಗೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮಪ್ರಚಾರದ ಉದ್ದೇಶ ಹೊಂದಿದ ಕಾರ್ಯವಾದ ಕಾರಣ ; ಕೃತಿಕರ್ತೃಗಳ ಅನುಮತಿ ಪಡೆಯದಿರುವುದು ಆಕ್ಷೇಪಣೀಯವಾಗಲಾರದೆಂದು ನಂಬಿರುವೆ.

ಧರ್ಮಪ್ರಚಾರದ ದಿಸೆಯಲ್ಲಿ ಈ ಪುಸ್ತಕದ ಮಹತ್ವವನ್ನು ಮನಗೊಂಡ ನನ್ನ ಹಿರಿಯ ಮಿತ್ರರಾದ ಶ್ರೀ ಎಂ. ಎನ್. ರಾಮಕೃಷ್ಣರಾವ್ ಅವರು ೧೦೦ ಪ್ರತಿಗಳ ಉಚಿತ ವಿತರಣೆಗೆ ಆರ್ಥಿಕನೆರವು ನೀಡಿ ಸಹಕರಿಸಿರುವುದು ಉಳಿದವರಿಗೆ ಅನುಕರಣೀಯವಾದುದಾಗಿದೆ. ಶ್ರೀಯುತರಿಗೂ ನನ್ನ ಕೃತಜ್ಞತೆಗಳು.

ಸಮರ್ಪಕವಾಗಿ ಮುದ್ರಣ ಕಾರ್ಯ ನಿರ್ವಹಿಸಿರುವ ಶ್ರೀ ಶಕ್ತಿ ಗಣೇಶ್ ಪ್ರಿಂಟರ್ಸ್‌ನವರಿಗೂ, ಮುಖಚಿತ್ರವನ್ನು ರೂಪಿಸಿದ ಗೆಳೆಯ ಶ್ರೀ ಎಸ್. ಆರ್. ಪಾಟೀಲರಿಗೂ, ನನ್ನ ಸಾಹಿತ್ಯ ಕಾರ್ಯದಲ್ಲಿ ನೆರವಾಗುತ್ತಿರುವ ನನ್ನೆಲ್ಲ ಅಭಿಮಾನಿಗಳಿಗೂ ವಂದನೆಗಳು. ಎಲ್ಲರೂ ಸುಖಿವಾಗಿರಲಿ ; ಎಲ್ಲವೂ ಶುಭವಾಗಲೀ.

ಸುಧಾರ್ಥಿ, ಹಾಸನ

ಪೀಠಿಕೆ

ಸಂಧ್ಯಾವಂದನೆ ಎಂದರೇನು ?

ಸಂಧ್ಯಾವಂದನೆ ಎಂಬ ಪದದಲ್ಲಿ 'ಸಂಧ್ಯಾ' ಹಾಗೂ 'ವಂದನೆ' ಎಂಬ ಎರಡು ಶಬ್ದಗಳು ಅಡಕವಾಗಿವೆ. ಸಂಧ್ಯಾ ಎಂಬುದು ಹಗಲು ರಾತ್ರಿಗಳ ಅಧಿದೇವತೆಯ ಹೆಸರು. ವಂದನೆ ಎಂದರೆ, ನಮಸ್ಕರಿಸುವುದು ಎಂದರ್ಥ. ಒಟ್ಟು ಅರ್ಥದಲ್ಲಿ 'ಸಂಧ್ಯಾದೇವಿಗೆ ನಮಸ್ಕರಿಸುವುದು' ಎಂಬುದನ್ನು ಸಂಧ್ಯಾವಂದನೆ ಎಂಬ ಪದವು ಸೂಚಿಸುತ್ತದೆ.

ಸಂಧ್ಯಾಕಾಲ

ಅನಾದಿಯೂ, ಅನಂತವೂ, ಅಪಾರವೂ ಆದ ಕಾಲವನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗಲೆಂಬ ಉದ್ದೇಶದಿಂದ, ಮನ್ವಂತರ ; ಯುಗ ; ಸಂವತ್ಸರ ; ಅಯನ ; ಋತು ; ಮಾಸ, ಪಕ್ಷ ; ಸಪ್ತಾಹ ; ದಿನ ; ಗಂಟೆ ; ನಿಮಿಷ ; ಸೆಕೆಂಡ್ ಎಂದು ವಿಭಾಗಿಸಲಾಗಿದೆ. ಹೀಗೆ ವಿಭಾಗಿಸಲ್ಪಟ್ಟ ಬಿಡಿ ಘಟಕಗಳು ಪರಸ್ಪರ ಸಂಧಿಸುವ ಸನ್ನಿವೇಶವನ್ನು ಸಂಧಿಕಾಲವೆನ್ನಲಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದಿನ ಒಂದರಲ್ಲಿ ಹಗಲು ರಾತ್ರಿಗಳೆಂದು ೨ ಭಾಗಗಳಿವೆ. ಇವುಗಳು ಸಂಧಿಸುವ ಸಮಯವು ಸಂಧಿ ಸಮಯ. ಹಗಲಿನಲ್ಲಿ ಪೂರ್ವಾಹ್ನ, ಅಪರಾಹ್ನವೆಂದು ಎರಡು ಭಾಗಗಳಿವೆ. ಇವುಗಳು ಸಂಧಿಸುವ ಸಮಯವೂ ಸಂಧಿಸಮಯವೇ. ಈ ರೀತಿಯಲ್ಲಿ ದಿನವೊಂದರಲ್ಲಿ ಬೆಳಗಿನ ಸೂರ್ಯೋದಯದ ವೇಳೆ, ಮಧ್ಯಾಹ್ನ, ಸಂಜೆಯ ಸೂರ್ಯಾಸ್ತದ ವೇಳೆ, ಹೀಗೆ ಮೂರು ಮುಖ್ಯ ಸಂಧ್ಯಾಸಮಯಗಳಿವೆ. ಈ ಮೂರು ಸಂಧ್ಯಾ ಸಮಯಗಳಲ್ಲೂ ಸೂರ್ಯ ನನ್ನು ನಾವು ಪ್ರತ್ಯಕ್ಷವಾಗಿ ಕಾಣುತ್ತೇವೆ.

ಪರಮಾತ್ಮ-ಆತ್ಮ

ನಮ್ಮ ಕಣ್ಣಿಗೆ ಕಾಣುವ ಕಾಣದಿರುವ ಪ್ರತಿಯೊಂದು ವಸ್ತು, ವಿಚಾರ ಗಳಿಗೂ ಮೂಲಕಾರಣವಾದ ಶಕ್ತಿಯೊಂದಿದೆ. ಪರಮಾತ್ಮ ಎಂಬ ಶಬ್ದ ದಿಂದ ಅದನ್ನು ಸೂಚಿಸಲಾಗುತ್ತದೆ. ನಾವು ಕಾಣುವ, ತಿಳಿಯುವ, ಅನು ಭವಿಸುವ ಸಕಲವಸ್ತು, ವಿಷಯ, ರಸ, ಭಾವಗಳ ಅಸ್ತಿತ್ವಕ್ಕೂ ಈ ಪರಮಾತ್ಮವೇ ಮೂಲಾಧಾರ. ಸೃಷ್ಟಿಚಕ್ರದ ಚಾಲನೆಯ ಉದ್ದೇಶದಿಂದಾಗಿ ಈ ಪರಮಾತ್ಮದಿಂದ ಹೊರಬಿದ್ದ ಸಣ್ಣ ಸಣ್ಣ ಅಂಶಗಳೇ 'ಆತ್ಮ' ಎಂಬ ಶಬ್ದದಿಂದ ಸೂಚಿಸಲ್ಪಡುತ್ತವೆ. ಪರಮಾತ್ಮನು ಅವ್ಯಕ್ತ. ಆದರೆ ನಾವು ಪ್ರತಿದಿನವೂ ನೋಡುವ ಜಗಚ್ಚಕ್ಷುವೆನಿಸಿದ ಸೂರ್ಯಭಗವಾನನು ಪ್ರತ್ಯಕ್ಷ ವಾಗಿರುತ್ತಾನೆ. ಸರ್ವಶಕ್ತಳಾದ ಸಾವಿತ್ರೀ ; ಗಾಯತ್ರೀ ; ಸರಸ್ವತೀ ರೂಪ ಧಾರಿಣಿಯಾದ ಸಂಧ್ಯಾಧಿ ದೇವತೆಯು ಸೂರ್ಯಮಂಡಲವಾಸಿನಿ. ಈ ಎಲ್ಲ ಕಾರಣಗಳಿಂದಾಗಿ ಪರಮಾತ್ಮನ ವ್ಯಕ್ತಸ್ವರೂಪವಾದ ಸೂರ್ಯಭಗವಾನನಿಗೆ ಸಂಧ್ಯಾವಂದನೆಯ ಅಧಿಕಾರಿಗಳು ಪ್ರತಿದಿನವೂ ತ್ರಿಸಂಧ್ಯೆಯಲ್ಲಿ ಅರ್ಘ್ಯ ಕೊಡು ವುದರೊಂದಿಗೆ ಸಂಧ್ಯಾವಂದನೆಯ ಮೂಲಕ ಪ್ರಾರ್ಥನೆ ಸಲ್ಲಿಸುವುದು ನಿತ್ಯ ಕರ್ತವ್ಯ.

ಮುಕ್ತಿ

ಸೃಷ್ಟಿಚಕ್ರದ ಚಾಲನೆಯ ಬಂಧನದಲ್ಲಿ ಸಿಕ್ಕಿಬಿದ್ದ ಆತ್ಮರು ಈ ಬಂಧನ ದಿಂದ ಬಿಡುಗಡೆ ಹೊಂದಿ ವಿರಮಿಸುವುದನ್ನೇ ಮುಕ್ತಿ ಎಂದು ಸೂಚಿಸಲಾಗು ತ್ತದೆ. ಸಾಮೀಪ್ಯ, ಸಾಲೋಕ್ಯ, ಸಾರೂಪ್ಯ ಹಾಗೂ ಸಾಯುಜ್ಯ ಎಂದು ಮುಕ್ತಿಯಲ್ಲಿ ನಾಲ್ಕು ವಿಧಗಳಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರಂತರವಾದ ಸೃಷ್ಟಿಕ್ರಿಯೆಯಲ್ಲಿ ಪ್ರಾರಂಭವಾಗುವ ಜೀವನಚಕ್ರದಲ್ಲಿ ತೊಡಗುವ ಕೋಟ್ಯಾಂತರ ಜೀವರಾಶಿಗಳು ತಮ್ಮ ಜೀವಿತಾವಧಿಯಲ್ಲಿ ದೊರೆಯುವ ನಾನಾರೀತಿಯ ಆನಂದವನ್ನನುಭವಿಸುತ್ತ ; ತಮ್ಮ ನಿಶ್ಚಿತ ಪರಿಧಿಯ ಪಯಣವನ್ನು ಮುಂದುವರೆಸಿ, ಮನುಷ್ಯಜನ್ಮ ಪಡೆದು, ಅಲ್ಲಿನ ವರ್ಣಾಶ್ರಮ ಧರ್ಮಗಳ ತರಬೇತಿಯೊಂದಿಗೆ ತಮ್ಮ ಪಯಣದ ಅಂತಿಮ ಹಂತವಾಗಿ ದಿವ್ಯಜ್ಞಾನ ಪಡೆದು ಪುನಃ ಪರಬ್ರಹ್ಮದಲ್ಲಿ ಐಕ್ಯವಾಗುತ್ತವೆ. ಇದನ್ನೇ ಸಾಯುಜ್ಯ ಮುಕ್ತಿ ಎಂದು ಸೂಚಿಸುತ್ತಾರೆ.

ಕರ್ತವ್ಯ ; ಕರ್ಮ

ವಿಶಾಲ ವ್ಯಾಪ್ತಿಯ ಸೃಷ್ಟಿಚಕ್ರದ ಪಯಣದಲ್ಲಿ ತನ್ನ ಇಚ್ಛಾನುಗುಣವಾಗಿ ; ಪೂರ್ವಾರ್ಜಿತ ಕರ್ಮಾನುಗುಣವಾಗಿ ಲಕ್ಷಾಂತರ ಜನ್ಮಗಳನ್ನು ಪಡೆಯುವ ಪ್ರತಿಯೊಂದು ಆತ್ಮಕ್ಕೂ ಕೆಲವೊಂದು ನಿರ್ದಿಷ್ಟವಾದ ಕರ್ತವ್ಯ ಅಥವಾ ಕರ್ಮ ಎಂಬುದು ಇರುತ್ತದೆ. ಇವುಗಳು ಸೃಷ್ಟಿ ನಿಯಮಗಳಲ್ಲಿ ಸೇರಿದುವು. ಈ ಕರ್ಮಗಳನ್ನು ನಿತ್ಯಕರ್ಮ ಹಾಗೂ ನೈಮಿತ್ತಿಕ ಕರ್ಮ ಎಂದು ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವಿತಾವಧಿಯಲ್ಲಿ ಕಡ್ಡಾಯವಾಗಿ ಆಚರಿಸಲೇಬೇಕಾದ ಕೆಲವು ಕಾರ್ಯಗಳಿಗೆ ನಿತ್ಯಕರ್ಮ ಎಂದು ಹೆಸರು. ನಾವು ಯಾವುದಾದರೊಂದು ವೈಯಕ್ತಿಕ ಅಥವಾ ಸಾಮೂಹಿಕ ಕಾರಣಕ್ಕಾಗಿ ; ಕಾರ್ಯಸಾಧನೆಗಾಗಿ ; ಸರ್ವಶಕ್ತನಾದ ಭಗವಂತನನ್ನು ಕುರಿತು ಅವನ ನೆರವು ಪಡೆಯಲು ನಡೆಸುವ ಪ್ರಾರ್ಥನೆ–ಪೂಜಾರೂಪದ ಕ್ರಿಯೆಯನ್ನು ನೈಮಿತ್ತಿಕ ಕರ್ಮ ಎಂದು ಸೂಚಿಸಲಾಗುತ್ತದೆ.

ಸಂಧ್ಯಾವಂದನೆಯ ಅಧಿಕಾರಿಗಳು

ವೇದೋಕ್ತ ಕ್ರಮದಲ್ಲಿ ಸಾಗುವ ಸೃಷ್ಟಿಚಕ್ರದಲ್ಲಿ ಕೆಲವೊಂದು ವಿಶೇಷವಾದ ಹೊಣೆಗಾರಿಕೆ ಹೊತ್ತಿರುವ ದ್ವಿಜಸಮೂಹಕ್ಕೇ ನಿಯಮಿತವಾದ ಒಂದು ನಿತ್ಯಕರ್ಮ_ಸಂಧ್ಯಾವಂದನೆ. ಉಪನಯನ ಸಂಸ್ಕಾರ (ಮುಂಜಿ) ಹೊಂದಿದ ಪ್ರತಿಯೊಬ್ಬ ದ್ವಿಜನೂ ತಪ್ಪದೇ ತ್ರಿಕಾಲಗಳಲ್ಲಿ ಸಂಧ್ಯಾವಂದನೆಯನ್ನು ಆಚರಿಸಲೇಬೇಕಾಗಿದೆ. ಈ ಕಾರಣದಿಂದಾಗಿ ದ್ವಿಜರು ಸಂಧ್ಯೋಪಾಸನೆಗೆ ಅಧಿಕಾರಿಗಳೆನಿಸಿದ್ದಾರೆ. ಕ್ಷತ್ರಿಯ ಹಾಗೂ ವೈಶ್ಯ ಸಮುದಾಯವೂ ಕೂಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ನಿತ್ಯಕರ್ಮಕ್ಕೆ ಸಂಬಂಧಿಸಿದಂತೆ ದ್ವಿಜ ವರ್ಗದಲ್ಲೇ ಸೇರಿರುತ್ತಾರೆ, ಉಳಿದವರು ದಿನನಿತ್ಯದ ಈ ಕಟ್ಟುಪಾಡಿನ ಕಾರ್ಯ ನಿರ್ವಹಿಸಲೇಬೇಕೆಂಬುದೇನಿಲ್ಲ. ಇದು ವೇದೋಕ್ತವಾದ ವಿಶ್ವನಿಯಮ.

ಲೌಕಿಕ ; ಪರಮಾರ್ಥಿಕ

ಈ ಜನ್ಮದಲ್ಲಿ ಮಾನವರಾಗಿರುವ ನಾವು ಜೀವಿಸುತ್ತಿರುವ ಈ ಲೋಕದ ಆಗುಹೋಗುಗಳಿಗೆ ; ವ್ಯವಹಾರಗಳಿಗೆ (ಹುಟ್ಟು ; ಬದುಕು ; ಕಷ್ಟ ; ಸುಖ; ದುಃಖ ; ದಾರಿದ್ರ್ಯ, ಸಂಪತ್ತು ; ರೋಗ, ಸಾವು ಇತ್ಯಾದಿ) ಸಂಬಂಧಿಸಿದ ಎಲ್ಲ ವಿಚಾರಗಳನ್ನೂ ಲೌಕಿಕ ಎಂದು ಸೂಚಿಸಲಾಗುತ್ತದೆ. ಇಂಥ ಲೌಕಿಕ ವಿಚಾರಗಳಿಗೆ ನಾವು ಕಲ್ಪಿಸಿಕೊಂಡಿರುವ ಸಾಮಾನ್ಯ ಅರ್ಥವನ್ನು ಮೀರಿದ ; ಮಹತ್ತರವಾದ ಅರ್ಥಗಳಿಗೆ, ಈ ಲೋಕಕ್ಕೆ ಸೇರದ ಪರಲೋಕಗಳಿಗೆ ಸಂಬಂಧಿಸಿದ ವಿಚಾರಗಳಿಗೆ ಪಾರಮಾರ್ಥಿಕ ಎಂದು ಸೂಚಿಸಲಾಗುತ್ತದೆ.

ನಿಯಮಗಳು ; ಉಲ್ಲಂಘನೆ

ನಮ್ಮ ಲೌಕಿಕ ಪ್ರಪಂಚದಲ್ಲಿ ಎಲ್ಲ ಮಾನವರ ಜೀವನವೂ ಸುಗಮವಾಗಿ ಸಾಗಲೆಂಬ ಉದ್ದೇಶದಿಂದ ಸರ್ಕಾರಗಳ ರಚನೆಯಾಗಿದೆ. ಸಾರ್ವಜನಿಕರೆಲ್ಲರಿಗೂ ಅನ್ವಯವಾಗುವಂತೆ ಸರ್ಕಾರಗಳು ಹಲವಾರು ನಿಯಮಗಳನ್ನು ರಚಿಸುತ್ತವೆ. ಸಂಬಂಧಿಸಿದ ಸಾರ್ವಜನಿಕರೆಲ್ಲರೂ ಸರ್ಕಾರದ ಇಂಥ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕು. ಯಾರಾದರೂ ಇದನ್ನು ಉಲ್ಲಂಘಿಸಿದರೆ ಅವರನ್ನು ಹಿಡಿದು ನ್ಯಾಯಾಲಯದ ಮೂಲಕಶಿಕ್ಷೆಗೆ ಒಳಪಡಿಸಲಾಗುತ್ತದೆ. ಅಥವಾ ಸರ್ಕಾರದಲ್ಲಿ ಪ್ರಭಾವ ಬೀರಬಲ್ಲವರು ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದೂ ಉಂಟು ! ಇದು ಲೌಕಿಕಸ್ತರದಲ್ಲಿ ನಿಯಮಗಳ ಪಾಲನೆಯ ಕ್ರಮವಾಗಿದೆ. ಸೀಮಿತವಾದ ಅರ್ಥವ್ಯಾಪ್ತಿಯಲ್ಲಿ ಇದು ಮಾನವವರ್ಗಕ್ಕೆ ಮಾತ್ರ ಅನ್ವಯಿಸುವುದಾಗಿದೆ. ಆದರೆ ಇಡೀ ಜಗತ್ತಿಗೆ ಸಂಬಂಧಿಸಿದಂತೆ ಅವುಗಳ ಒಡೆಯನಾದ ಭಗವಂತನು ರೂಪಿಸುವ ನಿಯಮಗಳು ವಿಶ್ವ ನಿಯಮಗಳೆನಿಸಿವೆ, ನಿಸರ್ಗ ನಿಯಮಗಳೆನಿಸಿವೆ. ಇವು ಜಗತ್ತಿನ ಸಕಲ ಚರಾಚರ ಜೀವ-ಜಡ ವಸ್ತುಗಳಿಗೂ ಅನ್ವಯಿಸುವಂಥವು. ಅವುಗಳನ್ನು ಸಾಮಾನ್ಯವಾಗಿ ಯಾರೂ ಉಲ್ಲಂಘಿಸುವಂತಿಲ್ಲ. ಹೀಗಿದ್ದೂ ಉದ್ಧಟತನದಿಂದ ಯಾರಾದರೂ ಉಲ್ಲಂಘಿಸಿದರೆ, ಅವರಿಗೆ ಸೂಕ್ತವಾದ ಶಿಕ್ಷೆಯಾಗುವುದು ಖಚಿತ.

Sri Vidyabharathi Book Centre, Sringeri

ಲೌಕಿಕ ಸರ್ಕಾರದ ಕಾನೂನಿನ ಕಣ್ಣಿಗೆ ಮಣ್ಣೆರಚಿ ಶಿಕ್ಷೆಯಿಂದ ಪಾರಾಗುವಂತೆ, ವಿಶ್ವನಿಯಮಗಳನ್ನು ಉಲ್ಲಂಘಿಸಿ ; ಅವುಗಳ ಪಾಲಕನಾದ ಭಗವಂತನ ಕಣ್ಣಿಗೆ ಮಣ್ಣೆರಚಿ ಶಿಕ್ಷೆಯಿಂದ ಪಾರಾಗಲು ಯಾರೊಬ್ಬರಿಗೂ ಸಾಧ್ಯವಿಲ್ಲ. ಇದಕ್ಕೆ ಮುಖ್ಯ ಕಾರಣ ; ಭಗವಂತನೆಂಬುವವನು ಸರ್ವಶಕ್ತ, ಸರ್ವಾಂತರ್ಯಾಮಿ, ಸರ್ವವ್ಯಾಪಿ.

ವಿಧೇಯತೆ

ನಾವೆಲ್ಲರೂ ಸರ್ವಶಕ್ತನಿಗೆ ವಿಧೇಯರು. ಅವನು ಸೂಚಿಸಿರುವ ಮಾರ್ಗದಲ್ಲೇ ನಡೆಯಬೇಕಾದವರು. ಈ ಕಾರಣದಿಂದಾಗಿ ಎಲ್ಲರೂ ತಮಗೆ ವಿಹಿತವಾದ ನಿತ್ಯಕರ್ಮಗಳನ್ನು ತಪ್ಪದೇ ಆಚರಿಸಲೇಬೇಕಾಗಿದೆ.

"ಸಂಧ್ಯಾವಂದನೆ, ದೇವತಾರ್ಚನೆ, ಜಪ, ತಪಸ್ಸು, ಯಜ್ಞ, ಯಾಗ ಮುಂತಾದುವುಗಳೆಲ್ಲವೂ ಅರ್ಥವಿಲ್ಲದ ಆಚರಣೆಗಳು. ಇವುಗಳಿಂದ ಯಾವ ಉಪಯೋಗವೂ ಇಲ್ಲ" ಎಂದು ಯೋಚಿಸುವುದು, ವಾದಿಸುವುದು, ಜೀವಿಸುವುದು ಅವಿಧೇಯತೆಯೆಂದೆನಿಸುವ ಅಪಾಯಕಾರೀ ಮಾರ್ಗ. ಇಂಥ ಉದ್ಧಟ ವರ್ತನೆಯಿಂದ ಕಷ್ಟನಷ್ಟಗಳನ್ನನುಭವಿಸುವುದು ವೈಯಕ್ತಿಕವಾಗಿ ನಮ್ಮ ಆತ್ಮವೇ ವಿನಃ ಬೇರೊಂದು ಆತ್ಮವೇನಲ್ಲ. ಆದ್ದರಿಂದ ಲೌಕಿಕ ಸ್ತರದಲ್ಲಿ ಆತ್ಮರಕ್ಷಣೆಗಾಗಿ ಹಾತೊರೆಯುವ ನಾವು, ಪಾರಮಾರ್ಥಿಕ ಸ್ತರದಲ್ಲಿ ಆತ್ಮೋದ್ಧಾರದ ಹಾದಿ ಹಿಡಿಯುವುದರಲ್ಲಿ ಆಸಕ್ತಿ ; ಉತ್ಸಾಹ ತೋರಿಸಬೇಕಾದುದು ಅತ್ಯಗತ್ಯ.

ವೇದಗಳು ; ವೈವಿಧ್ಯತೆ

ಸೃಷ್ಟಿಚಕ್ರದ ಪ್ರಾರಂಭಕ್ಕೆ ಮೊದಲು ತಾನೊಂದೇ ಏಕಮೇವಾದ್ವಿತೀಯವೆನಿಸಿದ್ದ ಪರಬ್ರಹ್ಮವು ಸೃಷ್ಟಿಚಕ್ರದ ಚಾಲನೆಯ ಇಚ್ಛೆ ಹೊಂದಿದ ಕೂಡಲೇ ವೈವಿಧ್ಯಪೂರ್ಣವಾದ ಸೃಷ್ಟಿಕ್ರಿಯೆಯನ್ನು ನಿಯಂತ್ರಿಸುವುದಕ್ಕಾಗಿ ವೇದಗಳನ್ನು ರೂಪಿಸಿತು. ವೇದಗಳಲ್ಲಿ ಹೇಳಿರುವಂತೆಯೇ ಸೃಷ್ಟಿಚಕ್ರದ ಚಾಲನೆಯು ಪ್ರಾರಂಭವಾಯಿತು.

ವೈವಿಧ್ಯಮಯವಾದ ಸೃಷ್ಟಿಕ್ರಿಯೆಗಾಗಿ ನಿರೂಪಿತವಾದ ವೇದಗಳ ಮೂಲಸಾರವು ಒಂದೇ ಆಗಿದ್ದರೂ, ಅವುಗಳು ಸೂಚಿಸುವ ವಿಚಾರ-ವಿವರಣೆಗಳು ಸನ್ನಿವೇಶಕ್ಕನುಗುಣವಾಗಿ ವೈವಿಧ್ಯಮಯವಾಗಿ ಕಾಣತೊಡಗಿದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಮಗೆ ಗೋಚರಿಸಿದ ಇಂಥ ವೈವಿಧ್ಯಮಯವಾದ ವೇದಮಂತ್ರಗಳನ್ನು ಸೃಷ್ಟಿಯ ಆರಂಭದ ಋಷಿಮುನಿಗಳು ತಮಗೆ ಗೋಚರವಾದ ಕ್ರಮದಲ್ಲೇ ತಮ್ಮ ಮುಂದಿನ ತಲೆಮಾರಿನವರಿಗೆ ತಿಳಿಸುತ್ತ ಬಂದರು. ಸಾಂಪ್ರದಾಯಿಕ ವಾಗಿ ಈ ಕ್ರಮ ಮುಂದುವರೆದು ಕಾಲಕ್ರಮದಲ್ಲಿ ಕೆಲವೊಂದು ಪ್ರತ್ಯೇಕತೆ ಯನ್ನು ಗುರುತಿಸಲಾರಂಭವಾಯಿತು.

ವೇದಗಳು ಸೂಚಿಸುವ ವಿವರಗಳನ್ನು ಕ್ರಮವಾಗಿ ವಿಂಗಡಿಸುವ ಕಾರ್ಯ ನಡೆದಂತೆ ಋಷಿ ಪರಂಪರೆ, ಗೋತ್ರ, ಸೂತ್ರಗಳನ್ನೊಳಗೊಂಡ ಪ್ರವರವು ರೂಢಿಗೆ ಬಂದಿತು. ವೇದೋಪನಿಷತ್ತುಗಳ ಶಾಖೋಪಶಾಖೆಗಳು ಹಾಗೂ ಗೋತ್ರ ಪ್ರವರ್ತಕರಾದ ಋಷಿಮುನಿಗಳ ಪರಂಪರೆಗನುಗುಣವಾಗಿ ಸಂಧ್ಯೋ ಪಾಸನೆಯ ಕ್ರಮದಲ್ಲೂ ಹಲವಾರು ಕವಲುಗಳು ಹುಟ್ಟಿ ಬೆಳೆದುವು. ವೇದ, ಶೃತಿ, ಸ್ಮೃತಿ, ಉಪನಿಷತ್ತುಗಳ ನಂತರ ಪುರಾಣಗಳ ಸೃಷ್ಟಿಯ ಕಾಲ ಬಂದಾಗ ಇಂಥ ಪ್ರತ್ಯೇಕತೆಯು ಇನ್ನಷ್ಟು ಸ್ಪಷ್ಟವಾಗಿ ; ಕಾಲಕ್ರಮೇಣ ಮೂಲ ಹೇಳಿಕೆ ಗಳಿಗೆ ತಪ್ಪು ವ್ಯಾಖ್ಯಾನ ಹಾಗೂ ಪ್ರಕ್ಷಿಪ್ತ ಭಾಗಗಳ ಪರಿಣಾಮವಾಗಿ ಇವು ಗಳ ಹೇಳಿಕೆಗಳೇ ಪರಸ್ಪರ ವಿರುದ್ಧವೆನಿಸುವ ಹಂತ ತಲ್ಪಿತು.

ಕಾಲಕ್ರಮೇಣ ಸನಾತನಧರ್ಮದಲ್ಲಿಯೇ ಹಲವಾರು ನೂತನ ಮತ ಸಂಪ್ರದಾಯಗಳು ತಲೆದೋರಿದವು. ಹೊಸದಾಗಿ ತಲೆದೋರಿದ ಇಂಥ ಮತ ಸಂಪ್ರದಾಯಗಳ ಅನುಯಾಯಿಗಳು ತಮ್ಮ ಮೂಲ ಧರ್ಮವಾವುದೆಂಬು ದನ್ನೇ ವಿವೇಚಿಸದೆ, ತಾವು ಅನುಸರಿಸುವ ಇಂದಿನ ಮತ-ಸಂಪ್ರದಾಯವೇ ಶ್ರೇಷ್ಠವೆಂಬ ಒಣ ಅಹಂಕಾರ ಹೊಂದಿ, ತಮ್ಮದಲ್ಲವೆಂದು ತಾವು ಭಾವಿಸುವ ಮೂಲ ಮತ ಸಂಪ್ರದಾಯಗಳನ್ನು ಅತ್ಯಂತ ಹೀನಾಯವಾಗಿ ಕಡೆಗಣಿಸುವ, ಅವಹೇಳನ ಮಾಡುವ ಅನುಚಿತ ವರ್ತನೆಯನ್ನು ರೂಢಿಸಿಕೊಂಡದ್ದನ್ನೂ ಕಾಣಬಹುದು.

ಧಾರ್ಮಿಕ ಜೀವನದ ಎಲ್ಲ ಕ್ಷೇತ್ರಗಳಿಗೂ ಸಂಬಂಧಿಸಿದಂತೆ ತಲೆದೋರಿದ ಈ ಮನೋಭಾವವು ವೇದಾಧಿಕಾರಿಗಳ ನಿತ್ಯಕರ್ಮವಾದ ಸಂಧ್ಯೋಪಾಸನೆ ಯಲ್ಲಿಯೂ ಗೋಚರಿಸಿ, 'ಸಂಧ್ಯೆಯು ಸಹಸ್ರವಿಧ' ಎಂಬ ಮಾತು ರೂಢಿಗೆ ಬರುವಂತಾಯಿತು. ಈ ಮಾತಿನಲ್ಲಿ ಸಂಪೂರ್ಣ ತಥ್ಯವಿದ್ದು, ಇಂದು ಸಂಧ್ಯಾ ವಂದನೆಯನ್ನಾಚರಿಸುವವರಲ್ಲಿ ಸಾವಿರಕ್ಕಿಂತ ಹೆಚ್ಚಿನ ವಿವಿಧತೆಯನ್ನು ನಾವು ಗಮನಿಸಬಹುದೇನೋ. ಆದರೆ ಅಂಥ ಬೇರೆ ಬೇರೆ ಕ್ರಮಗಳ ಒಳಹೊಕ್ಕು ನೋಡಿದಾಗ, ನಾವು ಗಮನಿಸಬಹುದಾದ ಅತ್ಯಂತ ಪ್ರಮುಖವಾದ ವೈವಿಧ್ಯತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೆಂದರೆ ಒಂದೇ ಒಂದು ! ಶಿವನನ್ನು ಪ್ರಧಾನದೇವತೆಯಾಗಿ ಪರಿಗಣಿಸುವವರು ಕೆಲವರಾದರೆ ; ವಿಷ್ಣುವನ್ನು ಪ್ರಧಾನದೇವತೆಯಾಗಿ ಕೆಲವರು ಪರಿಗಣಿಸುತ್ತಾರೆ. ಇದಕ್ಕನುಗುಣವಾಗಿ ಲಾಂಛನಧಾರಣೆಯಲ್ಲಿ ಭಿನ್ನತೆಯಿರಬೇಕಾದುದು ಸರ್ವ ಸಹಜ. ಇದೊಂದು ವಿಚಾರ ಹೊರತುಪಡಿಸಿದರೆ, ಸಂಧ್ಯಾವಂದನೆಯನ್ನಾಚರಿಸುವ ಮಂತ್ರಗಳು ಸಾಮಾನ್ಯವಾಗಿ ಒಂದೇ ಆಗಿರುತ್ತವೆ.

ಸಂಧ್ಯಾವಂದನೆ ಕ್ರಿಯೆಗೆ ಪೂರಕವಾದ ಬೇರೆ ಬೇರೆ ಹಂತಗಳಲ್ಲಿ ಕೆಲವೊಂದು ವ್ಯತ್ಯಾಸಗಳನ್ನು ಕಾಣಬಹುದಾದರೂ ಮುಖ್ಯ ಕ್ರಿಯೆಗಳಾದ ಅರ್ಘ್ಯ, ಆವಾಹನೆ, ಜಪ, ವಿಸರ್ಜನೆ, ಅಭಿವಾದನ ಮುಂತಾದವುಗಳಲ್ಲಿ ಎಲ್ಲರ ಆಚರಣೆಯೂ ಒಂದೇ ರೀತಿಯದಾಗಿರುತ್ತದೆ. ಉಳಿದಂತೆ ಆಚಮನದಲ್ಲಿ ಬಳಸುವ ಮಂತ್ರದಲ್ಲಿ ಬದಲಾವಣೆ ಕಾಣಬಹುದು. ಹಣೆ, ಎದೆ, ತೋಳು, ಭುಜ, ಸೊಂಟ ಮುಂತಾದೆಡೆಗಳಲ್ಲಿ ಲಾಂಛನವನ್ನಿಟ್ಟುಕೊಳ್ಳುವಾಗ ಮಾಡುವ ನಾಮಸ್ಮರಣೆ ಶಿವ ಅಥವಾ ವಿಷ್ಣುವಿನದಾಗಿರುತ್ತದೆ.

ಶರೀರ ಶುದ್ಧಿಗಾಗಿ ದೇಹದ ವಿವಿಧ ಅವಯವಗಳನ್ನು ಸ್ಪರ್ಶಿಸುವಾಗ ಮಾಡುವ ನಾಮಸ್ಮರಣೆಯಲ್ಲಿ ಕೆಲವರು ವಿಷ್ಣುವಿನ ದ್ವಾದಶನಾಮೋಚ್ಚಾರಣೆ ಮಾಡಿದರೆ ಕೆಲವರು ಅವಯವಗಳ ಹೆಸರನ್ನೇ ಸೂಚಿಸಿ, ಅವುಗಳನ್ನು ಸ್ಪರ್ಶಿಸುತ್ತಾರೆ. ದ್ವಾದಶನಾಮ ಹೇಳುತ್ತ ಕೈಗಳು, ಪಾದಗಳು, ಕಣ್ಣುಗಳು, ಮೂಗು, ಕಿವಿಗಳು, ಬಾಹುಗಳು, ಹೃದಯ, ಹೊಕ್ಕಳು, ಶಿರಸ್ಸು ಮುಂತಾದುವುಗಳನ್ನು ಸ್ಪರ್ಶಿಸಲಿ ಅಥವಾ ಸಹಸ್ರನಾಮವನ್ನೇ ಹೇಳುತ್ತ ಇಡೀ ಶರೀರವನ್ನೇ ಸ್ಪರ್ಶಿಸಲೀ ಈ ಕ್ರಿಯೆಯ ಆಚರಣೆಯಿಂದ ಆಗುವ ಫಲ ಒಂದೇ ರೀತಿಯದೆಂಬುದು ಖಚಿತ.

ಸಂಕಲ್ಪ ಮಾಡುವಾಗ ಮತ್ತು ಕರ್ಮಫಲವನ್ನು ಧಾರೆಯೆರೆಯುವಾಗ ಶೈವರು ಶಿವನ ಹೆಸರು ಹೇಳಿದರೆ, ಶ್ರೀವೈಷ್ಣವರು ವಿಷ್ಣುವಿನ ಹೆಸರು ಹೇಳುತ್ತಾರೆ. ಮಾಧ್ವರು ಪ್ರಾಣದೇವರು ಅಥವಾ ಗುರುಪರಂಪರೆಯನ್ನು ಗೌರವಿಸುವ ಸಲುವಾಗಿ ಮಧ್ವೇಶನ ಹೆಸರು ಹೇಳುತ್ತಾರೆ. ಇಂಥ ಸಣ್ಣಪುಟ್ಟ ವ್ಯತ್ಯಾಸಗಳಿಂದ ಕೂಡಿದ ವೈವಿಧ್ಯತೆಗಳಿದ್ದರೂ ಸಂಧ್ಯಾವಂದನೆಯ ಕ್ರಮವು ಸರ್ವತ್ರ ಒಂದೇ ರೀತಿಯಲ್ಲಿರುವುದು ಗಮನಾರ್ಹ.

ಮೂಲ ಉದ್ದೇಶ

ಸೃಷ್ಟಿಕಾರ್ಯದಲ್ಲಿ ಸರ್ವಶಕ್ತನಾದ ಪರಮಾತ್ಮನ ಸಹಚಾರಿಣಿಯಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕೃತಿಮಾತೆಯ ಪ್ರಭಾವಕ್ಕೆ ಸಿಕ್ಕಿದ ಆತ್ಮರು ತಮ್ಮ ಮೂಲಭೂತ ಸ್ವರೂಪವನ್ನು ಕುಂಠಿತಗೊಳಿಸಿಕೊಂಡು, ಪ್ರಕೃತಿದತ್ತವಾದ ದೇಹದ ಮೂಲಕ ದೊರೆಯುವ ಆನಂದದ ಅನುಭವ ಪಡೆಯುವುದರಲ್ಲಿ ಆಸಕ್ತರಾಗುವುದು ಸೃಷ್ಟಿ ಚಕ್ರದ ಒಂದು ಭಾಗ. ತಮ್ಮ ಕರ್ಮಾನುಸಾರವಾಗಿ ಲಕ್ಷೋಪಲಕ್ಷ ಜನ್ಮಗಳ ಅವಧಿಯಲ್ಲಿ ತಾವು ಬಯಸಿದ, ಆಸಕ್ತಿ ವಹಿಸಿದ, ಕರ್ಮಾನುಸಾರವಾಗಿ ಎದುರಾಗುವ ನಾನಾರೀತಿಯ ಆನಂದಾನುಭವದನಂತರ ಮಾನವಜನ್ಮ ಪಡೆದ ಆತ್ಮರು ಈ ಸನ್ನಿವೇಶದಲ್ಲಿ ಪ್ರಕೃತಿ ನಿಯಮಗಳಲ್ಲಿ ಸ್ವಲ್ಪಮಟ್ಟಿನ ಸ್ವಾತಂತ್ರ್ಯ ಪಡೆದು, ಕೇವಲ ಶರೀರವೆಂಬುದೇ ತಾವಲ್ಲ; ಈ ದೇಹದಲ್ಲಿರುವ ಆತ್ಮ ಎಂಬುದು ತಮ್ಮ ನಿಜವಾದ ಸ್ವರೂಪ, ಅದನ್ನು ಈ ದೇಹ ಬಂಧನದಿಂದ ಬಿಡುಗಡೆ ಮಾಡಿ ಸಚ್ಚಿದಾನಂದಸ್ವರೂಪವಾದ ಪರಮಾತ್ಮನೊಂದಿಗೆ ಸಂಯೋಗವಾಗುವಂತೆ ಮಾಡುವುದೇ ತಮ್ಮ ಜೀವನಯಾತ್ರೆಯ ಮುಖ್ಯಗುರಿ ಎಂಬುದನ್ನು ತಿಳಿದು, ಆ ದಿಸೆಯಲ್ಲಿ ಪ್ರಯತ್ನ ಮಾಡಲು ಮಾನಸಿಕ ಒಲವು ಹೊಂದುತ್ತಾವೆ. ಇದು ಸೃಷ್ಟಿಚಕ್ರದ ಎರಡನೆಯ ಭಾಗ.

ವೇದೋಕ್ತ ಕ್ರಮದಲ್ಲಿ ಮಾನವನು ಜೀವನ ಸಾಗಿಸುತ್ತ, ತನ್ನ ಆತ್ಮಕ್ಕೆ ಉತ್ತಮವಾದ ಸಂಸ್ಕಾರವನ್ನೊದಗಿಸಿ, ವರ್ಣಾಶ್ರಮ ಕ್ರಮದಲ್ಲಿ ಸೂಚಿಸಿರುವಂತೆ ಹಂತಹಂತವಾಗಿ ಮೇಲಿನ ವರ್ಣದ ಜನಾಂಗದಲ್ಲಿ ಜನ್ಮಪಡೆದು, ಕೊನೆಯಲ್ಲಿ ಅತ್ಯುತ್ತಮ ದ್ವಿಜನೆನಿಸಿ, ಸೃಷ್ಟಿಕ್ರಿಯೆಯ ಪರಿಪೂರ್ಣತೆಗಾಗಿ ರೂಪಿತವಾಗಿರುವ ಸಮಸ್ತ ವಿಶ್ವನಿಯಮಗಳನ್ನೂ ಸಮರ್ಪಕವಾಗಿ ಪರಿಪಾಲಿಸಿ, ತನ್ನ ಆತ್ಮಸಂಸ್ಕಾರವನ್ನು ಯಶಸ್ವಿಗಾಗಿ ಪೂರ್ಣಗೊಳಿಸಿ, ಉಳಿದ ಆತ್ಮಗಳಿಗೂ ಬಿಡುಗಡೆಯ ಹಾದಿಯಲ್ಲಿ ಬೆಳಕು ಬೀರಿ, ಯುಕ್ತ ಮಾರ್ಗದರ್ಶನ ನೀಡಿ, ತನ್ನ ಜೀವಿತಾವಧಿಯ ಪರಮಗುರಿಯಾದ ಸಾಯುಜ್ಯಮುಕ್ತಿಯನ್ನು ಪಡೆದು, ದೇಹಬಂಧನದ ಇತಿಮಿತಿಯನ್ನೊಳಗೊಂಡ ಸಂಸಾರ ಸಾಗರದ ಜಂಜಡದಿಂದ ಪಾರಾಗುತ್ತಾನೆ. ಇದು ಸೃಷ್ಟಿಚಕ್ರದ ಮೂರನೇ ಭಾಗ.

ಸೃಷ್ಟಿಚಕ್ರದ ಚಾಲನೆಯಲ್ಲಿ ಸಿಕ್ಕಿಬಿದ್ದು ತೊಳಲಾಡುವ ಆತ್ಮಕ್ಕೆ ಶಾಶ್ವತ ವಿಶ್ರಾಂತಿಯಹಾದ ಸಾಯುಜ್ಯ ಮುಕ್ತಿಯನ್ನೊದಗಿಸುವ ಮೂರನೇ ಭಾಗವು ಅತ್ಯಂತ ಮಹತ್ತರವಾದುದು. ಇಂಥ ಗುರಿ ಸಾಧನೆಯು ಎಲ್ಲ ಆತ್ಮಗಳಿಗೂ ಒಮ್ಮಿಂದೊಮ್ಮೆಯೇ ಸಾಧ್ಯವಾಗುವುದು ಅಸಂಭವ. ಈ ಹಂತವನ್ನು ತಲುಪಲು ಹಲವಾರು ಉತ್ತಮ ಜನ್ಮಗಳ ಸಂಸ್ಕಾರ, ತರಬೇತಿ ಅತ್ಯಗತ್ಯ. ಅರ್ಹರಾದ ಆತ್ಮರಿಗೆ ಇಂಥ ಅತ್ಯಗತ್ಯವಾದ ತರಬೇತಿಯನ್ನು ನೀಡುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಉದ್ದೇಶದಿಂದಾಗಿ ಪರಮಾತ್ಮನು ವೇದೋಪನಿಷತ್ತುಗಳ ಮೂಲಕವಾಗಿ ಕಲ್ಪಿಸಿರುವ ಒಂದು ಅತ್ಯಂತ ಸುಲಭವಾದ ಕ್ರಮ ಸಂಧ್ಯಾವಂದನೆ.

ಸಂಸಾರ ಸಾಗರದಲ್ಲಿ ತೊಳಲಾಡುವ ಮಾನವನ ದೇಹ ಬಂಧನವನ್ನು ಕಳಚಿ, ಶಾಶ್ವತವಾದ ಸಚ್ಚಿದಾನಂದ ಪದವಿಯನ್ನು ಶೀಘ್ರವಾಗಿ ಪಡೆಯಲು ಅತ್ಯವಶ್ಯಕವಾಗಿ ಅನುಸರಿಸಲೇಬೇಕಾದ ಅನಿವಾರ್ಯವಾದ ಮಾರ್ಗ ಸಂಧ್ಯಾವಂದನೆಯೆಂಬ ಮೂಲ ಉದ್ದೇಶವನ್ನರಿತ ಮೇಲೆ ದ್ವಿಜರ ಮನೆಯಲ್ಲಿ ಜನಿಸಿದ ಪ್ರತಿಯೊಬ್ಬ ವ್ಯಕ್ತಿಯೂ ತಪ್ಪದೇ ಸಂಧ್ಯಾವಂದನೆಯ ಕ್ರಮವನ್ನು ಅಭ್ಯಸಿಸಿ, ಹಂತ ಹಂತವಾಗಿ ಅದರ ಸಂಪೂರ್ಣ ವಿವರಗಳನ್ನರಿತುಕೊಂಡು, ತಮ್ಮ ಆತ್ಮ ಸಂತೃಪ್ತಿ ದೊರೆಯುವವರೆವಿಗೂ ಜಪ–ತಪಗಳನ್ನಾಚರಿಸಿ, ಈ ಭವದ ಬಂಧನ ದಿಂದ ಬಿಡುಗಡೆ ಹೊಂದುವ ನಿರ್ಧಾರ ಮಾಡಬೇಕಾದುದು ಅತ್ಯಂತ ಸೂಕ್ತವಾದ ಸಂಗತಿಯಾಗಿದೆ.

ನಾವು ನಡೆಸುವ ಯಾವುದೇ ಪ್ರಯತ್ನವಾಗಿರಲೀ ಅದರಿಂದ ತಕ್ಷಣವೇ ಪ್ರತ್ಯಕ್ಷಫಲ ಪ್ರಾಪ್ತಿಯಾಗಬೇಕೆಂಬ ಬಯಕೆಯು ಪ್ರತಿಯೊಬ್ಬ ಮಾನವನಲ್ಲಿಯೂ ಸಹಜವಾಗಿರುತ್ತದೆ. ಆದರೆ ಇದು ಕೇವಲ ಲೌಕಿಕ ಮಟ್ಟದ ಆಕಾಂಕ್ಷೆಯೆನಿಸುತ್ತದೆ. ನಾವು ಮಾಡುವ ಪ್ರತಿಯೊಂದು ಒಳ್ಳೆಯ ಕಾರ್ಯಕ್ಕೂ ಪ್ರತಿಫಲವೆಂಬುದು ಇದ್ದೇ ಇದೆ; ಅದು ಪ್ರತ್ಯಕ್ಷವಾಗಿರಬಹುದು ಅಥವಾ ಪರೋಕ್ಷವಾಗಿರಬಹುದು. ಪ್ರತ್ಯಕ್ಷ ಫಲಗಳೆಲ್ಲವೂ ಸಾಮಾನ್ಯವಾಗಿ ಲೌಕಿಕವಾದುವುಗಳು. ಪರೋಕ್ಷ ಫಲದ ಪ್ರಭಾವದಿಂದ ಮಾತ್ರವೇ ಮಾನವತ್ವದಿಂದ ದೈವತ್ವಕ್ಕೆ; ದೈವತ್ವದಿಂದ ಸಾಯುಜ್ಯ ಮುಕ್ತಿಗೆ ಹೋಗಿ ಸೇರಲು ಸಾಧ್ಯವೆಂಬುದನ್ನು ನಾವು ಅರಿತಿರಬೇಕು. ಇಂಥ ಸಾರ್ಥಕವಾದ ಅರಿವು ಮಾತ್ರ ಆತ್ಮದ ಮಹತ್ವಾಕಾಂಕ್ಷೆಯೆನಿಸಬಲ್ಲುದು. ಪ್ರತಿಯೊಂದು ಆತ್ಮಕ್ಕೂ ಇಂಥ ಮಹತ್ವಾಕಾಂಕ್ಷೆ ಒಂದಲ್ಲ ಒಂದು ಕಾಲಕ್ಕೆ ಬಂದೇಬರುತ್ತದೆ. ಆ ರೀತಿ ಬರಲು ಪ್ರಕೃತಿದತ್ತವಾದ, ಸೂಕ್ತವಾದ ಸಮಯ ಸನ್ನಿವೇಶಗಳಿರಬೇಕಾದುದು ಅಗತ್ಯ.

ವೇದೋಕ್ತಕ್ರಮದಲ್ಲಿ ವಿವೇಚಿಸಿದಾಗ; ಉತ್ತಮವಾದ ಬ್ರಾಹ್ಮಣ ವರ್ಗದಲ್ಲಿ ಹುಟ್ಟಿದ ಆತ್ಮರಿಗೆ, ಅವರ ಅರಿವಿಲ್ಲದೆಯೇ ಅಂಥ ಸೂಕ್ತವಾದ ಸಮಯ ಸನ್ನಿವೇಶಗಳು ಒದಗಿ ಬಂದಿರುತ್ತವೆ. ಅದನ್ನು ಅರಿತು, ಎಚ್ಚರಿಕೆಯಿಂದ ಆತ್ಮೋನ್ನತಿಯ ದಾರಿ ಹಿಡಿದು, ತಮಗೆ ಸಾಧ್ಯವಿರುವಷ್ಟು ಪ್ರಗತಿಯನ್ನು ಈ ಜನ್ಮದಲ್ಲೇ ಸಾಧಿಸುವುದು ಬುದ್ಧಿವಂತರ ಲಕ್ಷಣವಾದೀತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಧ್ಯಾವಂದನೆಯನ್ನಾಚರಿಸುವ ಹಿನ್ನೆಲೆಯಲ್ಲಿ ಅಡಕವಾಗಿರುವ ಅತಿ ಮುಖ್ಯವಾದ ಈ ಉದ್ದೇಶವನ್ನು ಅರ್ಥ ಮಾಡಿಕೊಂಡಾಗ, ನಮಗೆ ರೂಢಿಯಲ್ಲಿರುವ ಯಾವುದೇ ಸುಲಭವಾದ ಸಂಧ್ಯಾವಂದನೆಯ ಕ್ರಮವಾದರೂ ಅಡ್ಡಿಯಿಲ್ಲವೆಂಬ ಅಂತರಿಕಜಿತ್ತಡ ಬರಬೇಕು. ಈ ಕಿರುಹೊತ್ತಿಗೆಯಲ್ಲಿ ನಾನು ಸಂಧ್ಯೋಪಾಸನೆಗೆ ಸಂಬಂಧಿಸಿದಂತೆ ನನಗೆ ಲಭ್ಯವಿರುವ ಸುಮಾರು ಒಂಬತ್ತು ಕೃತಿಗಳನ್ನು ಕುರಿತು ಸಮೀಕ್ಷಿಸಿದ್ದೇನೆ. ಈ ಒಂಬತ್ತು ಕೃತಿಗಳೂ ಸಾಮಾನ್ಯವಾಗಿ ನಮ್ಮ ಕನ್ನಡನಾಡಿನ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚು ಪ್ರಚಾರದಲ್ಲಿರುವವು. ಇವುಗಳನ್ನು ಹೊರತುಪಡಿಸಿ; ಇನ್ನೂ ಹಲವಾರು ಕ್ರಮಂಗಳು ರೂಢಿಯಲ್ಲಿರುವುದು ಸ್ವಾಭಾವಿಕ. ಸಂಧ್ಯಾವಂದನೆಯ ಕ್ರಮವನ್ನು ಕುರಿತು ಶ್ರೀ ಬನ್ನಂಜೆ ರಾಘವೇಂದ್ರತೀರ್ಥರು ಪ್ರಕಟಿಸಿರುವ 'ಜ್ಞಾನವಾಹಿನಿ-ತರಂಗ ೭' ರಲ್ಲಿ ಅಡಕವಾಗಿರುವ ಕೆಲವೊಂದು ಅಂಶಗಳನ್ನೂ ನಾನು ಈ ಕೃತಿರಚನೆಯಲ್ಲಿ ಸೇರಿಸಿಕೊಂಡಿದ್ದೇನೆ. ಸಂಧ್ಯೋಪಾಸನೆಯ ಕ್ರಮ ಒಂದೇ ಆಗಿರಲೀ ; ಒಂದು ಸಾವಿರವೇ ಆಗಿರಲಿ, ಅದರ ಮೂಲ ಉದ್ದೇಶವು ಸಾಯುಜ್ಯ ಮುಕ್ತಿ ಸಾಧನೆಯ ತರಬೇತಿಯ ಹಂತದಲ್ಲಿ ಸರ್ವಶಕ್ತನ ಸಹಾಯ ಪಡೆಯಲು ಪ್ರಾರ್ಥನೆ ನಡೆಸುವುದಾಗಿದೆಯೆಂದ ಮೇಲೆ ಯಾವ ಕ್ರಮವನ್ನು ಅನುಸರಿಸಿ, ಶ್ರದ್ಧಾಭಕ್ತಿಯಿಂದ ವ್ಯವಹರಿಸಿದರೂ ಅದರಿಂದ ದೊರೆಯುವ ಫಲವು ಒಂದೇ ಎಂಬ ಅಂಶವನ್ನು ನಾವು ಮರೆಯಬಾರದು.

ಅರ್ಥದ ಮಹತ್ವ

ಸಂಧ್ಯಾವಂದನೆಯ ಮಂತ್ರಗಳಿರುವುದು ಸುರಭಾಷೆಯೆನಿಸಿದ ಸಂಸ್ಕೃತದಲ್ಲಿ. ಸಂಸ್ಕೃತಭಾಷೆಯಲ್ಲಿರುವ ಮಂತ್ರಗಳ ಸಂಪೂರ್ಣ ಅರ್ಥ ನಮಗೆ ತಿಳಿಯದಿದ್ದರೆ ಸಂಧ್ಯೋಪಾಸನೆಯನ್ನು ಆಚರಿಸುವುದರಿಂದ ನಿಜವಾಗಿಯೂ ತಕ್ಷಣವೇ ದೊರೆಯಬೇಕಾದ ಮಾನಸಿಕ ಪ್ರಸನ್ನತೆಯು ದೊರೆಯುವುದು ಸ್ವಲ್ಪ ಸಂಶಯಾಸ್ಪದವಾದ ಸಂಗತಿ. ಮಂತ್ರಗಳ ಅರ್ಥ ಅಥವಾ ತಾತ್ಪರ್ಯವಾದರೂ ಆಚರಿಸುವ ಸಮಯದಲ್ಲಿ ನಮಗೆ ತಿಳಿಯದಿದ್ದರೆ ; ನಿಶ್ಚಯವಾಗಿಯೂ ನಾವು ಆಚರಿಸುವ ಕ್ರಿಯೆಯಲ್ಲಿ ನಮ್ಮ ಶ್ರದ್ಧಾಭಕ್ತಿ, ಏಕಾಗ್ರತೆ, ಚಿತ್ತಶುದ್ಧಿ ಮುಂತಾದುವು ಹೆಚ್ಚಾಗುತ್ತವೆ. ಆದರಿಂದಾಗಿ ತಕ್ಷಣದಿಂದಲೇ ನಾವು ನಮ್ಮ ಪ್ರಯತ್ನದ ಸತ್ಫಲವನ್ನು ಪ್ರತ್ಯಕ್ಷವಾಗಿಯೇ ಗಮನಿಸಲು ಸಾಧ್ಯವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸವಿಮರ್ಶೆಯಲ್ಲಿ ನಾನು ಶ್ರೀ ಶ್ರೀ ಜ್ಞಾನಾನಂದೇಂದ್ರ ಸರಸ್ವತಿ ಸ್ವಾಮಿಗಳವರು ರೂಪಿಸಿರುವ ತಾತ್ಪರ್ಯವನ್ನು ಹೆಚ್ಚಾಗಿ ಬಳಸಿಕೊಂಡಿದ್ದೇನೆ. ಇಂಥ ತಾತ್ಪರ್ಯಗಳನ್ನು ಅರಿತಾಗ, ಸಂಧ್ಯೋಪಾಸನೆಯಲ್ಲಿ ನಾವು ಬಳಸುವ ಮಂತ್ರಗಳ ಅಂತರಾರ್ಥ ನಮಗೆ ಗೋಚರವಾಗಿ ನಮ್ಮ ಮಾನಸಿಕ ನೆಮ್ಮದಿಯು ಕ್ಷಣ ಕ್ಷಣಕ್ಕೂ ಉನ್ನತ ಸ್ಥಿತಿಗೇರಿ, ನಮ್ಮ ಪ್ರಯತ್ನವು ಸಾರ್ಥಕವಾಗುವುದೆಂಬ ಸತ್ಯಸಂಗತಿಯು ನನ್ನ ಸ್ವಾನುಭವವಾಗಿದೆ. ಇಂಥ ಒಂದು ಅಂಶವನ್ನು ನಾನು ಪ್ರಾಯೋಗಿಕವಾಗಿ ಪರೀಕ್ಷಿಸದೇ ಇದ್ದಿದ್ದರೆ; ಧರ್ಮ ಪ್ರಚಾರಕ್ಕೆ ಸಹಾಯನೀಡಬಲ್ಲ ಇಂಥ ಸಾರ್ಥಕ ಸಾಹಿತ್ಯಕೃತಿಯೊಂದು ನನ್ನಿಂದ ರಚಿತವಾಗುವುದು ಅಸಂಭವವಾಗಿದ್ದಿತೆಂಬುದು ನನಗೆ ಮನವರಿಕೆಯಾಗಿದೆ. ಇಂಥ ಒಂದು ಸಮಕಾಲೀನ ಅನುಭವವಾದರೂ ಈ ಕಿರುಹೊತ್ತಿಗೆಯ ಪ್ರಯೋಜನ ಪಡೆಯಬಯಸುವ ನನ್ನ ಆತ್ಮೀಯರಿಗೆ ಭರವಸೆ ನೀಡಬಲ್ಲದೆಂದು ನಿರೀಕ್ಷಿಸಿದ್ದೇನೆ.

ಸೂಚನೆಗಳು

೧) ತಾತ್ಪರ್ಯ ಸಹಿತ ಸಂಕ್ಷಿಪ್ತ ವಿವರಣೆಯ ಭಾಗದಲ್ಲಿ ಮಂತ್ರಗಳ ತಾತ್ಪರ್ಯವು ಸುಲಭವಾಗಿ ಉಪಲಬ್ಧವಿರುವಲ್ಲಿ ಮಾತ್ರ ಅದನ್ನು ಸೂಚಿಸಲಾಗಿದೆ. ಉಳಿದಂತೆ ಮಂತ್ರಭಾಗವನ್ನು ಮಾತ್ರ ಹೇಳಲಾಗಿದೆ.

೨) ಸ್ಮಾರ್ತ ಶ್ರೀ ವೈಷ್ಣವ ಹಾಗೂ ಮಾಧ್ವ ಸಂಪ್ರದಾಯಗಳಲ್ಲಿ ಪ್ರತ್ಯೇಕತೆ ಕಾಣಬರುವ ಭಾಗಗಳಲ್ಲಿ ಮೊದಲು ಸ್ಮಾರ್ತ ಸಂಪ್ರದಾಯ ಕ್ರಮವನ್ನು ಸೂಚಿಸಿ, ಕಂಸದಲ್ಲಿ ಶ್ರೀವೈಷ್ಣವ, ಮಾಧ್ವ ಹಾಗೂ ಪ್ರತ್ಯೇಕತೆ ಹೊಂದಿದ ಇತರ ಸೂತ್ರಗಳ ಕ್ರಮವನ್ನು ಸೂಚಿಸಲಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ಓದುಗರು ತಮಗೆ ಅಗತ್ಯವಾದ ಭಾಗಗಳನ್ನು ಪ್ರತ್ಯೇಕವಾಗಿ ಗುರುತು ಮಾಡಿಕೊಂಡು ಕಂಠಪಾಠ ಮಾಡಿಕೊಳ್ಳುವುದು ಸೂಕ್ತ.

೩) ಸೃಷ್ಟಿಕರ್ತನಾದ ಬ್ರಹ್ಮನೂ ನಿಯಮಿತ ಕಾಲಾವಧಿಯಲ್ಲಿ ಶಾಸ್ತ್ರೋಕ್ತವಾಗಿ ಸಂಧ್ಯೋಪಾಸನೆ ಮಾಡುವವನಾದುದರಿಂದ ಸಂಧ್ಯಾಧಿಕಾರಿಗಳಾದ ಪ್ರತಿಯೊಬ್ಬರೂ ತಪ್ಪದೇ ಆಚರಿಸಬೇಕಾದ ನಿತ್ಯಕರ್ಮ ಸಂಧ್ಯೋಪಾಸನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೪) ಸಂಧ್ಯೋಪಾಸನೆಯಿಂದ ಶುಚಿಯಾದವನು ಸಕಲ ಶಾಸ್ತ್ರೋಕ್ತ ಕರ್ಮಾನುಷ್ಠಾನಕ್ಕೂ ಅರ್ಹನಾಗುತ್ತಾನೆ. ಸಂಧ್ಯೋಪಾಸನೆಯನ್ನು ಮಾಡ ದವನು ಯಾವುದೇ ಶಾಸ್ತ್ರೋಕ್ತ ಕರ್ಮವನ್ನು ತೋರಿಕೆಗೆ ಆಚರಿಸಿದರೂ ಅದ ರಿಂದ ಶಾಸ್ತ್ರೋಕ್ತವಾದ ಫಲ ದೊರೆಯದು.

೫) ಹಿಂದಿನ ಋಷಿಮುನಿಗಳು ಹೆಚ್ಚುಕಾಲ ಸಂಧ್ಯೋಪಾಸನೆಯನ್ನು ಮಾಡುತ್ತಿದ್ದುದರಿಂದ, ದೀರ್ಘಾಯುಸ್ಸನ್ನೂ; ವಿದ್ಯಾ, ಕೀರ್ತಿ, ಬ್ರಹ್ಮ ವರ್ಚಸ್ಸನ್ನೂ ಪಡೆದಿದ್ದರು. ಇಂದಿನ ದ್ವಿಜಸಮೂಹದ ಯುವಜನತೆಯೂ ಅವಕಾಶವಿರುವಾಗಲೆಲ್ಲ ಹೆಚ್ಚು ಹೆಚ್ಚಾಗಿ ಸಂಧ್ಯೋಪಾಸನೆ ಮಾಡಲೇಬೇಕು.

೬) ಒಂದೇ ಸಮನೆ ಸತತವಾಗಿ ಏಳು ದಿನಗಳ ಕಾಲ ಸಂಧ್ಯೋಪಾಸನೆ ಯನ್ನು ಬಿಟ್ಟವನು ಶಾಸ್ತ್ರದ ದೃಷ್ಟಿಯಲ್ಲಿ ಹುಚ್ಚನೆನಿಸುತ್ತಾನೆ. ಅವನಿಗೆ ಪುನರುಪನಯನವಾದನಂತರ ಮಾತ್ರ ಅವನು ಸಂಧ್ಯೋಪಾಸನೆಗೆ ಅರ್ಹ ನಾಗುತ್ತಾನೆ.

೭) ಸಂಧ್ಯಾವಂದನೆಯನ್ನು ನಿಯಮಿತವಾದ ಕಾಲಾವಧಿಯಲ್ಲೇ ಮಾಡ ಬೇಕು. ಬೆಳಗಿನಜಾವ ನಕ್ಷತ್ರಗಳು ಬೆಳಗುತ್ತಿರುವಂತೆಯೇ ಪ್ರಾತಃಸಂಧ್ಯೆ ಯನ್ನು ಪ್ರಾರಂಭಿಸಿ; ಸೂರ್ಯೋದಯದ ಸಮಯಕ್ಕೆ ಅರ್ಘ್ಯವನ್ನಿತ್ತು ಯಥಾಶಕ್ತಿ ಗಾಯತ್ರೀ ಜಪವನ್ನಾಚರಿಸುವುದು. ಮಧ್ಯಾಹ್ನ ೧೨ ಗಂಟೆಗೆ ಮೊದಲೇ ಮಾಧ್ಯಾಹ್ನಿಕ ಸಂಧ್ಯೆಯನ್ನು ಪ್ರಾರಂಭಿಸಿ; ಸೂರ್ಯನು ನಡು ನೆತ್ತಿಯ ಮೇಲಿರುವಾಗ ಅರ್ಘ್ಯವನ್ನಿತ್ತು ಯಥಾಶಕ್ತಿ ಗಾಯತ್ರೀಜಪವನ್ನಾ ಚರಿಸುವುದು. ಸಂಜೆ ಸೂರ್ಯನು ಮುಳುಗುವ ಮೊದಲು ಸಾಯಂಸಂಧ್ಯೆ ಯನ್ನಾರಂಭಿಸಿ; ಸೂರ್ಯಾಸ್ತದ ಸಮಯಕ್ಕೆ ಅರ್ಘ್ಯವನ್ನಿತ್ತು ಯಥಾಶಕ್ತಿ ಗಾಯತ್ರೀ ಜಪವನ್ನಾಚರಿಸುವುದು. ಇದು ತ್ರಿಕಾಲ ಸಂಧ್ಯೆಗೆ ಉತ್ತಮವಾದ ಕಾಲ. ಬೆಳಗ್ಗೆ ನಕ್ಷತ್ರಗಳು ಕಾಣಿಸದಂತಾದ ಬಳಿಕ, ಮಧ್ಯಾಹ್ನ ಸೂರ್ಯನು ನಡುನೆತ್ತಿಗೆ ಬಂದ ಬಳಿಕ, ಸಾಯಂಕಾಲ ಸೂರ್ಯಾಸ್ತವಾಗುವಾಗ ಸಂಧ್ಯಾ ವಂದನೆಯನ್ನಾರಂಭಿಸುವುದು ಮಧ್ಯಮಕಾಲ. ಬೆಳಗ್ಗೆ ಸೂರ್ಯೋದಯ ವಾದನಂತರ, ಮಧ್ಯಾಹ್ನ ಸೂರ್ಯನು ನಡುನೆತ್ತಿ ದಾಟಿದ ನಂತರ, ಸಾಯಂಕಾಲ ನಕ್ಷತ್ರಗಳು ಕಾಣಿಸಿಕೊಂಡ ಬಳಿಕ ಸಂಧ್ಯೋಪಾಸನೆಯನ್ನಾರಂಭಿ ಸುವುದು ಅಧಮಕಾಲ.

೮) ಯಾವ ಕಾರಣದಿಂದಲೂ ಸಂಧ್ಯೋಪಾಸನೆಯನ್ನು ಬಿಡುವಂತಿಲ್ಲ. ಕಾಲಾತೀತವಾಗಿಯಾದರೂ ಆಚರಿಸಲೇಬೇಕು. ಕಾಲಾತೀತವಾದುದರ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಯಶ್ಚಿತ್ತ ರೂಪವಾಗಿ ಒಂದು ಅರ್ಘ್ಯವನ್ನು ಹೆಚ್ಚಾಗಿ ಕೊಡುವ ಕ್ರಮ ರೂಢಿಯಲ್ಲಿದೆ.

೯) ಸಂಧ್ಯಾವಂದನೆಯನ್ನು ಪ್ರತಿದಿನವೂ ಆಚರಿಸುವುದರಿಂದ ಅಂದಂದು ಮಾಡಿದ ಪಾಪವು ಅಂದಂದೇ ನಾಶವಾಗುತ್ತದೆ. ಹೆಚ್ಚುಹೆಚ್ಚಾಗಿ ಜಪಮಾಡುವುದರಿಂದ ಪೂರ್ವಜನ್ಮದ ಪಾಪರಾಶಿಯನ್ನೂ ನಾಶಗೊಳಿಸಬಹುದು.

೧೦) ಸಂಧ್ಯಾವಂದನೆಯನ್ನು ಮನೆಯಲ್ಲಿ ಆಚರಿಸಿದಾಗ ನಿರ್ದಿಷ್ಟವಾದ ಕ್ಲೃಪ್ತ ಫಲ ದೊರೆತರೆ, ನದಿದಡದಲ್ಲಿ ಆಚರಿಸಿದಾಗ ಸಾವಿರಪಾಲು ಹೆಚ್ಚು, ದೇವಸ್ಥಾನದಲ್ಲಿ ಆಚರಿಸಿದರೆ ಅನಂತ ಫಲ ಸಿಗುತ್ತದೆ.

೧೧) ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ದೇವತಾ ಪ್ರಾರ್ಥನೆ ಮಾಡಿ, ಶೌಚಮುಗಿಸಿ, ಹಲ್ಲುಜ್ಜಿಕೊಂಡು ಸ್ನಾನಮಾಡಬೇಕು. ವಿಶೇಷವಾದ ಮೈಲಿಗೆಯಾಗದಿದ್ದರೆ, ಬೆಳಗ್ಗೆ ಮಾಡಿದ ಸ್ನಾನವೇ ಅಂದು ಮಾಡುವ ಎಲ್ಲಕರ್ಮಕ್ಕೂ ಅಂಗವಾಗಿರುತ್ತದೆ.

೧೨) ಪ್ರಾತಃ ಸ್ನಾನಾನಂತರವೇ ಪ್ರಾತಃಸಂಧ್ಯಾವಂದನೆಯನ್ನು ಮಾಡಬೇಕು. ಮಾಧ್ಯಾಹ್ನಿಕ ಹಾಗೂ ಸಾಯಂಸಂಧ್ಯೋಪಾಸನೆಯಲ್ಲಿ ಸ್ನಾನವು ಅತ್ಯಾವಶ್ಯಕವಲ್ಲ. ಕೈಕಾಲು ಮುಖತೊಳೆದುಕೊಂಡರೆ ಸಾಕು.

೧೩) ಸಂಧ್ಯಾವಂದನೆ ಅಥವಾ ಯಾವುದೇ ಕರ್ಮಮಾಡುವ ಮೊದಲು ಕೈಕಾಲು ತೊಳೆದುಕೊಂಡು, ಜುಟ್ಟನ್ನು ಗಂಟುಹಾಕಿಕೊಂಡು, ಸುಖಕರವಾದ ಆಸನದಲ್ಲಿ ಕುಳಿತು, ಹೃದಯದಲ್ಲಿ ದೇವರನ್ನು ನೆನೆಯುತ್ತ ಅನಂತರ ಆಚಮನ ಮಾಡಬೇಕು.

೧೪) ರೇಷ್ಮೆಬಟ್ಟೆ, ಮೃಗಚರ್ಮ, ಕಂಬಳಿ, ಪಟ್ಟೆ, ಮಣೆ, ಚಾಪೆ ಮುಂತಾದುವು ಆಸನಕ್ಕೆ ಯೋಗ್ಯವಾದುವು.

೧೫) ಸಂಧ್ಯಾವಂದನೆಯ ಸಮಯದಲ್ಲಿ ಎರಡು ಶುಭ್ರ ವಸ್ತ್ರಗಳನ್ನು ಧರಿಸಬೇಕು.

೧೬) ಒದ್ದೆ ವಸ್ತ್ರವನ್ನು ಧರಿಸಿ ಸಂಧ್ಯೋಪಾಸನೆ ಮಾಡಬಾರದು. ಒಣಗಿದ ಮಡಿಮಾಡಿದ ವಸ್ತ್ರ ದೊರೆಯದಿದ್ದಾಗ, ಒದ್ದೆಯ ವಸ್ತ್ರವನ್ನೇ ಏಳು ಸಲ ಗಾಳಿಯಲ್ಲಿ ಅಲುಗಾಡಿಸಿ (ಕೊಡವಿ) ಧರಿಸಬಹುದು.

೧೭) ಲಾಂಛನಧಾರಣೆ ಮಾಡಿಕೊಳ್ಳದೇ ಆಚರಿಸುವ ಸಂಧ್ಯಾವಂದನಾದಿ ನಿತ್ಯ ನೈಮಿತ್ತಿಕ ಕಾರ್ಯಗಳಿಗೆ ಶಾಸ್ತ್ರೋಕ್ತ ಫಲವಿರುವುದಿಲ್ಲವೆಂಬುದೂ ರೂಢಿಯಲ್ಲಿರುವ ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

೧೮) ಪ್ರಾತಃಸಂಧ್ಯೆಯಲ್ಲಿ ಲಾಂಛನಧಾರಣೆಮಾಡುವಾಗ ಭಸ್ಮಕ್ಕೆ ನೀರು ಸೇರಿಸಲಾಗುತ್ತದೆ. ಸಾಯಂಸಂಧ್ಯೆಯಲ್ಲಿ ಭಸ್ಮಕ್ಕೆ ನೀರನ್ನು ಸೇರಿಸುವುದಿಲ್ಲ.

೧೯) ಭಸ್ಮಧಾರಣೆ ಮಾಡಿಕೊಳ್ಳುವಾಗ ಬಲಗೈನ ಅನಾಮಿಕ, ಮಧ್ಯಮ ಹಾಗೂ ತರ್ಜನೀ ಬೆರಳನ್ನು ಉಪಯೋಗಿಸಬೇಕು.

೨೦) ಆಸನದಮೇಲೆ ಕಾಲಿಟ್ಟು ಕಾಲುಗಳ ಹೊರಗೆ ಕೈಚಾಚಿ ಆಚಮನ ಹಾಗೂ ಯಾವ ಕರ್ಮವನ್ನೂ ಮಾಡಬಾರದು. ಕರ್ಮಮಾಡುವಾಗ ಆಸನದ ಮೇಲೆ ಕಾಲುಗಳನ್ನಿಡಬಾರದು.

೨೧) ದ್ವಿಜರಿಗೆ ಯಾವಾಗಲೂ ತಲೆಯಲ್ಲಿ ಜುಟ್ಟು ಹಾಗೂ ಹೆಗಲಲ್ಲಿ ಜನಿವಾರ ಇರಲೇಬೇಕು. ಜುಟ್ಟು ಇಲ್ಲವಾದರೆ ಕೂದಲನ್ನು ಸೇರಿಸಿ ಗಂಟು ಹಾಕಿಕೊಂಡೇ ಕರ್ಮಮಾಡಬೇಕು.

೨೨) ಆಚಮನ ಜಲದಲ್ಲಿ ಆಚಮನ ಯಂತ್ರವನ್ನು ಬರೆಯುವ ಮೂಲಕ ನೀರಿನಲ್ಲಿ ನೆಲೆಸಿರುವ 'ವೇತ್ರಪ'ನೆಂಬ ಅಸುರನನ್ನು ನಾಶಗೊಳಿಸುವ ಕ್ರಮ ಕೆಲವರಲ್ಲಿ ರೂಢಿಯಲ್ಲಿದೆ. ನೀರಿನಮೇಲೆ ತ್ರಿಕೋಣಾಕೃತಿ ಬರೆದು, ತ್ರಿಕೋನದೊಳಗೆ ಹಾಗೂ ಶೃಂಗಕೋನದ ಮೇಲೆ "ಓಂ" ಎಂದೂ ; ಎಡ ಭಾಗದಲ್ಲಿ 'ಸ್ವ' ಎಂದೂ ; ಬಲಬದಿಯಲ್ಲಿ 'ಭೂಃ' ಎಂದೂ ; ಪಾದದಲ್ಲಿ 'ಭುವಃ' ಎಂದೂ ಬರೆಯುವುದೇ ಆಚಮನಯಂತ್ರ ರಚಿಸುವ ಕ್ರಮ.

೨೩) ಪಾಪಪುರುಷನಿರಸನ ಮಂತ್ರವನ್ನು ಅಘಮರ್ಷಣ ಮಂತ್ರವೆಂದೂ ಕರೆಯುವುದುಂಟು.

೨೪) ಅರ್ಘ್ಯ ಬಿಡುವಾಗ ಪ್ರಾತಃ ಹಾಗೂ ಮಾಧ್ಯಾಹ್ನಿಕದಲ್ಲಿ ಪೂರ್ವಾಭಿಮುಖವಾಗಿ ನಿಂತು, ಬೊಗಸೆಯಲ್ಲಿ ನೀರನ್ನು ಹಾಕುವುದು, ಸಾಯಂಕಾಲದಲ್ಲಿ ಪಶ್ಚಿಮಾಭಿಮುಖವಾಗಿ ಕುಳಿತು ಬೊಗಸೆಯಲ್ಲಿ ನೀರನ್ನು ಭೂಮಿಯಲ್ಲಿ ಹಾಕುವುದು ಕ್ರಮ. ಕೆಲವರು ತ್ರಿಕಾಲದಲ್ಲೂ ನಿಂತೇ ಅರ್ಘ್ಯ ಕೊಡುವುದು ಉಂಟು.

೨೫) ಪಾಪಗಳಿಂದ ರಕ್ಷಿಸುವವಳೂ, ಪರಬ್ರಹ್ಮಸ್ವರೂಪಿಣಿಯೂ ಆದ ಸಂಧ್ಯಾದೇವಿಯು ಪ್ರಾತಃಕಾಲದಲ್ಲಿ ಗಾಯತ್ರೀ ಎಂದೂ ; ಪ್ರಕಾಶ ಸ್ವರೂಪಳಾದ ಸಂಧ್ಯಾದೇವಿಯು ಮಧ್ಯಾಹ್ನದಲ್ಲಿ ಸಾವಿತ್ರೀ ಎಂದೂ; ವೇದವಾಗ್ರೂಪಳಾದ ಸಂಧ್ಯಾದೇವಿ ಸಾಯಂಕಾಲದಲ್ಲಿ ಸರಸ್ವತೀ ಎಂದೂ ಸ್ತುತಿಸಲ್ಪಡುತ್ತಾಳೆ.

೨೬) ಬೆಳಗಿನ ಸೂರ್ಯಬಿಂಬದಲಿ ರಕ್ತವರ್ಣವುಳ್ಳವಳೂ ಹಂಸವನ್ನು ಏರಿದವಳೂ. ಋಗ್ವೇದ ರೂಪಿಣಿಯೂ ಬ್ರಹ್ಮದೇವತೆಯೂ ಕುಮಾರಿಯೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ ಗಾಯತ್ರೀದೇವಿಯನ್ನು ಧ್ಯಾನಿಸಬೇಕು. ಮಧ್ಯಾಹ್ನದಲ್ಲಿ ರವಿಬಿಂಬದಲ್ಲಿ ಬಿಳೀವರ್ಣವುಳ್ಳವಳೂ ಯಜುರ್ವೇದ ಸ್ವರೂಪಿಣಿಯೂ ಆದ ಸಾವಿತ್ರೀದೇವಿಯನ್ನು ಧ್ಯಾನಿಸಬೇಕು. ಸಂಜೆಯ ಸೂರ್ಯಬಿಂಬದಲ್ಲಿ ಕಪ್ಪು ಬಣ್ಣವುಳ್ಳವಳೂ ನಾಲ್ಕು ತೋಳುಗಳುಳ್ಳವಳೂ ಶಂಖಚಕ್ರಧಾರಿಣಿಯೂ ಗರುಡಾರೂಢಳೂ ವೃದ್ಧಳೂ ಸಾಮವೇದಸ್ವರೂಪಿಣಿಯೂ ಆದ ಸರಸ್ವತಿಯನ್ನು ಧ್ಯಾನಮಾಡಬೇಕು.

೨೭) ಗಾಯತ್ರೀ ಮಂತ್ರದಲ್ಲಿ ಪ್ರಣವಸಂಪುಟ ಅಥವಾ ಆರು ಓಂಕಾರಗಳನ್ನು ಹೇಳಬಹುದಾದರೂ ಬ್ರಹ್ಮಚಾರಿ ಹಾಗೂ ಗೃಹಸ್ಥರು ಒಂದು ಪ್ರಣವ (‘ಓಂ’ಕಾರ) ವನ್ನು ಮಾತ್ರ ಹೇಳಬೇಕು.

೨೮) ಗಾಯತ್ರೀ ಜಪ ಮಾಡುವಾಗ ಬೆಳಗ್ಗೆ ನಾಭಿಗೆ ಸಮಾನವಾಗಿ ಅಂಜಲಿಯನ್ನು ಮೇಲ್ಮುಖವಾಗಿಟ್ಟುಕೊಂಡೂ ; ಮಧ್ಯಾಹ್ನ ಹೃದಯಕ್ಕೆ ಸಮಾನವಾಗಿ ಅಂಜಲಿಯನ್ನು ಮುಂದು ಮುಖವಾಗಿಟ್ಟುಕೊಂಡೂ ; ಸಾಯಂಕಾಲ ಮುಖಕ್ಕೆ ಸಮಾನವಾಗಿ ಕೆಳಮುಖವಾಗಿ ಅಂಜಲಿಯನ್ನಿಟ್ಟುಕೊಂಡು ಜಪಮಾಡಬೇಕು.

೨೯) ಬೆಳಗ್ಗೆ ಹಾಗೂ ಮಧ್ಯಾಹ್ನದಲ್ಲಿ ಪೂರ್ವಾಭಿಮುಖವಾಗಿ ನಿಂತು; ಸಾಯಂಕಾಲದಲ್ಲಿ ಪಶ್ಚಿಮಾಭಿಮುಖವಾಗಿ ಕುಳಿತೂ ಗಾಯತ್ರೀ ಜಪಮಾಡಬೇಕು (ಬೆಳಗ್ಗೆ ಹಾಗೂ ಸಂಜೆ ನಿಂತುಕೊಂಡು ಹಾಗೂ ಮಧ್ಯಾಹ್ನ ಕುಳಿತುಕೊಂಡು ಜಪಮಾಡುವ ಕ್ರಮವೂ ಉಂಟು).

೩೦) ಜಪಮಾಡುವಾಗ ಇತರರ ಮಾತು, ನಗು, ಓಡಾಟ, ಗದ್ದಲ ಮುಂತಾದುವು ಇರಬಾರದು. ಸಂಖ್ಯೆ ಇಲ್ಲದ, ಪಾವಿತ್ರ್ಯವಿಲ್ಲದ ಜಪ ನಿಷ್ಫಲ. ಜಪಸಂಖ್ಯೆಯನ್ನು ಬಲಹಸ್ತದ ಅನಾಮಿಕ ಬೆರಳಿನ (ಉಂಗುರದ ಬೆರಳು) ಮಧ್ಯದ ಗಂಟಿನಿಂದ ಆರಂಭಿಸಿ ತೋರುಬೆರಳಿನ ಬುಡದಗಂಟಿನವರೆಗೆ ಎಣಿಸಿದರೆ ಹತ್ತು ಸಂಖ್ಯೆಯಾಗುತ್ತದೆ. ಮಧ್ಯದ ಬೆರಳಿನ ೨ ಗಂಟುಗಳು ಮೇರು ಎನಿಸುತ್ತವೆ. ಅದನ್ನು ಅತಿಕ್ರಮಿಸದೆ ಹಿಮ್ಮುಖವಾಗಿ ಮತ್ತೆ ಎಣಿಕೆಯನ್ನು ಆರಂಭಿಸಬೇಕು. ಎಣಿಕೆಗೆ ರುದ್ರಾಕ್ಷಿ, ತುಳಸೀಮಣಿ, ಬೆಳ್ಳಿ, ಚಿನ್ನ ಮೊದಲಾದ ಉತ್ಕೃಷ್ಟ ಲೋಹಗಳ ಮಣಿಗಳಿಂದಾದ ಜಪಸರವನ್ನು ಬಳಸಬಹುದು.

೩೧) ಜಪಮಾಡುವಾಗ ಬೇರೆಯವರಿಗೆ ತಿಳಿಯದಿರುವಂತೆ ಅಂಜಲಿಯನ್ನು ವಸ್ತ್ರದಿಂದ ಮುಚ್ಚಿಕೊಳ್ಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

೩೨) ಜಪವು ವಾಚಿಕ, ಉಪಾಂಶು, ಮಾನಸಿಕ ಎಂದು ೩ ರೀತಿ ಇದೆ. ಸ್ವರವರ್ಣಗಳನ್ನು ಸ್ಪಷ್ಟವಾಗಿ ಉಚ್ಚರಿಸಿ ಬೇರೆಯವರಿಗೆ ಕೇಳುವಂತೆ ಗಟ್ಟಿಯಾಗಿ ಹೇಳುವುದು ವಾಚಿಕ. ತುಟಿಯನ್ನು ಮಾತ್ರ ಅಲುಗಿಸಿ, ಬೇರೆಯವರಿಗೆ ಕೇಳಿಸದಂತೆ ಮೆಲ್ಲಗೆ ಹೇಳುವುದು ಉಪಾಂಶು. ಮನಸ್ಸಿನಲ್ಲಿ ಮಾತ್ರ ಧ್ಯಾನಿಸುವುದು ಮಾನಸಿಕ. ಪ್ರಾರಂಭದಲ್ಲಿ ವಾಚಕವಾಗಿದ್ದು ಕ್ರಮೇಣ ಉಪಾಂಶುವಾಗಿ ಜಪ ಮಾಡುವುದು ಸಾಮಾನ್ಯವಾಗಿ ಅನುಸರಿಸುವ ಕ್ರಮ. ಮಾನಸಿಕವಾಗಿ ಜಪ ಮಾಡುವುದು ಸರ್ವೋತ್ತಮವಾದರೂ ಅತ್ಯಂತ ಕಷ್ಟದ ಕ್ರಮ.

೩೩) ಜಪ ಮಾಡುವಾಗ ಅಂಗನ್ಯಾಸ, ಹೃದಯನ್ಯಾಸ, ಧ್ಯಾನಗಳನ್ನು ಮಾಡಬೇಕು. ನ್ಯಾಸ ಮಾಡದಿದ್ದರೆ ಆಯುಸ್ಸಿಗೆ ಹಾನಿ. ಧ್ಯಾನ ರಹಿತವಾಗಿದ್ದರೆ ನಿಷ್ಫಲ. ಋಷಿ ತಿಳಿಯದಿದ್ದರೆ ಮಹಾರೋಗ ಪ್ರಾಪ್ತಿಯಾಗುತ್ತದೆ.

೩೪) ಪ್ರಾಣಾಯಾಮ ಮಂತ್ರಕ್ಕೆ ಮೊದಲು..."ಪ್ರಣವಸ್ಯ ಪರಬ್ರಹ್ಮ ಋಷಿಃ । ದೈವೀಗಾಯತ್ರೀ ಛಂದಃ । ಪರಮಾತ್ಮದೇವತಾ । ಪ್ರಾಣಯಾಮೇ ವಿನಿಯೋಗಃ ॥ ಎಂದೂ ;

ಮಾರ್ಜನ ಮಂತ್ರಕ್ಕೆ ಮೊದಲು..."ಆಪೋಹಿಷ್ಠೇತಿ ತಿಸೃಣಾಂ । ಸಿಂಧುದ್ವೀಪ ಋಷಿಃ । ಆಪೋದೇವತಾ । ಗಾಯತ್ರೀ ಛಂದಃ । ಮಾರ್ಜನೇ ವಿನಿಯೋಗಃ ॥ ಎಂದೂ ;

ಮಂತ್ರಾಚಮನಕ್ಕೆ ಮೊದಲು..."ಸೂರ್ಯ / ಅಗ್ನಿಶ್ಚೇತ್ಯಸ್ಯಮಂತ್ರಸ್ಯ ಯಾಜ್ಞವಲ್ಕ್ಯ ಉಪನಿಷದ ಋಷಿಃ । ಸೂರ್ಯ / ಅಗ್ನಿ ಮನ್ಯುಮನ್ಯುಪತಿ ರಾತ್ರಯೋ । ತ್ಯಹಾನಿ ದೇವತಾ । ಪ್ರಕೃತಿಃ ಛಂಧಃ । ಮಂತ್ರಾಚಮನೇ ವಿನಿಯೋಗಃ ॥ ಎಂದೂ ;

ದ್ವಿತೀಯ ಮಾರ್ಜನಕ್ಕೆ ಮೊದಲು..."ಆಪೋಹಿಷ್ಠೇತಿನವರ್ಚಸ್ಯ ಸೂಕ್ತಸ್ಯ । ಅಂಬರೀಷ ಸಿಂಧುದ್ವೀಪ ಋಷಿಃ । ಆಪೋದೇವತಾ । ಗಾಯತ್ರೀ ಛಂದಃ । ಸಪ್ತಮ್ಯಾಃ ಪ್ರತಿಷ್ಠಾಗಾಯತ್ರೀ । ಅಷ್ಟಮಿಾ ನವಮ್ಯೋ । ಅನುಷ್ಟುಪ್ ಮಾರ್ಜನೇ ವಿನಿಯೋಗಃ ॥ ಎಂದೂ ;

ಅಘಮರ್ಷಣ ಮಂತ್ರಕ್ಕೆ...."ಋತಂ ಚೇತ್ಯಸ್ಯ ಮಂತ್ರಸ್ಯ ಮಧುಚ್ಛಂದಸೋ ಅಘಮರ್ಷಣ॥ ಋಷಿಃ। ಭಾವವೃತ್ತಂ ದೇವತಾ। ಅನುಷ್ಟುಪ್‌ಛಂದಃ । ಅಘಮರ್ಷಣೇ ವಿನಿಯೋಗಃ ॥ ಎಂದೂ ;

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಯಶ್ಚಿತ್ತಾರ್ಘ್ಯ ಮಂತ್ರಕ್ಕೆ...ಪ್ರಾತಃ "ಯದದ್ಯೋತ್ಯಸ್ಯ ಮಂತ್ರಸ್ಯ । ಆಂಗೀರಸಃ ಸಂಕಕ್ಷ ಋಷಿಃ । ಇಂದ್ರೋದೇವತಾ । ಗಾಯತ್ರೀ ಛಂದಃ ॥ ಅಥವಾ ಸಾಯಂ : "ಉದ್ಘೇದಭೀತ್ಯಸ್ಯ ಆಂಗೀರಸ ಸಂಕಕ್ಷ ಋಷಿಃ । ಇಂದ್ರೋದೇವತಾ । ಗಾಯತ್ರೀ ಛಂದಃ । ಎಂದೂ ;

ಗಾಯತ್ರೀ ಮಹಾಮಂತ್ರಕ್ಕೆ..."ಅಸ್ಯಶ್ರೀ ಗಾಯತ್ರೀ ಮಹಾಮಂತ್ರಸ್ಯ ಗಾಥಿನೋ ವಿಶ್ವಾಮಿತ್ರ ಋಷಿಃ । ದೇವಿ ಗಾಯತ್ರೀ ಛಂದಃ । ಸವಿತಾ ದೇವತಾ । ಜಪೇವಿನಿಯೋಗಃ ॥ ಎಂದೂ ;

ಪ್ರಾತಃಸಂಧ್ಯೋಪಸ್ಥಾನ ಮಂತ್ರಕ್ಕೆ..."ಮಿತ್ರಸ್ಯೇತಿ ತಿಸೃಣಾಂ ವಿಶ್ವಾಮಿತ್ರ ಋಷಿಃ । ಮಿತ್ರೋದೇವತಾ । ಆದ್ಯಾಯಾಃ ಗಾಯತ್ರೀ । ದ್ವಿತೀಯಂ ತೃತಿಯಂಯೋರನುಷ್ಟುಪ್ ಉಪಸ್ಥಾನೇ ವಿನಿಯೋಗಃ ॥ ಎಂದೂ ; ಸಾಯಂ ಸಂಧ್ಯೋಪಸ್ಥಾನ ಮಂತ್ರಕ್ಕೆ...."ಇಮಂಮೇ ವರುಣ ತತ್ವಾಯಾ ಮಿತ್ಯನಯೋರಾಜೇಗರ್ತಿಃ ಶುನಶೇಪಋಷಿಃ । ವರುಣೋದೇವತಾ । ಆದ್ಯಾಯಾ ಗಾಯತ್ರೀ ದ್ವಿತೀಯಾಯಾಸ್ತ್ರಿಷ್ಟುಪ್ ವರಣೋಪಸ್ಥಾನೇ ವಿನಿಯೋಗಃ ॥ ಎಂದೂ ; ಮಂತ್ರಗಳ ಋಷಿ, ದೇವತೆ, ಛಂದಸ್ಸು ಹಾಗೂ ವಿನಿಯೋಗವನ್ನು ಹೇಳುವುದು ರೂಢಿಯಲ್ಲಿದೆ.

೩೫) ಪ್ರಾತಃ ಹಾಗೂ ಮಾಧ್ಯಾಹ್ನಿಕ ಸಂಧ್ಯೆಯಲ್ಲಿ ಪೂರ್ವ ದಿಕ್ಕಿನಿಂದಲೂ; ಸಾಯಂಸಂಧ್ಯೆಯಲ್ಲಿ ಪಶ್ಚಿಮ ದಿಕ್ಕಿನಿಂದಲೂ ದಿಗ್ದೇವತಾ ವಂದನೆಯನ್ನು ಪ್ರಾರಂಭಿಸಬೇಕು.

೩೬) ಅಭಿವಾದನ ಮಾಡುವಾಗ ಬಲಹಸ್ತದಿಂದ ಬಲ ಕಿವಿಯನ್ನೂ ಎಡಹಸ್ತದಿಂದ ಎಡಕಿವಿಯನ್ನೂ ಮುಚ್ಚಿಕೊಂಡು, ನೆಟ್ಟಗೆ ನಿಂತು ತಮ್ಮ ಗೋತ್ರ. ಸೂತ್ರ ಸಹಿತವಾದ ಪ್ರವರಗಳನ್ನೂ ಹೆಸರನ್ನೂ ಹೇಳಿ ಅಹಂಭೋ ಅಭಿವಾದಯೇ ಎಂದು ಹೇಳುತ್ತ ಮುಂದಿರುವ ಗಾಯತ್ರೀದೇವಿಯ ಬಲ ಪಾದವನ್ನು ಬಲಗೈಯಿಂದಲೂ ; ಎಡಪಾದವನ್ನು ಎಡಗೈನಿಂದಲೂ ಬಲಗೈ ಮೇಲೆ ಬರುವಂತೆ ಅಡ್ಡ ಹಿಡಿದು ಸ್ಪರ್ಶಿಸಿದಂತೆ ಭಾವಿಸಿ ನಮಸ್ಕರಿಸಬೇಕು. ಹಿರಿಯರಿಗೆ ನಮಸ್ಕರಿಸುವಾಗಲೂ ಇದೇ ಕ್ರಮವನ್ನನುಸರಿಸಬೇಕು. ಸನ್ಯಾಸಿಗಳಿಗೆ ವಂದಿಸುವಾಗ ಮಾತ್ರ ಗೋತ್ರ ಪ್ರವರಗಳನ್ನು ಹೇಳಿಕೊಂಡು ನಮಸ್ಕರಿಸುವ ಕ್ರಮವಿಲ್ಲ.

೩೭) ಪಲಾಶ, ಅಶ್ವತ್ಥ, ಖದಿರ, ಬಿಲ್ವ, ಅತ್ತಿ, ಕುಶ, ದೂರ್ವೆಗಳು ಸಮಿತ್ತುಗಳು. ಇವುಗಳಲ್ಲಿ ಮೊದಲಿನದು ಸಿಗದಿದ್ದರೆ ಕ್ರಮವಾಗಿ ಮುಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂದಿನದು ಯಾವುದು ಸಿಗುವುದೋ ಅದನ್ನು ಉಪಯೋಗಿಸಬಹುದು. ಸವಿುತ್ತುಗಳು ಒಂದು ಗೇಣುದ್ದ ಇರಬೇಕು. ಅಗ್ನಿಯನ್ನು ಕೊಳವೆಯಿಂದ ಊದಬೇಕು. ಬಾಯಿಂದ ಊದುವುದಾದರೆ ಮಧ್ಯೆ ಸಮಿಧ, ಕೈ ಮೊದಲಾದು ವನ್ನು ಅಡ್ಡಹಿಡಿದು ಊದಬೇಕು. ಜ್ವಾಲೆಯ ಮೇಲೇ ಹೋಮಮಾಡ ಬೇಕು. ಕೆಂಡ ಅಥವಾ ಬೂದಿಯ ಮೇಲೆ ಹೋಮಮಾಡಬಾರದು.

೩೭) ಗಂಧದಕೊರಡು, ಗೋಪೀ ಚಂದನ, ಪಂಚ ಮುದ್ರೆಗಳು ಮುಂತಾದುವನ್ನು ನೆಲದಮೇಲೆ ಇಡಬಾರದು.

೩೯) ಪಂಚಪಾತ್ರೆ, ಉದ್ಧರಣೆ, ಅರ್ಘ್ಯ ಪಾತ್ರೆಗಳನ್ನು ಪ್ರತಿದಿನವೂ ಹುಣಸೇಹುಳಿಯಿಂದ ಶುಭ್ರವಾಗಿ ತೊಳೆಯಬೇಕು.

೪೦) ದೇವತ್ವದ ಮತ್ತು ಅಮೃತತ್ತ್ವದ ಆದೀ ಜನನೀ ಗಾಯತ್ರೀ ದೇವಿ. ಇವಳನ್ನು ಒಲಿಸಿಕೊಂಡ ಮೇಲೆ ಜಗತ್ತಿನಲ್ಲಿ ಇನ್ನು ಪಡೆಯಬೇಕಾದು ದೇನೂ ಇರುವುದಿಲ್ಲವೆಂಬುದು ಬೃಹಸ್ಪತಿಯ ವಚನ.

೪೧) ದ್ವಿಜಸಮೂಹಕ್ಕೆ ಜೀವನದ ಸರ್ವಸ್ವವೆನಿಸುವ ಕರ್ಮ ಸಂಧ್ಯಾ ವಂದನೆ. ಇಂಥ ಮಹತ್ವಪೂರ್ಣವಾದ ವಿಧಿಯನ್ನು ಹೊಸದಾಗಿ ಪ್ರಾರಂಭಿಸು ವವರಿಗೆ ಅತ್ಯಗತ್ಯವಾದ ಪರಿಚಯ ಹಾಗೂ ಮಾಹಿತಿಯನ್ನೊದಗಿಸುವಂಥ ಮಾರ್ಗದರ್ಶಿ ಕೃತಿಯೊಂದನ್ನು ರಚಿಸುವುದು ತೀರಸಾಮಾನ್ಯ ಲೌಕಿಕನಾದ ನನ್ನಂಥ ವ್ಯಕ್ತಿಯ ಶಕ್ತಿಗೆ ನಿಲುಕದ ಕಾರ್ಯವೆಂಬುದು ಸರ್ವವಿದಿತ. ಆದರೆ ನನ್ನ ಇತಿಮಿತಿಯಲ್ಲಿ ನಾನೂ ಕೆಲವಾರು ದಿನಗಳ ಕಾಲ ಹಲವು ನೂರಾವರ್ತಿ ಆ ಜಗದ್ಧಾತ್ರಿಯ ಮಹಾಮಂತ್ರವನ್ನು ಜಪಿಸಿದ ಪರಿಣಾಮವಾಗಿಯೇ ಇಂಥ ಸಾಧನೆಯಲ್ಲಿ ಇಷ್ಟು ಸಮರ್ಪಕವಾದ ಸಿದ್ಧಿಪಡೆಯಲು ಸಾಧ್ಯವಾಯಿತು ಎಂಬ ವಿಚಾರ ಸಾಮಾನ್ಯವಾದುದೇನಲ್ಲ. ಸಂಪೂರ್ಣವಾಗಿ ಶಾಸ್ತ್ರೋಕ್ತವಾಗಿ ನಾನು ಗಾಯತ್ರೀದೇವಿಯನ್ನಾರಾಧಿಸುವ ಯೋಗ ಹೊಂದಿದ್ದರೆ, ಪ್ರಾಯಶಃ ಈ ಕೃತಿ ರಚನೆಯ ಕಾರ್ಯವು ಅದ್ವಿತೀಯ ಮಟ್ಟದ್ದೆನಿಸುತ್ತಿದ್ದುದು ನಿಸ್ಸಂಶಯ. ಅಂಥ ಯೋಗಕ್ಕಾಗಿ ಹಂಬಲಿಸುವ ಉತ್ಸಾಹ ಹಾಗೂ ಆಸಕ್ತಿಯು ನಮ್ಮ ಇಂದಿನ ದ್ವಿಜಸಮೂಹದ ಯುವಚಿತ್ತದಲ್ಲಿ ಪ್ರಚೋದಿತವಾಗಲೆಂದು ಜಗನ್ಮಾತೆ ಯಲ್ಲಿ ನನ್ನ ಪ್ರಾರ್ಥನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿವಿಧ ಕ್ರಮಗಳ ಸಮೀಕ್ಷೆ

ತೈತ್ತೀರಿಯ ಶಾಖೆಯ ಆಪಸ್ತಂಭ ಸೂತ್ರದಲ್ಲಿ ಸೂಚಿತವಾಗಿರುವ ಸಂಧ್ಯಾನುಷ್ಠಾನ ಕ್ರಮವನ್ನು ವಿವರಿಸಿ; ಪರಿಷ್ಕಾರಗೊಳಿಸಿ, ಸ್ವಾಮಿ ಚಿದಾನಂದರು 'ಸಸ್ವರ ಯಜುರ್ವೇದ ಸಂಧ್ಯಾವಂದನಮ್' ಎಂಬ ಕೃತಿಯನ್ನು ರೂಪಿಸಿದ್ದಾರೆ. ಪುಸ್ತಕದ ಸಹಾಯದಿಂದ ಸಂಧ್ಯಾವಂದನೆಯನ್ನು ಕಲಿಯಬಯಸುವವರ ಅನುಕೂಲಕ್ಕಾಗಿ ದೊರೆಯುವ ಪುಸ್ತಕಗಳ ಪೈಕಿ ಈ ಕೃತಿಯು ಹೆಚ್ಚು ಪ್ರಚಾರದಲ್ಲಿರುವುದಾಗಿದೆ.

ಸಂಸ್ಕಾರ ವಿಧಿಗಳ ಮಹತ್ವ, ಉಪನಯನ, ಸಂಧ್ಯಾವಂದನೆಯ ಸೂಕ್ತ ಸಮಯ, ಸಂಧ್ಯಾವಂದನೆಯ ಮಹತ್ವ, ಗಾಯತ್ರೀ ಸವಿತೃ ಮುಂತಾದ ಹೆಸರುಗಳಿಂದ ಸೂಚಿಸಲ್ಪಡುವ ಸೂರ್ಯನೇ ಬ್ರಹ್ಮ; ವೇದಗಳ ಸಾರವೇ ಗಾಯತ್ರೀ ಮಂತ್ರ; ಮನು, ಯಾಜ್ಞ್ಯವಲ್ಕ್ಯ, ಶಂಖ, ಶೌನಕ, ವ್ಯಾಸ, ಭಾರದ್ವಾಜ, ನಾರದ, ಗೌತಮ, ಉದ್ದಾಲಕ, ಬೃಹಸ್ಪತಿ ಮುಂತಾದ ಋಷಿ ಮುನಿಗಳು ಗಾಯತ್ರಿಯನ್ನು ಕುರಿತು ಹೇಳಿರುವ ಮಾತುಗಳು, ಕೃತಿರಚನೆಯ ಉದ್ದೇಶ ಮುಂತಾದುವುಗಳನ್ನೊಳಗೊಂಡ ಪರಿಷ್ಕರ್ತರ ನುಡಿಯಲ್ಲಿ ಸಾಕಷ್ಟು ವಿವರಣೆಗಳಿವೆ.

ತ್ರಿಕಾಲ ಸಂಧ್ಯಾವಂದನೆಯ ಕ್ರಮಗಳು, ದೇವಪಿತೃತರ್ಪಣ ವಿಧಿಸಹಿತ ಬ್ರಹ್ಮಯಜ್ಞ, ಸಮಿದಾಧಾನಮಂತ್ರ, ಭಸ್ಮಧಾರಣ ವಿಧಿ ಹಾಗೂ ಯಜ್ಞೋಪವೀತಧಾರಣ ಮಂತ್ರವೂ ಈ ಕೃತಿಯಲ್ಲಿ ಅಡಕವಾಗಿದೆ.

ಸಂಧ್ಯೋಪಾಸನೆಯನ್ನು ಆಚಮನ, ಶ್ರೀವಿಷ್ಣು ಸ್ಮರಣೆ, ಆಚಮನ, ಪ್ರಾಣಾಯಾಮ, ಸಂಕಲ್ಪ, ಮಾರ್ಜನ, ಜಲಪ್ರಾಶನ, ಆಚಮನ, ಪುನರ್ ಮಾರ್ಜನ, ಪಾಪಪುರುಷನಿರಸನ, ಆಚಮನ, ಪ್ರಾಣಾಯಾಮ, ಸಂಕಲ್ಪ, ಅರ್ಘ್ಯಪ್ರದಾನ, ಆಚಮನ, ತರ್ಪಣ, ಭೂತಶುದ್ಧಿ, ಆಸನಶುದ್ಧಿ, ದಶ ಪ್ರಾಣಾಯಾಮ, ಗಾಯತ್ರೀ ಹೃದಯ, ಕರನ್ಯಾಸ, ಹೃದಯಾದಿನ್ಯಾಸ, ದಿಗ್ಬಂಧ, ಧ್ಯಾನ, ಮುದ್ರಾದರ್ಶನ, ಸಂಕಲ್ಪ, ಜಪ, ಕರನ್ಯಾಸ, ಹೃದಯಾದಿ ನ್ಯಾಸ, ದಿಗ್ಬಂಧವಿಮೋಚನ, ಉತ್ತರಮುದ್ರಾದರ್ಶನ, ಪ್ರಾಣಾಯಾಮ, ಸಂಕಲ್ಪ, ಪ್ರಾತಸ್ಸಂಧ್ಯೋಪಸ್ಥಾನ, ದಿಗ್ದೇವತಾ ನಮಸ್ಕಾರ, ಸ್ತುತಿ, ಅಭಿವಾದನ, ಆಚಮನ, ಭಗವದರ್ಪಣ, ಆಚಮನ, ಭೂಪ್ರಾರ್ಥನೆ ಎಂದು ೪೧

Sri Vidyabharathi Book Centre, Sringeri

CC-O. In Public Domain. Digitized by eGangotri

ಹಂತಗಳಾಗಿ ವಿಂಗಡಿಸಿ, ಸಂಬಂಧಿಸಿದ ಮಂತ್ರವನ್ನು ಸೂಚಿಸಲಾಗಿದೆ. ಅಗತ್ಯ ವಿರುವ ಕಡೆಗಳಲ್ಲಿ ಕ್ರಿಯಾಭಾಗವನ್ನೂ ವಿವರಿಸಲಾಗಿದೆ.

ಬ್ರಹ್ಮಯಜ್ಞ, ಸಮಿದಾಧಾನ, ಭಸ್ಮಧಾರಣವಿಧಿ, ಯಜ್ಞೋಪವೀತ ಧಾರಣಕ್ಕೆ ಸಂಬಂಧಿಸಿದ ಮಂತ್ರಗಳೊಂದಿಗೂ ಸಹಾ ಅಗತ್ಯವಿರುವೆಡೆಗಳಲ್ಲಿ ವಿವರಣೆಯನ್ನು ನೀಡಲಾಗಿದೆ. ೧೯೮೫ರಲ್ಲಿ ಮೊದಲು ಮುದ್ರಣವಾದ ಈ ಕೃತಿಯು ೧೯೯೦ ರಲ್ಲಿ ದ್ವಿತೀಯ ಮುದ್ರಣವಾಗಿದೆ.

* * * *

ಯಜುಶ್ಶಾಖೆಯ ಆಪಸ್ತಂಭ ಸೂತ್ರ ಕ್ರಮದಲ್ಲೇ ರೂಪಿತವಾಗಿರುವ ಇನ್ನೊಂದು ಕೃತಿ : ವೇ॥ ಬಿ. ಶಂಕರಶಾಸ್ತ್ರಿಗಳವರಿಂದ ಪರಿಷ್ಕರಿಸಲ್ಪಟ್ಟಿರುವ 'ಯಜುರ್ವೇದ ನಿತ್ಯಕರ್ಮ'. ಇದು ೧೯೬೩ಕ್ಕೂ ಮೊದಲಿನಿಂದಲೇ ಪ್ರಚಾರ ದಲ್ಲಿದ್ದು ಹಲವಾರು ಪುನರ್ಮುದ್ರಣಗಳನ್ನು ಕಂಡಿದೆ.

೬೪ ಪುಟಗಳ ವ್ಯಾಪ್ತಿಯಲ್ಲಿರುವ ಈ ಕೃತಿಯಲ್ಲಿ ತ್ರಿಕಾಲ ಸಂಧ್ಯಾ ವಂದನೆಯೊಂದಿಗೆ ಹಲವಾರು ಉಪಯುಕ್ತ ವಿಚಾರಗಳೂ ಸೇರ್ಪಡೆಯಾಗಿವೆ.

ಗುರು, ಗಣಪತಿ, ಲಕ್ಷ್ಮೀನೃಸಿಂಹ ಹಾಗೂ ಶಿವನ ಪ್ರಾರ್ಥನೆಯೊಂದಿಗೆ ಸಂಧ್ಯೋಪಾಸನೆಯ ಕ್ರಮವು ಪ್ರಾರಂಭವಾಗಿದೆ. ಸಂಧ್ಯಾವಂದನೆಯ ಕಾಲ ವನ್ನು ಕುರಿತ ವಿವರಣೆಗಳಿವೆ. ಭಸ್ಮಧಾರಣ ವಿಧಿಯನ್ನು ಸೂಚಿಸಲಾಗಿದೆ. ಸ್ವಾಮಿ ಚಿದಾನಂದರ ಪುಸ್ತಕದಲ್ಲಿ ಸಂಧ್ಯಾವಂದನೆಯ ಕ್ರಮವನ್ನು ೪೧ ಹಂತ ಗಳಾಗಿ ವಿಂಗಡಿಸಿದ್ದರೆ, ಈ ಕೃತಿಯಲ್ಲಿ ೭ ಹಂತಗಳಾಗಿ ವಿಂಗಡಿಸಲಾಗಿದೆ. ಆದರೆ ಎಲ್ಲ ಹಂತಗಳ ಮಂತ್ರಭಾಗವೂ ಈ ಕೃತಿಯಲ್ಲೂ ಇದೆ. ಕೆಲವೊಂದು ಹಂತಗಳು ಸ್ವಲ್ಪ ಹಿಂದು ಮುಂದಾಗಿರುವುದೂ ಉಂಟು. ಶ್ರೀ ಶಂಕರಶಾಸ್ತ್ರಿ ಗಳ ಕೃತಿಯು ಭಸ್ಮಧಾರಣ ವಿಧಿಯನ್ನು ಸಂಧ್ಯೋಪಾಸನ ಕ್ರಮಕ್ಕೆ ಮೊದಲು ವಿವರಿಸಿದ್ದರೆ ; ಚಿದಾನಂದರ ಕೃತಿಯ ಕೊನೆಯಲ್ಲಿ ಈ ಮಂತ್ರವನ್ನು ಅಳವಡಿ ಸಲಾಗಿದೆ. ಚಿದಾನಂದರ ಕೃತಿಯಲ್ಲಿ ಆಚಮನ ಮಾಡುವಲ್ಲಿ ಕೇಶವಾಯ ಸ್ವಾಹಾ/ನಮಃ ನಾರಾಯಣಾಯ ಸ್ವಾಹಾ/ನಮಃ ಮಾಧವಾಯ ಸ್ವಾಹಾ/ ನಮಃ ಎಂದು ಸೂಚಿಸಿದ್ದರೆ ; ಶಂಕರಶಾಸ್ತ್ರಿಗಳ ಕೃತಿಯಲ್ಲಿ ಯಾವುದನ್ನೂ ಸೂಚಿಸಿಲ್ಲ. ಆಚಮನಾನಂತರ ಶರೀರದ ಅವಯವಗಳನ್ನು ಸ್ಪರ್ಶಿಸುವಲ್ಲಿ ಇಬ್ಬರೂ ವಿಷ್ಣವೇ ನಮಃ ದಿಂದ ಪ್ರಾರಂಭದಾಗಿ ಶ್ರೀಕೃಷ್ಣಾಯ ನಮಃ ಎನ್ನುವವರೆಗೂ ೨೪ ಹೆಸರುಗಳನ್ನು ಸೂಚಿಸಿದ್ದಾರೆ. ಈ ಹೆಸರುಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳಂತೆ, ಸ್ಪರ್ಶಿಸಬೇಕಾದ ಅವಯವಗಳನ್ನೂ ಚಿದಾನಂದರು ನಮೂದಿಸಿದ್ದಾರೆ. ಅರ್ಘ್ಯಾನಂತರ ತರ್ಪಣ ನೀಡುವುದು, ಭೂತಶುದ್ಧಿ, ಆಸನಶುದ್ಧಿ, ದಶಪ್ರಾಣಾಯಾಮವನ್ನು ಶಂಕರಶಾಸ್ತ್ರಿಗಳು ಸೂಚಿಸಿಲ್ಲ. ಜಪ ಸಂಕಲ್ಪಕ್ಕೆ ಮೊದಲು ಧ್ಯಾನ ಹಾಗೂ ಮುದ್ರಾದರ್ಶನವನ್ನೂ ; ಜಪಾನಂತರ ಉತ್ತರ ಮುದ್ರಾದರ್ಶನವನ್ನೂ ಶಂಕರಶಾಸ್ತ್ರಿಗಳು ಸೂಚಿಸಿಲ್ಲ. ಉಪಸ್ಥಾನ ಮಂತ್ರದಲ್ಲಿ ಕೆಲವೊಂದು ಮಂತ್ರಗಳು ಹಿಂದು ಮುಂದಾಗಿವೆ. ಅಭಿವಾದನಾನಂತರ ಭಗವದಾರ್ಪಣ ಹಾಗೂ ಭೂಪ್ರಾರ್ಥನೆಯನ್ನೂ ಶಂಕರಶಾಸ್ತ್ರಿಗಳು ಸೂಚಿಸಿಲ್ಲ.

ಸಂಧ್ಯೋಪಾಸನೆಯ ನಂತರ ಅಗ್ನಿಕಾರ್ಯ ; ಪುರುಷಸೂಕ್ತಸಹಿತ ದೇವತಾರ್ಚನೆ ; ಬ್ರಹ್ಮಯಜ್ಞ ; ಬ್ರಹ್ಮಯಜ್ಞಾಂಗವಾದ ದೇವ ಋಷಿ ಪಿತೃ ತರ್ಪಣ ; ಯಜ್ಞೋಪವೀತಧಾರಣ ಇತ್ಯಾದಿ ಕಾರ್ಯಗಳಲ್ಲಿ ಬರುವ ಮಂತ್ರಗಳು ಹಾಗೂ ಕೆಲವೊಂದು ಅವಶ್ಯಕ ವಿವರಣೆಗಳನ್ನೂ ಸೂಚಿಸಲಾಗಿದೆ. ನಿತ್ಯ ಪಾರಾಯಣಯುಕ್ತವಾದ ಶ್ರೀಸೂಕ್ತ, ಭೂಸೂಕ್ತ, ಮಂತ್ರಪುಷ್ಪ, ಇಂದ್ರಾಕ್ಷೀ ಸ್ತೋತ್ರ, ಅಪರಾಧ ಸ್ತೋತ್ರ, ನಾರಾಯಣೋಪನಿಷತ್, ಶಿವಕವಚ, ಶಿವಾಷ್ಟೋತ್ತರ ಶತನಾಮಾವಳಿ, ವೇದಸಾರ ಶಿವಸ್ತವ, ನವಗ್ರಹ ಸ್ತೋತ್ರ ಹಾಗೂ ನವಗ್ರಹಪೀಡಾ ಪರಿಹಾರ ಸ್ತೋತ್ರಗಳ ಪಾಠವನ್ನೂ ಶಂಕರಶಾಸ್ತ್ರಿಗಳು ತಮ್ಮ ಕೃತಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಅತ್ಯವಶ್ಯಕವೆನಿಸುವ ಕೆಲವೊಂದು ವಿವರಣೆಗಳೊಂದಿಗೆ ಉತ್ತಮ ವಿನ್ಯಾಸವನ್ನಳವಡಿಸಿ ಶಂಕರಶಾಸ್ತ್ರಿಗಳವರ ಕೃತಿಯನ್ನು ಸುಲಭ ಬೆಲೆಗೆ ದೊರೆಯುವಂತೆ ಪುನರ್ಮುದ್ರಣ ಮಾಡಿಸುವ ಕಾರ್ಯವನ್ನು ಇಂದಿನ ಬ್ರಾಹ್ಮಣ ಸಮಾಜವು ಅಗತ್ಯವಾಗಿ ಕೈಗೊಳ್ಳಬೇಕಾಗಿದೆ.

* * * *

ಋಕ್ಶಾಖೆಯ ಆಶ್ವಲಾಯನ ಸೂತ್ರ ಕ್ರಮವನ್ನು ಅನುಸರಿಸಿ, ಕೋಟ ವಾಸುದೇವ ಕಾರಂತರು ಬರೆದಿರುವ 'ಶ್ರೀಮದಾಶ್ವಲಾಯನ ಸಂಧ್ಯೋಪಾಸನೆ' ಎಂಬ ಕೃತಿಯು ೩೨ ಪುಟಗಳ ವ್ಯಾಪ್ತಿಯಲ್ಲಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಕೂಟ ಬ್ರಾಹ್ಮಣ ವರ್ಗದಲ್ಲಿ ಹೆಚ್ಚು ಪ್ರಚಾರದಲ್ಲಿದೆ.

ತೈತ್ತೀರಿಯ ಸಂಹಿತೆ, ನಾರಾಯಣೀಯ ಯಾಜ್ಞಿಕ್ಯುಪನಿಷತ್ತು, ದೇವೀಭಾಗವತ ಮುಂತಾದುವುಗಳಲ್ಲಿ ಉಕ್ತವಾಗಿರುವ ಕ್ರಮಗಳನ್ನು ಇವರು

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮ ಕೃತಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಇಂದಿನ ಸನಾತನ ಧರ್ಮಾಭಿಮಾನಿಗಳಲ್ಲಿ ಅಗ್ರಗಣ್ಯರೆನಿಸಿರುವ ವಾಸುದೇವ ಕಾರಂತರು ಬ್ರಾಹ್ಮಣಧರ್ಮ ಪರಿಪಾಲನೆಯ ದಿಸೆಯಲ್ಲಿ ಸಂಧ್ಯೋಪಾಸನೆಯ ಮಹತ್ವವನ್ನು ಸಂಪೂರ್ಣವಾಗಿ ಬಲ್ಲವರಾಗಿದ್ದು ; ಯಾವ ಕಾರಣಕ್ಕೂ ಬ್ರಾಹ್ಮಣರು ಸಂಧ್ಯೋಪಾಸನೆಯನ್ನು ಬಿಡಕೂಡದೆಂಬ ಶಾಸ್ತ್ರವಾಕ್ಯವನ್ನು ಗೌರವಿಸುವವರಾಗಿದ್ದರು. ಇಂದಿನ ಲೌಕಿಕಜೀವನದ ಜಂಜಡದಲ್ಲಿ ಸಿಕ್ಕಿಬಿದ್ದ ಬ್ರಾಹ್ಮಣರು ಶಾಸ್ತ್ರೋಕ್ತವಾಗಿ ಸಂಧ್ಯೋಪಾಸನೆ ಮಾಡಲೂ ತಮಗೆ ಸಮಯಾವಕಾಶವಿಲ್ಲವೆಂಬ ಕುಂಟುನೆಪವನ್ನು ಮುಂದಿರಿಸುತ್ತ ಸಂಧ್ಯಾವಂದನೆಯಿಂದ ದೂರ ಸರಿದಿರುವುದನ್ನು ಗಮನಿಸಿ ವ್ಯಾಕುಲಗೊಂಡಿದ್ದ ಕಾರಂತರು, ಅತ್ಯಂತ ಕ್ಲುಪ್ತ ಕಾಲಾವಧಿಯಲ್ಲಿ ಬಹಳ ಸಂಕ್ಷಿಪ್ತವಾಗಿಯಾದರೂ ಆಚರಿಸಲೇಬೇಕಾದ ಸಂಧ್ಯೋಪಾಸನೆಯ ಕ್ರಮವನ್ನು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ.

ಧ್ಯಾನಸ್ನಾನ, ಆಚಮನ, ಭಸ್ಮಧಾರಣ, ಪ್ರಾಣಾಯಾಮ, ಸಂಕಲ್ಪ, ಮಾರ್ಜನ, ಮಂತ್ರಾಚಮನ, ದ್ವಿತೀಯ ಮಾರ್ಜನ, ಅಘಮರ್ಷಣ, ಪ್ರಾಣಾಯಾಮ, ಸಂಕಲ್ಪ, ಪ್ರಾಯಶ್ಚಿತ್ತಾರ್ಘ್ಯ, ಅರ್ಘ್ಯ, ತರ್ಪಣ, ಆಸನಶುದ್ಧಿ, ಗುರುದೇವತಾ ನಮಸ್ಕಾರ, ಪ್ರಾಣಾಯಾಮ, ಸಂಕಲ್ಪ, ಕರನ್ಯಾಸ, ಅಂಗನ್ಯಾಸ (ಹೃದಯನ್ಯಾಸ), ಧ್ಯಾನ, ಮುದ್ರಾ, ಆವಾಹನ, ಜಪ, ಉಪಸ್ಥಾನ, ಅಭಿವಾದನ, ಗಾಯತ್ರೀ ವಿಸರ್ಜನ ಎಂಬ ೨೮ ಹಂತಗಳಾಗಿ ಸಂಧ್ಯೋಪಾಸನೆಯನ್ನು ವಿಂಗಡಿಸಿ, ಸಂಬಂಧಿಸಿದ ಮಂತ್ರಗಳು ಹಾಗೂ ಕ್ರಿಯಾಭಾಗದ ವಿವರಣೆಯನ್ನು ನೀಡಲಾಗಿದೆ. ವಿಸರ್ಜನಮಂತ್ರಕ್ಕೆ ಸೇರಿದಂತೆಯೇ ಅಷ್ಟಾಕ್ಷರೀ ಜಪ, ನ್ಯಾಸ, ಧ್ಯಾನ, ಆವಾಹನ, ಪಂಚಾಕ್ಷರೀಜಪ, ನ್ಯಾಸ, ಧ್ಯಾನ, ಆವಾಹನ, ಈಶ್ವರಾರ್ಪಣ, ಭೋಜನವಿಧಿ, ಯಜ್ಞೋಪವೀತಧಾರಣ ಮಂತ್ರವನ್ನೂ ಸೂಚಿಸಲಾಗಿದೆ. ಕೊನೆಯಲ್ಲಿ ವಿಶೇಷ ಸೂಚನೆಯೊಂದನ್ನು ಕೊಟ್ಟಿದ್ದಾರೆ.

"ಸಂಧ್ಯೋಪಾಸನೆಯನ್ನು ಕಲಿಯಲಿಕ್ಕೆ ಈ ಪುಸ್ತಕ ಮಾತ್ರ ಸಾಲದು. ಅದರ ಸಸ್ವರವಿರುವ ವೇದಮಂತ್ರಗಳ ಸರಿಯಾದ ಉಚ್ಚಾರ ಬರುವಂತೆ ಕಲಿಯಲಿಕ್ಕೆ ಪುರೋಹಿತರಿಂದ ಕೆಲವು ಸಾರಿಯಾದರೂ ಹೇಳಿಸಿಕೊಳ್ಳಬೇಕು. ಆಚಮನ, ಪ್ರಾಣಾಯಾಮ ನ್ಯಾಸ, ಮುದ್ರೆಗಳು, ಅಗ್ನಿಕಾರ್ಯ ಮುಂತಾದುವನ್ನೆಲ್ಲ ಅವರಿಂದಲೇ ಚೆನ್ನಾಗಿ ಕಲಿಯಲು ಸಾಧ್ಯ" ಎಂದು ಹೇಳಿರುವ ಕಾರಂತರ ಮಾತನ್ನೇ ನಾನು ಈ ಕಿರುಹೊತ್ತಿಗೆಗೂ ಅನ್ವಯಿಸಿದಂತೆ ಒತ್ತಿ ಹೇಳಬಯಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾರಂತರ ಕೃತಿಯಲ್ಲಿ "ಬ್ರಾಹ್ಮಣರಿಗೆ ಎಚ್ಚರಿಕೆ" ಎಂಬ ಕೊನೆಯ ಭಾಗಲ್ಲಿ, ಸಂಧ್ಯೋಪಾಸನೆಯ ಮಹತ್ವ, ಆಗತ್ಯಗಳನ್ನು ಬಹಳ ಸ್ಪಷ್ಟವಾಗಿ, ಸರಳವಾಗಿ ವಿವರಿಸಲಾಗಿದೆ. ಜನಿವಾರದ ಬ್ರಹ್ಮಗಂಟನ್ನು ಮೊದಲೇ ಸಿದ್ಧಪಡಿಸಿರಬಾರದೆಂಬ ಸೂಚನೆಯೊಂದಿಗೆ ಬ್ರಹ್ಮಗಂಟನ್ನು ಹಾಕುವ ಕ್ರಮವನ್ನು ಸಚಿತ್ರವಾಗಿ ವಿವರಣೆಗಳೊಂದಿಗೆ ತಿಳಿಸಲಾಗಿದೆ.

ತ್ರಿಕಾಲ ಸಂಧ್ಯಾವಂದನೆಯಲ್ಲಿ ಬಳಸುವ ಮಂತ್ರಗಳೊಂದಿಗೆ ಕ್ರಿಯಾಭಾಗದ ವಿವರಣೆಗಳನ್ನು ಸಾಕಷ್ಟು ವಿವರವಾಗಿ ನೀಡಲಾಗಿದೆ. ಆಚಮನದಲ್ಲಿ ಓಂ ಋಗ್ವೇದಾಯ ಸ್ವಾಹಾ। ಓಂ ಯಜುರ್ವೇದಾಯ ಸ್ವಾಹಾ। ಓಂ ಸಾಮವೇದಾಯ ಸ್ವಾಹಾ। ಅಥರ್ವಣವೇದಾಯ ನಮಃ। ಇತಿಹಾಸಪುರಾಣೇಭ್ಯೋ ನಮಃ। ಎಂಬ ಮಂತ್ರದ ಬಳಕೆ ಇದೆ. ಆಚಮನಾನಂತರ ಅವಯವಗಳನ್ನು ಸ್ಪರ್ಶಿಸುವಲ್ಲಿ ಶ್ರೀಕೃಷ್ಣಾಯ ನಮಃ ಮುಂತಾದ ದ್ವಾದಶನಾಮ ಅಥವಾ ೨೦ ಹೆಸರುಗಳ ಬದಲಿಗೆ ಅಗ್ನಿ, ಸೂರ್ಯ, ವಾಯು, ದಿಕ್ಕು, ಇಂದ್ರ, ಪೃಥ್ವೀ, ಅಂತರಿಕ್ಷ, ದಿನ, ಬ್ರಹ್ಮ, ವಿಷ್ಣು. ಶಿವ ಇತ್ಯಾದಿ ಸ್ಮರಣೆಗಳೊಂದಿಗೆ ತುಟಿ ; ಕಣ್ಣು ಇತ್ಯಾದಿ ಅವಯವಗಳ ಸ್ಪರ್ಶವನ್ನು ಸೂಚಿಸಲಾಗಿದೆ.

ಭಸ್ಮಧಾರಣೆಯ ಕ್ರಮವನ್ನು ವಿವರವಾಗಿ ಸೂಚಿಸಿ, ಭಸ್ಮಧಾರಣೆಯ ನಂತರ ಕೈತೊಳೆದುಕೊಂಡು ಆಚಮನ ಮಾಡಬೇಕೆಂದು ಸೂಚಿಸಿದ್ದಾರೆ. ಪ್ರತಿಯೊಂದು ಹಂತದಲ್ಲೂ ಕ್ರಿಯಾಭಾಗವನ್ನು ಸ್ಪಷ್ಟವಾಗಿ ಸೂಚಿಸಿ ಮಾರ್ಗದರ್ಶನ ಮಾಡಿರುವುದು ಈ ಕೃತಿಯ ಒಂದು ವೈಶಿಷ್ಟ್ಯವಾಗಿದ್ದು ; ಹೊಸದಾಗಿ ಕಲಿಯುವವರಿಗೆ ಉತ್ತಮ ಮಾರ್ಗದರ್ಶಿಯಾಗಿದೆ.

* * * *

ದಕ್ಷಿಣ ಕನ್ನಡ ಜಿಲ್ಲೆಯ ಕೋಟದವರೇ ಆದ ವಾಸುದೇವ ಸೋಮಯಾಜಿಯವರು ಸಂಗ್ರಹಿಸಿರುವ ಒಂದು ಕೃತಿ 'ಋಗ್ವೇದೀಯ ಸಂಧ್ಯಾವಂದನ' ಇದೂಕೂಡ ಋಗ್ವೇದಿಯ ಆಶ್ವಲಾಯನ ಸೂತ್ರಕ್ರಮವನ್ನನುಸರಿಸಿದ್ದಾಗಿದೆ.

ಬ್ರಾಹ್ಮಣ ವರ್ಗದಲ್ಲಿ ಸಂಧ್ಯೋಪಾಸನೆಯ ಕಾರ್ಯ ನಶಿಸುತ್ತಿರುವುದರ ಹಿನ್ನೆಲೆಯಲ್ಲಿ. ನೂತನ ಅಭ್ಯಾಸಿಗಳಿಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ ರಚಿತವಾಗಿರುವ ಈ ಕಿರುಹೊತ್ತಿಗೆಯಲ್ಲಿ ಸಂಧ್ಯಾವಂದನೆಯ ಮಹತ್ವ ಹಾಗೂ ಆಚರಣೆಯ ಕ್ರಮಗಳನ್ನು ಕುರಿತೂ ಕೆಲವೊಂದು ಮಾಹಿತಿಗಳಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರು, ಗಣಪತಿ, ಭೂಮಿ, ದೇವತೆಗಳ ಪ್ರಾರ್ಥನೆಯನಂತರ ಮಂತ್ರಾಚಮನದೊಂದಿಗೆ ಪ್ರಾರಂಭವಾಗುವ ಸಂಧ್ಯಾವಂದನೆಯನ್ನು ಆಚಮನ; ಭಸ್ಮಧಾರಣ; ಪ್ರಾಣಾಯಾಮ; ಮಾರ್ಜನ, ಆಚಮನ; ಅಘಮರ್ಷಣ; ಅರ್ಘ್ಯ, ಗುರುದೇವತಾ ಪ್ರಾರ್ಥನೆ; ಪ್ರಾಣಾಯಾಮ; ಸಂಕಲ್ಪ; ಆವಾಹನೆ; ಮುದ್ರಾದರ್ಶನ; ಕರನ್ಯಾಸ; ಅಂಗನ್ಯಾಸ; ಧ್ಯಾನ; ಜಪ; ಜಪಾಂತ್ಯ ಮುದ್ರಾದರ್ಶನ; ಉಪಸ್ಥಾನ; ದಿಗ್ಬಂಧನ; ಅಭಿವಾದನ, ವಿಸರ್ಜನ ಎಂದು ೨೧ ಹಂತಗಳಾಗಿ ವಿಂಗಡಿಸಲಾಗಿದೆ.

ಮಂತ್ರಪಾಠವನ್ನು ತಿಳಿಸಿದನಂತರ, ಕ್ರಿಯಾಭಾಗ ಹಾಗೂ ಮಂತ್ರದ ತಾತ್ಪರ್ಯ ಸಹಿತವಾದ ವಿವರಣೆಗಳನ್ನು ನೀಡಲಾಗಿದೆ. ಏಳುದಿನಗಳಕಾಲ ಸಂಧ್ಯಾವಂದನೆ ಮಾಡದಿದ್ದರೆ ಅಂಥವರಿಗೆ ಪುನರುಪನಯನವಾಗಬೇಕೆಂಬ ಶಾಸ್ತ್ರವಚನದ ಉಲ್ಲೇಖವಿರುವಂತೆಯೇ; ದೇವಾಲಯ, ವಿದ್ವತ್‌ಸಭೆ, ರಾಜ ದರ್ಶನ, ವಿವಾಹ, ಯಜ್ಞ ಇತ್ಯಾದಿ ಸನ್ನಿವೇಶಗಳಲ್ಲಿ ಸಂಧ್ಯಾಕಾಲ ಮೀರಿದರೂ ದೋಷವಿಲ್ಲವೆಂಬ ಭಸವಸೆಯನ್ನೂ ಉಲ್ಲೇಖಿಸಲಾಗಿದೆ.

ನೂತನ ಅಭ್ಯಾಸಿಗಳ ಆಚರಣೆಗೆ ಸಹಾಯಕವಾಗುವ ಕೆಲವಾರು ನಿಯಮಗಳನ್ನೂ ಅಲ್ಲಲ್ಲಿ ಉಲ್ಲೇಖಿಸಲಾಗಿದೆ.

* * * *

ಯಜುಶ್ಶಾಖೆಯ ಬೋಧಾಯನಸೂತ್ರಕ್ರಮವನ್ನನುಸರಿಸಿ ಮೈಸೂರು ಪ್ರಾಂತ್ಯದಲ್ಲಿ ಆಚರಣೆಯಲ್ಲಿರುವ ಪದ್ಧತಿಯಂತೆ ಶ್ರೀ ಜ್ಞಾನಾನಂದೇಂದ್ರ ಸರಸ್ವತೀ ಸ್ವಾಮಿಯವರು ಬರೆದಿರುವಒಂದು ಕೃತಿ "ಬೋಧಾಯನ ಸಂಧ್ಯಾ" ೭೦ ಪುಟಗಳ ವ್ಯಾಪ್ತಿಯಲ್ಲಿರುವ ಈ ಪುಸ್ತಕದಲ್ಲಿ ತ್ರಿಕಾಲ ಸಂಧ್ಯಾವಂದನ ಕ್ರಮದೊಂದಿಗೆ ನಿತ್ಯಗೌರೀ ಪೂಜಾ ಜಪ ಕ್ರಮವನ್ನೂ ವಿವರಿಸಲಾಗಿದೆ.

ಸಂಧ್ಯಾವಂದನೆಗೆ ಯುಕ್ತಾಯುಕ್ತ ಕಾಲವಿವರ, ಸತತವಾಗಿ ಏಳು ದಿನಗಳ ಕಾಲ ಸಂಧ್ಯಾವಂದನೆಯನ್ನು ಬಿಟ್ಟವನು ಹುಟ್ಟನೆನಿಸುವುದರಿಂದ ಅವನಿಗೆ ಪುನರುಪನಯನವಾಗಬೇಕೆಂಬ ಸಂಗತಿ, ಆಚಮನವನ್ನು ಓಂಕಾರದಿಂದಾಗಲೀ; ವ್ಯಾಹೃತಿಗಳಿಂದಾಗಲೀ; ಗಾಯತ್ರಿಯಿಂದಾಗಲೀ ಮಾಡಬೇಕೆಂಬ ವ್ಯಾಸರ ಹೇಳಿಕೆ, ಪ್ರಾತಃಕಾಲದಲ್ಲಿ ಪೂರ್ವಾಭಿಮುಖವಾಗಿ ನಿಂತು ಬೊಗಸೆಯಲ್ಲಿತುಂಬಿದ ನೀರನ್ನು ನೀರಿನಲ್ಲಿ ಬಿಡಬೇಕು; ಮಧ್ಯಾಹ್ನದಲ್ಲಿ ನೆಟ್ಟಗೆ ನಿಂತು ಹಾಕಬೇಕು;

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಯಂಕಾಲದಲ್ಲಿ ಕುಳಿತುಕೊಂಡು ಭೂಮಿಯಲ್ಲಿ ಹಾಕಬೇಕು ಎಂಬ ಅರ್ಘ್ಯ ಪ್ರದಾನ ಮಾಡುವ ವಿಚಾರ, ನದಿ ; ಕೆರೆ ; ಕಟ್ಟೆ ಮೊದಲಾದ ತೀರ್ಥಗಳಲ್ಲಿ ಸ್ನಾನ ಮಾಡಬೇಕು. ಬ್ರಾಹ್ಮಣನು ಸ್ನಾನ ಮಾಡದಿದ್ದರೂ ಕೈಕಾಲುಗಳನ್ನು ತೊಳೆದುಕೊಂಡು ನೀರಿನಿಂದ ಆಚಮನ ಮಾಡಿ, ಸುರಭಿಮತಿ ಮಂತ್ರ ದಿಂದಲೂ, ಅಬ್ಲಿಂಗಗಳ ಮಂತ್ರದಿಂದಲೂ, ವರುಣದೇವತಾಕ ಮಂತ್ರ ಗಳಿಂದಲೂ, ಹಿರಣ್ಯವರ್ಣಾ ಎಂಬ ಮಂತ್ರಗಳಿಂದಲೂ, ಪಾವಮಾನೀಃ ಎಂಬ ಮಂತ್ರಗಳಿಂದಲೂ, ಭೂರ್ಭುವಸ್ಸುವಃ ಎಂಬ ವ್ಯಾಹೃತಿಗಳಿಂದಲೂ, ಬೇರೆ ಪವಿತ್ರತೆಯನ್ನುಂಟು ಮಾಡುವ ಮಂತ್ರಗಳಿಂದಲೂ ತನ್ನನ್ನು ಪ್ರೋಕ್ಷಿಸಿ ಕೊಂಡರೆ ಶುದ್ಧನಾಗುತ್ತಾನೆ ಎಂಬ ವಿಚಾರ ; ಸರ್ವರೂ ನೀರಿನಲ್ಲಿ ಮುಳು ಗಿಯೇ ಸ್ನಾನ ಮಾಡಬೇಕು. ಬ್ರಾಹ್ಮಣರು ಮಂತ್ರಗಳಿಂದ ಪ್ರೋಕ್ಷಣೆಯನ್ನು ಮಾಡಿಕೊಳ್ಳಬಹುದು. ಸಮಸ್ತಕರ್ಮಗಳನ್ನೂ ಆರಂಭಿಸುವಾಗ ಸಂಧ್ಯೋ ಪಾಸನ ಕಾಲಕ್ಕೆ ಮೊದಲೇ ಈ ಪವಿತ್ರ ಸಮೂಹದಿಂದ ತನ್ನನ್ನು ಪ್ರೋಕ್ಷಿಸಿ ಕೊಂಡರೆ ಪರಿಶುದ್ಧನಾಗುತ್ತಾನೆಂಬ ವಿಚಾರಗಳನ್ನೊಳಗೊಂಡ ಮಾರ್ಗದರ್ಶನ ವನ್ನು ನೀಡಲಾಗಿದೆ.

ಈ ಪುಸ್ತಕದಲ್ಲಿ ಪ್ರಾತಃಸಂಧ್ಯೆಯು "ಅಪವಿತ್ರಃ ಪವಿತ್ರೋ ವಾ..." ದಿಂದ ಪ್ರಾರಂಭವಾಗುತ್ತದೆ. ಈ ಕ್ರಮದಲ್ಲಿ ಬಳಕೆಯಾಗುವ ಎಲ್ಲ ಮಂತ್ರ ಗಳಿಗೂ ಮಂತ್ರಾರ್ಥ ಹಾಗೂ ತಾತ್ಪರ್ಯವನ್ನೂ ಸೂಚಿಸಲಾಗಿದೆ. ಶ್ರೌತಾ ಚಮನದಲ್ಲಿ ಶರೀರದ ಅವಯವಗಳನ್ನು ಸ್ಪರ್ಶಿಸುವಾಗ ಸವ್ಯಂಪಾಣಿ ಪಾದೌ ಪ್ರೋಕ್ಷ....ಎಂದು ಹೇಳುತ್ತ ಎಡಗೈ, ಕಾಲುಗಳು, ಕಣ್ಣುಗಳು, ಮೂಗಿನ ಎರಡು ಹೊಳ್ಳೆಗಳು, ಕಿವಿಗಳು, ಎರಡು ಬಾಹುಗಳು, ಹೃದಯ, ಹೊಕ್ಕಳು ಹಾಗೂ ತಲೆಯನ್ನು ನೀರಿನಿಂದ ತೊಯ್ದು ಬಲಗೈ ಬೆರಳುಗಳಿಂದ ಸ್ಪರ್ಶಿಸುವ ಕ್ರಮವನ್ನು ಸೂಚಿಸಲಾಗಿದೆ. ಇದರೊಂದಿಗೆ "ಆಪೋಹಿಷ್ಠಾ ಮಯೋ ಭುವ....ಎಂಬ ಶ್ರೌತಮಂತ್ರ ಅಥವಾ ಗಾಯತ್ರೀಮಂತ್ರದಿಂದಲೂ ಮಾರ್ಜನೆ ಮಾಡುವುದನ್ನು ವಿವರಿಸಲಾಗಿದೆ.

ಕೇಶವಾದಿ....ಕೃಷ್ಣಾಯನಮಃ ಎಂಬ ಪುರಾಣಾಚಮನದ ಕ್ರಮವನ್ನು ಬೇಕಾದರೂ ಆಚರಿಸುವುದು ವಿಹಿತವಾದುದೆಂದು ಸೂಚಿಸಿದ್ದಾರೆ.

ಮಾರ್ಜನೆ ಮಾಡಿಕೊಳ್ಳುವಾಗ ಆಪಸ್ತಂಭ ಸೂತ್ರದಲ್ಲಿ ಬರುವ ಮಂತ್ರ ಗಳಲ್ಲದೇ ಇನ್ನೂ ಸುಮಾರು ಇಪ್ಪತ್ತಕ್ಕೂ ಹೆಚ್ಚಿನ ಋಕ್ಕುಗಳನ್ನು ಬಳಸಿ ಕೊಂಡು ಮಾರ್ಜನ ಕ್ರಿಯೆಯನ್ನು ಹೆಚ್ಚು ವ್ಯಾಪಕವಾಗಿ ವಿಸ್ತರಿಸಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೌತಾಚಮನ, ಪ್ರಾಣಾಯಾಮ, ಮಾರ್ಜನ, ಪುನರ್ಮಾರ್ಜನ, ಪಾಪ ಪುರುಷನಿರಸನ, ಆಚಮನ, ಪ್ರಾಣಾಯಾಮ, ಸಂಕಲ್ಪ, ಅರ್ಘ್ಯ, ಭೂ ಪ್ರಾರ್ಥನೆ, ಭೂತಶುದ್ಧಿ, ಆಸನಶುದ್ಧಿ, ಮಾನಸಪೂಜೆ, ಗಾಯಂತ್ರೀ ಹೃದಯ, ಸಂಕಲ್ಪ, ಕರನ್ಯಾಸ, ಹೃದಯನ್ಯಾಸ, ದಿಗ್ಬಂಧನ, ಧ್ಯಾನ, ಮಾನಸಪೂಜೆ, ಜಪ, ಕರನ್ಯಾಸ, ಹೃದಯನ್ಯಾಸ, ದಿಗ್ವಿಮೋಚನ, ಧ್ಯಾನ, ಉಪಸ್ಥಾನ, ದಿಗ್ದೇವತಾ ನಮಸ್ಕಾರ, ಪ್ರವರ, ಅಭಿವಾದನ, ಪುನರಾಚಮನ, ಭಗವ ದಾರ್ಪಣ, ಪ್ರಾಯಶ್ಚಿತ್ತಜಪ, ಗಾಯತ್ರೀಪ್ರಾರ್ಥನೆ, ಮುಂತಾದ ೩೩ ಹಂತ ಗಳ ಮಂತ್ರ, ಮಂತ್ರಾರ್ಥ ಹಾಗೂ ತಾತ್ಪರ್ಯ ಸಹಿತವಾದ ವಿವರಣೆ ಗಳೊಂದಿಗೆ ಪ್ರಾತಃಸಂಧ್ಯಾವಂದನೆಯು ಮುಕ್ತಾಯವಾಗುತ್ತದೆ.

ಮಾಧ್ಯಾಹ್ನಿಕ ಹಾಗೂ ಸಾಯಂಸಂಧ್ಯಾವಂದನೆಯ ಕ್ರಮಗಳ ಬಹು ಪಾಲು ಮಂತ್ರ ಹಾಗೂ ಕ್ರಿಯಾಭಾಗಗಳು ಪ್ರಾತಃಸಂಧ್ಯಾವಂದನೆಯಂತೆಯೇ ಇರುತ್ತವೆ. ಸಂಕಲ್ಪದಲ್ಲಿ ಬದಲಾವಣೆ ಇರುತ್ತದೆ ; ಜಲಪ್ರಾಶನ ಮಂತ್ರದಲ್ಲಿ ಬದಲಾವಣೆ ಇರುತ್ತದೆ ; ಉಪಸ್ಥಾನ ಮಂತ್ರದಲ್ಲಿ ಬದಲಾವಣೆ ಇರುತ್ತದೆ ; ದಿಗ್ಬಂಧನೆಯ ಕ್ರಮದಲ್ಲಿ ಸ್ವಲ್ಪ ಬದಲಾವಣೆ ಇರುತ್ತದೆ. ಕೆಲವರು ಮಾಧ್ಯಾಹ್ನಿಕ ಸಂಧ್ಯೆಯಲ್ಲಿ ಅರ್ಘ್ಯಕ್ಕೆ ಹಗ್ಂಸಃ....ಎಂಬ ಮಂತ್ರವನ್ನು ಹೇಳುವ ಕ್ರಮವನ್ನು ಸೂಚಿಸಿ ; ಅದೂ ಶಾಸ್ತ್ರಸಮ್ಮತವೆಂದು ಸೂಚಿಸ ಲಾಗಿದೆ.

* * * *

ಸಾಮಶಾಖೆಯ ದ್ರಾಹ್ಯಾಯಣ ಸೂತ್ರಕ್ರಮದಲ್ಲಿ ತ್ರಿಕಾಲ ಸಂಧ್ಯಾ ವಂದನೆಯ ವಿಧಾನವನ್ನು ವಿವರಿಸುವ ಇನ್ನೊಂದು ಕಿರುಹೊತ್ತಿಗೆ "ಛಂದೋಗ ಲಘ್ವಾಹ್ನಿಕಮ್" ಈ ಕೃತಿಯ ಕರ್ತೃ ಹಾಗೂ ಪ್ರಕಾಶಕರ ವಿಚಾರವಾಗಿ ಮಾಹಿತಿ ದೊರೆತಿಲ್ಲ.

ಆಚಮನ, ಪ್ರಾಣಾಯಾಮ, ಸಂಕಲ್ಪ, ಪ್ರೋಕ್ಷಣ, ಪುನಃ ಪ್ರೋಕ್ಷಣ, ಆಚಮನ, ಪ್ರಾಣಾಯಾಮ, ಸಂಕಲ್ಪ, ಅರ್ಘ್ಯ, ಪ್ರಾಯಶ್ಚಿತ್ತಾರ್ಘ್ಯ, ಕೇಶ ವಾದಿ ದ್ವಾದಶತರ್ಪಣ, ಸ್ಥಳಶುದ್ಧಿ, ಆಸನಶುದ್ಧಿ, ಆಚಮನ, ಪ್ರಾಣಾ ಯಾಮ, ಭೂಪ್ರಾರ್ಥನೆ, ಆಚಮ, ಸಂಕಲ್ಪ, ಕರನ್ಯಾಸ, ಹೃದಯನ್ಯಾಸ, ಆವಾಹನೆ, ಧ್ಯಾನ, ಜಪ, ಉಪಸ್ಥಾನ, ವಂದನೆ, ಅಭಿವಾದನ, ದಿಙ್ನಮಸ್ಕಾರ, ನಾರಾಯಣ ಪ್ರಾರ್ಥನೆ, ಅಭಿವಾದನ, ಆಚಮನ ಹಾಗೂ ವಿಷ್ಣು ಪರವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ತೋತ್ರ ಮುಂತಾದ ೩೧ ಹಂತಗಳಲ್ಲಿ ಹೆಚ್ಚಿನ ವಿವರಣೆಗಳಿಲ್ಲದೆ ಮಂತ್ರಭಾಗವನ್ನು ಮಾತ್ರ ಸೂಚಿಸಿ ಪ್ರಾತಃಸಂಧ್ಯಾ ವಂದನೆಯ ಕ್ರಮವನ್ನು ವಿವರಿಸಲಾಗಿದೆ. ಜಲಪ್ರಾಶನ, ಉಪಸ್ಥಾನದಲ್ಲಿ ಬದಲಾಗುವ ಮಂತ್ರಗಳನ್ನು ಮಾತ್ರ ಸೂಚಿಸಿ, ಮಧ್ಯಾಹ್ನಿಕ ಹಾಗೂ ಸಾಯಂಸಂಧ್ಯಾವಂದನ ಕ್ರಮಗಳನ್ನು ಇನ್ನೂ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಸವಿಂದಾಧಾನ, ಪಂಚಗವ್ಯ ಸಮ್ಮೇಲನ, ಯಜ್ಞೋಪವೀತಧಾರಣ, ಉಪಾಕರ್ಮತರ್ಪಣ, ಋಷಿತರ್ಪಣ, ದೇವತರ್ಪಣ, ಪಿತೃತರ್ಪಣ, ಅಮಾತರ್ಪಣ ಮುಂತಾದುವಕ್ಕೆ ಸಂಬಂಧಿಸಿದ ಮಂತ್ರಭಾಗವನ್ನೂ ಈ ಕಿರು ಹೊತ್ತಿಗೆಯಲ್ಲಿ ಸೂಚಿಸಲಾಗಿದೆ.

* * * *

ಲೇಖಕರ ಹೆಸರನ್ನೇ ಸೂಚಿಸದೆ ಬೆಂಗಳೂರು ಗಾಂಧೀಬಜಾರ್‌ನ ಚಂದ್ರಿಕಾ ಸ್ಟೋರ್ಸ್‌ನವರು ಪ್ರಕಟಿಸಿರುವ ಒಂದು ಕೃತಿ "ಋಗ್ವೇದೀಯ ತ್ರಿಕಾಲ ಸಂಧ್ಯಾವಂದನೆ" ಋಗ್ವೇದೀಯ ಆಶ್ವಲಾಯನ ಸೂತ್ರ ಕ್ರಮದಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಶ್ರೀವಿಷ್ಣು ಪುರಾಣೋಕ್ತ ಗೋಪೀಚಂದನ ನಾಮ ಮುದ್ರಾಧಾರಣ ಕ್ರಮವನ್ನು ಸಚಿತ್ರವಾಗಿ ತೋರಿಸುವುದರೊಂದಿಗೆ ಪ್ರಾರಂಭವಾಗಿರುವ ಈ ಕೃತಿಯಲ್ಲಿ ತ್ರಿಕಾಲ ಸಂಧ್ಯಾವಂದನೆ, ಯಜ್ಞೋಪವೀತಧಾರಣವಿಧಿ, ತೀರ್ಥಪ್ರಾಶನ, ಭೋಜನವಿಧಿ, ದ್ವಾದಶನಾಮ ಮತ್ತು ಪಂಚಮುದ್ರೆಗಳನ್ನು ಧರಿಸುವ ಕ್ರಮವು ವಿವರಿಸಲ್ಪಟ್ಟಿದೆ.

ಪ್ರಾತಃಸಂಧ್ಯಾವಂದನೆಯನ್ನು ಆಚಮನ, ವಿಷ್ಣುಪರವಾದ ಪ್ರಾರ್ಥನಾ ಮಂತ್ರ, ಶುದ್ಧಾಚಮನ, ಪ್ರಾಣಾಯಾಮ, ದೇಶಕಾಲ ಸಂಕೀರ್ತನೆ, ಸಂಕಲ್ಪ, ಮಾರ್ಜನ, ಜಲಪ್ರಾಶನ, ಪಾಪಪುರುಷನಿರಸನ, ಆಚಮನ, ಪ್ರಾಣಾಯಾಮ, ಸಂಕಲ್ಪ, ಅರ್ಘ್ಯ, ಪ್ರಾಯಶ್ಚಿತ್ತಾರ್ಘ್ಯ ಆಚಮನ, ತರ್ಪಣ, ಗುರು ದೇವತಾ ನಮಸ್ಕಾರ, ಮಾತೃಕಾನ್ಯಾಸ, ತತ್ತ್ವನ್ಯಾಸ, ಆವಾಹನೆ, ಕರನ್ಯಾಸ, ಅಂಗನ್ಯಾಸ, ದಿಗ್ಬಂಧ, ಧ್ಯಾನ, ಸಂಕಲ್ಪ, ಜಪ, ಸಂಧ್ಯೋಪಸ್ಥಾನ, ದಿಙ್ನಮಸ್ಕಾರ, ದೇವ–ಗುರು–ಋಷಿ–ಮಾತಾ ಪಿತೃವಂದನ, ಅಭಿವಾದನ, ಭಗವದಾರ್ಪಣ, ನಾಮತ್ರಯ ಮಂತ್ರ ಜಪ ಮುಂತಾದ ೩೦ ಹಂತಗಳಲ್ಲಿ ವಿವರಿಸಲಾಗಿದೆ. ಗುರುನಮಸ್ಕಾರವಾದ ನಂತರ ಮಾತೃಕಾನ್ಯಾಸ ಹಾಗೂ ತತ್ತ್ವನ್ಯಾಸಗಳನ್ನು ಮಾಡಿಕೊಳ್ಳಬೇಕೆಂದು ಸೂಚಿಸಲಾಗಿದ್ದು ಆದರೆ ಅವುಗಳ ಬಗ್ಗೆ ವಿವರಣೆ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವದಾರ್ಪಣೆಯಾದ ಅನಂತರ "ಶ್ರೀ ಮಧ್ವೇಶಾರ್ಪಣಮಸ್ತು" ಎಂದು ಮುಕ್ತಾಯ ಮಾಡಲಾಗುತ್ತದೆ.

೧೭ ಹಂತಗಳಲ್ಲಿ ಮಾಧ್ಯಾಹ್ನಿಕವನ್ನೂ, ಸಂಕಲ್ಪ ಹಾಗೂ ಗಾಯತ್ರೀ ಧ್ಯಾನ ಮಂತ್ರದಲ್ಲಿರುವ ಬದಲಾವಣೆಗಳನ್ನು ಸೂಚಿಸಿ ಸಾಯಂಸಂಧ್ಯಾವಂದನ ಕ್ರಮವನ್ನು ತಿಳಿಸಲಾಗಿದ್ದರೂ ಉಪಸ್ಥಾನ ಮಂತ್ರದ ಬದಲಾವಣೆಯ ವಿಚಾರ ತಿಳಿಸಿಲ್ಲ.

ತರ್ಪಣ ಕ್ರಿಯೆಯನ್ನು ವಿವರಿಸುವಲ್ಲಿ ಶುಕ್ಲಪಕ್ಷದಲ್ಲಿ ಕೇಶವಾದಿ ದಾಮೋದರ ಪರ್ಯಂತ ೧೨ ನಾಮಗಳನ್ನೂ; ಕೃಷ್ಣಪಕ್ಷದಲ್ಲಿ ಸಂಕರ್ಷಣಾದಿ ಕೃಷ್ಣಪರ್ಯಂತ ೧೨ ನಾಮಗಳನ್ನೂ ಬಳಸಿ ತರ್ಪಣ ನೀಡುವುದನ್ನು ಸೂಚಿಸಲಾಗಿದೆ.

* * * *

ಶ್ರೀ ಚಂದ್ರಿಕಾ ಸ್ಟೋರ್ಸ್‌ನವರೇ ಲೇಖಕರ ಹೆಸರನ್ನು ಸೂಚಿಸದೇ ಪ್ರಕಟಿಸಿರುವ ಇನ್ನೊಂದು ಕೃತಿ 'ಯಜುರ್ವೇದೀಯ ತ್ರಿಕಾಲ ಸಂಧ್ಯಾವಂದನೆ' ಯಜುಶ್ಶಾಖೆಯ ಆಪಸ್ತಂಭ ಸೂತ್ರದಂತೆ ಸಂಧ್ಯಾವಂದನೆಯ ಕ್ರಮವನ್ನು ಇಲ್ಲಿ ಸೂಚಿಸಿದ್ದಾರೆ.

ಶ್ರೀ ವಿಷ್ಣು ಸ್ಮರಣೆಯೊಂದಿಗೆ ಪ್ರಾರಂಭವಾಗುವ ಪ್ರಾತಃ ಸಂಧ್ಯಾ ವಂದನೆಯನ್ನು ಆಚಮನ, ಪ್ರಾಣಾಯಾಮ, ಸಂಕಲ್ಪ, ಮಾರ್ಜನ, ಜಲಾಭಿಮಂತ್ರಣ, ಪುನರ್ಮಾರ್ಜನ, ಆಚಮನ, ಪ್ರಾಣಾಯಾಮ, ಸಂಕಲ್ಪ, ಅರ್ಘ್ಯ, ಪ್ರಾಯಶ್ಚಿತ್ತಾರ್ಘ್ಯ, ಭೂತೋಚ್ಚಾಟನ, ಆಸನಶುದ್ಧಿ, ಪ್ರಾಣಾಯಾಮ, ಕರನ್ಯಾಸ, ಅಂಗನ್ಯಾಸ, ಋಷಿಚ್ಛಂದಸಿ, ಭಗವದರ್ಪಣ, ಧ್ಯಾನ, ಜಪ, ಧ್ಯಾನ, ಅಂಗನ್ಯಾಸ, ಕರನ್ಯಾಸ, ಋಷಿಚ್ಛಂದಸಿ, ಭಗವದಾರ್ಪಣ, ದಿಗುಪಸ್ಥಾನ, ದಿಙ್ನಮಸ್ಕಾರ, ಗೋತ್ರ ಪ್ರವರಸಹಿತ ಅಭಿವಾದನ, ಸಮಾಪನ, ಮುಂತಾದ ೨೮ ಹಂತಗಳಲ್ಲಿ ವಿಂಗಡಿಸಿ ಸೂಚಿಸಲಾಗಿದೆ. ಕ್ರಿಯಾಭಾಗವನ್ನು ಕುರಿತು ಅಲ್ಲಲ್ಲೇ ಸಾಕಷ್ಟು ವಿವರಗಳನ್ನು ನೀಡಲಾಗಿದೆ.

ಎಂಟು ಹಂತಗಳಲ್ಲಿ ಮಾಧ್ಯಾಹ್ನಿಕವನ್ನೂ; ಸಾಯಂ ಸಂಧ್ಯಾವಂದನವನ್ನೂ ವಿವರಿಸಲಾಗಿದೆ.

Sri Vidyabharathi Book Centre, Sringeri

* * * *

CC-O. In Public Domain. Digitized by eGangotri

ಗೋತ್ರ ; ಸೂತ್ರ ; ಪ್ರವರಗಳನ್ನು ಸೂಚಿಸದೆ, ಯಜುಶ್ಶಾಖೆಯ ಸಂಧ್ಯಾವಂದನ ಕ್ರಮವನ್ನು ಕುರಿತು ತೊಪ್ಪಲ್ ರಾಘವಾಚಾರ್ಯ ಅವರು ರಚಿಸಿರುವ ಒಂದು ಕೃತಿ 'ಶ್ರೀ ವೈಷ್ಣವ ಯಜುರ್ವೇದ ಸಂಧ್ಯಾ ವಂದನೆ'.

ತ್ರಿಕಾಲ ಸಂಧ್ಯಾವಂದನೆಯೊಂದಿಗೆ ಪ್ರಾತಃಸ್ನಾನ, ಊರ್ಧ್ವ ಪುಂಡ್ರ ಧಾರಣ, ಯಜ್ಞೋಪವೀತಧಾರಣ ಕ್ರಮವನ್ನೂ ಈ ಕೃತಿಯಲ್ಲಿ ಸೂಚಿಸ ಲಾಗಿದೆ. ಸಪ್ತರ್ಷಿಸ್ತೋತ್ರ, ಹರ್ಯಷ್ಟಕ, ಕೃಷ್ಣಾಷ್ಟಕವೂ ಇದರಲ್ಲಿ ಅಡಕ ವಾಗಿದೆ. ಸಂಧ್ಯಾವಂದನೆರಹಿತವಾಗಿ ಮಾಡುವ ಯಾವುದೇ ವೈದೀಕಕರ್ಮವೂ ನಿಷ್ಫಲವಾದುದು ; ವರ್ಣಾಶ್ರಮಧರ್ಮ ಪರಿಪಾಲನೆಯಿಂದ ಮೋಕ್ಷ, ಧರ್ಮಶಾಸ್ತ್ರೋಕ್ತ ಕ್ರಮದಲ್ಲಿ ಕರ್ಮಮಾಡದವನು ಭಕ್ತನಲ್ಲ. ಪ್ರಥಮ ಪುರುಷನಾದ ಶ್ರೀಮನ್ಮಹಾವಿಷ್ಣುವೇ ಸರ್ವೋತ್ತಮನಾದ ಭಗವಂತ ; ಭಗವದಾರಾಧನಾರೂಪವಾಗಿ ಸಕಲ ಕರ್ಮಗಳನ್ನೂ ಆಚರಿಸಬೇಕು. ಮುಂತಾದ ಸಂಗತಿಗಳನ್ನೊಳಗೊಂಡ ಮುನ್ನುಡಿಯೊಂದಿಗೆ ಪ್ರಾರಂಭವಾಗಿ ರುವ ಈ ಪುಸ್ತಕದಲ್ಲಿ ಉಷಾಃಕಾಲದಲ್ಲಿ ಅನುಸಂಧಿಸಬೇಕಾದ ಶ್ಲೋಕಗಳು, ಪ್ರಾತಃ ಸ್ನಾನ, ಊರ್ಧ್ವಪುಂಡ್ರಧಾರಣ ಕ್ರಮ ವಿವರಿಸಲ್ಪಟ್ಟಿದೆ.

ಊರ್ಧ್ವಪುಂಡ್ರಧಾರಣಾನಂತರ ಅಸ್ಮದ್ಗುರು, ಪರಮಗುರು, ಸರ್ವ ಗುರು, ವೇದಾಂತಗುರು, ರಾಮಾನುಜಾಚಾರ್ಯರು, ಪರಾಂಕುಶದಾಸ, ಯಾಮುನಮುನಿ, ರಾಮಮಿಶ್ರ, ಪುಂಡರೀಕಾಕ್ಷನಾಥಮುನಿ, ಶಠಕೋಪ, ವಿಷ್ವಕ್ಸೇನ, ಶ್ರೀ, ಶ್ರೀಧರ, ದೇಶಿಕ, ಪರಮಾಚಾರ್ಯಗುರು ಮುಂತಾದ ಗುರು ಪರಂಪರೆಯನ್ನು ಸ್ತುತಿಸಿ; ನಾರಾಯಣಸ್ತೋತ್ರ ಮಾಡಿ, ಪೆರಂಬದೂರಿ ನಲ್ಲಿ ಜನಿಸಿದ ರಾಮಾನುಜರ ಪರವಾದ ತಮಿಳು ಪದ್ಯವೊಂದನ್ನು ಅನು ಸಂಧಾನಮಾಡಿ, ತುಲಸೀಕಾಷ್ಠಮಾಲಾ, ಪದ್ಮಾಕ್ಷಮಾಲಾ, ಪವಿತ್ರಮಾಲಾದಿ ಗಳನ್ನು ಹಾಕಿಕೊಂಡು, ಎರಡು ದರ್ಭೆಗಳಿಂದ ಮಾಡಿದ ಪವಿತ್ರವನ್ನು ಧರಿಸಿ, ಪ್ರಾತಃ ಸಂಧ್ಯಾವಂದನೆ ಮಾಡುವುದನ್ನು ಲೇಖಕರು ವಿವರಿಸಿದ್ದಾರೆ.

ಆಚಮನ, ಪ್ರಾಣಾಯಾಮ, ಸಂಕಲ್ಪ, ಪ್ರೋಕ್ಷಣ, ಜಲಪ್ರಾಶನ, ಮಾರ್ಜನ, ಪಾಪಪುರುಷನಿರಸನ, ಪ್ರಾಣಾಯಾಮ, ಸಂಕಲ್ಪ, ಅರ್ಘ್ಯ, ಪ್ರಾಣಾಯಾಮ, ಪ್ರಾಯಶ್ಚಿತ್ತಾರ್ಘ್ಯ, ಆಚಮನ, ತರ್ಪಣ, ಆಸನ ವಿನಿ ಯೋಗ, ಭೂಪ್ರಾರ್ಥನೆ, ಪ್ರಾಣಾಯಾಮ, ಸಂಕಲ್ಪ, ನ್ಯಾಸ, ಪ್ರಾಣಾ ಯಾಮ, ಧ್ಯಾನ, ಆವಾಹನ, ಜಪ, ಪ್ರಾಣಾಯಾಮ, ಉಪಸ್ಥಾನ,

Sri Vidyabharathi Book Centre Sringeri

CC-O. In Public Domain. Digitized by eGangotri

ಉಧ್ವಾಸನೆ, ನಮಸ್ಕಾರ, ಅಭಿವಾದನೆ, ಆಚಮನ ಮುಂತಾದ ೨೯ ಹಂತಗಳಲ್ಲಿ ಸಂಧ್ಯಾವಂದನೆ ಕ್ರಮವನ್ನು ಸೂಚಿಸಲಾಗಿದೆ.

ನಿಷ್ಠೀವನ(ಉಗುಳುವಿಕೆ) ಕ್ರೋಧ, ಆಲಸ್ಯ, ಮದ, ಪತಿತ (ಅಂತ್ಯಜ, ನಾಯಿ ಇತ್ಯಾದಿ ನೋಡುವುದು), ಜೃಂಭಣ (ಆಕಳಿಕೆ), ನಿದ್ರಾ, ಕ್ಷುಂದ್ರಾ (ಹಸಿವು) ಮುಂತಾದವು ಜಪದವೈರಿಗಳು. ಅವುಗಳನ್ನು ತ್ಯಜಿಸಬೇಕು. ಇಂಥ ದೋಷ ಸಂಭವಿಸಿದಾಗ ಆಚಮನ ಮಾಡಿ, ಪುನಃ ಜಪವನ್ನು ಮಾಡಬೇಕು. ಪತಿತ ಸಂಭಾಷಣೆಯುಂಟಾದರೆ ಸ್ನಾನಮಾಡಿ ಪುನಃ ಜಪಮಾಡಬೇಕು. ಜಪಕಾಲದಲ್ಲಿ ನಾಭಿಗೆ ಕೆಳಗಿನ ತನ್ನ ಶರೀರ ಭಾಗವನ್ನೂ ಮುಟ್ಟಬಾರದು. ಮುಟ್ಟಿದರೆ ಕೈತೊಳೆದುಕೊಂಡು ಜಪಮಾಡಬೇಕು. ಜಲವಿಲ್ಲದ ಪಕ್ಷದಲ್ಲಿ ಬಲ ಕಿವಿಯನ್ನು ಮುಟ್ಟಬೇಕು. ಜಪ ಮಧ್ಯದಲ್ಲಿ ನಿಯಮಾತಿಕ್ರಮವಾದರೆ

ಇದಂ ವಿಷ್ಣುರ್ವಿಚಕ್ರಮೇ ತ್ರೇಧಾನಿದಧೇ ಪದಂ ।
ಸಮೂಥ ಮಸ್ಯಪಾಗ್ಂ ಸುರೇ ॥

—ಎಂಬ ಋಕ್ಕನ್ನಾಗಲೀ ಶ್ರೀಕೃಷ್ಣನನ್ನಾಗಲೀ ಧ್ಯಾನಿಸಬೇಕು. ಜಪಮಧ್ಯದಲ್ಲಿ ಭಾಗವತರು ಬಂದರೆ ಅವರಿಗೆ ಎದ್ದು ನಮಸ್ಕರಿಸಿ, ಅಭಿವಾದನೆ ಮಾಡಿ, ಕುಶಲ ಪ್ರಶ್ನಾನಂತರ ಅವರ ಅನುಮತಿ ಪಡೆದು ಜಪವನ್ನು ಮುಂದುವರೆಸಬೇಕು. ಗಾಯತ್ರೀ ಜಪಕಾಲದಲ್ಲಿ "ತತ್ಸವಿತುರ್ವರೇಣಿಯಂ" ಎಂದೂ; ಇತರ ಸಮಯದಲ್ಲಿ "ತತ್ಸವಿತುರ್ವರೇಣ್ಯಂ" ಎಂದೂ ಪಾಠಾಂತರ ಮಾಡಿಕೊಳ್ಳಬೇಕು ಎಂಬ ಮಾಹಿತಿಗಳನ್ನೊಳಗೊಂಡ ವಿಶೇಷ ಸೂಚನೆಗಳನ್ನು ನೀಡಲಾಗಿದೆ. ಸಂಕ್ಷೇಪರೂಪದಲ್ಲಿ ಮಾಧ್ಯಾಹ್ನಿಕ ಹಾಗೂ ಸಾಯಂಸಂಧ್ಯಾವಂದನ ಕ್ರಮವನ್ನು ತಿಳಿಸಲಾಗಿದೆ. ಯಜ್ಞೋಪವೀತ ಧಾರಣೆಯಲ್ಲೂ ಸಂಕಲ್ಪ ಪೂರ್ವದಲ್ಲಿ ಕಾಲದೇಶ ಸಂಕೀರ್ತನೆಯನ್ನು ಸೂಚಿಸಲಾಗಿದೆ.

* * * *

ಇದುವರೆವಿಗೂ ಸಮೀಕ್ಷಿಸಿರುವ ಒಂಬತ್ತು ಕೃತಿಗಳಲ್ಲೂ ಸಂಧ್ಯಾವಂದನೆಯ ಕ್ರಮವನ್ನು ವಿಭಾಗಿಸಿರುವ ಹಂತಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಾಣಬಹುದಾದರೂ, ಸಾಮಾನ್ಯವಾಗಿ ಪ್ರತಿಯೊಂದು ಹಂತದ ಮಂತ್ರಭಾಗವೂ ಎಲ್ಲ ಕ್ರಮಗಳಲ್ಲೂ ಇರುತ್ತವೆ. ಕೆಲವೊಂದು ಸನ್ನಿವೇಶಗಳಲ್ಲಿ ಒಂದು ಮಂತ್ರದ ಬದಲಿಗೆ ಬೇರೊಂದು ಮಂತ್ರದ ಬಳಕೆ ಆಗಿರಬಹುದು. ಆದರೆ ಅವುಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಥ ಮತ್ತು ಉದ್ದೇಶ ಮಾತ್ರ ಒಂದೇ ಆಗಿರುತ್ತದೆ. ಹಂತಗಳ ಸಂಖ್ಯೆ ಯಲ್ಲಿ ಹೆಚ್ಚು ಕಡಿಮೆಯಾಗಿರುವುದಷ್ಟನ್ನೇ ಗಮನದಲ್ಲಿರಿಸಿಕೊಂಡು ಬೇರೆ ಒಂದು ಕ್ರಮದಲ್ಲಿ ಮಂತ್ರಭಾಗವು ಲೋಪವಾಗಿರುತ್ತದೆಂದು ತಪ್ಪಾಗಿ ಭಾವಿಸಬಾರದು.

ಪ್ರಾತಃಸಂಧ್ಯಾವಂದನೆಯಲ್ಲಿ ಬಳಸುವ ಕ್ರಮದಲ್ಲಿ ಕೆಲವೊಂದು ಮಂತ್ರ ಭಾಗದ ಬದಲಾವಣೆಯನ್ನು ಹೊರತುಪಡಿಸಿ, ಉಳಿದೆಲ್ಲ ಮಂತ್ರಭಾಗವೂ ಮಾಧ್ಯಾಹ್ನಿಕ ಹಾಗೂ ಸಾಯಂಸಂಧ್ಯಾವಂದನೆಯಲ್ಲಿ ಒಂದೇ ಆಗಿರುತ್ತದೆ.

ಇವಿಷ್ಟೂ ತ್ರಿಮತಸ್ಥ ಬ್ರಾಹ್ಮಣಸಮೂಹವು ತಮ್ಮ ಸಂಪ್ರದಾಯಾನು ಸಾರವಾಗಿ ನಿತ್ಯಕರ್ಮವಾದ ಸಂಧ್ಯೋಪಾಸನ ಕರ್ಮದಲ್ಲಿ ಅನುಸರಿಸುವ ಪದ್ಧತಿಗಳ ವಿವರಣೆ. ಇವುಗಳನ್ನೆಲ್ಲ ಕೂಲಂಕಶವಾಗಿ ಪರಿಶೀಲಿಸಿದಾಗ ; ಸಂಧ್ಯೋಪಾಸನೆಯು ಸಾವಿರ ವಿಧದಲ್ಲಿ ಆಚರಿಸಲ್ಪಟ್ಟರೂ ಅವುಗಳಲ್ಲಿ ಹೇಳುವ ಮಂತ್ರಗಳ ತಾತ್ಪರ್ಯವು ಒಂದೇ ಎಂಬುದನ್ನು ಗ್ರಹಿಸಬಹುದು. ಈ ಕಾರಣದಿಂದಾಗಿಯೇ, ಬೇರೆ ಬೇರೆ ಸಂಪ್ರದಾಯದವರೂ ಸಾರ್ವತ್ರಿಕ ವಾಗಿ ಅನುಸರಿಸಬಹುದಾದ ತ್ರಿಸಂಧ್ಯಾಕ್ರಮವನ್ನು ಪರಿಷ್ಕರಿಸಿ, ಕ್ರೋಢೀ ಕರಿಸಿ ಮುಂದಿನ ಭಾಗದಲ್ಲಿ ವಿವರಿಸಲಾಗಿದೆ,

ತ್ರಿಮತಸ್ಥ ಸಂಧ್ಯಾವಂದನೆ

೧. ಸ್ನಾನ : ಪಂಚಭೂತಗಳಲ್ಲಿ ಒಂದಾದ ಜಲವು (ನೀರು) ಈ ಭೂಮಂಡಲದ ಜೀವರಾಶಿಗಳ ಅಸ್ತಿತ್ವಕ್ಕೆ ಅತ್ಯಗತ್ಯವಾದ ವಸ್ತುವಾಗಿದೆ. ಮಾನವನನ್ನು ಮಾನವತ್ವದಿಂದ ದೈವತ್ವಕ್ಕೇರಿಸುವ ದಿಸೆಯಲ್ಲಿ ನೀರಿನಪಾತ್ರ ಅತ್ಯಂತ ಮಹತ್ವದ್ದು. ನೀರಿನ (ಗಂಗೆಯ) ಪಾವಿತ್ರ್ಯದಿಂದಾಗಿ ನಮ್ಮೆಲ್ಲರ ಎಲ್ಲ ಪಾಪರಾಶಿಗಳೂ ನಿಶ್ಚಯವಾಗಿಯೂ ನಾಶಹೊಂದುತ್ತವೆ. ಇದನ್ನು ತಿಳಿದ ನಮ್ಮ ಪೂರ್ವಜರು ಪ್ರತಿದಿನವೂ ಸ್ನಾನಮಾಡುವ ಮೂಲಕ ದೇಹದ ಹೊರಗಿನ ಕೊಳೆಯನ್ನು ತೊಳೆಯುವ ತನ್ಮೂಲಕ ಒಳಮನಸ್ಸನ್ನೂ ಶುದ್ಧ ಗೊಳಿಸುವ ಕ್ರಮವನ್ನು ರೂಢಿಗೆ ತಂದರು. 'ಆ ರೀತಿ ಸ್ನಾನಮಾಡುವಾಗಲೂ ಸ್ನಾನಯೋಗ್ಯವಾದ ಜಲವನ್ನು 'ಕೇವಲ ನೀರು' ಎಂಬ ತಾತ್ಸಾರದ ಭಾವನೆ ಯಿಂದಿರುವ ಬದಲು ಈ ಭೂಮಂಡಲದಲ್ಲೇ ಅತ್ಯಂತ ಪವಿತ್ರತಮವೆಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಗಣಿಸಲ್ಪಟ್ಟಿರುವ ಪುಣ್ಯನದಿಗಳನ್ನು ಮಾನಸಿಕವಾಗಿ ಆಹ್ವಾನಿಸಿ, ನಾವು ಬಳಸುವ ಸ್ಥಳೀಯಜಲವನ್ನೇ ಪವಿತ್ರ ಗಂಗೆಯನ್ನಾಗಿ ಪರಿವರ್ತಿಸಿ, ಉಪಯೋಗಿಸುವ ಕ್ರಮವನ್ನು ರೂಪಿಸಿದ್ದಾರೆ.

ಗಂಗೇಚ ಯಮುನೇಚೈವ ಗೋದಾವರೀ ಸರಸ್ವತೀ ।
ನರ್ಮದೇ ಸಿಂಧು ಕಾವೇರೀ ಜಲೇಸ್ಮಿನ್ ಸನ್ನಿಧಿಂ ಕುರು ॥

ಎಂಬ ಶ್ಲೋಕವನ್ನು ಪಠಿಸುವ ಮೂಲಕ ಗಂಗೇ, ಯಮುನೆ, ಗೋದಾವರೀ, ಸರಸ್ವತೀ, ನರ್ಮದೇ, ಸಿಂಧು, ಕಾವೇರಿ ಮುಂತಾದ ಪುಣ್ಯನದಿಗಳ ಜಲವನ್ನು ಆವಾಹಿಸುವುದು ನಮ್ಮಲ್ಲಿ ರೂಢಿಯಲ್ಲಿರುವ ಕ್ರಮ. ಅನಂತರ ಭಗವನ್ನಾಮ ಸ್ಮರಣೆಯೊಂದಿಗೆ ದೇಹಸಾಮರ್ಥ್ಯವನ್ನವಲಂಬಿಸಿ ಹಿತಕರವಾಗಿ ಸ್ನಾನ ಮಾಡಬಹುದು.

೨. ಗುರುದೇವತಾ ಸ್ತೋತ್ರ :

ಅ) ಗುರು ಪ್ರಾರ್ಥನೆ

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।
ಗುರುಸ್ಸಾಕ್ಷಾತ್ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ ॥

ಆ) ಗಣಪತೀ ಪ್ರಾರ್ಥನೆ

ಅಗಜಾನನ ಪದ್ಮಾರ್ಕಂ ಗಜಾನನ ಮಹರ್ನಿಶಂ ।
ಅನೇಕ ದಂತಂ ಭಕ್ತಾನಾಮೇಕದಂತ ಮುಪಾಸ್ಮಹೇ ॥
ಗಜಾನನಂ ಭೂತಗಣಾಧಿಸೇವಿತಂ ಕಪಿತ್ಥ ಜಂಬೂಫಲಸಾರ ಭಕ್ಷಿತಂ ।
ಉಮಾಸುತಂ ಶೋಕವಿನಾಶಕಾರಣಂ ನಮಾಮಿ ವಿಘ್ನೇಶ್ವರ ಪಾದಪಂಕಜಂ ॥

ಇ) ಶ್ರೀ ಲಕ್ಷ್ಮೀನೃಸಿಂಹ ಪ್ರಾರ್ಥನೆ

ಶ್ರೀ ಲಕ್ಷ್ಮೀನೃಸಿಂಹಪಾಯಾತ್ ಭಕ್ತಾನುಗ್ರಹ ತತ್ಪರಃ ।
ಯಸ್ಯಚಾನುಗ್ರಹಾದಾಸೀತ್ ದೇವರಾಜ್ಯಂ ನಿರಾಮಯಂ ॥

ಈ) ಶಿವ ಪ್ರಾರ್ಥನೆ

ಶಾಂತಂ ಪದ್ಮಾಸನಸ್ಥಂ । ಶಶಿಧರಮಕುಟಂ ।
ಪಂಚವಕ್ತ್ರಂ ತ್ರಿನೇತ್ರಂ । ಶೂಲಂ ವಜ್ರಂ ಚ ಖಡ್ಗಂ ।
ಪರಶುಮಭಯದಂ । ದಕ್ಷಭಾಗೇ ವಹಂತಂ ॥
ನಾಗಂ ಪಾಶಂ ಚ ಘಂಟಾಂ । ಪ್ರಳಯಹುತವಹಂ ।
ಸಾಂಕುಶಂ ವಾಮಭಾಗೇ । ನಾನಾಲಂಕಾರಯುಕ್ತಂ ।
ಸ್ಫಟಿಕಮಣಿನಿಭಂ । ಪಾರ್ವತೀಶಂ ನಮಾಮಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಂದೇ ಶಂಭುಮುಮಾಪತಿಂ । ಸುರಗುರುಂ ವಂದೇ ಜಗತ್ಕಾರಣಂ ॥
ವಂದೇ ಪನ್ನಗಭೂಷಣಂ । ಮೃಗಧರಂ ವಂದೇಪಶೂನಾಂ ಪತಿಂ ॥
ವಂದೇ ಸೂರ್ಯ ಶಶಾಂಕ ವಹ್ನಿನಯನಂ । ವಂದೇ ಮುಕುಂದಪ್ರಿಯಂ ॥
ವಂದೇ ಭಕ್ತಜನಾಶ್ರಯಂ ಚ ವರದಂ । ವಂದೇ ಶಿವಂ ಶಂಕರಂ ॥

(ತಮ್ಮ ಇಷ್ಟದೇವತಾಪರವಾದ ಯಾವುದೇ ಶ್ಲೋಕವನ್ನು ಬೇಕಾದರೂ ಹೇಳಿಕೊಳ್ಳಬಹುದು.)

೩. **ಆಚಮನ** : ಓಂ ಭೂಃ ಓಂ ಭುವಃ ಓಗ್ಂ ಸುವಃ ಓಂ ಭೂರ್ಭುವಸ್ಸುವಃ ಸರ್ವಂಪಾಣಿ ಪಾದೌಪ್ರೋಕ್ಷ್ಯ ನೇತ್ರಯೋಃ ನಾಸಿಕಯೋಃ ಶ್ರೋತ್ರಯೋಃ ಬಾಹ್ವೋಃ ಹೃದಯೇ ನಾಭೌ ಮೂರ್ಧನಿ.

(ಓಂ ಋಗ್ವೇದಾಯ ಸ್ವಾಹಾ ಓಂ ಯಜುರ್ವೇದಾಯ ಸ್ವಾಹಾ ಓಂ ಸಾಮವೇದಾಯ ಸ್ವಾಹಾ ಅಥರ್ವಣವೇದಾಯ ನಮಃ ಇತಿಹಾಸ ಪುರಾಣೇಭ್ಯೋ ನಮಃ ಅಗ್ನಯೇ ನಮಃ ಅಗ್ನಯೇ ನಮಃ ವಾಯವೇ ನಮಃ ಪ್ರಾಣಾಯ ನಮಃ ಸೂರ್ಯಾಯ ನಮಃ ಚಂದ್ರಾಯ ನಮಃ ದಿಗ್ಭ್ಯೋ ನಮಃ ದಿಗ್ಭ್ಯೋ ನಮಃ ಇಂದ್ರಾಯ ನಮಃ ಇಂದ್ರಾಯ ನಮಃ ಪೃಥಿವ್ಯೈ ನಮಃ ಪೃಥಿವ್ಯೈ ನಮಃ ಅಂತರಿಕ್ಷಾಯ ನಮಃ ಅಂತರಿಕ್ಷಾಯ ನಮಃ ದಿವೇ ನಮಃ ಬ್ರಹ್ಮಣೇ ನಮಃ ವಿಷ್ಣವೇ ನಮಃ ಸದಾಶಿವಾಯ ನಮಃ ॥

ಅಥವಾ

ಓಂ ಕೇಶವಾಯ ಸ್ವಾಹಾ ಓಂ ನಾರಾಯಣಾಯ ಸ್ವಾಹಾ ಓಂ ಮಾಧವಾಯ ಸ್ವಾಹಾ ಗೋವಿಂದಾಯ ನಮಃ ವಿಷ್ಣವೇ ನಮಃ ಮಧುಸೂಧನಾಯ ನಮಃ ತ್ರಿವಿಕ್ರಮಾಯ ನಮಃ ವಾಮನಾಯ ನಮಃ ಶ್ರೀಧರಾಯ ನಮಃ ಹೃಷೀಕೇಶಾಯ ನಮಃ ಪದ್ಮನಾಭಾಯ ನಮಃ ದಾಮೋದರಾಯ ನಮಃ ಸಂಕರ್ಷಣಾಯ ನಮಃ ವಾಸುದೇವಾಯ ನಮಃ ಪ್ರದ್ಯುಮ್ನಾಯ ನಮಃ ಅನಿರುದ್ಧಾಯ ನಮಃ ಪುರುಷೋತ್ತಮಾಯ ನಮಃ ಅಧೋಕ್ಷಜಾಯ ನಮಃ ನಾರಸಿಂಹಾಯ ನಮಃ ಅಚ್ಯುತಾಯ ನಮಃ ಜನಾರ್ಧನಾಯ ನಮಃ ಉಪೇಂದ್ರಾಯ ನಮಃ ಹರಯೇ ನಮಃ ಓಂ ಶ್ರೀಕೃಷ್ಣಾಯ ನಮಃ)

೪. **ಪ್ರಾಣಾಯಾಮ** : ಪ್ರಣವಸ್ಯ ಪರಬ್ರಹ್ಮಋಷಿಃ ಪರಮಾತ್ಮಾ ದೇವತಾ ದೇವೀ ಗಾಯತ್ರೀಛಂದಃ ಪ್ರಾಣಾಯಾಮೇ ವಿನಿಯೋಗಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ಭೂಃ ಓಂ ಭುಃ ಓಗ್ಂ ಸುವಃ ಓಂ ಮಹಃ ಓಂ ಜನಃ ಓಂ ತಪಃ ಓಗ್ಂ ಸತ್ಯಂ ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾತ್ ಓಮಾಪೋಜ್ಯೋತಿ ರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಂ ॥

೫. **ದೇಶಕಾಲ ಸಂಕೀರ್ತನೆ :** ಶುಭತಿಥೌ ಶೋಭನೇ ಮುಹೂರ್ತೇ ಅದ್ಯಬ್ರಹ್ಮಣಃ ದ್ವಿತೀಯಪರಾರ್ಧೇ ಶ್ವೇತವರಾಹಕಲ್ಪೇ ವೈವಸ್ವತ ಮನ್ವಂತರೇ ಅಷ್ಟಾವಿಂಶತಿತಮೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ದಂಡಕಾರಣ್ಯೇ ಗೋದಾವರ್ಯಾಃ ದಕ್ಷಿಣೇ ತೀರೇ ಶಾಲಿವಾಹನಶಕೇ ಬೌದ್ಧಾವತಾರೇ ರಾಮಕ್ಷೇತ್ರೇ ಅಸ್ಮಿನ್ ವರ್ತಮಾನೇ ಚಾಂದ್ರಮಾನೇ ನ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ....ಸಂವತ್ಸರೇ.... ಅಯನೇ.... ಋತೌ.... ಮಾಸೇ.... ಪಕ್ಷೇ.... ಶುಭತಿಥೌ (ತಿಥಿ) .... ವಾಸರ ಯುಕ್ತಾಯಾಂ ಶುಭನಕ್ಷತ್ರ ಶುಭಯೋಗ ಶುಭಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಉಪಾತ್ತ ಸಮಸ್ತದುರಿತಕ್ಷಯದ್ವಾರಾ ಶರೀರ ಶುದ್ಧ್ಯರ್ಥಂ ಭಸ್ಮಧಾರಣಮಹಂ ಕರಿಷ್ಯೇ ॥

ಅಥವಾ

(ಊರ್ಧ್ವಪುಂಡ್ರಧಾರಣಮಹಂ ಕರಿಷ್ಯೆ

ಅಥವಾ

ದ್ವಾದಶನಾಮ ಪಂಚಮುದ್ರಾಧರಣಮಹಂ ಕರಿಷ್ಯೇ)

೬. **ಲಾಂಛನಧಾರಣ :** ಓಂ ಮಾನಸ್ತೋಕೇತನಯೇ ಮಾನ ಆಯುಷಿಮಾನೋಗೋಷು ಮಾನೋ ಅಶ್ವೇಷುರೀರಿಷಃ । ವೀರಾನ್ಮಾನೋ ರುದ್ರಭಾಮಿತೋ ವಧೀರ್ ಹವಿಷ್ಮನ್ತೋ ನಮಸಾ ವಿಧೇಮತೇ ॥

ಓಂ ಈಶಾನಸ್ಸರ್ವವಿದ್ಯಾನಾಮೀಶ್ವರಸ್ಸರ್ವ ಭೂತಾನಾಂ ಬ್ರಹ್ಮಾದಿ ಪತಿರ್ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋಮೇ ಅಸ್ತು ಸದಾಶಿವೋಂ ।

ಓಂ ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ ತನ್ನೋ ರುದ್ರಃ ಪ್ರಚೋದಯಾತ್ ।

ಓಂ ಅಘೋರೇಭ್ಯೋಽಥಘೋರೇಭ್ಯೋ ಘೋರ–ಘೋರತರೇಭ್ಯಃ ಸರ್ವೇಭ್ಯಸ್ಸರ್ವಶರ್ವೇಭ್ಯೋ ನಮಸ್ತೇ ಅಸ್ತು ರುದ್ರರೂಪೇಭ್ಯಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ವಾಮದೇವಾಯ ನಮೋ ಜ್ಯೇಷ್ಠಾಯ ನಮಶ್ಶ್ರೇಷ್ಠಾಯ ನಮೋ ರುದ್ರಾಯ ನಮಃ ಕಾಲಾಯ ನಮಃ ಕಲವಿಕರಣಾಯ ನಮೋ ಬಲ ವಿಕರಣಾಯ ನಮೋ ಬಲಾಯ ನಮೋ ಬಲ ಪ್ರಮಥನಾಥಾಯ ನಮಃ ಸರ್ವಭೂತದಮನಾಯ ಮನೋನ್ಮನಾಯ ನಮಃ ।

ಓಂ ಸದ್ಯೋಜಾತಂ ಪ್ರಪದ್ಯಾಮಿ ಸದ್ಯೋಜಾತಾಯ ವೈನಮೋ ನಮಃ ಭವೇಭವೇ ನಾತಿಭವೇ ಭವಸ್ವಮಾಂ ಭವೋದ್ಭವಾಯ ನಮಃ ॥

ಓಂ ಅಗ್ನಿರಿತಿಭಸ್ಮ ವಾಯುರಿತಿ ಭಸ್ಮ ಜಲಮಿತಿ ಭಸ್ಮ ಸ್ಥಲಮಿತಿ ಭಸ್ಮ ವ್ಯೋಮೇತಿಭಸ್ಮ ಸರ್ವಗ್ಂ ಹವಾ ಇದಂ ಭಸ್ಮ ಮನ ಏತಾನಿ ಚಕ್ಷೂಂಗ್ಂಷಿ ಭಸ್ಮಾನಿ ॥

ಅಥವಾ

(ಗಂಧದ್ವಾರಾಂ ಧುರಾಧರ್ಷಾಂ ನಿತ್ಯ ಪುಷ್ಟಾಂಕರೀಷಿಣೀ ।
ಈಶ್ವರೀಗ್ಂ ಸರ್ವಭೂತಾನಾಂ ತ್ವಾಮಿಹೋಪಹ್ವಯೇ ಶ್ರೀಯಂ ॥
ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ
ವಿಮ ಮೇ ರಜಾಗ್ಂಸಿ ಯೋ ಅಸ್ಕಭಾಯದುತ್ತರಗ್ಂ
ಸದಸ್ಥಂ ವಿಚಕ್ರಮಾಣ ಸ್ತ್ರೇ ಥೋರುಗಾಯಃ ॥
ಓಂ ಕ್ಷಾಂ ನಮಃ ಪರಾಯ ಪರಮೇಷ್ಟ್ಯಾತ್ಮನೇ ನಮಃ
ಓಂ ಯಾಂ ನಮಃ ಪರಾಯ ಪುರುಷಾತ್ಮನೇ ನಮಃ
ಓಂ ರಾಂ ನಮಃ ಪರಾಯ ವಿಶ್ವಾತ್ಮನೇ ನಮಃ
ಓಂ ವಾಂ ನಮಃ ಪರಾಯ ನಿವೃತ್ತ್ಯಾತ್ಮನೇ ನಮಃ
ಓಂ ಲಾಂ ನಮಃ ಪರಾಯ ಸರ್ವಾತ್ಮನೇ ನಮಃ

ಓಃ ನಮೋ ನಾರಾಯಣಾಯ ಕೇಶವಾಯ ನಮಃ ನಾರಾಯಣಾಯ ನಮಃ ಮಾಧವಾಯನಮಃ ಗೋವಿಂದಾಯ ನಮಃ ವಿಷ್ಣವೇ ನಮಃ ॥ ಮಧುಸೂದನಾಯ ನಮಃ ತ್ರಿವಿಕ್ರಮಾಯ ನಮಃ ವಾಮನಾಯ ನಮಃ ಶ್ರೀಧರಾಯ ನಮಃ ಹೃಷಿಕೇಶಾಯ ನಮಃ ಪದ್ಮನಾಭಾಯ ನಮಃ ದಾಮೋದರಾಯ ನಮಃ ಶ್ರೀಯೈ ನಮಃ ಅಮೃತೋದ್ಭವಾಯೈ ನಮಃ ಕಮಲಾಯೈ ನಮಃ ಚಂದ್ರಸೋದರ್ಯೈ ನಮಃ ವಿಷ್ಣು ಪತ್ನ್ಯೈ ನಮಃ ವೈಷ್ಣವ್ಯೈ ನಮಃ ವರಾರೋಹಾಯೈ ನಮಃ ಹರಿವಲ್ಲಭಾಯೈ ನಮಃ ಶಾಂರ್ಙ್ಗಿಣ್ಯೈ ನಮಃ ದೇವ ದೇವಿಕಾಯೈ ನಮಃ ಮಹಾಲಕ್ಷ್ಮ್ಯೈ ನಮಃ ಲೋಕಸುಂದರ್ಯೈ ನಮಃ ಸರ್ವ ಭೀಷ್ಟಫಲಪ್ರದಾಯೈ ನಮಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಥವಾ

ಗೋಪೀಚಂದನ ಪಾಪಘ್ನ ವಿಷ್ಣುದೇಹ ಸಮುದ್ಭವ ।
ಚಕ್ರಾಂಕಿತ ನಮಸ್ತೇಸ್ತು ಧಾರಣಾನ್ಮುಕ್ತಿದೋಭವ ॥

ಓಂ ನಮೋ ನಾರಾಯಣಾಯ ಕೇಶವಾಯ ನಮಃ ದಿಂದ ದಾಮೋದರಾಯ ನಮಃ ದವರೆವಿಗೆ ಹೇಳುವುದು. ಅನಂತರ ಪಂಚಮುದ್ರಾಧಾರಣೆ :

ಚಕ್ರ : ಸುದರ್ಶನ ಮಹಾಜ್ವಾಲಾ ಕೋಟಿಸೂರ್ಯ ಸಮಪ್ರಭ ।
ಅಜ್ಞಾನಾಂಧಸ್ಯ ಮೇನಿತ್ಯಂ ವಿಷ್ಣೋಃಮಾರ್ಗಂ ಪ್ರದರ್ಶಯ ॥

ಶಂಖ : ಪಾಂಚಜನ್ಯ ನಿಜಧ್ವಾನ ಧ್ವಸ್ತಪಾತಕ ಸಂಚಯ ।
ತ್ರಾಹಿಮಾಂ ಪಾಪಿನಂ ಘೋರಸಂಸಾರಾರ್ಣವ ಪಾತಿನಂ ॥

ಗದಾ : ದೈತ್ಯಶೋಣಿತ ದಿಗ್ಧಾಂಗೇ ಕೌಮೋದಕಿ ಗದೇವರೇ ।
ಭಿಂದಿ ಭಿಂದಿತಮೋಽಂತಸ್ಥಂ ತ್ವಾಂ ನಮಾಮಿ ಪುನಃ ಪುನಃ ॥

ಪದ್ಮ : ಸಂಸಾರ ಭಯಭೀತಾನಾಂ ಯೋಗಿನಾಮಭಯಪ್ರದಂ ।
ಪದ್ಮಹಸ್ತೇನ ಯೋ ದೇವೋ ಯೋಗೀಶಂ ತಂ ನಮಾಮ್ಯಹಂ ॥

ನಾರಾಯಣ : ನಾರಾಯಣ ನಮಸ್ತೇಽಸ್ತು ನಾಮಮುದ್ರಾಂಕಿತಂ ನರಂ ।
ದೃಷ್ಟ್ವೈವ ಲಭತೇ ಮುಕ್ತಿಂ ಚಾಂಡಾಲೋ ಬ್ರಹ್ಮಘಾತಕಃ॥
(ನಾಮಮುದ್ರೇ ನಮಸ್ತುಭ್ಯಂ ತ್ವದಂಕಿತತನೂರ್ಹರೇ ।
ಪ್ರಸಾದಾದ್ವಿಷ್ಣುಲೋಕೇ ಹಿ ಚಿರಂಸ್ಥಾಸ್ಯಾಮಿ ನಿರ್ವೃತಃ ॥)

೭. ಧ್ಯಾನ ಸ್ನಾನ (ಶ್ರೀ ವಿಷ್ಣು ಸ್ಮರಣಂ) :

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।
ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಂ ಶುಚಿಃ ॥

೮. ಆಚಮನ : (ಈ ಮೊದಲು ಸೂಚಿಸಿರುವಂತೆ)

೯. ಪ್ರಾಣಾಯಾಮ : (ಈ ಮೊದಲು ಸೂಚಿಸಿರುವಂತೆ)

೧೦. ಸಂಕಲ್ಪ : ಮಮ ಉಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಪ್ರಾತಸಂಧ್ಯಾಮುಪಾಸ್ಯೆ / ಮಾಧ್ಯಾಹ್ನಿಕಸಂಧ್ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಪಾಸ್ಯೇ ಸಾಯಂಸಂಧ್ಯಾ ಮುಪಾಸ್ಯೇ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ ....ಸಂಧ್ಯಾಮುಪಾಸ್ಯೇ ಅಥವಾ ಸೂರ್ಯಾಂತರ್ಗತ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಸವಿತೃನಾಮಕ ಶ್ರೀಲಕ್ಷ್ಮೀನಾರಾಯಣ ಪ್ರೇರಣಯಾ ಶ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ........ಸಂಧ್ಯಾಂ ಉಪಾಸಿಸ್ಯೆ)

೧೧. ಮಾರ್ಜನೆ : ಆಪೋಹಿಷ್ಠಾ ಮಯೋಭುವಸ್ತಾನ ಉರ್ಜೇದಧಾತನ ಮಹೇರಣಾಯ ಚಕ್ಷಸೇ ಯೋವಶ್ಶಿವತಮೋರಸಃ ತಸ್ಯಭಾಜಯತೇಹನಃ ಉಶತೀರಿವ ಮಾತರಃ ತಸ್ಮಾ ಅರಂಗ ಮಾಮವೋಯಂಸ್ಯಕ್ಷಯಾಯಂ ಜಿನ್ವಥ ಆಪೋಜನಯಂಥಾ ಚ ನಃ ॥

೧೨. ಮಂತ್ರಾಚಮನ (ಜಲಪ್ರಾಶನಂ) :

ಪ್ರಾತಃಕಾಲದಲ್ಲಿ : ಓಂ ಸೂರ್ಯಶ್ಚಮಾಮನ್ಯುಶ್ಚ ಮನುಪತಯಶ್ಚ ಮನ್ಯುಕೃತೇಭ್ಯಃ । ಪಾಪೇಭ್ಯೋ ರಕ್ಷಂ ತಾಂ ಯದ್ರಾತ್ರಿಯಾ ಪಾಪ ಮಕಾರ್ಷಂ ಮನಸಾ ವಾಚಾ ಹಸ್ತಾಭ್ಯಾಂ ಪದ್ಭ್ಯಾಮುದರೇಣ ಶಿಶ್ನಾ ರಾತ್ರಿ ಸ್ತದವಲಂಪತು ಯತ್ಕಿಂಚ ದುರಿತಂ ಮಯಿ ಇದಮಹಂ ಮಾಮಮೃತ ಯೋನೌ ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ ॥

ಮಾಧ್ಯಾಹ್ನಿಕದಲ್ಲಿ : ಆಪಃ ಪುನಂತು ಪೃಥಿವೀಂ ಪೃಥಿವೀ ಪೂತಾ ಪುನಾತುಮಾಂ ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮ ಪೂತಾ ಪುನಾತುಮಾಂ ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ ಸರ್ವಂ ಪುನಂತು ಮಾಮಾಪೋಽಸತಾಂ ಚ ಪ್ರತಿಗ್ರಹಗ್ಂ ಸ್ವಾಹಾ ॥

ಸಾಯಂಸಂಧ್ಯೆಯಲ್ಲಿ : ಅಗ್ನಿಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ । ಪಾಪೇಭ್ಯೋ ರಕ್ಷಂತಾಂ ಯದಹ್ನಾಪಾಪಮಕಾರ್ಷಂ ॥ ಮನಸಾ ವಾಚಾ ಹಸ್ತಾಭ್ಯಾಂ ಪದ್ಭ್ಯಾಮುದರೇಣ ಶಿಶ್ನಾ ಅಹಸ್ತದವಲುಂಪತು ಯತ್ಕಿಂಚ ದುರಿತಂ ಮಯಿ ಇದಮಹಂ ಮಾಮಮೃತಯೋ ನೌಸತ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ ॥

೧೩. ಆಚಮನ : (ಈ ಹಿಂದೆ ಸೂಚಿಸಿರುವಂತೆ)

೧೪. ದ್ವಿತೀಯ ಮಾರ್ಜನ (ಪುನರ್ಮಾರ್ಜನ) :

(ಬೋಧಾಯನ ಸೂತ್ರ ಕ್ರಮದಲ್ಲಿ ಮಾತ್ರ ದ್ವಿತೀಯ ಮಾರ್ಜನೆಯಲ್ಲಿ ಇಲ್ಲಿ ಸೂಚಿಸಿರುವಷ್ಟು ಋಕ್ಕುಗಳು ಬರುತ್ತವೆ. ಉಳಿದ ಕ್ರಮಗಳಲ್ಲಿ ಆಯ್ದುಕೊಂಡಿರುವವೂ ಇಲ್ಲಿ ಸೇರಿವೆ)

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ದಧಿಕ್ರಾವ್ಣ್ಣೋ ಅಕಾರಿಷಂ ಜಿಷ್ಣೋರಶ್ವಸ್ಯವಾಜಿನಃ ।
ಸಂರಭಿನೋ ಮುಂಖಾ ಕರತ್ಪ್ರಣ ಆಯೂಗ್ಂಷಿ ತಾರಿಷತ್ ॥

ಆಪೋಹಿಷ್ಠಾಮಯೋಭುಂವಸ್ತಾನ ಊರ್ಜೇದಧಾತನ ।
ಮಹೇರಣಾಯ ಚಕ್ಷಸೇ । ಯೋವಶ್ಶಿವಮೋ ರಸ ।
ಸ್ತಸ್ಯ ಭಾಜಯತೇಹನಃ । ಉಶತೀರಿವಮಾತರಃ
ತಸ್ಮಾ ಅರಂಗಮಾಮವೋ ಯಸ್ಯಕ್ಷಯಾಯ ಜಿನ್ವಥ ।
ಆಪೋ ಜನಯಥಾ ಚ ನಃ ॥

ಶಂನೋ ದೇವಿರಭಿಷ್ಟಯ ಆಪೋ ಭವಂತು ಪೀತಯೇ ।
ಶಂ ಯೋರಭಿಸ್ರವಂತುನಃ ॥

ಈಶಾನಾಂ ವಾರ್ಯಾಣಾಂ ಕ್ಷಯಂತೀಶ್ಚರ್ಷಣೀನಾಂ ।
ಆಪೋಯಾಚಾಮಿಭೇಷಜಂ ॥

ಆಪ್ಸುಮೇ ಸೋಮೋ ಅಬ್ರುವೀದಂತರ್ವಿಶ್ವಾನಿ ಭೇಷಜಾ ।
ಅಗ್ನಿಂ ಚ ವಿಶ್ವಶಂಭುಂ ॥

ಆಪಃ ಪ್ರಣೀತ ಭೇಷಜಂ ವರೂಥಂ ತನ್ವೇಮಮ
ಜ್ಯೋಕ್ ಚ ಸೂರ್ಯಂ ದೃಶೇ ॥

ಇದಮಾಪಃ ಪ್ರವಹತ ಯತ್ಕಿಂ ಚ ದುರಿತಂ ಮಯಿ ।
ಯದ್ವಾಹಮಭಿ ದುದ್ರೋಹ ಯದ್ವಾಶೇಪ ಉತಾನೃತಂ ॥

ಆಪೋ ಅದ್ಯಾನ್ವಚಾರಿಷಂ ರಸೇನ ಸಮಗಸ್ಮಹಿ ।
ಪಯಸ್ವಾನಗ್ನ ಆಗಹಿತಂ ಮಾ ಸಂಸೃಜ ವರ್ಚಸಾ ॥

ಸಸುಷೀಸ್ತದಪಸೋ ದಿವಾ ನಕ್ತಂ ಚ ಸಸ್ರುಷೀಃ ।
ವರೇಣ್ಯ ಕ್ರತೂರಹಮಾ ದೇವೀರವಸೇಹುವೇ ॥

ಯಚ್ಚಿದ್ಧಿತೇ ವಿಶೋಯಥಾ । ಪ್ರದೇವ ವರುಣವ್ರತಂ ।
ಮಿನೀಮಸಿದ್ಯವಿದ್ಯವಿ ॥

ಯತ್ಕಿಂಚೇದಂ ವರುಣ ದೈವ್ಯೇಜನೇಽಭಿದ್ರೋಹಂ
ಮನುಷ್ಯಾಶ್ಚರಾಮಸಿ । ಅಚಿತ್ತೀಯತ್ತವ ಧರ್ಮಾ
ಯುಯೋಪಿಮ । ಮಾನಸ್ತಸ್ಮಾದೇನಸೋ ದೇವ ರೀರಿಷಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಿತವಾಸೋ ಯದ್ರಿರಿಪುರ್ನ ದೀವಿ ಯಂದ್ವಾ ಘಾ
ಸತ್ಯಮಂತಯಂನ್ನ ವಿದ್ಮ । ಸರ್ವಾ ತಾ ವಿಷ್ಯ ಶಿಥಿರೇವ
ದೇವಾsಥಾ ತೇ ಸ್ಯಾಮ ವರುಣ ಪ್ರಿಯಾಸಃ ॥

ಹಿರಣ್ಯವರ್ಣಾಃ ಶುಚಯಃ ಪಾವಕಾಯಾಸು
ಜಾತಃ ಕಶ್ಯಪೋಯಾಸ್ವಿನ್ದ್ರಃ । ಅಗ್ನಿ ಯಾ ಗರ್ಭಂ
ದಧಿರೇ ವಿರೂಪಾಸ್ತಾನ ಆಪಃಶ್ಯಗ್ಸ್ಯೋನಾಭವನ್ತು ॥

ಯಾಸಾಗ್ಂ ರಾಜಾವರುಣೋ ಯಾತಿಮಂಧ್ಯೇಸತ್ಯಾನೃತೇ
ಅವಪಶ್ಯನ್ ಜನಾನಾಂ । ಮಧುಂಶ್ಚುತಶ್ಶುಚಯೋಯಾಃ
ಪಾವಾಕಾಸ್ತಾನ ಆಪಶ್ಯಗ್ಗ್ ಸ್ಯೋನಾಭವನ್ತು ॥

ಯಾಸಾಂ ದೇವಾ ದಿವಿ ಕೃಣ್ವನ್ತಿ ಭಕ್ಷ್ಯಂ ಯಾ ಅಂತರಿಕ್ಷೇ
ಬಹುಂಧಾ ಭವನ್ತಿ । ಯಾಃ ಪೃಥಿವೀಂ ಪಯಸೋನ್ದನ್ತಿ
ಶುಕ್ರಾಸ್ತಾನ ಆಪಶ್ಯಗ್ಗ್ ಸ್ಯೋನಾಭವನ್ತು ॥

ಶಿವೇನ ಮಾ ಚಕ್ಷುಷಾ ಪಶ್ಯತಾಪಃ ಶಿವಯಾತನುವೋ
ಪಸ್ಪೃಶತ ತ್ವಚಂಮೇ । ಸರ್ವಾಗ್ ಅಗ್ನೀಗ್ ರಪ್ಸುಷದೋ
ಹುಂವೇ ವೋ ಮಯಿ ವರ್ಚೋ ಬಲಮೋಜೋ ನಿಧತ್ತ ॥

ಪವಮಾನಃ ಸಂವರ್ಜನಃ ಪವಿತ್ರೇಣ ವಿಚರ್ಷಣಿಃ ॥
ಯಂಃ ಪೋತಾ ಸ ಪುನಾತು ಮಾ ॥

ಪುನನ್ತು ಮಾ ದೇವ ಜನಾಃ ಪುನನ್ತು ಮನವೋ ಧಿಯಾ
ಪುನನ್ತು ವಿಶ್ವ ಆಯವಃ ॥

ಜಾತವೇದಃ ಪವಿತ್ರವತ್ । ಪವಿತ್ರೇಣ ಪುನಾಹಿ ಮಾ ।
ಶುಕ್ರೇಣ ದೇವ ದೀದ್ಯತ್ । ಅಗ್ನೇ ಕ್ರತ್ವಾ ಕ್ರತೂಗ್ರನು ॥

ಯತ್ತೇ ಪವಿತ್ರಮರ್ಚಿಷಿ । ಅಗ್ನೇವಿ ತತಮಂತರಾ ।
ಬ್ರಹ್ಮ ತೇನ ಪುನೀಮಹೇ ॥

ಉಭಾಭ್ಯಾಂ ದೇವ ಸವಿತಃ । ಪವಿತ್ರೇಣ ಸವೇನ ಚ ।
ಇದಂ ಬ್ರಹ್ಮ ಪುನೀಮಹೇ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವೈಶ್ವದೇವೀ ಪುನತೀ ದೇವ್ಯಾಗಾತ್ । ಯಸ್ಯೈ ಬಹ್ವೀ
ಸ್ತನುವೋ ವೀತಪೃಷ್ಠಾಃ । ತಯಾಮದನ್ತಃ
ಸಧಮಾದೇಷು ವಯುಗ್ಸ್ಯಾಮಪತಯೋರಯೀಣಾಮ್ ॥

ವೈಶ್ವಾನರೋ ರಶ್ಮಿಭಿರ್ಮಾ ಪುನಾತು । ವಾತಃ
ಪ್ರಾಣೇನೇಷಿರೋ ಮಯೋಭೂಃ । ದ್ಯಾವಾಪೃಥಿವೀ
ಪಯಸಾ ಪಯೋಭಿಃ ಋತಾವರೀ ಯಜ್ಞಿಯೇ ಮಾ ಪುನೀತಾಂ ॥

ಬೃಹದ್ಭಿಃ ಸವಿತಸ್ತೃಭಿಃ । ವರ್ಷಿಷ್ಠೈರ್ದೇವಮನ್ಮಭಿಃ ।
ಅಗ್ನೇ ದಕ್ಷೈಃ ಪುನಾಹಿ ಮಾ ॥

ಯೇನದೇವಾ ಅಪುನತ । ಯೇನಾ ಪೋ ದಿವ್ಯಂಕಶಃ ।
ತೇನ ದಿವ್ಯೇನ ಬ್ರಹ್ಮಣಾ । ಇದಂ ಬ್ರಹ್ಮ ಪುನೀಮಹೆ ॥

ಯಃ ಪಾವಮಾನೀರಧ್ಯೇತಿ । ಋಷಿ ಭಿಸ್ಸಂಭೃತಗ್ಂರಸಂ ।
ಸರ್ವಗ್ ಸ ಪೂತಮಶ್ನಾತಿ । ಸ್ವದಿತಂ ಮಾತರಿಶ್ವನಾ ॥

ಪಾವಮಾನೀರ್ಯೋ ಅಧ್ಯೇತಿ ॥ ಋಷಿಭಿಃ ಸಂಭೃತಗ್ ರಸಂ ।
ತಸ್ಮೈ ಸರಸ್ವತೀ ದುಹೇ । ಕ್ಷೀರಗ್ ಸರ್ಪಿರ್ಮಧೂದಕಂ ॥

ಪಾವಮಾನೀರ್ದಿಶನ್ತುನಃ । ಇಮಂ ಲೋಕಂ ಅಥೋ ಅಮುಂ ।
ಕಾಮಾನ್ಸಮರ್ಧಯನ್ತುನಃ । ದೇವೀರ್ದೇವೈಃ ಸಮಾಭೃತಾಃ ॥

ಪಾವಮಾನೀಃ ಸ್ವಸ್ತ್ಯಯನೀಃ । ಸುದುಘಾಹಿ ಘೃತಶ್ಚ್ಯುತಃ ।
ಋಷಿಭಿಸ್ಸಂಭೃತೋ ರಸಃ । ಬ್ರಾಹ್ಮಣೇಷ್ವಮೃತಗ್ಂ ಹಿತಂ ॥

ಯೇನದೇವಾಃ ಪವಿತ್ರೇಣ । ಆತ್ಮಾನಂ ಪುನತೇ ಸದಾ ।
ತೇನ ಸಹಸ್ರಧಾರೇಣ । ಪಾವಮಾನ್ಯಃ ಪುನನ್ತು ಮಾ ॥

ಪ್ರಾಜಾಪತ್ಯಂ ಪವಿತ್ರಂ । ಶತೋದ್ಯಾಮಗ್ ಹಿರಣ್ಮಯಂ ।
ತೇನ ಬ್ರಹ್ಮವಿದೋವಯಂ । ಪೂತಂ ಬ್ರಹ್ಮಪುನೀಮಹೇ ॥

ಇಂದ್ರಸ್ಸುನೀತೀ ಸಹ ಮಾ ಪುನಾತು । ಸೋಮಃಸ್ವಸ್ತ್ಯಾ
ವರುಣಃ ಸಮೀಚ್ಯಾ । ಯಮೋರಾಜಾ ಪ್ರಮೃಣಾಭಿಃ ಪುನಾತುಮಾ ।
ಜಾತವೇದಾ ಮೋರ್ಜಯನ್ತ್ಯಾ ಪುನಾತು ॥ ಓಂ ಭೂರ್ಭುವಸ್ಸುವಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಪೋ ಅಸ್ಮಾನ್ಮಾತರಶ್ಶುಂಧನ್ತು । ಘೃತೇನ ನೋ ಘೃತಪ್ವಃ
ಪುನನ್ತು ವಿಶ್ವಮಸ್ಮತ್ಪ್ರವಹನ್ತು । ರಿಪ್ರಮಂದಾಭ್ಯಃ ಶುಚಿರಾ
ಪೂತ ಏಮಿ ॥

ಕಯಾನಶ್ಚಿತ್ರಾ ಆಭುವದೂತೀ ಸದಾ ವೃಧಸ್ಸಖಾ ॥
ಕಯಾ ಶಚಿಷ್ಠಯಾ ವೃತಾ ॥

೧೫. ಪಾಪಪುರುಷ ನಿರಸನಂ (ಅಘಮರ್ಷಣ) :

ದ್ರುಪದಾದಿವ ಮುಂಚತು । ದ್ರುಪದಾದಿವೇನ್ಮುಮುಚಾನಃ ।
ಸ್ವಿನ್ನಃ ಸ್ನಾತ್ವೀ ಮಲಾದಿವ । ಪೂತಂ ಪವಿತ್ರೇಣೇವಾಜ್ಯಂ ।
ಆಪಶ್ಶುನ್ಧನ್ತು ಮೈನಸಃ ॥

ಅಥವಾ

ದಿವಿಜಾತಾ ಅಪ್ಸುಜಾತಾ ಯಾ ಜಾತಾಓಷಧೀಭ್ಯಃ ।
ಅಥೋಯಾ ಅಗ್ನಿಜಾ ಆಪಃ । ತಾನಃ ಶುಂಧಂತು ಶುಂಧನೀಃ ।
ಯದಾಪೋನಕ್ತ ದುರಿತಂ ಚರಾಮಯದ್ವಾದಿವಾ ।
ನೂತನಂ ಯತ್ಪುರಾಣಂ ಹಿರಣ್ಯವರ್ಣಾಸ್ತತ ಉತ್ಪುನೀತುನಃ ॥

ಅಥವಾ

(ಓಂ ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ ।
ತತೊ ರಾತ್ರ್ಯಜಾಯತ ತತಃ ಸಮುದ್ರೋ ಅರ್ಣವಃ ।
ಸಮುದ್ರಾದರ್ಣವಾದಧಿ ಸಂವತ್ಸರೋ ಅಜಾಯತ ।
ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋವಶೀ ।
ಸೂರ್ಯಾಚಂದ್ರಮಸೌಧಾತಾ ಯಥಾ ಪೂರ್ವಮಕಲ್ಪಯತ್ ।
ದಿವಂ ಚ ಪೃಥಿವೀಂ ಚಾಂತರಿಕ್ಷ ಮಥೋಸ್ವಃ ॥)

೧೬. ಆಚಮನ : (ಈ ಮೊದಲು ಸೂಚಿಸಿರುವಂತೆ)

೧೭. ಪ್ರಾಣಾಯಾಮ : (ಈ ಮೊದಲು ಸೂಚಿಸಿರುವಂತೆ)

೧೮. ಸಂಕಲ್ಪ : ಮಮೋಪಾತ್ತ ದುರಿತಕ್ಷಯದ್ವಾರಾ ಶ್ರೀ ಪರಮೇ

ಶ್ವರ ಪ್ರೀತ್ಯರ್ಥಂ (ಶ್ರೀ ಭಗವದಾಜ್ಞಯಾ ಭಗವತ್ಕೈಂಕರ್ಯ)ರ್ಥಂ ಅಥವಾ
Sri Vidyabharathi Book Centre, Sringeri

CC-O. In Public Domain. Digitized by eGangotri

ಲಕ್ಷ್ಮೀನಾರಾಯಣ ಪ್ರೇರಣಯಾ ಸವಿತೃನಾಮಕ ಶ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ). ಪ್ರಾತಃಸಂಧ್ಯಾಂಗ ಪ್ರಾತಃಸಂಧ್ಯಾರ್ಘ್ಯ ಪ್ರದಾನಂ ಕರಿಷ್ಯೇ.

ಮಾಧ್ಯಾಹ್ನಿಕಾಂಗ ಮಾಧ್ಯಾಹ್ನಿಕಸಂಧ್ಯಾರ್ಘ್ಯ ಪ್ರದಾನಂ ಕರಿಷ್ಯೇ

ಸಾಯಂಸಂಧ್ಯಾಂಗ ಸಾಯಂಸಂಧ್ಯಾರ್ಘ್ಯ ಪ್ರದಾನಂ ಕರಿಷ್ಯೇ.

೧೯. **ಅರ್ಘ್ಯ :** ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ । ಪರೋ ರಜಸಿ ಸಾವದೋಂ । ಆಪೋ ಜ್ಯೋತಿರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಂ ॥

(ಕೆಲವರು ಮಾಧ್ಯಾಹ್ನಿಕಸಂಧ್ಯೆಯಲ್ಲಿ ಅರ್ಘ್ಯಕ್ಕೆ : "ಹಗ್‌ಂಸಃ ಶುಚಿಷದ್ವಸುರನ್ತರಿಕ್ಷ ಸದ್ಧೋತಾ ವೇದಿಷತ್ । ಅತಿಥಿರ್ದುರೋಣಸತ್ । ನೃಷದ್ವರಸದೃತ ಸತ್ ವ್ಯೋಮ ಸದಬ್ಜಾಗೋಜಾ ಋತಜಾ ಅದ್ರಿಜಾ ಋತಂ ಬೃಹತ್ ॥" ಎಂಬ ಮಂತ್ರ ಹೇಳುವುದುಂಟು).

೨೦. **ಪ್ರಾಯಶ್ಚಿತ್ತಾರ್ಘ್ಯ ಸಂಕಲ್ಪ :** ಪ್ರಾತಃ ಸಂಧ್ಯಾಂಗ / ಮಾಧ್ಯಾಹ್ನಿಕಸಂಧ್ಯಾಂಗ / ಸಾಯಂಸಂಧ್ಯಾಂಗ ಕಾಲಾತೀತ ದೋಷ ಪರಿಹಾರಾರ್ಥ ಪ್ರಾಯಶ್ಚಿತ್ತಾರ್ಘ್ಯ ಪ್ರದಾನಂ ಕರಿಷ್ಯೇ ॥

ಓಂ ಭೂರ್ಭುವಸ್ಸ್ವರ್ಮಹರ್ಜನಸ್ತಪಸ್ಸತ್ಯಂ । ಓಂ ತತ್ಸವಿತುರ್ವರೇಣ್ಯಂ। ಭರ್ಗೋದೇವಸ್ಯ ಧೀಮಹಿ। ಧಿಯೋಯೋನಃ ಪ್ರಚೋದಯಾತ್। ಓಂ ಭೂರ್ಭುವಸ್ಸ್ವರ್ಮಹರ್ಜನ ಸ್ತಪಸ್ಸತ್ಯಂ ॥

ಓಂ ಅಸಾವಾದಿತ್ಯೋ ಬ್ರಹ್ಮ ॥

೨೧. **ಆಚಮನ :** (ಈ ಮೊದಲು ಸೂಚಿಸಿರುವಂತೆ)

೨೨. **ತರ್ಪಣ :**

ಓಂ ಭೂ ಸ್ತರ್ಪಯಾಮಿ । ಓಂ ಭುವಸ್ತರ್ಪಯಾಮಿ ।
ಓಂ ಸ್ವಸ್ತರ್ಪಯಾಮಿ । ಓಂ ಭೂರ್ಭುವಸ್ಸ್ವಸ್ತರ್ಪಯಾಮಿ ।
ಗಾಯತ್ರೀಂ ತರ್ಪಯಾಮಿ । ಸಾವಿತ್ರೀಂ ತರ್ಪಯಾಮಿ ।
ಸರಸ್ವತೀಂ ತರ್ಪಯಾಮಿ । ಓಂ ನಮೋ ನಾರಾಯಣಾಯ
ನಾರಾಯಣಂ ತರ್ಪಯಾಮಿ। ಓನಮಃ ಶಿವಾಯ ಶಿವಂ ತರ್ಪಯಾಮಿ॥

೨೩. **ಆಚಮನ :** (ಈ ಮೊದಲು ಸೂಚಿಸಿರುವಂತೆ)

Sri Vidyabharathi Book Centre Sringeri

CC-O. In Public Domain. Digitized by eGangotri

೨೪. ಗಾಯತ್ರೀ ಪ್ರಾರ್ಥನೆ: ಉತ್ತಿಷ್ಠ ದೇವಿಗಂತವ್ಯಂ ಪುನರಾಗಮನಾಯಚ। ಸಾವಿತ್ರದೇವಿತಂಪ್ರಾರ್ಥಂ। ಪ್ರವಿಶ ಹೃದಯಂ ಮಮ। ಭೋ ಗಾಯತ್ರೀ ಮಮಹೃದಯೇ ಪುನರಾವಾಹಯಾಮಿ॥ ಅಸಾವಾದಿತ್ಯೋಬ್ರಹ್ಮ॥

೨೫. ಭೂ ಪ್ರಾರ್ಥನೆ ಮತ್ತು ಭೂತೋಚ್ಚಾಟನೆ:

ವಿಷ್ಣುಶಕ್ತಿ ಸಮೋಪೇತೇ। ಸರ್ವವರ್ಣೇ ಮಹೀತಲೇ।
ಅನೇಕರತ್ನ ಸಂಭೂತೇ। ಶ್ರೀ ಭೂಮಿದೇವಿ ನಮೋಸ್ತುತೇ॥

ಅಪಸರ್ಪನ್ತುಯೇಭೂತಾ ಯೇಭೂತಾಭೂಮಿ ಸಂಸ್ಥಿತಾಃ।
ಯೇಭೂತಾ ವಿಘ್ನಕರ್ತಾರಸ್ತೇ ನಶ್ಯನ್ತು ಶಿವಾಜ್ಞಯಾ॥

ಅಪಕ್ರಾಮತ ಭೂತಪ್ರೇತಪಿಶಾಚಾದ್ಯಾಸ್ಸಹಚರಾಃ।
ಸರ್ವೇತೇ ಭೂಮಿಂಭಾರಕಾಃ।
ಸರ್ವೇಷಾಮ ವಿರೋಧೇನ ಬ್ರಹ್ಮಕರ್ಮ ಸಮಾರಭೇ॥

ಉತ್ಪತನ್ತ್ವಿಹ ಭೂತಾನಿ ಪೃಥಿವ್ಯನ್ತರವಾಸಿನಿ।
ಪೃಥ್ವಿತ್ವಯಾಧೃತಾಲೋಕಾದೇವಿತ್ವಂ ವಿಷ್ಣುನಾಧೃತಾ।
ತ್ವಂಚ ಧಾರಯಮಾಂ ದೇವೀ ಪವಿತ್ರಂ ಕುರುಚಾಸನಂ॥

೨೬. ಆಸನ ಕಲ್ಪನೆ ; ಗುರುದೇವತಾ ನಮಸ್ಕಾರ :

ಲಂ ಪೃಥಿವ್ಯೈ ನಮಃ ಆಸನಂ ಕಲ್ಪಯಾಮಿ
ವಿಮಲಾಸನಾಯ ನಮಃ ಕಮಲಾಸನಾಯ ನಮಃ
ಯೋಗಾಸನಾಯ ನಮಃ ಕೂರ್ಮಾಸನಾಯ ನಮಃ
ಮಧ್ಯಾಸನಾಯ ನಮಃ ಮಧ್ಯೇ ಪರಮಸುಖಾಸನಾಯ ನಮಃ
ಸ್ವಶಿರಸಿ ಗುಂ ಗುರುಭ್ಯೋ ನಮಃ ಗಂ ಗಣಪತಯೇ ನಮಃ
ಕ್ಷಂ ಕ್ಷೇತ್ರಪಾಲಾಯ ನಮಃ ಸಂ ಸರಸ್ವತ್ಯೈ ನಮಃ
ಅಂ ಆತ್ಮನೇ ನಮಃ ಪಂ ಪರಮಾತ್ಮನೇ ನಮಃ

ಓಂ ಹ್ರೀಂ ಜ್ಞಾನಾತ್ಮನೇ ನಮಃ ಸ್ವಶಿರಸಿ ಸಹಸ್ರದಳ
ಕಮಲಕರ್ಣಿಕಾಮಧ್ಯಗತಂ ಸ್ವಗುರುಂ ಧ್ಯಾತ್ವಾ॥

ಗುರುಬ್ರಹ್ಮ ಗುರುರ್ವಿಷ್ಣುಃ ಗುರುರ್ದೇವ ಮಹೇಶ್ವರಃ।
ಗುರುಸ್ಸಾಕ್ಷಾತ್ ಪರಂ ಬ್ರಹ್ಮ ತಸ್ಮೈಶ್ರೀ ಗುರವೇ ನಮಃ॥
ಬ್ರಹ್ಮಾದಿ ಯಾವತ್ಸ್ವಗುರು [illegible] ಪ್ರಣತೋಸ್ಮಿ॥

Sri Vidyabharathi Book Centre, Sringeri

CC-O. In Public Domain. Digitized by eGangotri

೨೭. ಆಚಮನ : (ಈ ಮೊದಲು ತಿಳಿಸಿರುವಂತೆ)

೨೮. ಗಾಯತ್ರೀ ಹೃದಯಂ : ಓಂ ಇತ್ಯೇಕಾಕ್ಷರಂ ಬ್ರಹ್ಮಾ। ಅಗ್ನಿರ್ದೇವತಾ ಬ್ರಹ್ಮ ಇತ್ಯಾರ್ಷಂ । ಗಾಯತ್ರಂ ಛಂದಂ ಪರಮಾತ್ಮಂ ಸರೂಪಂ । ಸಾಯುಜ್ಯಂ ವಿನಿಯೋಗಂ ॥

ಅಥವಾ

(ಪ್ರಣವಸ್ಯ ಬ್ರಹ್ಮಾ ಋಷಿಃ ದೇವೀಗಾಯತ್ರೀಛಂದಃ। ಪರಮಾತ್ಮಾ ಸವಿತಾ ದೇವತಾ । ಭೂರಾದಿ ಸಪ್ತವ್ಯಾಹೃತಿನಾಂ । ಅತ್ರಿ, ಭೃಗು, ಕುತ್ಸ, ವಸಿಷ್ಠ, ಗೌತಮ, ಕಾಶ್ಯಪಾಂಗೀರಸಾ ಋಷಯಃ ಗಾಯತ್ರ್ಯುಷ್ಣಿಕ್ ಅನುಷ್ಟುಪ್ ಬೃಹತೀಪಂಕ್ತೀ ತ್ರಿಷ್ಟುಪ್ ಜಗತೀಶ್ಛಂದಾಗ್ ಂಸಿ॥ ಅಗ್ನಿರ್ವಾಯ್ವರ್ಕ ವಾಗೀಶ ವರುಣೇಂದ್ರ ವಿಶ್ವೇದೇವಾಃ ದೇವತಾ ॥ ಸಾವಿತ್ರ್ಯಾ ಋಷಿಃ ವಿಶ್ವಾಮಿತ್ರಃ ದೇವೀಗಾಯತ್ರೀಛಂದಃ ಸವಿತಾ ದೇವತಾ । ಗಾಯತ್ರೀ ಶಿರಶೋ ಬ್ರಹ್ಮಾ ಋಷಿಃ ಅನುಷ್ಟುಪ್‌ಛಂದಃ ಪರಮಾತ್ಮಾ ದೇವತಾ ಸರ್ವೇಷಾಂ ಪ್ರಾಣಾಯಾಮೇ ವಿನಿಯೋಗಃ)

೨೯. ಆಹ್ವಾನ ; ಆವಾಹನೆ :

ಆಯಾತುವರದಾದೇವಿ ಅಕ್ಷರಂ ಬ್ರಹ್ಮ ಸಂಮಿತಂ ।
ಗಾಯತ್ರೀಂ ಛಂದಸಾಮಾತೇದು ಬ್ರಹ್ಮ ಜುಷಸ್ವಮೇ ॥
ಯದಹ್ನಾತ್ಕುರುತೇ ಪಾಪಂ ತದಹ್ನಾತ್ಪ್ರತಿ ಮುಚ್ಯತೇ ।
ಯದ್ರಾತ್ರಿಯಾತ್ಕುರುತೇ ಪಾಪಂ ತದ್ರಾತ್ರಿಯಾತ್ಪ್ರತಿ ಮುಚ್ಯತೇ ।
ಸರ್ವವರ್ಣೇ ಮಹಾದೇವೀ ಸಂಧ್ಯಾವಿದ್ಯೇ ಸರಸ್ವತೀ ॥
ಓಜೋಽಸಿ ಸಹೋಽಸಿ ಬಲಮಸಿಭ್ರಾಜೋಽಸಿ ದೇವಾನಾಂ
ಧಾಮನಾಮಾಸಿ ವಿಶ್ವಮಸಿ ವಿಶ್ವಾಯುಸ್ಸರ್ವಮಸಿ
ಸರ್ವಾಯುರಭಿಭೂರೋಂ ಗಾಯತ್ರೀಮಾವಾಹಯಾಮಿ
ಸಾವಿತ್ರೀ ಮಾವಾಹಯಾಮಿ ಸರಸ್ವತೀ ಮಾವಾಹಯಾಮಿ
ಛಂದರ್ಷೀನಾವಾಹಯಾಮಿ ಶ್ರೀಯಮಾವಾಹಯಾಮಿ
ಗಾಯತ್ರಿಯಾ ಗಾಯತ್ರೀಚ್ಛಂದೋ ವಿಶ್ವಾಮಿತ್ರ ಋಷಿಃ
ಸವಿತಾದೇವತಾಗ್ನಿರ್ಮುಖಂ ಬ್ರಹ್ಮಾಶಿರೋವಿಷ್ಣುರ್ ಹೃದಯಗ್ ಂ
ರುದ್ರೋಲಲಾಟಃ ತ್ರಯುಶಿಖಾ [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

ಚರಣಂ ಪೃಥಿವೀಕುಕ್ಷಿಃ ಶಂಕ್ಲೋವರ್ಣಃ ಸೂರ್ಯಃ
ಕವಚಃ ಸೋಮನೇತ್ರೇ ಸಾಂಖ್ಯಾಯನ ಸಗೋತ್ರಂ

ಉದಾತ್ತಸ್ವರಂ ಪರಂಜ್ಯೋತಿಸ್ಸ್ವರೂಪಂ ಯಥಾಸಂಭವ ಗಾಯತ್ರೀ ಮಂತ್ರ ಜಪಂ ಕರಿಷ್ಯೇ. (ವಿಷ್ಣು ಹೃದಯಂ ಆದನಂತರ ರುದ್ರಶ್ಶಿಖಾ ಪೃಥಿವೀಯೋನೀಃ ಪ್ರಾಣಾಪಾನ ವ್ಯಾನೋದಾನ ಸಮಾನ ಸಪ್ರಾಣಾ ಶ್ವೇತ ವರ್ಣಾ ಸಾಂಖ್ಯಾಯನ ಸಗೋತ್ರಾ ಗಾಯತ್ರೀ ಚತುರ್ವಿಗ್ಂಶತ್ಯಕ್ಷರಾ ತ್ರಿಪದಾಷಟ್‌ಕುಕ್ಷಿಃ ಪಂಚಶೀರ್ಷೋಪನಯನೇ ವಿನಿಯೋಗಃ ಎಂದು ಹೇಳುವುದೂ ಉಂಟು.)

೩೦. ಆಚಮನ : (ಈ ಮೊದಲು ಸೂಚಿಸಿರುವಂತೆ)

೩೧. ಪ್ರಾಣಾಯಾಮ : (ಈ ಮೊದಲು ಸೂಚಿಸಿರುವಂತೆ)

೩೨. ಸಂಕಲ್ಪ : ಮಮೋಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಅಥವಾ (ಶ್ರೀ ಭಗವದಾಜ್ಞಯಾ ಭಗವತ್ಕೈಂಕರ್ಯ ರೂಪ । ಶ್ರೀಮನ್ನಾರಾಯಣ ಪ್ರೀತ್ಯರ್ಥಂ). ಪ್ರಾತಃಸಂಧ್ಯಾಂಗ/ಮಾಧ್ಯಾಹ್ನಿಕ ಸಂಧ್ಯಾಂಗ / ಸಾಯಂಸಂಧ್ಯಾಂಗ ಯಥಾಶಕ್ತಿ ಗಾಯತ್ರೀ ಮಹಾಮಂತ್ರ ಜಪಂ ಕರಿಷ್ಯೇ.

೩೩. ಕರನ್ಯಾಸ; ಹೃದಯಾದಿನ್ಯಾಸ :

ಓಂ ತತ್ಸವಿತುರ್ಬ್ರಹ್ಮಾತ್ಮನೇ ಅಂಗುಷ್ಠಾಭ್ಯಾಂ ನಮಃ
ವರೇಣ್ಯಂ ವಿಷ್ಣ್ವಾತ್ಮನೇ ತರ್ಜನೀಭ್ಯಾಂ ನಮಃ
ಭರ್ಗೋದೇವಸ್ಯ ರುದ್ರಾತ್ಮನೇ ಮಧ್ಯಮಾಭ್ಯಾಂ ನಮಃ
ಧೀಮಹಿ ಸತ್ಯಾತ್ಮನೇ (ಈಶ್ವರಾತ್ಮನೆ) ಅನಾಮಿಕಾಭ್ಯಾಂ ನಮಃ
ಧಿಯೋಯೋನಃ ಜ್ಞಾನಾತ್ಮನೇ (ಸದಾಶಿವಾತ್ಮನೆ) ಕನಿಷ್ಠಿಕಾಭ್ಯಾಂ ನಮಃ
ಪ್ರಚೋದಯಾತ್ಸರ್ವಾತ್ಮನೇ ಕರತಲಕರ ಪೃಷ್ಠಾಭ್ಯಾಂ ನಮಃ

ಓಂ ತತ್ಸವಿತುರ್ಬ್ರಹ್ಮಾತ್ಮನೇ ಹೃದಯಾಯ ನಮಃ
ವರೇಣ್ಯಂ ವಿಷ್ಣ್ವಾತ್ಮನೇ ಶಿರಸೇ ಸ್ವಾಹಾ
ಭರ್ಗೋದೇವಸ್ಯ ರುದ್ರಾತ್ಮನೇ ಶಿಖಾಯೈವಷಟ್
ಧೀಮಹಿ ಸತ್ಯಾತ್ಮನೇ (ಈಶ್ವರಾತ್ಮನೆ) ಕವಚಾಯಹುಂ
ಧಿಯೋಯೋನಃ ಜ್ಞಾನಾತ್ಮನೆ(ಸದಾಶಿವಾತ್ಮನೆ)ನೇತ್ರತ್ರಯಾಯೈವಷಟ್
ಪ್ರಚೋದಯಾತ್ಸರ್ವಾತ್ಮನೇ ಅಸ್ತ್ರಾಯಫಟ್ ।

Sri Vidyabharathi Book Centre, Sringeri

CC-O. In Public Domain. Digitized by eGangotri

(ಕರನ್ಯಾಸ ಹೃದಯಂನ್ಯಾಸಗಳೆರಡರಲ್ಲೂ ಬ್ರಹ್ಮಾತ್ಮನೇ, ವಿಷ್ಣ್ವಾತ್ಮನೇ ರುದ್ರಾತ್ಮನೇ ಸತ್ಯಾತ್ಮನೇ, ಜ್ಞಾನಾತ್ಮನೇ, ಸರ್ವಾತ್ಮನೇ ಎಂಬುದನ್ನು ಸೇರಿಸದೆ "ಓಂ ತತ್ಸವಿತುಃ ಅಂಗುಷ್ಠಾಭ್ಯಾಂ ನಮಃ" ಇತ್ಯಾದಿಯಾಗಿ ಹೇಳು ವುದೂ ಉಂಟು).

೩೪. ದಿಗ್ಬಂಧ : ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥

೩೫. ಧ್ಯಾನಂ : ಮುಕ್ತಾ ವಿದ್ರುಮ ಹೇಮ ನೀಲ ಧವಲಚ್ಛಾಯೈ ರ್ಮುಖೈ ಸ್ತ್ರೀ ಕ್ಷಣೈರ್ಯುಕ್ತಾಮಿಂದು ನಿಬದ್ಧರತ್ನಮುಕುಟಾಂ ತತ್ವಾರ್ಥ ವರ್ಣಾತ್ಮಿಕಾಂ । ಗಾಯತ್ರೀ ವರದಾಭಯಾಂಕುಶಕಶಾಃ ಶುಭ್ರಂ ಕಪಾಲಂ ಗುಣಂ ಶಂಖಂ ಚಕ್ರ ಮಥಾರವಿಂದಯುಗಲಂ ಹಸ್ತೈರ್ವ ಹಂತೀಂ ಭಜೇ ।

ಅಥವಾ

ಪ್ರಾತರ್ಬಾಲಾರ್ಕ ಮಧ್ಯಸ್ಥಾಂ ರಕ್ತಾಕಲ್ಪವಿಭೂಷಿತಾಂ ।
ರಕ್ತಾಂ ಖುಣಾಸ್ಯಾಂ ಭೂಲೋಕ ಮಧಿಷ್ಠಾತ್ರೀಂ ಚತುರಾನನಂ ।
ದಧಾನಾಮುಭಯಂ ದಂಡಮಕ್ಷಮಾಲಾಂ ಕಮಂಡಲಂ ।
ಬಾಲಾಂ ಹಂಸಸಮಾರೂಢಾಂ ರಕ್ತ ಸ್ರಗ್ವಸ್ತ್ರ ಚಂದನಾಂ ।
ಗಾಯತ್ರೀಂ ಬ್ರಹ್ಮದೈವತ್ಯಾಂ ಚಿಂತಯೇದಪ್ಪಲೋಚನಾಂ ॥

ಅಥವಾ

(ಯೋ ದೇವತ್ಸವಿತಾಸ್ಮಾಕಂ ಧಿಯೋಧರ್ಮಾಧಿಗೋಚರಾಃ ।
ಪ್ರೇರಯೇತ್ತಸ್ಯ ಯದ್ಭರ್ಗಃ ತದ್ವರೇಣ್ಯಮುಪಾಸ್ಮಹೆ ॥

ಅಥವಾ

ಧ್ಯೇಯಸ್ಸದಾ ಸವಿತೃಮಂಡಲ ಮಧ್ಯವರ್ತೀ
ನಾರಾಯಣಃ ಸರಸಿಜಾಸನ ಸನ್ನಿವಿಷ್ಟಃ ।
ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ
ಹಾರೀ ಹಿರಣ್ಮಯಮವಪುಃ ಧೃತಶಂಖ ಚಕ್ರ ರಕ್ತವರ್ಣಃ ॥)

ಅಥವಾ

ಮುಂದಾರಾಹ್ವಯ ರೋಚನಾಂಜನ ಜಪಾಖ್ಯಾಭೈರ್ಮುಖೈರಿಂದು
ಮದ್ರುತ್ನೋದ್ಯನ್ಮಕುಟಾಂಶು ಸಂತತ ಚತುರ್ವಿಂಶಾರ್ಣಚಿತ್ರಾತನುಃ ॥
ಅಂಭೋಜೇರಿದ ರಾಹ್ವಯೌ ಗುಣಕಪಾಲಾಖ್ಯೌಚ ಪಾಶಾಂಕುಶೇ
ಷ್ಠಾಭೀತೀರ್ದಧತೀಭವೇದ್ಧ್ಯವಭಯಾ ಪ್ರೋತ್ಪಾರಿಣೇ ತಾರಿಣಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

೩೭. ಮುದ್ರಾಪ್ರದರ್ಶನ :

ಸುಮುಖಂ ಸಂಪುಟಂ ಚೈವ ವಿತತಂ ವಿಸ್ತೃತಂ ತಥಾ ।
ದ್ವಿಮುಖಂ ತ್ರಿಮುಖಂ ಚೈವ ಚತುಃ ಪಂಚಮುಖ ತಥಾ ॥
ಷಣ್ಮುಖೋಽಧೋಮುಖಂ ಚೈವ ವ್ಯಾಪಕಾಂಜಲಿಕಂ ತಥಾ ।
ಶಕಟಂ ಯಮಪಾಶಂ ಚ ಗ್ರಥಿತಂ ಚೋನ್ಮುಖೋನ್ಮುಖಂ ॥
ಪ್ರಲಂಬಂ ಮುಷ್ಟಿಕಂ ಚೈವ ಮತ್ಸ್ಯಕೂರ್ಮವರಾಹಕಂ ।
ಸಿಂಹಾಕ್ರಾಂತಂ ಮಹಾಕ್ರಾಂತಂ ಮುದ್ಗರಂ ಪಲ್ಲವಂ ತಥಾ ॥
ಏತಾ ಮುದ್ರಾಶ್ಚಗಾಯತ್ರ್ಯಾಃ ಸದಾ ಪ್ರೀತಿಕರಾಃ ಶುಭಾಃ ।
ಯೇತಾಮುದ್ರಾಃ ನ ಜಾನಂತಿ ಗಾಯತ್ರೀ ನಿಷ್ಫಲಾ ಭವೇತ್ ॥

೩೮. ಮಾನಸ ಪೂಜೆ :

ಲಂ ಪೃಥ್ವಿತತ್ವಾತ್ಮನೇ ಗಂಧಂ ಕಲ್ಪಯಾಮಿ ।
ಖಂ ಆಕಾಶತತ್ವಾತ್ಮನೇ ಪುಷ್ಪಂ ಕಲ್ಪಯಾಮಿ ।
ಯಂ ವಾಯುತತ್ವಾತ್ಮನೇ ಧೂಪಂ ಕಲ್ಪಯಾಮಿ ।
ರಂ ಅಗ್ನಿತತ್ವಾತ್ಮನೇ ದೀಪಂ ಕಲ್ಪಯಾಮಿ ।
ಅಂ ಅಮೃತತತ್ವಾತ್ಮನೇ ಅಮೃತೋಪಹಾರನೈವೇದ್ಯಂನಿವೇದಯಾಮಿ।
ಸಂ ಸರ್ವತತ್ವಾತ್ಮನೇ ಸರ್ವೋಪಚಾರ ಪೂಜಾಂ ಸಮರ್ಪಯಾಮಿ ॥
ಪ್ರಾರ್ಥಯಾಮಿ, ನಮಸ್ಕರೋಮಿ ॥

೩೯. ಜಪ : ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋ ಯೋನಃ ಪ್ರಚೋದಯಾತ್ ॥

೩೯. ಮಾನಸ ಪೂಜೆ : (ಈ ಮೊದಲು ತಿಳಿಸಿರುವಂತೆ)

೪೦. ಜಪಾಂತ್ಯಮುದ್ರಾ / ಉತ್ತರಮುದ್ರಾಪ್ರದರ್ಶನ :

ಸುರಭಿರ್ಜ್ಞಾನ ಚಕ್ರಂ ಚ ಯೋನಿಃ ಶಂಖೋಽಥ ಪಂಕಜಂ ।
ಲಿಂಗಂ ನಿರ್ಯಾಣ ಮುದ್ರಾಚ ಜಪಾಂತೇಽಷ್ಟಮುದ್ರಿಕಾಃ ॥

೪೧. ಕರನ್ಯಾಸ : (ಈ ಮೊದಲು ತಿಳಿಸಿರುವಂತೆ)

೪೨. ಹೃದಯನ್ಯಾಸ/ಅಂಗನ್ಯಾಸ : (ಈ ಮೊದಲು ತಿಳಿಸಿರುವಂತೆ)

Sri Vidyabharathi Book Centre, Sringeri

CC-O. In Public Domain. Digitized by eGangotri

೪೩. ದಿಗ್ಬಂಧ ವಿಮೋಚನ :

ಭೂರ್ಭುವಸ್ಸುವರೋಮಿತಿ ದಿಗ್ವಿಮೋಕಃ ।

೪೪. ಧ್ಯಾನಂ : ಮುಕ್ತಾವಿದ್ರುಮ....ಅಥವಾ ಪ್ರಾತರ್ಬಾಲಾರ್ಕ.... ಅಥವಾ ಯೋದೇವಸ್ಸವಿತಾ....ಅಥವಾ ಧ್ಯೇಯಸ್ಸದಾ....ಅಥವಾ ಮಂದಾರಾಹ್ವಯ....(ಈ ಮೊದಲು ತಿಳಿಸಿರುವಂತೆ)

೪೫. ಉಪಸ್ಥಾನ :

ಅ) ಪ್ರಾತಃಸಂಧ್ಯೆ : ಓಂ । ಮಿತ್ರಸ್ಯಚರ್ಷಣೀ ಧೃತಃ ಶ್ರವೋದೇವಸ್ಯ ಸಾನಸಿಂ । ಸತ್ಯಂಚಿತ್ರಶ್ರವಸ್ತಮಂ । ಮಿತ್ರೋಜನಾನ್ ಯಾತಯತಿ ಪ್ರಜಾನಾನ್ ಮಿತ್ರೋದಾಧಾರ ಪೃಥಿವೀಮುತದ್ಯಾಂ । ಮಿತ್ರಃಕೃಷ್ಟೀರನಿಮಿಷಾಭಿಚಷ್ಟೇ । ಸತ್ಯಾಯಹವ್ಯಂ ಘೃತವದ್ವಿದೇಮ । ಪ್ರಸಮಿತ್ರಮರ್ತೋ ಅಸ್ತು। ಪಯಸ್ವಾನ್ಯಸ್ತ ಆದಿತ್ಯಶಿಕ್ಷತಿವ್ರತೇನ । ನ ಹನ್ಯತೇ ನ ಜೀಯತೇ । ತ್ವೋತೋನೈನಮಗ್ಂಹೋ ಅಶ್ನೋತ್ಯಂತಿತೋ ನ ದೂರಾತ್ ॥

ಅಥವಾ

(ಉತ್ತಮೇ ಶಿಖರೇ ಜಾತೇ ಭೂಮ್ಯಾಂ ಪರ್ವತ ಮೂರ್ಧನಿ । ಬ್ರಾಹ್ಮಣೇಭ್ಯೋಭ್ಯನುಜ್ಞಾತಾಗಚ್ಛದೇವಿ ಯಥಾ ಸುಖೋನ್ನಮ ಇತಿ ॥

ಅಥವಾ

ಓಂ ಜಾತವೇದಸೇ ಸುನವಾಮಸೋಮಂ ಅರಾತೀಯತೋನಿದಹಾತಿ ವೇದಃ । ಸನಃ ಪರ್ಷದತಿದುರ್ಗಾಣಿ ವಿಶ್ವಾನಾವೇವ ಸಿಂಧುಂದುರಿತಾತ್ಯಗ್ನಿಃ ॥ ತಚ್ಛಂಯೋರಿತ್ಯಸ್ಯಶ್ಯ ಶಂಯುಃ ವಿಶ್ವೇದೇವಾಶ್ಶಕ್ವರೀ ಉಪಸ್ಥಾನೇ ವಿನಿಯೋಗಃ ತಚ್ಛಂ ಯೋರಾವೃಣೀಮಹೇಗಾತುಂ ಯಜ್ಞಾಯಗಾತುಂ ಯಜ್ಞಪತಯೇ। ದೈವೀಃ ಸ್ವಸ್ತಿರಸ್ತುನಃ। ಸ್ವಸ್ತಿರ್ಮಾನುಷೇಭ್ಯ॥ ಊರ್ಧ್ವಂಜಿಗಾತು ಭೇಷಜಂ । ಶಂನೋ ಅಸ್ತು ದ್ವಿಪದೇಶಂ ಚತುಷ್ಪದೇ ॥)

(ಸಾಮಶಾಖೆಯವರು ಉತ್ತಮೇಶಿಖರೇ....ಆದನಂತರ; ಯಶೋಹಂ ಭವಾಮಿ ಬ್ರಾಹ್ಮಣಾನಾಂ ಯಶೋ ರಾಜ್ಞಾಂ ಯಶೋ ವಿಶಾಂ । ಯಶಸ್ಸತ್ಯಸ್ಯವಾಮಿ ಭವಾಮಿ ಯಶಸಾಂಯಶಃ। ಪುನರ್ವಾಯಂತಂ ದೇವತಾ। ಯಾವ ದಪಚಕ್ರಮುಃ ಮಹಸ್ವಂತೋ ಮಹಾಂತೋ ಭವಾಮ್ಯಸ್ಮಿನ್ ಪಾತ್ರೇ ಹರಿತೆ ಸೋಮಪೃಷ್ಠೇ । ... ಯೋ ದಿಶ ಪ್ರಾತರಹ್ನಸ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ತೇಜಸಃ ಅನ್ನಮಗ್ರಸ್ಯಪ್ರಾಶಿಷಮಸ್ತುಪ್ರೈ ಮಯಿ ತ್ವಯಿಶಾದಮಸ್ತು ತ್ವಯಿಂವಂ ಯಿಶಾದಂ । ಯಂದಿದಂ ಪಶ್ಯಾಮಿ ಚಕ್ಷುಷಾ ತ್ವಯಾದತ್ತಂ ಪ್ರಭಾಸಯಂ । ತೇನ ಮಾಂ ಭುಂಜ । ತೇನವಶಾಭುಂಕ್ಷಿಷೀಯಂ। ತೇನಮಾವಿಶ । ಅಹರ್ನೋ ಅತ್ಯಪೀ ಪರದ್ರಾತ್ರಿರ್ನೋ ಅತಿಪಾರಯತ್ । ಆದಿತ್ಯನಾವವಾರೋಕ್ಷಂ ಪೂರ್ಣಾಂ ಪರಿಪಾಥಿನೀಂ ಅಚ್ಛಿದ್ರಾಂ ಪಾರಯಿಷ್ಣೀಂ ಶನಾರಿತ್ರಾಂ ಸ್ವಸ್ತಯೇ । ಓಂ ನಮಃ ಆದಿತ್ಯಾಯಂ ನಮಃ ಆದಿತ್ಯಾಯ ನಮಃ ಆದಿತ್ಯಾಯಂ ಉದ್ಯಂತಂ ತ್ವಾದಿತ್ಯಾನೂದೀಯಾಸಂ ॥ ಎಂಬ ಋಕ್ಕುಗಳನ್ನು ಹೇಳುತ್ತಾರೆ).

ಆ) ಮಾಧ್ಯಾಹ್ನಿಕಸಂಧ್ಯೆ :

ಆಸತ್ಯೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂಚ ।
ಹಿರಣ್ಯಯೇನ ಸವಿತಾ ರಥೇನಾ ದೇವೋಯಾತಿ ಭುವನಾನಿಪಶ್ಯನ್ ॥

ಉದ್ವಯಂ ತಮಸಸ್ಪರಿ ಪಶ್ಯಂತೋ ಜ್ಯೋತಿರುತ್ತಮಂ ।
ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಂ ॥

ಉದ್ಯುತಂ ಜಾತವೇದಸಂ ದೇವಂ ವಹನ್ತಿಕೇತವಃ ।
ದೃಶೇ ವಿಶ್ವಾಯ ಸೂರ್ಯಂ ॥

ಚಿತ್ರಂ ದೇವಾನಾಮುದಗಾದ ನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ।
ಆ ಪ್ರಾದ್ಯಾವಾ ಪೃಥಿವೀ ಅಂತರಿಕ್ಷಗ್ಂ ।
ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥

ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್ । ಪಶ್ಯೇಮ ಶರದಃ ಶತಂ ಜೀವೇಮ ಶರದಃ ಶತಂ ನಂದಾಮ ಶರದಃ ಶತಂ ಮೋದಾಮಶರದಃ ಶತಂ ಭವಾಮ ಶರದಃ ಶತಂ ಶೃಣವಾಮ ಶರದಃ ಶತಂ ಪ್ರಬ್ರವಾಮ ಶರದಃ ಶತಂ ಅಜೀತಾಸ್ಯಾಮ ಶರದಃ ಶತಂ ಜ್ಯೋಕ್ಚಸೂರ್ಯಂ ದೃಶೇ । ಯ ಉದಗಾನ್ಮಹತೋಽರ್ಣವಾದ್ವಿಭ್ರಾಜಮಾನಃ ಸ್ಸರಿರಸ್ಯ ಮಧ್ಯಾತ್ಸಮ ವೃಷಭೋ ಲೋಹಿತಾಕ್ಷಃ ಸೂರ್ಯೋವಿಪಶ್ಚಿನ್ಮನ ಸಾಪುನಾತಂ ॥

ಅಥವಾ

ಉತ್ತಮೇಶಿಖರೇ ಜಾತೆ........

ಅಥವಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಉದುತ್ಯಂ ಜಾತವೇದ ಸಮಿತಿ ತ್ರಯೋದಶರ್ಚಸ್ಯ ಸೂಕ್ತಸ್ಯ । ಕಣ್ವ ಪ್ರಸ್ಕಣ್ವ ಋಷಿಃ । ಸೂರ್ಯೋದೇವತಾ ನವಾದ್ಯಾ ಗಾಯತ್ರೀ ಛಂದಃ । ಅಂತ್ಯಾಶ್ಚಸಸ್ತೋ ಅನುಷ್ಟುಭಃ ॥ ಸೂರ್ಯೋಪಸ್ಥಾನೇ ವಿನಿಯೋಗಃ ॥

ಓಂ ಉದುತ್ಯ ಜಾತವೇದ ಸಂದೇವ ವಹಂತಿಕೇತವಃ । ದೃಶೇ ವಿಶ್ವಾಯ ಸೂರ್ಯಂ । ಅಪತ್ಯೇತಾಯವೋ ಯಥಾನ ಕ್ಷತ್ರಾಯಂತ್ಯಕ್ತುಭಿಃ ಸೂರ್ಯಾಯ ವಿಶ್ವಚಕ್ಷಸೇ ॥

ಅದೃಶ್ಯಮಸ್ಯ ಕೇತವೋ ವಿರಸ್ಮಯೋಜನಾಂ ಅನುಭ್ರಾಜಂತೋ ಅಗ್ನಯೋ ಯಥಾ । ತರಣಿರ್ವಿಶ್ವದರ್ಶತೋ ಜ್ಯೋತಿಷ್ಕೃದಸಿ ಸೂರ್ಯ । ವಿಶ್ವಮಾಭಾಸಿ ರೋಚನಂ ॥ ಪ್ರತ್ಯಙ್ ದೇವಾನಾಂ ವಿಶಃ ಪ್ರತ್ಯಙ್ ಉದೇಷಿ ಮಾನುಷಾನ್ । ಪ್ರತ್ಯಙ್ ವಿಶ್ವಂಸ್ವದೃಶೇ ॥ ಯೇನಾ ಪಾವಕಚಕ್ಷಸಾಭುರಣ್ಯಂ ತಂಜನಾಂ ಅನು । ತ್ವ ವರುಣ ಪಶ್ಯಸಿ । ವಿದ್ಯಾಮೇಷಿ ರಜಸ್ಪೃಧ್ವಹಾಮಿ ಮಿಮಾನೋ ಅಕ್ತುಭಿಃ । ಪಶ್ಯಂ ಜನ್ಮಾನಿ ಸೂರ್ಯ । ಸಪ್ತಾತ್ವಾಹರಿತೋರಥೇ ವಹಂತಿದೇವ ಸೂರ್ಯ । ಶೋಚಿಷ್ಕೇಶಂ ವಿಚಕ್ಷಣ ಅಯುಕ್ತ ಸಪ್ತ ಶುಂಧ್ಯುವಃ ಸೂರ್ಯೋರಥಸ್ಯನಪ್ತ್ಯ । ತಾಭಿರ್ಯಾತಿ ಸ್ವಯುಕ್ತಿಭಿಃ । ಉದ್ವಯಂ ತಮಸಸ್ಪರಿ ಜ್ಯೋತಿಷ್ಪಶ್ಯಂತ ಉತ್ತರಂ । ದೇವಂ ದೇವಾತ್ರ ಸೂರ್ಯಮಗನ್ಮಜ್ಯೋತಿರುತ್ತಮಂ । ಉದ್ಯನ್ನದ್ಯ ಮಿತ್ರಮಹ ಆರೋಹನ್ನು ತ್ತರಾಂದಿವಂ । ಹೃದ್ರೋಗಂ ಮಮ ಸೂರ್ಯ ಹರಿಮಾಣಂ ಚ ನಾಶಯ । ಶುಕೇಷು ಮೇ ಹರಮಾಣಂ ರೋಪಣಾಕಾಸುದದ್ಮಸಿ । ಅಥೋ ಹಾರಿದ್ರ ವೇಷು ಮೇ ಹರಿಮಾಣಂ ನಿದಧ್ಮಸಿ । ಉದಗಾದಯಮಾದಿತ್ಯೋವಿಶ್ವೇನ ಸಹಸಾ ಸಹ। ದ್ವಿಷಂತಂ ಮಹ್ಯಂ ರಂಧಯನ್ಮೋ ಅಹಂ ದ್ವಿಷತೇರಧಂ ಓಂ॥ ಚಿತ್ರಂದೇವಾನಾಮಿತಿ ಷಟ್‌ಯರ್ಕ್‌ಸೂಕ್ತಸ್ಯ ಅಂಗೀರಸ ಪುತ್ರಃ ಕುತ್ಸಋಷಿಃ ಸೂರ್ಯೋದೇವತಾ ತ್ರಿಷ್ಟುಪ್‌ಛಂದಃ ಸೂರ್ಯೋಪಸ್ಥಾನೇ ವಿನಿಯೋಗಃ ॥

ಓಂ ಚಿತ್ರಂ ದೇವಾನಾಮುದಗಾದ ನೀಕಂ ಚಕ್ಷುರ್ಮಿತ್ರಸ್ಯ ವರುಣ ಸ್ಯಾಗ್ನೇಃ ಆಪ್ರಾದ್ಯಾವಾಪೃಥ್ವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥು ಷಶ್ಚ ॥ ಸೂರ್ಯದೇವೀಮುಷಸಂ ರೋಚಾಮಾನಾಂ ಮರ್ಯೋನಯೋಷಾ ಮಭ್ಯೇತಿ ಪಶ್ಚಾತ್ । ಯತ್ರಾನರೋ ದೇವಯಂತೋ ಯುಗಾನಿವಿತನ್ವತೇ ಪತಿಭದ್ರಾಯ ಭದ್ರಂ । ಭದ್ರಾ ಅಶ್ವಾಹರಿತಃ ಸೂರ್ಯಸ್ಯಚಿತ್ರಾ ಏತಗ್ವಾ ಅನುಮಾದ್ಯಾಸ । ನಮಸ್ಯಂತೋ ದಿವ ಅಪೃಷ್ಠಮಸ್ಥುಃ ಪರಿದ್ಯಾವಾ ಪೃಥಿವೀಯಂತಿ ಸದ್ಯಃ ॥ ತತ್ಸೂರ್ಯಸ್ಯ ದೇವತ್ವಂ ತನ್ಮಹಿತ್ವಂ ಮಧ್ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ತೋರ್ವಿತತಂ ಸಂಜಭಾರ । ಯಂದೇದಯುಂಕ್ತ ಹರಿತಃ ಸದಸ್ಥಾದಾದ್ರಾತ್ರೀ ವಾಸಸ್ತನು ತೇಸಿವಂಸ್ಮೈ॥ ತನ್ಮಿತ್ರಸ್ಯ ವರುಣಸ್ಯಾಭಿಚಕ್ಷೇ ಸೂರ್ಯೋರೂಪಂ ಕೃಣುತೇದ್ಯೋರುಪಸ್ಥೇ। ಅನಂತಮನ್ಯ ದೃಶದಸ್ಯ ಪಾಜಃ ಕೃಷ್ಣಮನ್ಯದ್ಧರಿತಃ ಸಂಭರಂತಿ ॥ ಅದ್ಯಾದೇವಾ ಉದಿತಾಸೂರ್ಯಸ್ಯ ನಿರಂಹಸಃ ಪಿಪೃತಾನಿರವ ದ್ಯಾತ್ ತನ್ನೋಮಿತ್ರೋ ವರುಣೋ ಮಾಮಹಂ ತಾಮದಿತಿಃ ಸಿಂಧುಃ ಪೃಥಿವೀ ಉತದ್ಯೌಃ । ನಾಸತ್ಯಾಭ್ಯಾಂ ಬರ್ಹಿರಿವ ಪ್ರವೃಂಜೇ ಓಂ ॥

ಸವಿತಾ ಪಶ್ಚಾದಿತಿ ಮಂತ್ರಸ್ಯ ಉಶೋಧಾನಾಕೋ ವಿಶ್ವೇದೇವಾ ಜಗತಿ । ಉಪಸ್ಥಾನೇ ವಿನಿಯೋಗಃ ॥

ಸವಿತಾಪಶ್ಚಾತ್ತಾತ್ಸವಿತಾಪುರಸ್ತಾತ್ತಸವಿತೋತ್ತರಾತ್ತಾತ್ಸವಿತಾ ಧರಾತ್ತಾತ್ । ಸವಿತಾನಃ ಸುವತುಸರ್ವತಾತಿಂ ಸವಿತಾ ನೋರಾಸತಾಂ ದೀರ್ಘಮಾಯುಃ ಓಂ ಶಾಂತಿಃ ಶಾಂತಿಃ ಶಾಂತಿಃ ಸರ್ವಾರಿಷ್ಟಶಾಂತಿರಸ್ತು ॥

(ಸಾಮಶಾಖೆಯವರು "ಉದುತ್ಸಜಾತವೇದ ಸಂ........ಆತ್ಮಾಜಗತ ಸ್ತಸ್ಥುಷಶ್ಚ ॥ ಆದನಂತರ

"ಭೂರ್ಭುವಸ್ಸ್ವರೋಂ ಸೂರ್ಯ ಇವ ದೃಶೇ ಭೂಯಾಸಂ ಅಗ್ನಿರಿವ ತೇಜಸಾ । ವಾಯುರಿವ ಪ್ರಾಣೇನ । ಸೋಮ ಇವ ಗಂಧೇನ । ಬೃಹಸ್ಪತಿರಿವ ಬುಧ್ಯಾ । ಅಶ್ವಿನಾವಿವ ರೂಪೇಣ। ಇಂದ್ರಾಗ್ನೀ ಇವ ಬಲೇನ। ಬ್ರಹ್ಮ ಭಾಗ ಏವಾಹಂ ಭೂಯಾಸಂ । ಪಾಪ್ಮಭಾಗಾ ಮೇದ್ವಿಷಂತಃ ॥ ಎಂಬ ಮಂತ್ರನ್ನು ಹೇಳಿ ಸೂರ್ಯಾವಲೋಕನ ಮಾಡುತ್ತಾರೆ.)

೩) ಸಾಯಂಸಂಧ್ಯೆ : ಓಂ ಇಮಂ ಮೇ ವರುಣ ಶ್ರುಧೀ ಹವ ಮದ್ಯಾಚ ಮೃಡಯ । ತ್ವಾಮವಸ್ಯುರಾಚಕೇ ॥ ತತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ । ಆಹೇಡಮಾನೋ ವರುಣೇಹ ಬೋಧ್ಯುರುಶಗ್ಂಸಮಾನ ಆಯುಃ ಪ್ರಮೋಷಿಃ ॥

ಯಚ್ಚಿದ್ಧಿತೇ ವಿಶೋ ಯಥಾ ಪ್ರದೇವ ವರುಣ ವ್ರತಂ । ಮಿನೀಮಸಿ ದ್ಯವಿದ್ಯವಿ॥ ಯತ್ಕಿಂಚೇದಂ ವರುಣದೈವ್ಯೇ ಜನೇಽಭಿದ್ರೋಹಂ ಮನುಷ್ಯಾಶ್ಚ ರಾಮಸಿ । ಅಚಿತ್ತೀ ಯತ್ತವ ಧರ್ಮಾ ಯುಯೋಪಿಮ ಮಾನಸ್ತಸ್ಮಾ ದೇನಸೋ ದೇವರೀರಿಷಃ ॥ ಕಿತವಾಸೋ ಯದ್ರಿರಿ ಪುರ್ನದೀವಿ ಯದ್ವಾ ಘಾ ಸತ್ಯಮುತಯನ್ನ ವಿದ್ಮ । ಸರ್ವಾ ತಾ ವಿಷ್ಯ ಶಿಥಿರೇವ ದೇವಾಥಾತೇ ಸ್ಯಾಮ ವರುಣ ಪ್ರಿಯಾಸಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

೪೬. ದಿಗ್ದೇವತಾ ನಮಸ್ಕಾರ : ಓಂ ನಮೋ ಬ್ರಹ್ಮಣೇ ನಮೋಽಸ್ತ್ವಗ್ನಯೇ ನಮಃ ಪೃಥಿವ್ಯೈ ನಮ ಓಷಧೀಭ್ಯ ನಮೋವಾಚೇ ನಮೋ ವಾಚಸ್ಪತಯೇ ನಮೋ ವಿಷ್ಣವೇ ಬೃಹತೇ ಕರೋಮಿ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಅಥವಾ

ನಮಃ ಪ್ರಾಚ್ಯೈದಿಶೇ ಯಾಶ್ಚದೇವತಾ ಏತಸ್ಯಾಪ್ರತಿವಸನ್ತ್ಯೇ ತಾಭ್ಯಶ್ಚ ನಮೋ ನಮಃ। ದಕ್ಷಿಣಾಯೈ ದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸನ್ತ್ಯೇ ತಾಭ್ಯಶ್ಚ ನಮೋ ನಮಃ ॥ ಪ್ರತೀಚ್ಯೈದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸನ್ತ್ಯೇ ತಾಭ್ಯಶ್ಚ ನಮೋ ನಮಃ । ಉದೀಚ್ಯೈದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸನ್ತ್ಯೇ ತಾಭ್ಯಶ್ಚ ನಮೋ ನಮಃ । ಊರ್ಧ್ವಾಯೈ ದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸನ್ತ್ಯೇ ತಾಭ್ಯಶ್ಚ ನಮೋ ನಮಃ । ಅಧರಾಯೈ ದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸನ್ತ್ಯೇ ತಾಭ್ಯಶ್ಚ ನಮೋ ನಮಃ । ಅವಾನ್ತರಾಯೈ ದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸನ್ತ್ಯೇ ತಾಭ್ಯಶ್ಚ ನಮೋ ನಮಃ । ನಮೋ ಗಂಗಾ ಯಮುನಯೋರ್ಮಧ್ಯೇಯೇ ವಸನ್ತಿ ತೇಮೇ ಪ್ರಸನ್ನಾತ್ಮನಃ ಚಿರಂಜೀವಿ ತಂ ವರ್ಧಯಂತಿ ।

ಅಥವಾ

ಓಂ ಇಂದ್ರಾಯ ನಮಃ ಓಂ ಅಗ್ನಯೇ ನಮಃ ಓಂ ಯಮಾಯ ನಮಃ ಓಂ ನಿರ್ಋತಯೇ ನಮಃ ಓಂ ವರುಣಾಯ ನಮಃ ಓಂ ವಾಯವೇ ನಮಃ ಓಂ ಕುಬೇರಾಯ ನಮಃ ಓಂ ಈಶಾನಾಯ ನಮಃ ॥

ಓಂ ನಮೋ ಭೂಮಿ-ಗೋ-ಪಿತೃ-ಮಹಾಪಿತೃ ಗುರುದೇವತಾಭ್ಯೋ ನಮಃ ॥

ಓಂ ಭೂರಿದಂ ಪ್ರದಕ್ಷಿಣಂ । ಓಂ ಭುವರಿದಂ ಪ್ರದಕ್ಷಿಣಂ । ಓಂ ಸುವರಿದಂ ಪ್ರದಕ್ಷಿಣಂ । ಓಂ ಭೂರ್ಭುವಸ್ಸುವರಿದಂ ಪ್ರದಕ್ಷಿಣಂ ॥

ಓಂ ಇಂದ್ರಶ್ರೇಷ್ಠಾನಿ ದ್ರವಿಣಾನಿ ಧೇಹಿ ಚಿತ್ತಿಂ ದಕ್ಷಸ್ಯ ಸುಭಗತ್ವಮಸ್ಮೇ । ಪೋಷಂ ರಯೀಣಾಮರಿಷ್ಟಿಂ ತನೂನಾಂ ಸ್ವಾದ್ಮಾನಂ ವಾಚಃ ಸುದಿನತ್ವಮಹ್ನಾಂ ॥ ಯಮಾಯ ಧರ್ಮರಾಜಾಯ ಮೃತ್ಯವೇ ಚಾಂತಕಾಯ ಚ। ವೈವಸ್ವತಾಯ ಕಾಲಾಯ ಸರ್ವಭೂತಕ್ಷಯಾಯ ಚ ॥ ಔದುಂಬರಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ದಧ್ನಾಯ ನೀಲಾಯ ಪರಮೇಷ್ಠಿನೇ । ವೃಕೋದರಾಯ ಚಿತ್ರಾಯ ಚಿತ್ರ ಗುಪ್ತಾಯ ವೈನಮಃ ॥

ಓಂ ಧ್ರುವಾಸುತ್ವಾಸು ಕ್ಷಿತಿಸು ಕ್ಷಿಯಂತೋ ವ್ಯಸ್ಮತ್ಪಾಶಂ ವರುಣೋ ಮುಮೋಚತ್ । ಅವೋ ವನ್ವಾನಾ ಆದಿತೇರುಪಸ್ಥಾದ್ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥

ಋತಗ್‌ಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣ ಪಿಂಗಲಂ ।
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈನಮೋ ನಮಃ ॥

೪೭. ನದೀ, ಮುನಿ, ದೇವ, ಋಷಿವಂದನ : ನಮೋ ಗಂಗಾ ಯಮುನಯೋಃ ಮುನಿಭ್ಯಶ್ಚ ನಮಃ ಸಂಧ್ಯಾಯೈ ನಮಃ ಸಾವಿತ್ರ್ಯೈ ನಮಃ ಗಾಯತ್ರ್ಯೈ ನಮಃ ಸರಸ್ವತ್ಯೈ ನಮಃ ಸರ್ವಾಭ್ಯೋ ನಮಃ ದೇವತಾಭ್ಯೋ ನಮಃ ದೇವೇಭ್ಯೋ ನಮಃ ಮುನಿಭ್ಯೋ ನಮಃ ಋಷಿಭ್ಯೋ ನಮಃ ಗುರುಭ್ಯೋ ನಮಃ ಮಾತೃಭ್ಯೋ ನಮಃ ಪಿತೃಭ್ಯೋ ನಮಃ ಆಚಾರೇಭ್ಯೋ ನಮಃ ಕಾಮೋಕಾರ್ಷೀನ್ಮನ್ಯುರಕಾರ್ಷೀನ್ನಮೋ ನಮಃ ಪೃಥಿವ್ಯಾಪಸ್ತೇಜೋ ವಾಯುರಾಕಾಶಾತ್ ಓನ್ನಮೋ ಭಗವತೇ ವಾಸುದೇವಾಯ। ಯಾಗ್‌ಂ ಸದಾ ಸರ್ವಭೂತಾನಿ ಚರಾಣಿಸ್ಥಾವರಾಣಿ ಚ ಸಾಯಂ ಪ್ರಾತರ್ನಮಸ್ಯಃ ನಿಸಾಮಣಾ ಸಂಧ್ಯಾಭಿರಕ್ಷತು ಶ್ರೀ ಸಾಮಾಸಂಧ್ಯಾಭಿರಕ್ಷತ್ಯೋನ್ನಮಃ ॥

ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ ।
ಶಿವಶ್ಚ ಹೃದಯಂ ವಿಷ್ಣೋಃ ವಿಷ್ಣೋಶ್ಚ ಹೃದಯಗ್‌ಂ ಶಿವಃ ॥
ಯಥಾಶಿವಮಯೋವಿಷ್ಣುಃ ಏವಂ ವಿಷ್ಣುಮಯಶ್ಶಿವಃ ।
ಯಥಾಂತರಂ ನಪಶ್ಯಾಮಿ ತಥಾಮೇ ಸ್ವಸ್ತಿರಾಯುಷಿಃ ॥
ಶ್ರೀ ಸ್ತಥಾಮೇ ಸ್ವಸ್ತಿರಾಯುಷ್ಯೋಂ ನಮೋ ನಮಃ ।

ಕ್ಷೀರೇಣ ಸ್ನಾಪಿತೇದೇವಿ ಚಂದನೇನ ವಿಲೇಪಿತೇ ।
ಬಿಲ್ವಪತ್ರಾರ್ಚಿತೇದೇವಿ ದುರ್ಗೇಹಂ ಶರಣಾಗತಃ ॥
ದುರ್ಗೇಹಂ ಶರಣಾಗತ ಓಂ ನಮೋ ನಮಃ ॥

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣ ಹಿತಾಯಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗೋವಿಂದಾಯ ನಮೋ ನಮಃ ।
ಶ್ರೀ ಗೋವಿಂದಾಯ ನಮೋ ನಮಃ ॥

ವಾಸನಾದ್ವಾಸುದೇವಸ್ಯವಾಸಿತಂ ತೇ ಜಗತ್ತ್ರಯಂ ।
ಸರ್ವಭೂತನಿವಾಸೋಽಸಿ ವಾಸುದೇವ ನಮೋಽಸ್ತುತೇ ।
ಶ್ರೀ ವಾಸುದೇವ ನಮೋಽಸ್ತುತೇ ಓಂ ನಮ ಇತಿ ॥

ನಮೋಽಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿ ಶಿರೋರು ಬಾಹವೇ ।
ಸಹಸ್ರನಾಮ್ನೇ ರುಪುಷಾಯ ಶಾಶ್ವತೇ
ಸಹಸ್ರಕೋಟಿ ಯುಗಧಾರಿಣೇ ನಮಃ ।
ಶ್ರೀ ಸಹಸ್ರಕೋಟಿ ಯುಗಧಾರಿಣೇ ನಮಃ ಇತಿ ॥

ಆಕಾಶಾತ್ಪತಿತಂ ತೋಯಂ ಯಥಾಗಚ್ಛತಿ ಸಾಗರು ।
ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ।
ಶ್ರೀ ಕೇಶವಂ ಪ್ರತಿಗಚ್ಛತ್ಯೋಂ ನಮ ಇತಿ ॥

ಸರ್ವವೇದೇಷು ಯಂತ್ಪುಣ್ಯಂ ಸರ್ವತೀರ್ಥೇಷು ಯತ್ಫಲಂ ।
ತತ್ಫಲಂ ಪುರುಷ ಆಪ್ನೋತಿ ಸ್ತುತ್ವಾದೇವಂ ಜನಾರ್ಧನಂ ।
ಶ್ರೀಸ್ತುತ್ವಾದೇವಂ ಜನಾರ್ಧನು ಓಂ ನಮ ಇತಿ ॥

೪೮. ಸ್ತುತಿ : ಇದಂ ದ್ಯಾವಾ ಪೃಥಿವೀ ಸತ್ಯಮಸ್ತು ।
ಪಿತರ್ಮಾತರ್ಯದಿ ಹೋಪ ಬೃವೇವಾಂ ।
ಭೂತಂ ದೇವಾನಾಮವಮೇ ಅವೋಭಿಃ ।
ವಿದ್ಯಾಮೇಷಂ ವೃಜನಂ ಜೀರದಾನಂ ॥

೪೯. ಗಾಯತ್ರೀ ವಿಸರ್ಜನ :

ಆಗಚ್ಛದೇವಿ ಶೀಘ್ರಂ ತ್ವಂ ಗಾಯತ್ರೀ ಬ್ರಹ್ಮರೂಪಿಣಿ ।
ಜಪದಾಸ್ಥಾನ ಸಿದ್ಧ್ಯರ್ಥಂ ಪ್ರವಿಶ ಹೃದಯಂ ಮಮ ॥
ಓಂ ಭದ್ರಂ ನೋ ಅವಿವಾತಾಯ ನಮಃ ।
ಓಂ ಶಾಂತಿಃ ಶಾಂತಿಃ ಶಾಂತಿಃ ಸರ್ವಾರಿಷ್ಟ ಶಾಂತಿರಸ್ತು ।
ಸಮಸ್ತ ಮಂಗಲಾವಾಪ್ತಿರಸ್ತು ॥

Sri Vidyabharathi Book Centre, Sringeri

CC-O. In Public Domain. Digitized by eGangotri

೫೦. ಅಭಿವಾದನ : ಚತುಸ್ಸಾಗರ ಪರ್ಯಂತಂ ಗೋಬ್ರಾಹ್ಮಣೇಭ್ಯಃ ಶುಭಂ ಭವತು ॥ ಭಾರ್ಗವಚ್ಯವನ ಆಪ್ನವಾನ ಔರವ ಜಾಮದಗ್ನ್ಯ ಪಂಚಾರ್ಷೇಯ ಪ್ರವರಾನ್ವಿತ ಜಾಮದಾಗ್ನ್ಯ ವತ್ಸಸಗೋತ್ರಃ ಬೋಧಾಯನ ಸೂತ್ರಃ ಯಜುಃಶಾಖಾಧ್ಯಾಯೀ ಶ್ರೀ ಶಂಕರನಾರಾಯಣ ಶರ್ಮಾನ್ ಅಹಂಭೋ ಅಭಿವಾದಯೇ.

೫೧. ಆಚಮನ : (ಈ ಮೊದಲು ತಿಳಿಸಿರುವಂತೆ)

೫೨. ಭಗವದರ್ಪಣ :

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಸ್ಸಂಧ್ಯಾ ಕ್ರಿಯಾದಿಷು ।
ನ್ಯೂನಂ ಸಂಪೂರ್ಣ ತಾಂ ಯಾತಿ ಸದ್ಯೋವಂದೇ ತಮಚ್ಯುತಂ ॥
ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ ।
ಯತ್ಕೃತಂತು ಮಯಾದೇವ ಪರಿಪೂರ್ಣಂ ತದಸ್ತುತೇ ॥
ಅನೇನ ಪ್ರಾತಃಸ್ಸಂಧ್ಯಾವಂದನೇನ ಭಗವಾನ್ ಸರ್ವಾತ್ಮಕಃ
ಸರ್ವಂ ಶ್ರೀ ವಾಸುದೇವ ಪ್ರೀಣಾತು ।

ಅಥವಾ

ಅನೇನ ಪ್ರಾತಃಸಂಧ್ಯಾವಂದನೇನ ಭಗವಾನ್ ಭಾರತೀರಮಣ
ಮುಖ್ಯ ಪ್ರಾಣಾಂತರ್ಗತ ಸವಿತೃನಾಮಕ ಶ್ರೀಲಕ್ಷ್ಮೀನಾರಾಯಣ
ಭಿನ್ನ ಶ್ರೀಲಕ್ಷ್ಮೀವೆಂಕಟೇಶಃ ಪ್ರಿಯಂತಾಂ ಪ್ರೀತೋಭವತು ।
ಶ್ರೀಕೃಷ್ಣಾರ್ಪಣಮಸ್ತು ॥
ಶ್ರೀ ಮಧ್ವೇಶಾರ್ಪಣಮಸ್ತು ॥

೫೩. ನಾಮತ್ರಯ ಜಪಸಂಕಲ್ಪ : ಮಂತ್ರ ಮಂತ್ರ ತಂತ್ರ ಸ್ವರ ವರ್ಣ ನ್ಯೂನಾತಿರಿಕ್ತ ಲೋಪದೋಷ ಪ್ರಾಯಶ್ಚಿತ್ತಾರ್ಥ ನಾಮತ್ರಯ ಮಂತ್ರ ಜಪಂ ಕರಿಷ್ಯೆ ॥

ಶ್ರೀ ಅಚ್ಯುತಾಯನಮಃ ಶ್ರೀ ಅನಂತಾಯನಮಃ ಶ್ರೀ ಗೋವಿಂದಾಯ ನಮಃ (೨ ಸಲ ಹೇಳಿದನಂತರ) ಶ್ರೀ ಅಚ್ಯುತಾನಂತ ಗೋವಿಂದೇಭ್ಯೋ ನಮಃ ॥ ಹರಾಯ ನಮಃ ಮೃಡಾಯ ನಮಃ ಶಂಕರಾಯ ನಮಃ (೨ ಸಲ ಹೇಳುವುದು). ಹರಮೃಡಶಂಕರೇಭ್ಯೋ ನಮಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇ ಸ್ವಭಾವಾತ್
ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ।

೫೪. ಆಚಮನ : (ಈ ಮೊದಲು ಸೂಚಿಸಿರುವಂತೆ)

೫೫. ಭೂಪ್ರಾರ್ಥನೆ : ಅದ್ಯಾನೋ ದೇವ ಸವಿತಃ ಪ್ರಜಾವತ್ಸಾವೀ ಸ್ಸೌಭಾಗಂ । ಪರಾದುಷ್ಷ್ವಪ್ನಿಯಗ್‌ಂ ಸುವ । ವಿಶ್ವಾನಿ ದೇವ ಸವಿತರ್ದುರಿತಾನಿ ಪರಾಸುವ । ಯದ್ಭದ್ರಂ ತನ್ಮ ಆಸುವ ॥

ಓಂ ತತ್ಸದ್ಬ್ರಹ್ಮಾರ್ಪಣಮಸ್ತು

ಇತಿ ತ್ರಿಮತಸ್ಥ ಸಂಧ್ಯಾವಂದನಂ ।

ತಾತ್ಪರ್ಯಸಹಿತ ಸಂಕ್ಷಿಪ್ತ ವಿವರಣೆ

೧. ಸ್ನಾನ ಮತ್ತು ೨. ಗುರುದೇವತಾ ಸ್ತೋತ್ರ : (ವಿವರಣೆಗಳನ್ನು ಹಿಂದೆಯೇ ಸೂಚಿಸಲಾಗಿದೆ.

೩. ಆಚಮನ : ಶರೀರದ ಒಳಹೊರಗನ್ನು ಶುದ್ಧಗೊಳಿಸುವ ಉದ್ದೇಶದಿಂದ ಸರ್ವಾಂತರ್ಯಾಮಿಯಾದ ಭಗವಂತನ ಸ್ಮರಣೆಮಾಡುತ್ತ ಓಂ ಭೂಃ, ಓಂ ಭುವಃ, ಓಗ್‌ಂ ಸುವಃ ಅಥವಾ ಓಂ ಋಗ್ವೇದಾಯ ಸ್ವಾಹಾ, ಓಂ ಯಜುರ್ವೇದಾಯ ಸ್ವಾಹಾ, ಓಂ ಸಾಮವೇದಾಯ ಸ್ವಾಹಾ ಅಥವಾ ಓಂ ಕೇಶವಾಯ ಸ್ವಾಹಾ । ಓಂ ನಾರಾಯಣಾಯ ಸ್ವಾಹಾ । ಓಂ ಮಾಧವಾಯ ಸ್ವಾಹಾ ಎಂಬ ಮಂತ್ರಗಳನ್ನು ಹೇಳುತ್ತ ಒಂದೊಂದು ಮಂತ್ರಕ್ಕೂ ಒಂದೊಂದು ಸಲದಂತೆ ಮೂರು ಉದ್ಧರಣೆ ನೀರನ್ನು ಬಲಗೈ ಹಸ್ತಕ್ಕೆ ಹಾಕಿಕೊಂಡು ಗಂಟಲಲ್ಲಿಳಿಯುವಂತೆ ಸೇವಿಸುವುದು. ನಾಲ್ಕನೇ ಮಂತ್ರದಿಂದ ಕೊನೆಯವರೆವಿಗೂ ಹೇಳುತ್ತಾ... ಕೈಗಳು, ಪಾದ, ಕಣ್ಣು, ನಾಸಿಕ, ಬಾಹು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು, ಹೃದಯ, ನಾಭಿ, ಶಿರಸ್ಸು ಅಥವಾ ತಮ್ಮ ತಮ್ಮ ಸಂಪ್ರದಾಯಾನು ಸಾರವಾಗಿ ಇನ್ನಿತರ ಅವಯವಗಳನ್ನು ಒದ್ದೆ ಬೆರಳುಗಳಿಂದ ಸ್ಪರ್ಶಿಸುವುದು.

೪. **ಪ್ರಾಣಾಯಾಮ :** ಪ್ರಾಣಾಯಾಮ ಮಂತ್ರದ ಋಷಿಯಾದ ಪರಬ್ರಹ್ಮ, ದೇವತೆಯಾದ ಪರಮಾತ್ಮ ಹಾಗೂ ಛಂದಸ್ಸಾದ ಗಾಯತ್ರಿ ಯನ್ನು ಸ್ಮರಿಸುತ್ತ ; ತಲೆ ಹೃದಯ ಹಾಗೂ ಮುಖವನ್ನು ಮುಟ್ಟಿಕೊಂಡು ಪ್ರಾಣಾಯಾಮಮಾಡುವುದು. ಪ್ರಾಣಾಯಾಮವೆಂದರೆ ಕ್ರಮಬದ್ಧವಾಗಿ ಉಸಿರಾಡುವುದೆಂದು ಅರ್ಥ. ಮೂಗಿನ ಎಡರಂಧ್ರವನ್ನು ಮುಚ್ಚಿಕೊಂಡು ಬಲರಂಧ್ರದಿಂದ ಉಸಿರನ್ನು ಹೊರಗೆ ಬಿಡುವುದಕ್ಕೆ ರೇಚಕ ಎಂದು ಹೆಸರು. ಅನಂತರ ಮೂಗಿನ ಬಲರಂಧ್ರವನ್ನು ಮುಚ್ಚಿಕೊಂಡು ಎಡರಂಧ್ರದಿಂದ ಉಸಿರನ್ನು ಒಳಗೆ ತೆಗೆದುಕೊಳ್ಳುವುದಕ್ಕೆ ಪೂರಕ ಎಂದು ಹೆಸರು. ಒಳಗೆ ತೆಗೆದುಕೊಂಡ ಪ್ರಾಣವಾಯುವನ್ನು ಎದೆಯಲ್ಲಿ ತಡೆದು ನಿಲ್ಲಿಸುವುದಕ್ಕೆ ಕುಂಬಕ ಎಂದು ಹೆಸರು. ಈ ರೀತಿ ಕ್ರಮಬದ್ಧವಾಗಿ ಉಸಿರಾಡುವಾಗ ರೇಚಕ, ಪೂರಕ ಹಾಗೂ ಕುಂಬಕಗಳ ಕಾಲಾವಧಿಯು ಸಮಾನವಾಗಿರುವು ದುಂಟು. ರೇಚಕದ ಎರಡರಷ್ಟು ಕಾಲ ಪೂರಕ ; ಪೂರಕದ ಎರಡರಷ್ಟುಕಾಲ ಕುಂಬಕವಿರುವುದೂ ಉಂಟು. ಈ ಸಮಯದಲ್ಲಿ ಸೃಷ್ಟಿ ಸ್ಥಿತಿ ಲಯಗಳ ಕಾರಣಕರ್ತೃವನ್ನು ಪ್ರತಿನಿಧಿಸುವ ಓಂಕಾರ ಹಾಗೂ ಭೂಲೋಕ, ಭುವೋ ಲೋಕ ಸುವರ್ಲೋಕ ಮಹೋಲೋಕ ಜನೋಲೋಕ ತಪೋಲೋಕ ಸತ್ಯ ಲೋಕ ಮುಂತಾದ ಏಳು ಲೋಕಗಳೂ ಪರಮಾತ್ಮನೇ ; ನೀರೂ ತೇಜಸ್ಸೂ, ಸಾರವೂ, ಅಮೃತವೂ ಬ್ರಹ್ಮವೂ ಭೂರಾದಿಸಪ್ತ ಲೋಕಗಳೂ ಬ್ರಹ್ಮವೇ ಎಂಬ ತಾತ್ಪರ್ಯವನ್ನೊಳಗೊಂಡ ಸಪ್ತವ್ಯಾಹೃತಿ ಸಹಿತವಾದ "ಓಂ ಭೂಃ ಓಂ ಭುವಃ...." ಎಂಬ ಪ್ರಾಣಾಯಾಮ ಮಂತ್ರವನ್ನು ಜಪಿಸುತ್ತಿರಬೇಕು.

೫. **ದೇಶಕಾಲ ಸಂಕೀರ್ತನೆ :** ನಮ್ಮ ಯಾವುದಾದರೊಂದು ವಿಚಾರ ವನ್ನು ಕುರಿತು ಬೇರೊಬ್ಬರಿಗೆ ಪತ್ರ ಬರೆದಾಗ, ನಮ್ಮ ಹೆಸರು, ಊರು, ವಿಷಯ, ಪತ್ರವು ಯಾರಿಗೆ ತಲುಪಬೇಕೋ ಅವರ ಪೂರ್ಣ ಹೆಸರು ವಿಳಾಸ ಮುಂತಾದವುಗಳನ್ನು ಬರೆಯುವುದರಿಂದ ಮಾತ್ರ ಪತ್ರವು ವಿಳಾಸದಾರರಿಗೆ ತಲುಪಿ, ನಮ್ಮ ವಿಚಾರವು ಅವರಿಗೆ ಸ್ಪಷ್ಟವಾಗಿ ವೇದ್ಯವಾಗಿ, ಅವರಿಂದ ನಾವು ನಿರೀಕ್ಷಿಸಿದ ಪ್ರತಿಕ್ರಿಯೆ, ನೆರವು ಇತ್ಯಾದಿ ದೊರೆಯುತ್ತದೆ. ಇದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ರೀತಿಯಲ್ಲಿ ನಮ್ಮ ಸಂಧ್ಯೋಪಾಸನೆ, ದೇವತಾರ್ಚನೆ ಇತ್ಯಾದಿ ನಿತ್ಯನೈಮಿತ್ತಿಕ ಕರ್ಮಗಳನ್ನಾಚರಿಸುವ ವ್ಯಕ್ತಿ ಹಾಗೂ ಸರ್ವಶಕ್ತನಾದ ಭಗವಂತನ ನಡುವೆ ನೇರ ಸಂಪರ್ಕವನ್ನುಂಟುಮಾಡುವ ಒಂದು ಕಲ್ಪನೆ ಈ ದೇಶಕಾಲ ಸಂಕೀರ್ತನೆ. ಇದಕ್ಕೆ ಪೂರ್ವಭಾವಿಯಾಗಿ ನಾವು ಕಾಲವನ್ನು ಕುರಿತಂತೆ ಸ್ವಲ್ಪ ಮಾಹಿತಿಯನ್ನು ತಿಳಿಯೋಣ.

ನಮ್ಮ ಲೌಕಿಕ ಜೀವನದಲ್ಲಿ ಕಾಲಗಣನೆ ಮಾಡುವಾಗ ಸೆಕೆಂಡ್, ನಿಮಿಷ, ಗಂಟೆ, ದಿನ, ವಾರ, ಪಕ್ಷ, ಮಾಸ, ಋತು, ಆಯನ, ಸಂವತ್ಸರ ಇತ್ಯಾದಿ ಮೂಲ ಮಾನಗಳನ್ನು ನಮ್ಮ ನಿತ್ಯವ್ಯವಹಾರದಲ್ಲಿ ಕಾಣುತ್ತೇವೆ. ಇದು ಮಾನವರಾದ ನಮ್ಮ ಕಾಲಮಾನದ ಗಣನೆಯ ಕ್ರಮ. ದೇವತೆಗಳ ಕಾಲಮಾನವು ಇದಕ್ಕಿಂತ ವ್ಯಾಪಕವಾದುದು. ಭಗವಂತನ ಕಾಲಮಾನವಂತೂ ನಮ್ಮ ಕಲ್ಪನೆಗೂ ನಿಲುಕಲಾರದಷ್ಟು ವಿಶಾಲವ್ಯಾಪ್ತಿಯದು. ಮಾನವರ ೧ ವರ್ಷವು ದೇವತೆಗಳಿಗೆ ೧ ದಿನ. ನಮಗೆ ೩೬೦ ವರ್ಷಗಳು ಕಳೆದರೆ ದೇವತೆಗಳಿಗೆ ೧ ವರ್ಷ ಕಳೆದಂತೆ! ದೇವತೆಗಳ ೧೨,೦೦೦ ವರ್ಷಗಳಿಗೆ ೧ ಚತುರ್ಯುಗ (೧ ಚತುರ್ಯುಗಕ್ಕೆ ೪,೩೨,೦೦೦೦ ಮಾನವ ವರ್ಷಗಳು) ಈ ಚತುರ್ಯುಗದಲ್ಲಿ ಕೃತಯುಗ ೪,೮೦೦ ವರ್ಷ; ತ್ರೇತಾಯುಗ ೩,೬೦೦ ವರ್ಷ; ದ್ವಾಪರಯುಗ ೨,೪೦೦ ವರ್ಷ; ಕಲಿಯುಗ ೧,೨೦೦ ವರ್ಷ. ಈ ರೀತಿಯ ೨,೦೦೦ ಚತುರ್ಯುಗಗಳು ಕಳೆದರೆ ಬ್ರಹ್ಮನಿಗೆ ೧ ದಿನ. ಈ ಗಣನೆಯಲ್ಲಿ ಬ್ರಹ್ಮನಿಗೆ ೧೦೦ ವರ್ಷ ಆಯುಸ್ಸು!! ಇದಕ್ಕೆ 'ಪರ' ಎಂದು ಹೆಸರು. ಸರ್ವಶಕ್ತನಾದ ಭಗವಂತನಿಗೆ (ನಾರಾಯಣನಾಗಲೀ, ಪರಮೇಶ್ವರನೇ ಆಗಿರಲೀ) ಇದು ಕಣ್ಣು ರೆಪ್ಪೆಯನ್ನು ಒಮ್ಮೆ ಮುಚ್ಚಿ ತೆರೆಯುವಷ್ಟು ಕಾಲ!!! ಬ್ರಹ್ಮನ ನೂರುವರ್ಷಗಳ ಅವಧಿಯಲ್ಲಿ ಮೊದಲ ಐವತ್ತು ವರ್ಷಗಳನ್ನು ಪ್ರಥಮ ಪರಾರ್ಧವೆಂದೂ; ಎರಡನೇ ಐವತ್ತು ವರ್ಷಗಳನ್ನು ದ್ವಿತೀಯಾ ಪರಾರ್ಧವೆಂದೂ ಸೂಚಿಸಲಾಗುತ್ತದೆ. ಈಗ ನಡೆಯುತ್ತಿರುವುದು ದ್ವಿತೀಯಾ ಪರಾರ್ಧ. ಅಂದರೆ ಬ್ರಹ್ಮನ ಐವತ್ತೊಂದನೇ ವರ್ಷದ ಮೊದಲ ದಿನದ ಹಗಲು. ಇದಕ್ಕೆ ಶ್ವೇತವರಾಹಕಲ್ಪ ಎಂದು ಹೆಸರು. ಬ್ರಹ್ಮನ ಪ್ರತಿಯೊಂದು ಕಲ್ಪದಲ್ಲೂ ೧೪ ಮನ್ವಂತರಗಳಿರುತ್ತವೆ. ಒಂದೊಂದು ಮನ್ವಂತರಕ್ಕೂ ಒಬ್ಬೊಬ್ಬ ಅಧಿಪತಿ. ಅವರಿಗೆ ಮನು ಎಂದು ಹೆಸರು. ಸ್ವಯಂಭೂ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ, ವೈವಸ್ವತ, ಸೂರ್ಯಸಾವರ್ಣಿ, ದಕ್ಷಸಾವರ್ಣಿ, ಬ್ರಹ್ಮಸಾವರ್ಣಿ, ಧರ್ಮಸಾವರ್ಣಿ, ರುದ್ರಸಾವರ್ಣಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವಸಾವರ್ಣಿ, ಇಂದ್ರಸಾವರ್ಣಿ ಎಂಬ ಹದಿನಾಲ್ಕು ಜನಗಳೂ ವೈದೀಕ ಮನ್ವಂತರಗಳ ಮನುಗಳು. ಜೈನರಲ್ಲಿ ಬೇರೆ ಹದಿನಾಲ್ಕು ಜನ ಮನುಗಳಿದ್ದಾರೆ. ಈಗ ನಡೆಯುತ್ತಿರುವುದು ೭ನೇ ಮನ್ವಂತರ. ಇದಕ್ಕೆ 'ವೈವಸತ್ವ ಮನ್ವಂತರ' ಎಂದು ಹೆಸರು. ಪ್ರತಿಯೊಂದು ಮನ್ವಂತರದಲ್ಲೂ ಸುಮಾರು ೧೪೨ ಚತುರ್ಯುಗಗಳಿರುತ್ತವೆ. ಈಗ ನಡೆಯುತ್ತಿರುವುದು ೨೮ನೇ ಚತುರ್ಯುಗಕ್ಕೆ ಸೇರಿದ ಕಲಿಯುಗ (ಅಷ್ಟಾವಿಂಶತಿತಮೇ ಕಲಿಯುಗೇ). ಈ ಕಲಿಯುಗದಲ್ಲಿ ಮೊದಲನೇ ಪಾದ ನಡೆಯುತ್ತಿದೆ. ಜಂಬೂದ್ವೀಪದಲ್ಲಿರುವ ಭರತವರ್ಷದ ಭರತಖಂಡದ ದಂಡಕಾರಣ್ಯದಲ್ಲಿರುವ ಗೋದಾವರೀ ನದಿಯ ದಕ್ಷಿಣ ತೀರದಿಂದೀಚೆಗೆ ಇರುವ ಭೂ ಪ್ರದೇಶದಲ್ಲಿ ನಾವಿದ್ದೇವೆ. ಬೌದ್ಧಾವತಾರ ಆಗಿಹೋಗಿದೆ. ಇದು ರಾಮ / ಪರಶುರಾಮ ಕ್ಷೇತ್ರ. ಇದೆಲ್ಲವನ್ನೂ ಒಳಗೊಂಡ ಮಾಹಿತಿಯನ್ನು ನೀಡುವ "ಶುಭೇ ಶೋಭನೇ........" ಎಂಬ ದೇಶಕಾಲ ಸಂಕೀರ್ತನೆಯ ಮಂತ್ರವನ್ನು ಪಠಿಸುವ ಕ್ರಮವು ರೂಢಿಯಲ್ಲಿದೆ. ಇಂಥದೊಂದು ಕ್ರಮವು ಸನಾತನ ಕಾಲದಿಂದಲೂ ದಿನನಿತ್ಯದ ರೂಢಿಯಲ್ಲಿರುವುದರಿಂದಲೇ ಇಂಥ ಅಗಾಧವಾದ ಕಾಲಾವಧಿಯನ್ನು ಇಷ್ಟು ಖಚಿತವಾಗಿ ನಿರ್ಧರಿಸಿಕೊಳ್ಳಲು ಅವಕಾಶವಾಗಿದೆ. ಹಿಂದಿನಿಂದ ನಡೆದು ಬಂದಂತೆಯೇ ಇದು ಇನ್ನು ಮುಂದೆಯೂ ಮುಂದುವರೆಯಲು ಸಹಕರಿಸಬೇಕಾದುದು ಇಂದಿನ ನಮ್ಮೆಲ್ಲರ ಕರ್ತವ್ಯ. ಆಗ ಮಾತ್ರಸೃಷ್ಟಿಯ ಸ್ವಾಭಾವಿಕ ಚಲನೆ ಇರುತ್ತದೆ. ಇಲ್ಲವಾದಲ್ಲಿ ಉಂಟಾಗುವ ವ್ಯತ್ಯಯಗಳಿಗೆ ನಾವೆಲ್ಲರೂ ಪ್ರತ್ಯಕ್ಷ ಕಾರಣರಾಗುವುದು ಖಚಿತ ಸಂಗತಿ. ಈ ಕಾರಣದಿಂದಲಾದರೂ ದ್ವಿಜರೆಲ್ಲರೂ ತಪ್ಪದೇ ಸಂಧ್ಯೋಪಾಸನೆಯನ್ನು ಮಾಡಲೇಬೇಕು.

೭. **ಲಾಂಛನಧಾರಣೆ :** ಸ್ನಾನ ಮಾಡಿದನಂತರ ಅಥವಾ ಮುಖ ತೊಳೆದುಕೊಂಡ ಅನಂತರ ನಮ್ಮ ಶರೀರದ, ಮುಖದ ಮೇಲಿನ ಮಾಲಿನ್ಯವು ನಾಶವಾಗುತ್ತದೆ. ಲೌಕಿಕ ದೃಷ್ಟಿಯಿಂದ ಶರೀರವನ್ನಲಂಕರಿಸುವುದು ಅಥವಾ ಪಾರಮಾರ್ಥಿಕ ದೃಷ್ಟಿಯಿಂದ ದೇಹದ ನಶ್ವರತೆಯನ್ನು ಬುದ್ಧಿಗೆ ಖಚಿತವಾಗಿ ಮನವರಿಕೆ ಮಾಡಿಕೊಡುವ ದಿಸೆಯಲ್ಲಿ ಲಾಂಛನ ಧಾರಣೆಯು ನಡೆಯುತ್ತದೆ.

ಸರ್ವಶಕ್ತನಾದ ಪರಮೇಶ್ವರನಿಗೆ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ ಎಂಬ ೫ ಮುಖಗಳೂ ೫ ಅಂಗಗಳನ್ನು ಸ್ಮೃತಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದು ; ಪರಮೇಶ್ವರನ ಗಾಯತ್ರೀ ಮಂತ್ರವನ್ನೊಳಗೊಂಡ "ಓಂಮಹಾನ ಸ್ತೋಕೇತನಯೋ.... ಇತ್ಯಾದಿ ಮಂತ್ರಗಳನ್ನು ಪಠಿಸಿ, ಓಂ ನಮಃ ಶಿವಾಯ ಎಂಬ ಶಿವ ಮಂತ್ರದಿಂದಲೋ ; 'ಓಂ ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರೀ ಮಂತ್ರದಿಂದಲೋ ಅಥವಾ ಗಾಯಂತ್ರೀ ಮಂತ್ರದಿಂದಲೋ ಶೈವರು ಹಣೆ, ಹೃದಯ, ಹೊಕ್ಕಳು, ಕುತ್ತಿಗೆ, ಕೈಗಳಕೀಲು ಹಾಗೂ ಸೊಂಟ ದಲ್ಲಿ ತ್ರಿಪುಂಡ್ರವನ್ನು ಮಾಡಿಕೊಳ್ಳುವುದು. ಶ್ರೀವೈಷ್ಣವರು 'ಗಂಧದ್ವಾರಾಂ" ಮಂತ್ರವನ್ನು ಹೇಳಿ ; ಗೋಪೀಚಂದನವನ್ನು ಕಲಸಿಕೊಂಡು "ವಿಷ್ಣೋರ್ನು ಕಂ.... ; ಓಂ ಕ್ಷಾಂ ನಮಃ...." ಇತ್ಯಾದಿ ಮಂತ್ರಗಳನ್ನು ಪಠಿಸಿ, ಕೇಶವಾದಿ ನಾಮೋಚ್ಚಾರಣೆಯಿಂದ ಹಣೆ; ಹೊಟ್ಟೆ–ಎಡಬಲ; ಎದೆ–ಎಡಬಲ; ಕಂಠ–ಎಡಬಲ; ಬೆನ್ನು; ಕತ್ತಿನಹಿಂಭಾಗ ಹಾಗೂ ಶಿರಸ್ಸಿನಲ್ಲಿ ಊರ್ಧ್ವಪುಂಡ್ರಧಾರಣೆ ಮಾಡಿಕೊಂಡು, ಅನಂತರ ಅರಿಶಿಣ ಚೂರ್ಣವನ್ನು ನೀರಿನಲ್ಲಿ ಕಲಸಿಕೊಂಡು ಮೇಲೆ ಸೂಚಿಸಿದ ಸ್ಥಳಗಳಲ್ಲಿ ಊರ್ಧ್ವಪುಂಡ್ರದ ಮಧ್ಯೆ ಶ್ರೀಯಹಾದಿ ಮಂತ್ರ ದಿಂದ ದೀಪಾಕಾರವಾಗಿ ಧರಿಸುವುದು. ಮಾಧ್ವ ಸಂಪ್ರದಾಯಂದವರು ಗೋಪೀ ಚಂದನದ ಮಹಿಮೆಯನ್ನು ವರ್ಣಿಸುವ "ಗೋಪಿಚಂದನ...." ಮಂತ್ರವನ್ನು ಪಠಿಸುತ್ತಾ.... ಗೋಪೀಚಂದನವನ್ನು ನೀರಿನಲ್ಲಿ ಕಲಸಿಕೊಂಡು ಕೇಶವಾದಿ ನಾಮಗಳಿಂದ ಮೇಲೆ ಸೂಚಿಸಿದ ಸ್ಥಳಗಳಲ್ಲಿ ಊರ್ಧ್ವಪುಂಡ್ರಧಾರಣೆ ಮಾಡಿ ಕೊಂಡು; ಚಕ್ರ, ಶಂಖ, ಗದಾ, ಪದ್ಮ, ನಾರಾಯಣ ಮುದ್ರೆಗಳನ್ನು ಪ್ರಾರ್ಥಿ ಸುವ "ಸುದರ್ಶನ...." ಇತ್ಯಾದಿ ಮಂತ್ರ–ಶ್ಲೋಕಗಳನ್ನು ಪಠಿಸುತ್ತ ಸಂಪ್ರ ದಾಯಾನುಸಾರವಾಗಿ ಮುದ್ರಾಧಾರಣೆ ಮಾಡಿಕೊಳ್ಳುವುದು. ಇವಿಷ್ಟೂ ಸಂಧ್ಯೋಪಾಸನೆಯನ್ನು ಆರಂಭಿಸುವುದಕ್ಕೆ ಮೊದಲು ನಡೆಯುವ ಪ್ರಾರಂಭಿಕ ಸಿದ್ಧತೆ. ಇದಾದ ನಂತರ—

೭. **ಧ್ಯಾನಸ್ನಾನ :** "ಅಪವಿತ್ರನಾಗಿರಲೀ, ಪವಿತ್ರನಾಗಿರಲೀ, ಯಾವುದೇ ಸ್ಥಿತಿಯಲ್ಲಿರಲಿ ; ಯಾವಾತನು ಪುಂಡರೀಕಾಕ್ಷನನ್ನು ಭಕ್ತಿಯಿಂದ ಸ್ಮರಿಸುತ್ತಾನೆಯೋ ಅವನು ತಕ್ಷಣವೇ ಅಂತರಂಗ ಹಾಗೂ ಬಹಿರಂಗ ಶುದ್ಧಿ ಯನ್ನು ಹೊಂದುತ್ತಾನೆ" ಎಂಬ ತಾತ್ಪರ್ಯವನ್ನು ಹೊಂದಿದ "ಅಪವಿತ್ರಃ ಪವಿತ್ರೋವಾ...." ಮಂತ್ರವನ್ನು ಹೇಳುತ್ತಾ ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಂಡು ತಲೆಯಮೇಲೆ ಪ್ರೋಕ್ಷಿಸಿಕೊಳ್ಳುವುದರೊಂದಿಗೆ ಸಂಧ್ಯಾವಂದನೆ ಪ್ರಾರಂಭ.

Sri Vidyabharathi Book Centre, Sringeri

CC-O. In Public Domain. Digitized by eGangotri

೮. **ಆಚಮನ** : 'ಆಚಮನ' ಎಂದು ಸೂಚಿಸಿರುವ ಎಲ್ಲೆಡೆಯೂ ಈ ಮೊದಲು ತಿಳಿಸಿರುವ ಕ್ರಮದಲ್ಲಿ ಆಚಮನ ಮಾಡಬೇಕು.

೯. **ಪ್ರಾಣಾಯಾಮ** : 'ಪ್ರಾಣಾಯಾಮ' ಎಂದು ಸೂಚಿಸಿರುವ ಎಲ್ಲೆಡೆಯೂ ಈ ಮೊದಲು ತಿಳಿಸಿರುವಂತೆ ಪ್ರಾಣಾಯಾಮ ಮಾಡಬೇಕು.

೧೦. **ಸಂಕಲ್ಪ** : ನಾನು ಮಾಡಿರುವ ಎಲ್ಲ ಪಾಪಗಳರಾಶಿಯನ್ನು ನಾಶ ಮಾಡುವ ಮೂಲಕ, ಸರ್ವಶಕ್ತನಾದ ಭಗವಂತನಿಗೆ ಪ್ರಿಯವನ್ನುಂಟುಮಾಡು ವುದಕ್ಕಾಗಿ ಬೆಳಗಿನ / ಮಧ್ಯಾಹ್ನದ / ಸಾಯಂಕಾಲದ ಸಂಧ್ಯಾವಂದನೆಯನ್ನು ಮಾಡುತ್ತೇನೆ ಎಂಬ ಅರ್ಥದ "ಮಮೋಪಾತ್ತ....", ಮಂತ್ರವನ್ನು ಹೇಳಿ ಕೊಂಡು ಸಂಕಲ್ಪಮಾಡಿ ಭಗವಂತನಿಗೆ ಕೈಮುಗಿಯುವುದು.

೧೧. **ಮಾರ್ಜನೆ** : ಸುಖಸಂಪಾದನೆ ಮಾಡುವವರಾದ ಜಲಾಭಿಮಾನೀ ದೇವತೆಗಳೇ, ನೀವು ನಮ್ಮ ಅನ್ನಕ್ಕಾಗಿಯೂ, ಹೆಚ್ಚಿನ ಸೌಂದರ್ಯಕ್ಕಾಗಿಯೂ, ಜ್ಞಾನಕ್ಕಾಗಿಯೂ ಇರುವವರಾಗಿ; ಸುಖಕರವಾದ ನಿಮ್ಮ ರಸವಾವುದಿದೆಯೋ ಆ ರಸಕ್ಕೆ ನಮ್ಮನ್ನು ಮಕ್ಕಳ ಅಭಿವೃದ್ಧಿಯನ್ನು ಬಯಸುವ ತಾಯಿಯರಂತೆ ಭಾಗಿಗಳನ್ನಾಗಿಮಾಡಿ, ಆ ರಸವನ್ನು ನೀವು ನಮಗೆ ಕೊಡಿ. ಅದಕ್ಕಾಗಿ ನಾವು ನಿಮ್ಮನ್ನು ಮರೆಹೊಕ್ಕಿದ್ದೇವೆ. ಎಲೈ ಅಬ್ದೇವತೆಗಳೇ ನಮ್ಮ ವಿಷಯದಲ್ಲಿ ಸಂಪ್ರೀತರಾಗಿ. ನಮಗೆ ಪ್ರಜನನ ಶಕ್ತಿಯನ್ನು ಕೊಡಿ" ಎಂಬ ಅರ್ಥವನ್ನುಳ್ಳ "ಆಪೋಹಿಷ್ಠಾ...." ಮಂತ್ರವನ್ನು ಹೇಳುತ್ತ ಎಡಗೈಲಿ ಹಿಡಿದ ಉದ್ಧರಣೆಯ ನೀರಿನಿಂದ ಬಲಗೈನ ಬೆರಳು ಅಥವಾ ತುಳಸೀದಳ ಅಥವಾ ದರ್ಭೆಯಿಂದ ಹೃದಯ, ಎದೆಯಕೆಳಭಾಗ, ಮೇಲ್ಭಾಗ, ಬಲಪಾರ್ಶ್ವ, ಎಡಪಾರ್ಶ್ವ, ಬೆನ್ನು, ಮುಖ, ಕೆಳಭಾಗ, ಸರ್ವಾಂಗಗಳಿಗೂ ಪ್ರೋಕ್ಷಿಸಿಕೊಳ್ಳುವುದು.

೧೨. **ಮಂತ್ರಾಚಮನ (ಜಲಪ್ರಾಶನ)** : ಉದ್ಧರಣೆಯಿಂದ ಬಲ ಹಸ್ತಕ್ಕೆ ನೀರು ಹಾಕಿಕೊಂಡು; "ಸೂರ್ಯನೂ, ಮನ್ಯುದೇವತೆಯೂ, ಮನ್ಯುದೇವತೆಗಳ ಒಡೆಯರೂ; ಕೋಪದಿಂದ ಮಾಡಿದ ಪಾಪಗಳಿಂದ ನನ್ನನ್ನು ರಕ್ಷಿಸಲಿ. ರಾತ್ರಿಯಲ್ಲಿ, ಮನಸ್ಸಿನಿಂದ, ವಾಕ್ಕಿನಿಂದ, ಕೈಗಳಿಂದ ಕಾಲುಗಳಿಂದ, ಉದರದಿಂದ ಪ್ರಜನೇಂದ್ರಿಯದಿಂದ ಯಾವ ಪಾಪಮಾಡಿದ್ದೇ ನೆಯೋ ಅದನ್ನು ರಾತ್ರಿದೇವತೆಯು ನಾಶಮಾಡಲಿ. ಇನ್ನೂ ಏನಾದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಲ್ಪಪಾಪ ಉಳಿದಿದ್ದರೆ ಅದನ್ನೂ ನನ್ನನ್ನೂ ಸೂರ್ಯನೆಂಬ ಜ್ಯೋತಿಯಲ್ಲಿ ಹೋಮಮಾಡುತ್ತೇನೆ" ಎಂಬ ಅರ್ಥದ "ಓಂ ಸೂರ್ಯಶ್ಚ ಮಾಮನ್ಯುಶ್ಚ...." ಎಂಬ ಮಂತ್ರವನ್ನು ಪ್ರಾತಃಸಂಧ್ಯೆಯಲ್ಲೂ ; ಅಬ್ದೇವತೆಯು ಪೃಥ್ವೀದೇವಿಯನ್ನು ಪರಿಶುದ್ಧಳನ್ನಾಗಿ ಮಾಡಲೀ. ಪರಿಶುದ್ಧಳಾದ ಭೂದೇವಿಯು ನನ್ನನ್ನು ಪರಿಶುದ್ಧನನ್ನಾಗಿಮಾಡಲೀ. ವೇದದ ಒಡೆಯನಾದ ಪರಮಾತ್ಮನು (ಎಲ್ಲರನ್ನೂ) ಪರಿಶುದ್ಧರನ್ನಾಗಿಮಾಡಲೀ. ಎಂಜಲು ತಿಂದದ್ದನ್ನೂ, ತಿನ್ನಬಾರದನ್ನು ತಿಂದದ್ದನ್ನೂ ಅಥವಾ ನನ್ನ ದುರ್ನಡತೆಯನ್ನು, ತೆಗೆದುಕೊಳ್ಳಬಾರದವರಿಂದ ದಾನವನ್ನು ತೆಗೆದುಕೊಂಡದ್ದನ್ನೂ, ಎಲ್ಲ ದೋಷಗಳನ್ನೂ ಅಬ್ದೇವತೆಗಳು ಶುದ್ಧವಾದುವುಗಳನ್ನಾಗಿಮಾಡಲಿ. ದೋಷಗಳನ್ನು ಹೋಮಮಾಡಿದ್ದೇನೆ" ಎಂಬ ಅರ್ಥದ "ಆಪಃ ಪುನನ್ತು...." ಎಂಬ ಮಂತ್ರವನ್ನು ಮಾಧ್ಯಾಹ್ನಿಕದಲ್ಲೂ ; ಅಗ್ನಿಯೂ ಕ್ರೋಧ ದೇವತೆಯೂ ಮತ್ತು ಕ್ರೋಧಾದೇವತಾಧಿಪತಿಗಳೂ ಕೋಪದಿಂದ ಮಾಡಿದ ಪಾಪಧಿಂದ ನನ್ನನ್ನು ರಕ್ಷಿಸಲಿ. ಹಗಲಿನಲ್ಲಿ ಯಾವ ಪಾಪವನ್ನು ಮನಸ್ಸಿನಿಂದಲೂ, ವಾಕ್ಕಿನಿಂದಲೂ ಮತ್ತು ಕೈಕಾಲು, ಉದರ ಮತ್ತು ಪ್ರಜನೇಂದ್ರಿಯದಿಂದಲೂ ಮಾಡಿದ್ದೇನೆಯೋ ಅದನ್ನು ಹಗಲಿನ ಅಭಿಮಾನದೇವತೆಯು ಹೋಗಲಾಡಿಸಿ ಕಾಪಾಡಲಿ. ಇನ್ನೂ ಏನಾದರೂ ಸ್ವಲ್ಪ ಪಾಪವಿದ್ದಲ್ಲಿ ಅದನ್ನೂ ನನ್ನನ್ನೂ ಅಮೃತಯೋನಿಯಾದ ಆದಿತ್ಯನೆಂಬ ಅಗ್ನಿಯಲ್ಲಿ ಹೋಮಮಾಡುತ್ತೇನೆ" ಎಂಬ ಅರ್ಥದ "ಅಗ್ನಿಶ್ಚ ಮಾಮನ್ಯುಶ್ಚ...." ಎಂಬ ಮಂತ್ರವನ್ನು ಸಾಯಂಕಾಲದಲ್ಲೂ ಹೇಳಿ, ಬಲಹಸ್ತದಲ್ಲಿರುವ ಜಲವನ್ನು ಸೇವಿಸುವುದು.

೧೩. ಆಚಮನ : (ಈ ಮೊದಲು ಸೂಚಿಸಿರುವಂತೆ)

೧೪. ದ್ವಿತೀಯ ಮಾರ್ಜನ : ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಂಡು ಪ್ರೋಕ್ಷಿಸಿಕೊಳ್ಳುತ್ತ...."ಜಯಶೀಲನಾದ ಕುದುರೆಯ ರೂಪದ ಅನ್ನವನ್ನು ತಿನ್ನುವ ಅಗ್ನಿಯನ್ನು ಸ್ತೋತ್ರ ಮಾಡಿದೆನು. ಆ ಅಗ್ನಿಯು ನಮ್ಮ ಮುಖಗಳನ್ನು ಸುಗಂಧಯುಕ್ತವನ್ನಾಗಿ ಮಾಡಲೀ. ನಮ್ಮ ಆಯಸ್ಸನ್ನು ಹೆಚ್ಚಿಸಲಿ.

ಎಲೈ ಜಲಾಭಿಮಾನಿದೇವತೆಗಳೇ, ನೀವು ನಿಜವಾಗಿಯೂ ಸುಖವನ್ನು ಸಂಪಾದನೆ ಮಾಡುವವರಾಗಿದ್ದೀರಿ. ಆ ನೀವು ನಮ್ಮನ್ನು ಅನ್ನಕ್ಕಾಗಿಯೂ,

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹತ್ವಕ್ಕಾಗಿಯೂ, ಅಲಂಕಾರಕ್ಕಾಗಿಯೂ ಸ್ಥಾಪಿಸಿ. ಯಾವ ನಿಮ್ಮ ಅತ್ಯಂತ ಮಂಗಳಕರವಾದ ರಸವಿದೆಯೋ ಆದಕ್ಕೆ ನಮ್ಮನ್ನು ಮಕ್ಕಳ ಅಭಿವೃದ್ಧಿಯನ್ನು ಬಯಸುವ ತಾಯಿಯರಂತೆ ಭಾಗಿಗಳನ್ನಾಗಿ ಮಾಡಿರಿ. ಯಾವ ರಸದಿಂದ ನೀವು ಸಂಪ್ರೀತರಾಗಿದ್ದೀರೋ ಆ ರಸಕ್ಕಾಗಿ ನಾವು ನಿಮ್ಮನ್ನು ಬಹಳವಾಗಿ ಹೊಂದಿದ್ದೇವೆ. ಎಲೈ ಅಬ್ದೇವತೆಗಳೇ ನಮ್ಮನ್ನು ಪ್ರಜೋತ್ಪಾದನ ಸಮರ್ಥರನ್ನಾಗಿ ಮಾಡಿರಿ.

ಜಲಾಭಿಮಾನಿದೇವತೆಗಳು ನಮಗೆ ಸುಖವನ್ನು ನೀಡಲಿ. ಭಗವತ್ಪೂಜೆಗೂ, ಪಾನಕ್ಕೂ ಉಪಯುಕ್ತವಾದ ನೀರನ್ನು ಕೊಡಲಿ. ಅನ್ನಪಾನಾದಿ ಸಕಲ ಅಭೀಷ್ಟಗಳನ್ನೂ ನಮಗೆ ನೀಡಲಿ. ರೋಗವನ್ನು ನಾಶಮಾಡುತ್ತಾ; ಬೇರೆ ರೋಗಗಳು ಬಾರದಂತೆ ತಡೆಯುತ್ತ ನಮ್ಮ ಬಳಿ ಬರಲಿ.

ನೀರನ್ನು ಆಶ್ರಯಿಸಿ ಬದುಕುವ ಎಲ್ಲ ಸ್ಥಾವರಜಂಗಮಗಳಿಗೂ ಆಶ್ರಯ ನೀಡುವವರೂ ಹಾಗೂ' ಅವುಗಳನ್ನು ಆಳುವವರೂ ಜಲಮಾನಿದೇವತೆಗಳು. ಅವರಲ್ಲಿ ದೈಹಿಕರೋಗ ಹಾಗೂ ಭವರೋಗ ಇವುಗಳಿಗೆ ಔಷಧಿಯನ್ನು ಬೇಡುತ್ತೇನೆ.

ಜಲ ಹಾಗೂ ಜಲಾಭಿಮಾನಿದೇವತೆಗಳಲ್ಲಿ ಎಲ್ಲ ಬಗೆಯ ಔಷಧಗಳೂ ಇವೆ. ಜಗತ್ತಿಗೆ ಸುಖವನ್ನುಂಟುಮಾಡುವ ಅಗ್ನಿಯೂ ಇದ್ದಾನೆ. ಈ ವಿಷಯವನ್ನು 'ಸೋಮ' ಎಂಬ ಹೆಸರುಳ್ಳ ಭಗವಂತನೇ ಹೇಳಿದ್ದಾನೆ.

ಓ! ಜಲಾಭಿಮಾನಿದೇವತೆಗಳೇ ನಾನು ಬಹುಕಾಲ ಸೂರ್ಯನಾರಾಯಣನನ್ನು ಉಪಾಸನೆಮಾಡುವಂತಾಗಬೇಕು. ಅದಕ್ಕಾಗಿ ನಾನು ನಿರೋಗಿಯಾಗಿ ಬದುಕಲು ರೋಗ ನಿವಾರಕ ಔಷಧಿಯನ್ನು ನನ್ನಲ್ಲಿ ತುಂಬಿರಿ.

ಓ! ಜಲಾಭಿಮಾನಿದೇವತೆಗಳೇ ಪರರಿಗೆ ದ್ರೋಹ ಮಾಡಿದ್ದರಿಂದ ಉಂಟಾದುದು, ಸಜ್ಜನರಿಗೆ ಶಪಿಸಿದ್ದರಿಂದುಂಟಾದುದು, ಸುಳ್ಳು ಹೇಳಿದ್ದರಿಂದುಂಟಾದುದು ಇತ್ಯಾದಿ ಎಲ್ಲ ರೀತಿಯ ಪಾಪಗಳನ್ನೂ ನಿಮ್ಮ ಪ್ರವಾಹದಿಂದ ಕೊಚ್ಚಿಕೊಂಡೊಯ್ಯಿರಿ.

ನಾನು ಜಲವನ್ನು ಸೇವಿಸಿದ್ದೇನೆ. ಜಲಾಭಿಮಾನಿದೇವತೆಗಳನ್ನೂ ಅವರಲ್ಲಿರುವ ಸಾರವಸ್ತುವಾದ ಭಗವಂತನನ್ನೂ ಕೂಡಿದ್ದೇನೆ. ಜಲದಲ್ಲೂ ಜಲಾಭಿಮಾನದೇವತೆಯಲ್ಲೂ ಇರುವ ಅಗ್ನಿನಾಮಕನಾದ ಪರಮಾತ್ಮನೇ ನನ್ನಲ್ಲಿ ಬ್ರಹ್ಮವರ್ಚಸ್ಸನ್ನು ತುಂಬಿಸಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವೋತ್ತಮನಾದ ಶ್ರೀ ಹರಿಯ ಇಚ್ಛೆಯಿಂದ ಹಗಲುರಾತ್ರಿ ಎನ್ನದೆ ಸದಾಹರಿಯುತ್ತ ನಮಗೆ ಭಗವದ್‌ಜ್ಞಾನಾಮೃತವನ್ನು ಹರಿಸುವ ಜಲದೇವತೆಗಳನ್ನು ನಾನು ನನ್ನ ರಕ್ಷಣೆಗಾಗಿ ಬೇಡುತ್ತೇನೆ.

ಎಲೈ ವರುಣದೇವನೆ, ಅಜ್ಞಾನಿಗಳಂತೆ ದಿನದಿನದಲ್ಲಿ ನಿನ್ನ ಕರ್ಮ ಮಾಡಿಲ್ಲವೋ ಅದನ್ನು ಕ್ಷಮಿಸು. ಎಲೈ ವರುಣದೇವನೆ, ದೇವಲೋಕದಲ್ಲಿರುವ ನಿನ್ನಲ್ಲಿ ಏನಾದರೂ ಸ್ವಲ್ಪ ದ್ರೋಹವನ್ನು ಅಜ್ಞಾನದಿಂದ ಮನುಷ್ಯರಾದ ನಾವು ಮಾಡುತ್ತೇವೆಯೋ ಮತ್ತು ನಿನ್ನ ಕರ್ಮವನ್ನು ನಾಶಮಾಡುತ್ತೇವೆಯೋ ಎಲೈ ದೇವನೇ ಆ ಪಾಪದಿಂದಲೂ ನಮ್ಮನ್ನು ಹಿಂಸಿಸಬೇಡ.

ಧೂರ್ತರಾದ ಋತ್ವಿಜರು ಯಾವ ಕರ್ಮಾಂಗವನ್ನು ನಾಶ ಮಾಡಿದರೋ ಸರಿಯಾಗಿ ವ್ಯವಹಾರದಲ್ಲಿ ನಡೆಯಲಿಲ್ಲವೋ ಅವಶ್ಯಕವಾಗಿ ಮಾಡಬೇಕಾಗಿ ಬಂದದ್ದರಿಂದ ಮಾಡಿದರೋ ತಿಳಿಯುವುದಿಲ್ಲ. ಧರ್ಮಸ್ವರೂಪವು ತಿಳಿಯುವುದಿಲ್ಲ. ಆ ಸಮಸ್ತದೋಷಗಳನ್ನೂ ಇನ್ನೂ ಸಣ್ಣಸಣ್ಣ ಪಾಪಗಳನ್ನೂ ನಾಶ ಮಾಡು. ವರುಣನೇ ನಿನಗೆ ನಾವು ಪ್ರೀತಿಪಾತ್ರರಾಗಬೇಕು.

ಕೆಂಪುಬಣ್ಣದ ಶುದ್ಧವಾದ ಪವಿತ್ರಕರವಾದ ನೀರಿನಲ್ಲಿಯೇ ಸೂರ್ಯನು ಹುಟ್ಟಿದನು. ಇಂದ್ರನೂ ಹುಟ್ಟಿದನು. ಆ ನೀರುಗಳು ಗರ್ಭದಲ್ಲಿ ಬಡಬಾಗ್ನಿಯನ್ನು ಧರಿಸಿದವು. ಅಂಥ ನೀರಿನ ದೇವತೆಗಳು ನಮಗೆ ಸುಖವನ್ನೂ ಆಮುಷ್ಮಿಕ ಸುಖವನ್ನು ಕೊಡಲಿ.

ನೀರುಗಳ ರಾಜನಾದ ವರುಣನು ಜನರ ಪಾಪಪುಣ್ಯಗಳನ್ನು ನೋಡುತ್ತಾ ನೀರಿನ ಮಧ್ಯದಲ್ಲಿದ್ದಾನೆ. ಜೇನುತುಪ್ಪವನ್ನು ಸುರಿಸುವ, ಶುದ್ಧವಾದ, ಶುದ್ಧಿಯನ್ನುಂಟು ಮಾಡುವ ಆ ನೀರು ನಮಗೆ ಸುಖವನ್ನೂ ಮೋಕ್ಷ ಸುಖವನ್ನೂ ಉಂಟುಮಾಡಲಿ.

ಸ್ವರ್ಗದಲ್ಲಿ ದೇವತೆಗಳು ಯಾವ ನೀರನ್ನು ಸೇವಿಸುತ್ತಾರೆಯೋ ಯಾವ ನೀರು ಅಂತರಿಕ್ಷದಲ್ಲಿ ಬಹುಪ್ರಕಾರವಾಗಿ ಹರಿಯುತ್ತದೆಯೋ ಯಾವ ನೀರು ಭೂಮಿಯನ್ನು ಮಳೆಯಿಂದ ನೆನೆಸುತ್ತದೆಯೋ ಶುದ್ಧವಾದ ಆ ನೀರು ನಮಗೆ ಮೋಕ್ಷಸುಖವನ್ನು ಕೊಡಲಿ.

ಜಲಾಭಿಮಾನಿ ದೇವತೆಗಳೇ, ನಿಮ್ಮ ಮಂಗಳಕರವಾದ ಕಣ್ಣಿನಿಂದ ನನ್ನನ್ನು ನೋಡಿರಿ. ಮಂಗಳಕರವಾದ ಶರೀರದಿಂದ ನನ್ನ ಚರ್ಮವನ್ನು ಮುಟ್ಟಿ, ನಿಮ್ಮ ನೀರಿನಲ್ಲಿ ವಾಸಮಾಡುವ ಎಲ್ಲ ಅಗ್ನಿಯನ್ನೂ ಕರೆಯುತ್ತೇನೆ. ನನ್ನಲ್ಲಿ ವರ್ಚಸ್ಸನ್ನು ಬಲವನ್ನು ತೇಜಸ್ಸನ್ನು ಸ್ಥಾಪಿಸಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲರನ್ನೂ ಶುದ್ಧಿಮಾಡುವ ಶೋಧನಕುಶಲನಾದ, ಸ್ವರ್ಗದಲ್ಲಿ ಹುಟ್ಟಿದ ಆ ಪವಮಾನನು ಶುದ್ಧಿ ಸಾಧನವಾದ ಪವಿತ್ರದಿಂದ ನನ್ನನ್ನು ಶುದ್ಧಿಗೊಳಿಸಲಿ.

ದೇವರೂಪರಾದ ಜನರೂ, ಮನುಗಳೂ, ಎಲ್ಲಾ ಸದಾಚಾರ ಸಂಪನ್ನರೂ, ಅನುಗ್ರಹ ಬುದ್ಧಿಯಿಂದ ನನ್ನನ್ನು ಪವಿತ್ರಗೊಳಿಸಲಿ.

ಪ್ರಕಾಶಮಾನನಾದ ಅಗ್ನಿದೇವನೇ, ನನ್ನ ಕರ್ಮವನ್ನು ಸರಿಸಿ ಶುದ್ಧನಾದ ನಿನ್ನ ಸಂಕಲ್ಪದಿಂದ ನನ್ನನ್ನು ಶುದ್ಧಗೊಳಿಸು.

ಓ! ಅಗ್ನಿಯೇ ನಿನ್ನ ಜ್ವಾಲೆಯು ಮಧ್ಯದಲ್ಲಿ ವಿಸ್ತಾರವಾದ ಶುದ್ಧವಾದ ಮಂತ್ರವಿದೆ. ಅದರಿಂದ ನಾವು ಶುದ್ಧರಾಗುತ್ತೇವೆ.

ಓ! ಸೂರ್ಯನೇ ನಿನ್ನ ಪವಿತ್ರತೆ ಮತ್ತು ಕರ್ಮಪ್ರೇರಣೆ ಇವೆರಡರಿಂದ ಈ ಕರ್ಮವನ್ನು ಶುದ್ಧವಾದದ್ದನ್ನಾಗಿ ಮಾಡುತ್ತೇವೆ.

ಶೋಧನ ಕುಶಲಳಾದ ವೈಶ್ವದೇವಿಯು ಬಂದಳು. ಅವಳ ಶರೀರಗಳು ಹೊಗಳಲ್ಪಟ್ಟಿವೆ. ಆ ದೇವಿಯಿಂದ ಅನುಗ್ರಹಿತರಾದ ನಾವು, ಆ ದೇವಿಯಿಂದ ಕರ್ಮಗಳಲ್ಲಿ ಸಂತೋಷಪಡುವವರೂ ಧನಪತಿಗಳು ಆಗೋಣ.

ಅಗ್ನಿಯು ಜ್ವಾಲೆಗಳಿಂದ ನನ್ನನ್ನು ಶುದ್ಧಿಮಾಡಲಿ. ವಾಯುವು ಪ್ರಾಣರೂಪದಿಂದ ಸುಖದಾತ್ಮವಾಗಲಿ. ಸತ್ಯರೂಪವಾದ ಸ್ವರ್ಗ ಭೂಮಿಗಳು ಯಜ್ಞಕ್ಕೆ ಹಿತವಾದುವುಗಳಾಗಿ, ನೀರಿನಿಂದಲೂ ಹಾಲು ಮುಂತಾದ ರಸಗಳಿಂದಲೂ ನನ್ನನ್ನು ಶುದ್ಧನನ್ನಾಗಿ ಮಾಡಲಿ.

ಓ! ಸೂರ್ಯಭಗವಾನನೇ ಅನುಗ್ರಹ ಬುದ್ಧಿಯಿಂದ ನನ್ನನ್ನು ಶುದ್ಧಿಮಾಡು. ದೊಡ್ಡದಾದ, ಬಹುಕಾಲದಿಂದಿರುವ, ಪಾಪನಾಶಕ ಸಾಧನಗಳಿಂದ ನನ್ನನ್ನು ಶುದ್ಧನನ್ನಾಗಿಸು.

ದೇವತೆಗಳು ಯಾವ ಸಾಧನದಿಂದ ಹಿಂದಿನವರನ್ನು ಶುದ್ಧರನ್ನಾಗಿ ಮಾಡಿದರೋ, ಜಲಾಭಿಮಾನದೇವತೆಗಳು ಯಾವ ಸಾಧನದಿಂದ ಸ್ವರ್ಗಗತಿಯನ್ನು ಶುದ್ಧವಾದುದನ್ನಾಗಿ ಮಾಡಿದರೋ ಆ ಶ್ರೇಷ್ಠವಾದ ವೇದದಿಂದ ಈ ದೊಡ್ಡ ಕರ್ಮವನ್ನು ಶುದ್ಧವಾದುದನ್ನಾಗಿ ಮಾಡುತ್ತೇನೆ.

ಪವಮಾನ ಮಂತ್ರಗಳನ್ನು ಅರ್ಥವತ್ತಾಗಿ ಅಧ್ಯಯನ ಮಾಡುವವನು ಋಷಿಗಳಿಂದ ಸಂಗ್ರಹಿಸಲ್ಪಟ್ಟ ಪರಿಶುದ್ಧವಾದ, ವಾಯುದೇವರಿಂದ ರುಚಿಕರವಾಗಿ ಮಾಡಲ್ಪಟ್ಟ ಸರ್ವರಸವನ್ನೂ ಅನುಭವಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪವಮಾನ ಮಂತ್ರವನ್ನು ಅರ್ಥವತ್ತಾಗಿ ಅಧ್ಯಯನ ಮಾಡಿದವನಿಗೆ ಋಷಿಗಳು ಶೇಖರಿಸಿದ್ದ ರಸವನ್ನೂ ಹಾಲನ್ನೂ, ತುಪ್ಪವನ್ನೂ ಜೇನುತುಪ್ಪ ವನ್ನೂ ನೀರನ್ನೂ ಸರಸ್ವತಿಯು ಕೊಡುತ್ತಾಳೆ.

ಇಂದ್ರಾದಿ ದೇವತೆಗಳಿಂದ ಸಂಪಾದಿಸಲ್ಪಟ್ಟ, ಪವಮಾನ ದೇವತೆಗಳು ನಮಗೆ ಈ ಲೋಕದ ಮತ್ತು ಸ್ವರ್ಗಸುಖದ ಇಷ್ಟಾರ್ಥಗಳನ್ನು ಕೊಡಲಿ.

ಮಂಗಳಪ್ರದವಾದ ಪವಮಾನ ದೇವತೆಗಳು ನಮಗೆ ಒಳ್ಳೆಯ ಫಲ ಗಳನ್ನು ಕೊಡಲಿ. ಋಷಿಗಳಿಂದ ಸಂಗ್ರಹಿಸಲ್ಪಟ್ಟ ರಸವು ಬ್ರಾಹ್ಮಣರಲ್ಲಿ ಸುಖವನ್ನುಂಟು ಮಾಡಲಿ.

ಇಂದ್ರಾದಿದೇವತೆಗಳು ಯಾವ ಪವಿತ್ರದಿಂದ ಶರೀರವನ್ನು ಯಾವಾ ಗಲೂ ಶುದ್ಧಿಸಿಕೊಳ್ಳುತ್ತಾರೆಯೋ ಆ ನಾನಾ ಪ್ರಕಾರವಾದ ಪವಿತ್ರದಿಂದ ಪವಮಾನ ಋಕ್ಕುಗಳು ನನ್ನನ್ನು ಶುದ್ಧಗೊಳಿಸಲಿ.

ಪ್ರಜಾಪತಿ ದೇವತಾಕವಾದ ದರ್ಭೆಯಿಂದಮಾಡಿದ ಅಥವಾ ಚಿನ್ನದಿಂದ ಮಾಡಿದ ಯಾವ ಪವಿತ್ರವು ಇದೆಯೋ ಅದರಿಂದ ವೇದಾರ್ಥವನ್ನು ತಿಳಿದ ನಾವು ಶುದ್ಧವಾದ ಕರ್ಮವನ್ನು ಇನ್ನೂ ಹೆಚ್ಚು ಶುದ್ಧವಾದದ್ದನ್ನಾಗಿ ಮಾಡುತ್ತೇವೆ.

ಇಂದ್ರನು ಸುನೀತಿಯೊಡನೆಯೂ, ಚಂದ್ರನು ಸ್ವಸ್ತಿದೇವಿಯೊಡ ನೆಯೂ, ವರುಣನು ಸಮೀಚಿದೇವಿಯೊಡನೆಯೂ, ಯಮರಾಜನು ಮಾರಿಕಾ ದೇವಿಯೊಡನೆಯೂ, ಅಗ್ನಿಯು ಮೋರ್ಜಯನ್ತೀ ದೇವಿಯೊಡನೆಯೂ ನನ್ನನ್ನು ಪರಿಶುದ್ಧನನ್ನಾಗಿ ಮಾಡಲಿ.

(ಇದುವರೆವಿಗೂ ಮಾರ್ಜನೆ ಮಾಡಿಕೊಳ್ಳುತ್ತಿದ್ದ ಉದ್ಧರಣೆಯ ನೀರನ್ನು ಮೂಸಿನೋಡಿ ಕೆಳಗೆ ಹಾಕಿ. ಪುನಃ ಮಾರ್ಜನೆಯನ್ನು ಮುಂದು ವರೆಸ ಬೇಕು)

ತಾಯಿಯರಾದ ಜಲಾಭಿಮಾನಿ ದೇವತೆಗಳು ನಮ್ಮನ್ನು ಶುದ್ಧಗೊಳಿಸಲಿ. ತುಪ್ಪದಿಂದ ಶುದ್ಧರಾದ ದೇವತೆಗಳು ತುಪ್ಪದಿಂದ ನಮ್ಮನ್ನು ಶುದ್ಧಿಗೊಳಿಸಲಿ. ತುಪ್ಪವು ನಮ್ಮ ಪ್ರಪಂಚದ ಸುತ್ತಲೂ ಹರಿಯಲಿ. ಪ್ರಮಾದದಿಂದ ಮಾಡಿದ ತಪ್ಪುಗಳಿಂದ ನಮ್ಮನ್ನು ಶುದ್ಧರಾಗುವಂತೆ ಮಾಡಲಿ.

ಚಿತ್ರಬಣ್ಣವುಳ್ಳ ಪವಿತ್ರದೇವಿಯು ಯಾವಾಗಲೂ ಹೆಚ್ಚಿನ ಸ್ನೇಹಿತ ಳಾಗಿರಲಿ. ಶಚಿಷ್ಟೆಯಿಂದ ಕೂಡಿದವಳಾಗಿರಲಿ"–ಎಂಬ ಅರ್ಥವನ್ನುಳ್ಳ "ಓಂ ಧಧಿಕಾವ್ಣೋ... ಎಂಬ ಋಕ್ಕಿನಿಂದ ಪ್ರಾರಂಭಿಸಿ ಕಯಾನಶ್ಚಿತ್ರ ಆಭುವ

Sri Vidyabharathi Book Centre, Sringeri

 CC-O. In Public Domain. Digitized by eGangotri

ದೂತಿ ಸದಾವೃಧಸ್ಯಖಾ..." ಎಂಬ ಋಕ್ಕುಗಳವರೆವಿಗೆ ಹೇಳುತ್ತ ದ್ವಿತೀಯ ಮಾರ್ಜನೆಯನ್ನು ಮುಗಿಸಬೇಕು.

೧೫. ಪಾಪಪುರುಷ ನಿರಸನ (ಅಘಮರ್ಷಣ) :

ಬಲಗೈ ಹಸ್ತಕ್ಕೆ ಒಂದು ಉದ್ಧರಣೆ ನೀರನ್ನು ಹಾಕಿಕೊಂಡು "ಪಾಪ ದಿಂದ ಬಿಡುಗಡೆಯಾಗಲೀ ; ಸಂಕೋಲೆಯಿಂದ ಬಿಡುಗಡೆ ಹೊಂದುವವ ನಂತೆಯೂ, ಸ್ನಾನ ಮಾಡಿದವನು ಬೆವರಿನಿಂದ ಬಿಡುಗಡೆ ಹೊಂದು ವಂತೆಯೂ, ಪವಿತ್ರದಿಂದ ಶುದ್ಧವಾದ ತುಪ್ಪದಂತೆಯೂ, ಅಬ್ದೇವತೆಗಳು ನನ್ನನ್ನು ಪಾಪದಿಂದ ಬಿಡುಗಡೆ ಮಾಡಲಿ" ಎಂಬ ಅರ್ಥವಿರುವ "ದ್ರುಪದಾ ದಿವ ಮುಂಚತು...." ಮಂತ್ರವನ್ನು ಹೇಳಿ ನೀರನ್ನು ಕೆಳಗೆ ಹಾಕಬೇಕು. ಪುನಃ ಬಲಹಸ್ತಕ್ಕೆ ನೀರನ್ನು ಹಾಕಿಕೊಂಡು.... "ಸ್ವರ್ಗ, ನೀರು, ಓಷಧಿ ಹಾಗೂ ಅಗ್ನಿಯಲ್ಲಿ ಹುಟ್ಟಿದ; ಶುದ್ಧಿಕರರಾದ ಅಬ್ದೇವತೆಗಳು ನಮ್ಮನ್ನು ಶುದ್ಧಿಮಾಡಲೀ. ಚಿನ್ನದ ಬಣ್ಣವುಳ್ಳ ಅಬ್ದೇವತೆಗಳು ನಾವು ರಾತ್ರಿಯಲ್ಲಿ ಮಾಡಿದ ಅಥವಾ ಹಗಲಿನಲ್ಲಿ ಮಾಡಿದ ಹೊಸದಾದ ಮತ್ತು ಹಳೆಯದಾದ ಎಲ್ಲ ಪಾಪಗಳಿಂದ ನಮ್ಮನ್ನು ಪರಿಶುದ್ಧಗೊಳಿಸಲಿ" ಎಂಬ ತಾತ್ಪರ್ಯವಿರುವ "ದಿವಿಜಾತಾ ಅಪ್ಸುಜಾತಾ......" ಮಂತ್ರವನ್ನು ಹೇಳುತ್ತಾ ಬಲಹಸ್ತದಲ್ಲಿ ರುವ ನೀರನ್ನು ಮೂಸಿ ನೋಡಿ, ನಮ್ಮ ಶರೀರದಲ್ಲಿರುವ ಪಾಪಪುರುಷನು ಉಸಿರಿನ ಮೂಲಕ ಹೊರಬಂದು ನೀರಿನಲ್ಲಿ ಸೇರಿದಂತೆ ಭಾವಿಸಿ, ಶರೀರವು ಪರಿಶುದ್ಧವಾಯಿತೆಂಬ ಭಾವದಿಂದ ಮೂಸಿ ನೋಡಿದ ನೀರನ್ನು ಪಕ್ಕಕ್ಕೆ ಎರಚಬೇಕು. ಅದರತ್ತ ನೋಡಬಾರದು. ಕ್ರಿಯೆಯಲ್ಲಿ ಈ ಕೆಲವರು "ಓಂ ಋತಂ ಚ ಸತ್ಯಂ......" ಎಂಬ ಋಕ್ಕನ್ನು ಹೇಳುತ್ತಾರೆ.

೧೬. ಆಚಮನ : (ಈ ಮೊದಲು ಸೂಚಿಸಿರುವಂತೆ)

೧೭. ಪ್ರಾಣಾಯಾಮ : (ಈ ಮೊದಲು ಸೂಚಿಸಿರುವಂತೆ)

೧೮. ಸಂಕಲ್ಪ : "ನಾನು ಮಾಡಿರುವ ಎಲ್ಲ ಪಾಪ ರಾಶಿಯನ್ನೂ ನಾಶಗೊಳಿಸುವ ಮೂಲಕ ಸರ್ವಶಕ್ತನಾದ ಭಗವಂತನಿಗೆ ಪ್ರಿಯವನ್ನುಂಟು ಮಾಡಲು ಬೆಳಗಿನ/ಮಧ್ಯಾಹ್ನದ/ಸಾಯಂಕಾಲದ ಸಂಧ್ಯಾವಂದನೆಯ ಭಾಗ ವಾಗಿ ಬೆಳಗಿನ/ಮಧ್ಯಾಹ್ನದ/ಸಾಯಂಕಾಲದ ಸಂಧ್ಯಾರ್ಘ್ಯವನ್ನು ಅರ್ಪಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರೇನೆ" ಎಂಬ ಅರ್ಥವನ್ನುಳ್ಳ "ಮಮೋಪಾತ್ತ...." ಎಂಬ ಮಂತ್ರವನ್ನು ಹೇಳುತ್ತ ಅರ್ಘ್ಯಬಿಡಲು ಸಂಕಲ್ಪ ಮಾಡುವುದು.

೧೯. **ಅರ್ಘ್ಯ :** "ನಮ್ಮ ಬುದ್ಧಿವೃತ್ತಿಗಳನ್ನು ಸನ್ಮಾರ್ಗದಲ್ಲಿ ಹೋಗುವಂತೆ ಪ್ರೇರಿಸುವ ಪರಮಾತ್ಮ ಸ್ವರೂಪನಾದ ಸೂರ್ಯ ಭಗವಾನನ ಪ್ರಸಿದ್ಧವಾದ, ವರಿಸುವುದಕ್ಕೆ ಶ್ರೇಷ್ಠವಾದ ತೇಜಸ್ಸನ್ನು ಧ್ಯಾನಿಸುತ್ತೇವೆ. ಆ ಪರಮಾತ್ಮನು ರಜೋಗುಣವನ್ನು ಮೀರಿದವನು. ನೀರು, ತೇಜಸ್ಸು, ರಸ, ಅಮೃತ, ವೇದ, ಭೂರಾದಿ ಲೋಕಗಳು ಎಲ್ಲವೂ ಬ್ರಹ್ಮವೇ" ಎಂಬ ತಾತ್ಪರ್ಯವಿರುವ "ಓಂ ತತ್ಸವಿತುರ್ವರೇಣ್ಯಂ...." ಹಾಗೂ "ಪರೋರಜಸಿ ಸಾವದೋಂ"....ಎಂಬ ಮಂತ್ರಗಳನ್ನು ಮೂರು ಸಲ ಹೇಳುತ್ತ ಪ್ರತಿಸಲವೂ ಒಂದೊಂದು ಅರ್ಘ್ಯ ನೀಡುವುದು (ಬೊಗಸೆಯಲ್ಲಿ ನೀರನ್ನು ತುಂಬಿಕೊಂಡು ಭೂಮಿಯ ಮೇಲೆ / ನೀರಿನಲ್ಲಿ / ಅರ್ಘ್ಯ ಪಾತ್ರೆಯಲ್ಲಿ ಸುರಿಯುವುದು). ಮಾಧ್ಯಾಹ್ನಿಕದಲ್ಲಿ ಕೆಲವರು ಕಾಶಿ ಮೊದಲಾದ ಶುಚಿಸ್ಥಳಗಳಲ್ಲಿರುವ, ಜಗತ್ರಯಕ್ಕೂ ಆಧಾರನಾದ, ಅಂತರಿಕ್ಷದಲ್ಲಿರುವ, ದೇವತೆಗಳನ್ನು ಕರೆಯುವ, ಯಜ್ಞವೇದಿಗಳಲ್ಲಿರುವ ಅತಿಥಿಗೆ ಸಮಾನನಾದ, ಬ್ರಹ್ಮಾಂಡವೆಂಬ ಗೃಹಕ್ಕೆ ಒಡೆಯನಾದ, ವೈಶ್ವಾನರನಾದ, ಶ್ರೇಷ್ಠಸ್ಥಳಗಳಲ್ಲಿರುವ, ಯಜ್ಞದಲ್ಲಿರುವ, ಸೂರ್ಯರೂಪದಿಂದಿರುವ, ನೀರಿನಿಂದ ಹುಟ್ಟಿದ, ಯಜ್ಞಭೋಕ್ತೃವಾಗಿರುವ, ಪರ್ವತದಿಂದ ಹುಟ್ಟಿದ ಪರಮಾತ್ಮನು ಅಧಿಕವಾಗಿ ಯಜ್ಞವನ್ನು ಆಗುಮಾಡಿಸಲಿ" ಎಂಬ ಅರ್ಥದ "ಹಗ್ಂ ಸಃ...." ಎಂಬ ಮಂತ್ರವನ್ನು ಹೇಳುವುದುಂಟು.

೨೦. **ಪ್ರಾಯಶ್ಚಿತ್ತಾರ್ಘ್ಯ ಸಂಕಲ್ಪ ಮತ್ತು ಅರ್ಘ್ಯ :** ಅಕಾಲದಲ್ಲಿ (ಕಾಲಮೀರಿ) ಸಂಧ್ಯಾವಂದನೆಯನ್ನಾಚರಿಸುವಾಗ, ಅದರ ದೋಷ ಪರಿಹಾರಕ್ಕಾಗಿ ಪ್ರಾಯಶ್ಚಿತ್ತಾರ್ಘ್ಯಕೊಡುವೆನೆಂಬ ಸಂಕಲ್ಪಮಾಡಿ; ಇನ್ನೊಮ್ಮೆ ಅರ್ಘ್ಯ ಕೊಡುವುದು. ಈ ಕ್ರಿಯೆಯಲ್ಲಿ ಕೆಲವರು "ಓಂ ಭೂರ್ಭುವಸ್ಸ್ವರ್ಮಹರ್ಜನಸ್ತಪಸ್ಸತ್ಯಂ...." ಎಂಬ ಮಂತ್ರ ಹೇಳುವುದುಂಟು. (ಮಂದೇಹರೆಂಬ ರಾಕ್ಷಸರು ಪ್ರತಿದಿನವೂ ಸಂಧ್ಯಾಸಮಯದಲ್ಲಿ ಸೂರ್ಯನೊಡನೆ ಯುದ್ಧಕ್ಕೆ ಬರುತ್ತಾರೆ. ವಾಲಖಿಲ್ಯರು ಮೂರು ಅರ್ಘ್ಯವನ್ನು ಬಿಟ್ಟು ಅವರನ್ನು ನಾಶ ಮಾಡುತ್ತಾರೆ. ಸೂರ್ಯನು ಎಲ್ಲರನ್ನೂ ಕಾಪಾಡುತ್ತಾನೆಂಬುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂದಿನಿಂದ ಬೆಳೆದು ಬಂದ ನಂಬಿಕೆ. ಅದರಂತೆ ದ್ವಿಜರೆಲ್ಲರೂ ಸಂಧ್ಯೋಪಾಸನೆಯ ಸಮಯದಲ್ಲಿ ಸೂರ್ಯನಿಗೆ ಅರ್ಘ್ಯ ನೀಡುವ ಕ್ರಮ ನಡೆದು ಬಂದಿದೆ.)

೨೧. **ಆಚಮನ :** (ಈ ಮೊದಲು ಸೂಚಿಸಿರುವಂತೆ)

೨೨. **ತರ್ಪಣ :** ಉಪಕಾರ ಮಾಡಿದವರಿಗೆ ಕೃತಜ್ಞತೆಯಿಂದ ಪ್ರತ್ಯುಪಕಾರ ಮಾಡುವುದು ಪ್ರಕೃತಿ ಸಹಜವಾದ ಗುಣ. ನಮ್ಮಲ್ಲಿ ಅಂತರ್ಗತವಾಗಿರುವ ಆತ್ಮದ ಆನಂದಾನುಭವಕ್ಕೆ ಸಹಾಯಕವಾಗಿ ನಮಗೆ ಅವರ್ಣನೀಯವಾದಷ್ಟು ನೆರವು ನೀಡಿರುವ ಪರಮಾತ್ಮತತ್ತ್ವ, ಪೃಥ್ವಿ, ಋಷಿಮುನಿಗಳು, ಮಾತಾಪಿತೃಗಳು ಮುಂತಾದವರಿಗೆಲ್ಲ ಕೃತಜ್ಞತೆಯ ಕುರುಹಾಗಿ ಪ್ರತಿದಿನವೂ ತ್ರಿಕಾಲದಲ್ಲಿ ತರ್ಪಣ ನೀಡುವುದು ದ್ವಿಜರೆಲ್ಲರ ಪ್ರಥಮ ಕರ್ತವ್ಯ. ಇದೂ ಕೂಡ ಹಿಂದಿನಿಂದಲೂ ನಡೆದು ಬಂದಿರುವ ಪರಂಪರೆ. ಭೂ, ಭುವಃ, ಸ್ವಃ, ಭೂರ್ಭುವಸ್ವಃ, ಗಾಯತ್ರೀ, ಸಾವಿತ್ರೀ, ಸರಸ್ವತೀ, ನಾರಾಯಣ, ಶಿವ, ಮುಂತಾದವರಿಗೆಲ್ಲ ನಮಸ್ಕರಿಸಿ ತರ್ಪಣ ನೀಡುತ್ತೇನೆ ಎಂಬ ಅರ್ಥದ "ಓಂ ಭೂಸ್ತರ್ಪಯಾಮಿ......." ಎಂಬ ಮಂತ್ರವನ್ನು ಹೇಳಿಕೊಂಡು ತರ್ಪಣ ನೀಡುವುದು. ಇದರೊಂದಿಗೆ ತಮ್ಮ ತಮ್ಮ ಸಂಪ್ರದಾಯಬದ್ಧವಾಗಿ ರೂಢಿಯಲ್ಲಿರುವಂತೆ ಇತರ ದೇವ ದೇವತೆಗಳಿಗೂ ಋಷಿ ಮುನಿಗಳಿಗೂ ತರ್ಪಣ ನೀಡುವುದು.

೨೩. **ಆಚಮನ :** (ಈ ಮೊದಲು ಸೂಚಿಸಿರುವಂತೆ)

೨೪. **ಗಾಯತ್ರೀ ಪ್ರಾರ್ಥನೆ :** "ಗಾಯತ್ರೀದೇವಿಯೇ ಮತ್ತೆ ಹಿಂತಿರುಗಿ ಬರುವುದಕ್ಕಾಗಿ ಮೇಲೇಳು. ಸಾವಿತ್ರೀದೇವಿಯೇ ತೃಪ್ತಿಗಾಗಿ ನನ್ನ ಹೃದಯವನ್ನು ಪ್ರವೇಶಿಸು" ಎಂಬ ಅರ್ಥದ "ಉತ್ತಿಷ್ಠ ದೇವಿಗಂತವ್ಯಂ...." ಎಂಬ ಮಂತ್ರವನ್ನು ಹೇಳುತ್ತ ಬಲಗೈ ಹಸ್ತವನ್ನು ಸೂರ್ಯಭಗವಾನನ ಎದುರು ತೋರಿಸಿ, ಹೃದಯವನ್ನು ಸ್ಪರ್ಶಿಸಿ ; ಸೂರ್ಯಮಂಡಲವಾಸಿನಿಯಾದ ಗಾಯತ್ರೀದೇವಿಯು ನಮ್ಮ ಶರೀರವನ್ನು ಪ್ರವೇಶಿಸಿ, ಹೃದಯಾಕಾಶದಲ್ಲಿ ಪ್ರಕಾಶಮಾನಳಾಗಿರುವಳೆಂಬ ಭಾವನೆಯಿಂದ "ತೇಜೋಽಸಿ । ತೇಜೋಮಯಿ ಧೇಹಿ । ಓಂ ಭೂರ್ಭುವಸ್ಸುವಃ॥ ಅನಾವಾದಿತಾಶ್ಯ ಬ್ರಹ್ಮ ॥" ಎಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂತ್ರವನ್ನು ಹೇಳುತ್ತ ಉದ್ಧರಣೆಯಿಂದ ಬಲಹಸ್ತಕ್ಕೆ, ನೀರನ್ನು ಹಾಕಿಕೊಂಡು ಪ್ರದಕ್ಷಿಣೆ ತಿರುಗಿ, ಆ ನೀರನ್ನು ತಲೆಯ ಸುತ್ತಲೂ ಸಂತ್ರಿಸಿ ನೆಲಕ್ಕೆ ಬಿಡುವುದು.

೨೫. ಭೂ ಪ್ರಾರ್ಥನೆ : "ವಿಷ್ಣುಶಕ್ತಿಯಿಂದ ಕೂಡಿದವಳೂ ಎಲ್ಲ ರೀತಿಯ ಬಣ್ಣಗಳನ್ನುಳ್ಳವಳೂ, ಪೃಥ್ವೀರೂಪಳೂ, ಅನೇಕ ರತ್ನಗಳಿಗೆ ಆಕರಳೂ ಆದ ಭೂದೇವಿಯೇ ನಿನಗೆ ನಮಸ್ಕಾರವು. ಭೂತಗಳು-ಭೂಮಿಯಲ್ಲಿರುವ ಭೂತಗಳು, ವಿಘ್ನವನ್ನುಂಟುಮಾಡುವ ಭೂತಗಳು ಯಾವುವಿವೆಯೋ ಅವುಗಳೆಲ್ಲವೂ ಪರಮೇಶ್ವರನ ಅಪ್ಪಣೆಯಂತೆ ನಾಶವಾಗಲಿ. ಭೂಭಾರವಾಗಿರುವ, ಸಹಚರರಿಂದ ಕೂಡಿರುವ, ಪ್ರೇತಪಿಶಾಚಾದಿಗಳು ಇಲ್ಲಿಂದ ದೂರಹೋಗಲಿ. ಎಲ್ಲರಿಗೂ ವಿರೋಧವಿಲ್ಲದಂತೆ ಬ್ರಹ್ಮಕರ್ಮವನ್ನು ಪ್ರಾರಂಭಿಸುತ್ತೇನೆ. ಭೂಮಿಯೊಳಗಿರುವ ಭೂತಗಳು ಹಾರಿಹೋಗಲಿ, ಭೂದೇವಿಯೇ ನಿನ್ನಿಂದ ಲೋಕಗಳು ಧರಿಸಲ್ಪಟ್ಟಿವೆ. ವಿಷ್ಣುವು ನಿನ್ನನ್ನು ಧರಿಸಿದ್ದಾನೆ. ನೀನು ನನ್ನನ್ನು ಧರಿಸು. ಆಸನವನ್ನು ಪವಿತ್ರವನ್ನಾಗಿಸು" ಎಂಬ ಅರ್ಥದ "ವಿಷ್ಣುಶಕ್ತಿ ಸಮೋಪೇತೇ...." ಎಂಬ ಮಂತ್ರವನ್ನು ಹೇಳಿ ಭೂದೇವಿಯ ಪ್ರಾರ್ಥನೆ, ಭೂತೋಚ್ಚಾಟನೆ ಹಾಗೂ ಸ್ಥಳ ಶುದ್ಧಿಯನ್ನು ಮಾಡುವುದು (ಭೂಪ್ರಾರ್ಥನೆಯ ಸಮಯದಲ್ಲಿ ಉಟ್ಟಬಟ್ಟೆಯಿಂದ ಒಂದು ನೂಲನ್ನು ತೆಗೆದು ಭೂಸ್ಪರ್ಶ ಮಾಡಿ ಆಸನದ ಕೆಳಗೆ ಹಾಕುವುದು),

೨೬. ಆಸನ ಕಲ್ಪನೆ ; ಗುರುದೇವತಾ ನಮಸ್ಕಾರ : 'ಲಂ' ಎಂಬ ಬೀಜಾಕ್ಷರವನ್ನುಚ್ಚರಿಸುತ್ತ ಪೃಥ್ವಿಗೆವಂದಿಸಿ, ಆಸನವನ್ನು ಕಲ್ಪಿಸಿಕೊಳ್ಳುವುದು. ವಿಮಲ, ಕಮಲ, ಯೋಗ, ಕೂರ್ಮ, ಮಧ್ಯ ಹಾಗೂ ಪರಮ ಸುಖಾಸನಗಳಿಗೆ ವಂದಿಸುವುದು. ಗುಂ, ಗಂ, ಕ್ಷಂ, ಸಂ, ಅಂ, ಪಂ, ಓಂ ಹ್ರೀಂ ಎಂಬ ಬೀಜಾಕ್ಷರಯುಕ್ತವಾದ ಗುರು, ಗಣಪತಿ, ಕ್ಷೇತ್ರಪಾಲ, ಸರಸ್ವತಿ, ಆತ್ಮ ಪರಮಾತ್ಮ ಹಾಗೂ ಜ್ಞಾನಾತ್ಮರಿಗೆ ನಮಸ್ಕರಿಸುವುದು. ಸಹಸ್ರದಳ ಕಮಲದಲ್ಲಿರುವ ಸ್ವಗುರುವನ್ನು ಧ್ಯಾನಿಸಿ ವಂದಿಸುವುದು. ಬ್ರಹ್ಮನೇ ಆದಿಯಾಗಿ ಎಲ್ಲ ಗುರುಗಳ ಪಾದ ಕಮಲಗಳಿಗೂ ನಮಸ್ಕರಿಸುವುದು.

೨೭. ಆಚಮನ : (ಈ ಮೊದಲು ಸೂಚಿಸಿರುವಂತೆ)

Sri Vidyabharathi Book Centre, Sringeri

CC-O. In Public Domain. Digitized by eGangotri

೨೮. ಗಾಯತ್ರೀ ಹೃದಯ : ಪ್ರತಿಯೊಂದು ವೇದಮಂತ್ರಗಳಿಗೂ ಮಂತ್ರದ್ರಷ್ಟಾರನಾದ ಋಷಿ, ಛಂದಸ್ಸು, ದೇವತೆ, ಬೀಜಾಕ್ಷರ, ಶಕ್ತಿ, ವರ್ಣ, ತತ್ತ್ವ, ಸ್ವರ, ಆತ್ಮ, ವಿನಿಯೋಗ ಮುಂತಾದುವಿರುತ್ತವೆ. ಅವುಗಳನ್ನು ತಿಳಿದು ಸ್ಮರಿಸದಿದ್ದರೆ ಮಂತ್ರಪಠಣದಿಂದ ಶಾಸ್ತ್ರೋಕ್ತವಾದ ಫಲ ಸಿಗದೆಂಬ ಹೇಳಿಕೆ ಇದೆ. ಗಾಯತ್ರೀ ಮಹಾಮಂತ್ರವು ಸರ್ವವೇದಗಳ ಸಾರ, 'ವೇದ ಜನನಿ. ಇದಕ್ಕೆ ವಿಶ್ವಾಮಿತ್ರರು ಋಷಿ. ಗಾಯತ್ರೀ ಛಂದಸ್ಸು, ಸವಿತಾ ದೇವತೆ ಸಾಯುಜ್ಯಕ್ಕೆ ಇದರ ವಿನಿಯೋಗ. ಇವುಗಳನ್ನೆಲ್ಲ ಸೂಚಿಸುವ "ಓಂ ಇತ್ಯೇಕಾಕ್ಷರಂ ಬ್ರಹ್ಮ....ಅಥವಾ ಪ್ರಣವಸ್ಯ ಬ್ರಹ್ಮಾ ಋಷಿಃ...." ಎಂಬ ಮಂತ್ರವನ್ನು ಸಂಪ್ರದಾಯಾನುಸಾರ ಹೇಳುವುದು. (ಗಾಯತ್ರೀ ಮಹಾಮಂತ್ರದಲ್ಲಿ ಇಪ್ಪತ್ನಾಲ್ಕು ವರ್ಣಗಳಿವೆ. ಪ್ರತಿಯೊಂದು ವರ್ಣಕ್ಕೂ ಅದರದೇ ಆದ ಋಷಿ, ಛಂದಸ್ಸು, ದೇವತೆ, ಬೀಜಾಕ್ಷರ, ಶಕ್ತಿ, ವರ್ಣ, ತತ್ತ್ವ, ಸ್ವರ, ಆತ್ಮ, ವಿನಿಯೋಗ ಮೊದಲಾದುವುಗಳಿರುತ್ತವೆ. ವಸಿಷ್ಠ, ಭಾರದ್ವಾಜ, ಗೌತಮ, ಭೃಗು, ಶಾಂಡಿಲ್ಯ, ರೋಹಿತ, ಗರ್ಗ, ಶಾತಾತಪ, ಸನತ್ಕುಮಾರ, ಕಶ್ಯಪ, ಅತ್ರಿ, ಭಾರ್ಗವ, ಪರಾಶರ, ಪುಂಡರೀಕ, ಕ್ಷತು, ದಕ್ಷಪ್ರಜಾಪತಿ, ಆಂಗೀರಸ, ಕಾರ್ತಿಕೇಯ, ಮುದ್ಗಲ, ಉಶನಾ, ರೋಮಶ, ಮೃಗ, ಅಗಸ್ತ್ಯ, ವಿಶ್ವಾಮಿತ್ರ ಎಂಬ ಇಪ್ಪತ್ನಾಲ್ಕು ಜನ ಋಷಿಗಳೇ ಕ್ರಮವಾಗಿ 'ತತ್' ಕಾರ ದಿಂದ 'ಯಾತ್' ಕಾರದವರೆವಿಗೂ ಇರುವ ಇಪ್ಪತ್ನಾಲ್ಕು ವರ್ಣಗಳ ಮಂತ್ರ ದೃಷ್ಟಾರರು. ಇದೇ ರೀತಿಯಲ್ಲಿ ಉಳಿದ ಅಂಶಗಳೂ ಸಾಧಕರಿಗೆ ಅಗತ್ಯವಾಗಿ ತಿಳಿದಿರಲೇಬೇಕಾದವುಗಳಾಗಿವೆ).

೨೯. ಆಹ್ವಾನ; ಆವಾಹನೆ: ಸರ್ವಶಕ್ತಳಾದ ಗಾಯತ್ರೀದೇವಿಯನ್ನು ಕುರಿತು...ವರವನ್ನು ಕೊಡುವ ಗಾಯತ್ರೀದೇವಿಯು ಬರಲಿ. ನಾಶರಹಿತ ವಾದ, ಪ್ರಮಾಣದಿಂದ ನಿಶ್ಚಿತವಾದ ಬ್ರಹ್ಮವು ಅವಳಾಗಿದ್ದಾಳೆ. ವೇದಗಳ ಉತ್ಪತ್ತಿಗೆ ಕಾರಣಳಾದ ಗಾಯತ್ರಿಯು ಈ ನನ್ನ ವೇದಸ್ತೋತ್ರವನ್ನು ಕೇಳಲಿ. ಹಗಲಿನಲ್ಲಿ ಮಾಡಿದ ಪಾಪವು ಹಗಲಿನಲ್ಲಿಯೇ ಹೋಗಲೀ. ರಾತ್ರಿಯಲ್ಲಿ ಮಾಡಿದ ಪಾಪವು ರಾತ್ರಿಯಲ್ಲಿಯೇ ಹೋಗಲೀ. ಎಲ್ಲ ವರ್ಣಗಳ ಮಹಾ ದೇವಿಯಾದ ಸಂಧ್ಯಾವಿದ್ಯೆಯಾದ ಸರಸ್ವತಿಯೇ, ಓ ಗಾಯತ್ರೀ ; ನೀನು ಇಂದ್ರಿಯಗಳ ಶಕ್ತಿಯಾಗಿದ್ದೀಯೆ, ಪ್ರಕಾಶರೂಪಳಾಗಿದ್ದೀಯೆ. ದೇವತೆಗಳ ವಾಸಸ್ಥಾನಳಾಗಿರುವೆ. ಈ ಜಗತ್ತೇ ನೀನಾಗಿದ್ದೀಯೆ. ಭೂರ್ಭುವಃ ಸ್ವರೂಪ

Sri Vidyadharathi Book Centre, Sringeri

CC-O. In Public Domain. Digitized by eGangotri

ಳಾಗಿದ್ದೀಯೆ. ಸರ್ವವೂ ಆಗಿರುವೆ. ಸರ್ವಪ್ರಾಣಿಗಳ ಆಯುಸ್ಸಾಗಿದ್ದೀಯೆ. ಸಮಸ್ತಪಾಪಗಳನ್ನೂ ಹೋಗಲಾಡಿಸುವವಳಾಗಿದ್ದೀಯೆ. ಓಂಕಾರವು ಪ್ರತಿಪಾದಿಸುವ ಪರಬ್ರಹ್ಮಳಾಗಿದ್ದೀಯೆ. ನಿನ್ನನ್ನು ನನ್ನ ಹೃದಯದಲ್ಲಿ ಆವಾಹಿಸುತ್ತೇನೆ. ಸಾವಿತ್ರೀ, ಸರಸ್ವತೀ, ಹಾಗೂ ಛಂದೋರೂಪಳಾದ ನಿನ್ನನ್ನು ನನ್ನ ಹೃದಯದಲ್ಲಿ ಆವಾಹನೆಮಾಡುತ್ತೇನೆ. ಗಾಯತ್ರೀ ಮಂತ್ರವು ಗಾಯತ್ರೀ ಛಂದಸ್ಸಿನಲ್ಲಿದೆ. ಇದನ್ನು ಕಂಡುಹಿಡಿದವರು ವಿಶ್ವಾಮಿತ್ರ ಋಷಿಗಳು. ಪರಮಾತ್ಮನ ವ್ಯಕ್ತಸ್ವರೂಪನಾದ ಸೂರ್ಯನಾರಾಯಣನು ಈ ಮಂತ್ರದ ದೇವತೆ. ಈ ದೇವತೆಗೆ ಅಗ್ನಿಯೇ ಮುಖವು, ಚತುರ್ಮುಖ ಬ್ರಹ್ಮನೇ ಶಿರಸ್ಸು. ವಿಷ್ಣುವು ಹೃದಯ, ಈಶ್ವರನು ಹಣೆ, ವೇದಗಳೇ ಜುಟ್ಟುಗಳು. ಮೂರು ಲೋಕಗಳೇ ಪಾದಗಳು. ಭೂಮಿಯು ಹೊಕ್ಕಳು. ಬಿಳಿಯ ಬಣ್ಣ. ಸೂರ್ಯ ಕವಚ. ಚಂದ್ರನು ಕಣ್ಣು. ಸಾಂಖ್ಯಾಯನಸವೆಂಬ ಗೋತ್ರ. ಉದಾತ್ತ ಸ್ವರವು. ಪರಂಜ್ಯೋತಿಯೇ ಇದರ ಸ್ವರೂಪ. ಇಂಥ ಗಾಯತ್ರೀಮಂತ್ರವನ್ನು ಜಪಮಾಡುತ್ತೇವೆ" ಎಂಬ ಅರ್ಥವನ್ನುಳ್ಳ "ಆಯಾತು ವರದಾದೇವಿ...." ಎಂಬ ಮಂತ್ರವನ್ನು ಹೇಳುವುದು. ('ಸಾಂಖ್ಯಾಯನಸವೆಂಬ ಗೋತ್ರ' ಎಂದಾದನಂತರ "ಗಾಯತ್ರೀ ಚತುರ್ವಿಗ್ಂ ಶತ್ಯಕ್ಷರಾತ್ರಿಪದಾಷಟ್ಕುಕ್ಷಿಃ ಪಂಚಶೀರ್ಷೋಪನಯನೇ ವಿನಿಯೋಗಃ" ಎಂದೂ ಹೇಳುವುದುಂಟು).

೩೦. ಆಚಮನ : (ಈ ಮೊದಲು ಸೂಚಿಸಿರುವಂತೆ)

೩೧. ಪ್ರಾಣಾಯಾಮ : (ಈ ಮೊದಲು ಸೂಚಿಸಿರುವಂತೆ)

೩೨. ಸಂಕಲ್ಪ : "ನಾನು ಮಾಡಿರುವ ಪಾಪರಾಶಿಗಳೆಲ್ಲವನ್ನೂ ನಾಶಮಾಡುವ ಮೂಲಕ, ಸರ್ವಶಕ್ತನಾದ ಭಗವಂತನಿಗೆ ಪ್ರಿಯವನ್ನುಂಟುಮಾಡುವುದಕ್ಕಾಗಿ; ಅವನ ಅಪ್ಪಣೆಯಂತೆ ಬೆಳಗಿನ/ಮಧ್ಯಾಹ್ನದ/ಸಾಯಂಕಾಲದ ಸಂಧ್ಯೋಪಾಸನೆಯಲ್ಲಿ ನನಗೆ ಸಾಧ್ಯವಿರುವಷ್ಟು ಗಾಯತ್ರೀ ಮಹಾಮಂತ್ರದ ಜಪಮಾಡುತ್ತೇನೆ" ಎಂಬ ಅರ್ಥದ "ಮಮೋಪಾತ್ತ...." ಎಂಬ ಸಂಕಲ್ಪ ಮಂತ್ರವನ್ನು ಹೇಳುವುದು.

೩೩. ಕರನ್ಯಾಸ; ಹೃದಯಾದಿನ್ಯಾಸ (ಅಂಗನ್ಯಾಸ) : ನ್ಯಾಸವೆಂದರೆ ಮುಂದೈ ಎಂದರ್ಥ, ವಶಕ್ಕೊಪ್ಪಿಸುವುದು, ಇಡುವುದು, ಎಂದೂ ಅರ್ಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಂಟು. ಬೆರಳುಗಳಲ್ಲಿ ಹಾಗೂ ಹೃದಯಾದಿಗಳಲ್ಲಿ ಮಂತ್ರಾಕ್ಷರಗಳನ್ನಿಡುವ ಈ ಕ್ರಿಯೆಯನ್ನು ಕರನ್ಯಾಸ; ಹೃದಯಾದಿನ್ಯಾಸ (ಅಂಗನ್ಯಾಸ) ಎಂದೂ ಸೂಚಿಸಲಾಗುತ್ತದೆ.

"ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಮತ್ತು ಸತ್ಯ ಈ ಎಲ್ಲವು ಗಳ ಸ್ವರೂಪನಾದ ಪರಮಾತ್ಮ ಅಥವಾ ಸೂರ್ಯನಾರಾಯಣನೇ ಗಾಯತ್ರೀ ದೇವತಾ. ಈ ದೇವತೆಗೆ ಅಂಗುಷ್ಠ, ತರ್ಜನೀ ಮಧ್ಯಮಾ, ಅನಾಮಿಕ, ಕನಿಷ್ಠಿಕಾ ಮೊದಲಾದ ಐದು ಬೆರಳು ಹಾಗೂ ಹೃದಯ, ಶಿರಸ್ಸು, ಶಿಖೆ, ಕವಚ, ತ್ರಿನೇತ್ರ ಮುಂತಾದ ಅಂಗಗಳಿಗೆ ಗೌರವಪೂರ್ವಕವಾದ ನಮಸ್ಕಾರ ಗಳು" ಎಂಬ ತಾತ್ಪರ್ಯವಿರುವ.... "ತತ್ಸವಿತುಃ ಬ್ರಹ್ಮಾತ್ಮನೇ... ಎಂಬ ಲ್ಲಿಂದ....ದಿಗ್ಬಂಧಃ" ಎಂಬಲ್ಲಿಯವರೆವಿಗೂ ಮಂತ್ರಗಳನ್ನು ಹೇಳುತ್ತಾ.... ಒಂದೊಂದು ಮಂತ್ರಕ್ಕೂ ಕ್ರಮವಾಗಿ ಎರಡೂ ಕೈಗಳ ತರ್ಜನಿ (ತೋರು) ಬೆರಳ ತುದಿಯಿಂದ ಎರಡೂ ಕೈಗಳ ಅಂಗುಷ್ಠವನ್ನು ಬುಡದಿಂದ ತುದಿಯ ವರೆವಿಗೆ; ಇದೇ ಕ್ರಮದಲ್ಲಿ ಪ್ರತಿಸಲವೂ ಹೆಬ್ಬೆರಳ ತುದಿಯಿಂದ ತರ್ಜನೀ, ಮಧ್ಯಮ, ಅನಾಮಿಕ ಹಾಗೂ ಕಿರುಬೆರಳನ್ನು ಬುಡದಿಂದ ತುದಿಯವರೆವಿಗೆ ಸವರಿ; "ಓಂ ಪ್ರಚೋದಯಾತ್ಸರ್ವಾತ್ಮನೇ ಕರತಲ ಪೃಷ್ಠಾಭ್ಯಾಂ ನಮಃ" ಎಂಬ ಮಂತ್ರಕ್ಕೆ ಬಲ ಅಂಗೈಯಿಂದ ಎಡಹಸ್ತದ ಬೆನ್ನು, ಎಡ ಅಂಗೈಯಿಂದ ಬಲಹಸ್ತದ ಬೆನ್ನನ್ನು ಸವರುವುದು. ಇದು ಕರನ್ಯಾಸವೆನಿಸುತ್ತದೆ. ಇದೇ ರೀತಿ ಅಂಗನ್ಯಾಸದ ಆರು ಮಂತ್ರಗಳಿಗೆ ಕ್ರಮವಾಗಿ ಬಲಗೈನ ಹೆಬ್ಬೆರಳನ್ನು ಅನಾಮಿಕ ಮತ್ತು ಮಧ್ಯದ ಬೆರಳುಗಳ ನಡುವೆ ತುರುಕಿ ಕೈಮುಷ್ಟಿಮಾಡಿ ಕೊಂಡು ಹೃದಯವನ್ನು ಮುಟ್ಟಿಕೊಳ್ಳುವುದು. ತರ್ಜನೀ ಅಂಗುಷ್ಠ ಬೆರಳು ಗಳ ತುದಿಯನ್ನು ಕೂಡಿಸಿ ಉಳಿದ ಬೆರಳುಗಳನ್ನು ಮುಷ್ಟಿಮಾಡಿ ತಲೆಯನ್ನು ಮುಟ್ಟಿಕೊಳ್ಳುವುದು. ಬಲಗೈ ಹೆಬ್ಬೆರಳು ನೆಟ್ಟಗೆ ನಿಲ್ಲಿಸಿ, ಕೈಮುಷ್ಟಿಮಾಡಿ ತಲೆಯ ಹಿಂದೆ ಜುಟ್ಟಿನಂತೆ ನಿಲ್ಲಿಸುವುದು. ಹೆಬ್ಬೆರಳು ಮತ್ತು ತರ್ಜನೀ ಬೆರಳುಗಳ ತುದಿ ಮುಟ್ಟಿಸಿ, ಉಳಿದ ಬೆರಳುಗಳನ್ನು ಮಡಚದೇ ಏಕಕಾಲದಲ್ಲಿ ಬಲಗೈಯಿಂದ ಎಡಕುಚದ ತುದಿ ಹಾಗೂ ಎಡಗೈಯಿಂದ ಬಲಕುಚದ ತುದಿ ಯನ್ನು ಮುಟ್ಟುವುದು. ಬಲ ತರ್ಜನಿ ಬೆರಳಿಂದ ಬಲಗಣ್ಣು ಹಾಗೂ ನಡು ಬೆರಳ ತುದಿಯಿಂದ ಹುಬ್ಬುಗಳ ಮಧ್ಯೆ ಮತ್ತು ಅನಾಮಿಕ ಬೆರಳಿಂದ ಎಡ ಕಣ್ಣನ್ನು ಮುಟ್ಟುವುದು. ಬಲಗೈಯಿಂದ ಬೆನ್ನ ಮೇಲಿನ ಬತ್ತಳಿಕೆಯಿಂದ ಬಾಣತೆಗೆದಂತೆ ತಲೆಯಸುತ್ತ ಒಂದು ಪ್ರದಕ್ಷಿಣೆ ತಂದು, ಎಡಗೈಯಿಂದ ಬಿಲ್ಲಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಗ್ಗ ಬಲಗೈಯಿಂದ ಎಳೆದಂಬಿಟ್ಟಂತೆ ಮಾಡಿ ಒಂದು ಚಿಟಿಕೆ ಹೊಡೆದು ಶಬ್ದವಾಗುವಂತೆ ಒಮ್ಮೆ ಚಪ್ಪಾಳೆ ತಟ್ಟಬೇಕು. ಇಲ್ಲಿಗೆ ಹೃದಯಾದಿನ್ಯಾಸ ಮುಗಿಯುವುದು. (ಇದಾದ ನಂತರ ಧ್ಯಾನ ನೂರೆಂಟು ಹಾಗೂ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜಪಮಾಡುವವರು ಮಾತ್ರ "ಇತಿ ದಿಗ್ಬಂಧಃ" ಎಂದು ದಿಗ್ಬಂಧನ ಮಾಡಿಕೊಂಡು ಜಪಮುಗಿದನಂತರ ಕರನ್ಯಾಸ, ಹೃದಯಾದಿನ್ಯಾಸಗಳನ್ನು ಮಾಡಿ "ಇತಿ ದಿಗ್ವಿಮೋಕಃ" ಎಂಬ ಮಂತ್ರದಿಂದ ದಿಗ್ಬಂಧ ವಿಮೋಚನೆ ಮಾಡಿಕೊಳ್ಳಲಾಗುವುದು. ಉಳಿದವರು ದಿಗ್ಬಂಧ ಹಾಗೂ ದಿಗ್ಬಂಧ ವಿಮೋಚನೆ ಹೇಳುವ ಅಗತ್ಯವಿಲ್ಲ. ಈ ಸನ್ನಿವೇಶದಲ್ಲಿ ಬೇರೆ ಬೇರೆ ಸಂಪ್ರದಾಯದವರು ತಮ್ಮದೇ ಆದ ಕ್ರಮದಲ್ಲಿ ದಿಗ್ಬಂದ ಹಾಗೂ ದಿಗ್ಬಂಧ ವಿಮೋಚನೆ ಮಾಡುವ ಕ್ರಮವಿದೆ. ಇಲ್ಲಿ ಸೂಚಿಸಿರುವ ಕ್ರಮವು ಸರ್ವತ್ರ ಆಚರಣೆಗೆ ಯುಕ್ತವೂ ಸರಳವೂ, ಅರ್ಥಪೂರ್ಣವೂ ಆಗಿದೆ).

೩೪. ದಿಗ್ಬಂಧ : "ಓಂ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ" ಎಂಬ ಮಂತ್ರದೊಂದಿಗೆ ಕೈಮುಗಿದು ಎಡಹಸ್ತದ ಮೇಲೆ ಬಲಹಸ್ತ ಮುಚ್ಚಿ ಬಲ ತೊಡೆಯ ಮೇಲಿರಿಸಿಕೊಳ್ಳುವುದು.

೩೫. ಧ್ಯಾನ : "ಮುತ್ತು, ಹವಳ, ಚಿನ್ನ, ನೀಲ, ಬಿಳುಪು ಇವುಗಳ ಛಾಯೆಯುಳ್ಳ, ಮೂರು ಕಣ್ಣುಳ್ಳ ಮುಖಗಳಿಂದ ಕೂಡಿದ, ಚಂದ್ರನನ್ನೂ ಸೇರಿಸಿದ ರತ್ನಮಯವಾದ ಕಿರೀಟವುಳ್ಳ, ಪರಮಾರ್ಥತತ್ತ್ವವನ್ನು ತಿಳಿಸುವ ಓಂಕಾರ ಸ್ವರೂಪಳಾದ; ವರ, ಅಭಯ, ಅಂಕುಶ, ಛಾಟಿ, ಬಿಳಿಯ ಕಪಾಲ, ಹಗ್ಗ, ಶಂಖ, ಚಕ್ರ, ಗದೆ, ಎರಡು ಕಮಲ ಇವುಗಳನ್ನು ಕೈಗಳಲ್ಲಿ ಹಿಡಿದುಕೊಂಡಿರುವ ಗಾಯತ್ರೀದೇವಿಯನ್ನು ಭಜಿಸುತ್ತೇನೆ. ಎಂಬ ಅರ್ಥವನ್ನುಳ್ಳ ಮುಕ್ತಾ ವಿದ್ರುಮ....ಎಂಬ ಧ್ಯಾನ ಶ್ಲೋಕವನ್ನಾಗಲೀ ಅಥವಾ "ಬಿಳುಪು, ಅರಿಸಿನ, ಕಪ್ಪು, ರಕ್ತ ಹಾಗೂ ನೀಲಿ ಬಣ್ಣದ ಐದು ಮುಖಗಳು, ಅನೇಕ ರತ್ನಗಳು ಹಾಗೂ ಚಂದ್ರಶಿಲೆಯಿಂದ ಶೋಭಿಸುವ ಕಿರೀಟ, ಅದರ ಕಿರಣಗಳಲ್ಲಿ ಶೋಭಿಸುವ ಗಾಯಂತ್ರೀ ಮಂತ್ರದ ಇಪ್ಪತ್ನಾಲ್ಕು ಅಕ್ಷರಗಳೇ ದೇಹ, ಕಮಲ, ವರದ, ಅಭಯ ಚಿಹ್ನೆ, ಚಕ್ರ, ಶಂಖ, ಹಗ್ಗ, ಕಪಾಲ ಪಾಶ ಮತ್ತು ಅಂಕುಶಗಳಿರುವ ಗಾಯಂತ್ರಿಯು ಸಂಸಾರ ಭಯವನ್ನು ನೀಗುವವಳಾಗಲೀ" ಎಂಬ ಅರ್ಥವನ್ನುಳ್ಳ "ಮಂದಾರಾಭ್ಯಯಂ..." ಎಂಬ ಧ್ಯಾನಶ್ಲೋಕವನ್ನಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಲೀ ಅಥವಾ ಸಂಪ್ರದಾಯಾನುಸಾರ ಹೇಳುವ ಬೇರೆ ಬೇರೆ ಧ್ಯಾನಶ್ಲೋಕವನ್ನಾಗಲೀ ಹೇಳುವುದು.

೩೭. ಮುದ್ರಾಪ್ರದರ್ಶನ : ಜಪಾರಂಭ ಮುದ್ರಾಪ್ರದರ್ಶನ ಹಾಗೂ ಜಪಾಂತ್ಯಮುದ್ರಾಪ್ರದರ್ಶನ ಮಾಡದಿದ್ದರೆ ಜಪವು ನಿಷ್ಫಲವಾಗುವುದೆಂಬ ಅಂಶವನ್ನು ಕೆಲವು ಸೂತ್ರಗಳವರು ಸೂಚಿಸಿರುತ್ತಾರೆ. ಆದರೆ ವಿವರಣೆ ನೀಡುವಾಗ ಮಾತ್ರ "ಮುದ್ರಾವಿನ್ಯಾಸ ಕ್ರಮವನ್ನು ತಿಳಿದವರಿಂದ ಕಲಿಯಬೇಕು" ಎಂದು ಸೂಚಿಸಿ ಬಿಡುತ್ತಾರೆ (ಸಂಧ್ಯಾವಂದನೆಯ ಕ್ರಮಕ್ಕೆ ಸಂಬಂಧಿಸಿದಂತೆ ಇತ್ತೀಚಿನ ವರ್ಷಗಳಲ್ಲಿ ಮಹತ್ತರವೆನಿಸುವ ಮಾಹಿತಿ ಗ್ರಂಥ ರಚನೆ ಮಾಡಿರುವ ಕೀರ್ತಿ ಶ್ರೀಮಾನ್ ಬುರುಗನಹಳ್ಳಿ ಭೀಮಸೇನ ಶರ್ಮರಿಗೆ ಸಲ್ಲುತ್ತದೆ. ಹಲವಾರು ಕೃತಿಗಳ ಆಧಾರದಿಂದ ಶ್ರೀಯುತರು ರಚಿಸಿ ಪ್ರಕಟಿಸಿರುವ 'ಸಂಧ್ಯಾ ಸರ್ವಸ್ವಸಾರ' ಎಂಬ ಕೃತಿಯು ಈ ಕ್ಷೇತ್ರದಲ್ಲಿ ಒಂದು ಮಹತ್ವದ ಪ್ರಯತ್ನವೆಂಬುದು ನಿಸ್ಸಂಶಯ. ಇದೇ ರೀತಿ ಈ ಲೇಖಕರು ರಚಿಸಿರುವ 'ಗಾಯತ್ರ್ಯನುಷ್ಠಾನ-ಸಾರಸಂಗ್ರಹ' ಎಂಬ ಕೃತಿಯೂ ಕೂಡ ಗಾಯತ್ರೀ ಮಂತ್ರವಿಚಾರಕ್ಕೆ ಸಂಬಂಧಿಸಿದಂತೆ ಒಂದು ಅಪರೂಪದ ಮಾಹಿತಿಗ್ರಂಥ. ದೇವೀಭಾಗವತದಿಂದಾರಿಸಿ ಇವರು ಸಂಗ್ರಹಿಸಿರುವ ಗಾಯತ್ರೀ ಸಹಸ್ರನಾಮವು ಒಂದು ಮಹತ್ತರವಾದ ಕೊಡುಗೆ. ಶಿವಸಹಸ್ರನಾಮಕ್ಕೆ ಭಾಷ್ಯವನ್ನು ಬರೆದು ಪ್ರಕಟಿಸಿರುವ ಶ್ರೀ ಶ್ರೀಸ್ವಾಮಿ ಹರ್ಷಾನಂದರು ತಾವು ಕೃತಿಯನ್ನು ರಚಿಸಿದ ಸಮಯದಲ್ಲಿ ಪ್ರಚಾರದಲ್ಲಿದ್ದ ಸಹಸ್ರನಾಮಗಳನ್ನು ಸೂಚಿಸುತ್ತ, ವಿಷ್ಣುಸಹಸ್ರನಾಮ, ಲಕ್ಷ್ಮೀಸಹಸ್ರನಾಮ, ಲಲಿತಾಸಹಸ್ರನಾಮ, ಶಿವಸಹಸ್ರನಾಮ ಹಾಗೂ ರಾಮ ಸಹಸ್ರನಾಮವನ್ನು ನಮೂದಿಸಿ, ರಾಮ ಸಹಸ್ರನಾಮವು ತಿಳಿದಿಲ್ಲ ಎಂದು ತಿಳಿಸಿದ್ದಾರೆ. ಇವರೂ ಕೂಡ ಗಾಯತ್ರೀ ಸಹಸ್ರನಾಮದ ಬಗ್ಗೆ ಸೂಚಿಸಿಲ್ಲ. ಇತ್ತೀಚೆಗೆ ಪ್ರಚಾರಕ್ಕೆ ಬಂದಿರುವ ಗಕಾರ ಗಣಪತಿ ಸಹಸ್ರನಾಮದ ಬಗೆಗೂ ಸೂಚಿಸಿಲ್ಲ. ಗಾಯತ್ರೀ ಸಹಸ್ರನಾಮ ಬಗ್ಗೆ ಹೇಳಬೇಕೆಂದರೆ ಇದು ದೇವಿಭಾಗವತಾಂತರ್ಗತವಾದ್ದರಿಂದ ಪ್ರಾಚೀನವಾದ ರಚನೆಯೆಂಬುದು ನಿಶ್ಚಿತ. ಇಲ್ಲಿ ಪ್ರಕೃತವಾಗಿರುವ ವಿಚಾರವೆಂದರೆ ಶ್ರೀ ಭೀಮಸೇನ, ಶರ್ಮರು ರೂಪಿಸಿರುವ ಮಹತ್ತರವಾದ ಗ್ರಂಥದಲ್ಲಿಯೂ ಕೂಡ 'ಮುದ್ರಾಪ್ರದರ್ಶನ'ದ ಪ್ರಕರಣದಲ್ಲಿ ಮುದ್ರಾವಿನ್ಯಾಸದ ಬಗ್ಗೆ ವಿವರಣೆಗಳಿಲ್ಲದಿರುವುದು. ಈ ಕಾರಣದಿಂದಾಗಿ ನಾನು ಕೂಡ ಅದರ ಬಗ್ಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿವರ ಸೂಚಿಸಲು ಸಾಧ್ಯವಾಗಿಲ್ಲ. ಮುಂದೆ ತಿಳಿದವರಾರಾದರೂ ಈ ಬಗ್ಗೆ ಮಾಹಿತಿ ನೀಡಿ ಮಾರ್ಗದರ್ಶನ ಮಾಡಿದಲ್ಲಿ ಮುಂದಿನ ಆವೃತ್ತಿಯಲ್ಲಿ ಅದನ್ನು ಅಳವಡಿಸಲು ಅನುಕೂಲವಾದೀತು.) ಇನ್ನು ಕೆಲವು ಸೂತ್ರಗಳವರಲ್ಲಿ ಮುದ್ರಾದರ್ಶನದ ಪ್ರಸ್ತಾಪವಿರುವುದಿಲ್ಲ. ಜಪಾರಂಭ ಮುದ್ರಾದರ್ಶನದಲ್ಲಿ ಸುಮುಖ, ಸಂಪುಟ, ವಿಸ್ತೃತ, ದ್ವಿಮುಖ, ತ್ರಿಮುಖ, ಚತುಷ್ಕ, ಪಂಚಕ, ಷಣ್ಮುಖ, ಅಧೋಮುಖ ವ್ಯಾಪಕಾಂಜಲಿ, ಶಕಟ, ಯಮಪಾಶ, ಗ್ರಂಥಿತ, ಚೋನ್ಮುಖ, ಉನ್ಮುಖ, ಪ್ರಲಂಬ, ಮುಷ್ಟಿಕ, ಮತ್ಸ್ಯ, ಕೂರ್ಮ, ವರಾಹ, ಸಿಂಹಾಕ್ರಾಂತ, ಮಹಾಕ್ರಾಂತ, ಮುದ್ಗರ, ಪಲ್ಲವ ಎಂಬ ೨೪ ಹೆಸರುಗಳನ್ನುಳ್ಳ ಮುದ್ರಾದರ್ಶನ ಮಾಡಿದಲ್ಲದೇ ಗಾಯತ್ರೀ ಜಪವು ಫಲ ನೀಡದು ಎಂಬ ತಾತ್ಪರ್ಯವಿರುವ "ಸುಮುಖಂ........" ಎಂಬ ಶ್ಲೋಕವನ್ನು ಹೇಳುವುದು.

೩೭. ಮಾನಸಪೂಜೆ : ದೇವತಾರ್ಚನೆ ಮಾಡುವುದರಲ್ಲಿ ನಾಲ್ಕು ಕ್ರಮಗಳಿವೆ. ಪ್ರತಿಮೆಗಳನ್ನಿಟ್ಟು ಭಾವರಹಿತವಾಗಿ ಪೂಜಿಸುವುದು, ಜಪಸ್ತೋತ್ರಾದಿಗಳಿಂದ ಭಕ್ತಿಯುತವಾಗಿ ನಡೆಸುವ ವಿಗ್ರಹಾರಾಧನೆ ಮೊದಲಿನ ಎರಡು ಕ್ರಮಗಳು. ಸಾಕಾರವಾದ ಯಾವುದೇ ರೂಪವನ್ನೂ ಅವಲಂಬಿಸದೆ, ಕೇವಲ ಬೀಜಾಕ್ಷರಗಳಿಂದೊಡಗಿದ ಮಾನಸಪೂಜೆ ಮೂರನೇ ಕ್ರಮ. ಮೊದಲಿನ ಎರಡು ಕ್ರಮಗಳು ಪ್ರಾಥಮಿಕ ಹಂತ. ಮೂರನೇ ಕ್ರಮ ಮಧ್ಯಮ ಹಂತದ್ದು. (ಶ್ರೀ ಶಂಕರ ಭಗವತ್ಪಾದರು ಇದನ್ನೂ ಮೀರಿಸಿದ ಉತ್ತಮ ಹಂತದ ದೇವತಾರಾಧನೆಯ ಕ್ರಮವನ್ನು ವಿವರಿಸಿದ್ದಾರೆ. ಅದೇ "ನಿರ್ಗುಣ ಪೂಜಾ" ಆದರೆ ಇದು ಅತ್ಯುನ್ನತ ಜ್ಞಾನ ಪಡೆದವರಿಗೆ ಮಾತ್ರ ಅನುಸರಿಸಲು ಸಾಧ್ಯವಾಗುವ ಕ್ರಮ) ಅನುಕೂಲದ ದೃಷ್ಟಿಯಿಂದ ನಮ್ಮ ಹಿಂದಿನ ಋಷಿ ಮುನಿಗಳು ಸಂಧ್ಯಾವಂದನೆಯ ಕಾಲದಲ್ಲಿ ಉಪಯೋಗಕ್ಕೆ ಬರುವ ಮಾನಸ ಪೂಜೆಯ ಕ್ರಮವನ್ನು ಸೇರಿಸಿದ್ದಾರೆ.

"ಪೃಥ್ವಿ, ಆಕಾಶ, ವಾಯು, ಅಗ್ನಿ, ಅಮೃತ ಸ್ವರೂಪನೂ ಸರ್ವಾತ್ಮನೂ ಆದ ಪರಮಾತ್ಮನಿಗೆ ಅಥವಾ ಸೂರ್ಯ ನಾರಾಯಣನಿಗೆ ಧೂಪ, ದೀಪ, ನೈವೇದ್ಯಾದಿ ಸರ್ವೋಪಚಾರಗಳನ್ನೂ ಮಾಡಿ ಪ್ರಾರ್ಥಿಸಿ ನಮಸ್ಕರಿಸುತ್ತೇನೆ" ಎಂಬ ಅರ್ಥವನ್ನುಳ್ಳ ಲಂ, ಖಂ, ಯಂ, ರಂ, ಅಂ, ಸಂ" ಎಂಬ ಬೀಜಾಕ್ಷರ ಸಹಿತವಾದ "ಲಂ ಪೃಥ್ವಿಸತ್ತ್ವಾತ್ಮನೇ...." ಮುಂತಾದ ಮಂತ್ರಗಳನ್ನು ಹೇಳುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

೩೮. ಜಪ : "ನಮ್ಮ ಬುದ್ಧಿವೃತ್ತಿಗಳನ್ನು ಒಳ್ಳೆಯ ಮಾರ್ಗದಲ್ಲಿ ಹೋಗುವಂತೆ ಪ್ರೇರಿಸುವ ಆ ಪ್ರಕಾಶಮಾನನಾದ ಪರಮಾತ್ಮನ (ಸೂರ್ಯ ಭಗವಾನನ) ವರಿಸುವುದಕ್ಕೆ ಯೋಗ್ಯವಾದ ಪ್ರಸಿದ್ಧವಾದ ತೇಜಸ್ಸನ್ನು ಧ್ಯಾನಿಸುತ್ತೇವೆ". ಎಂಬ ತಾತ್ಪರ್ಯವನ್ನುಳ್ಳ "ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ । ಧಿಯೋಯೋನಃ ಪ್ರಚೋದಯಾತ್" ಎಂಬ ಗಾಯತ್ರೀ ಮಹಾಮಂತ್ರವನ್ನು ತಮ್ಮ ಶಕ್ತ್ಯಾನುಸಾರ ೮, ೧೦, ೨೦, ೨೮, ೧೦೮. ೧,೦೦೦ ಈ ಕ್ರಮದಲ್ಲಿ ಜಪವನ್ನಾಚರಿಸುವುದು. "ಓಂ ಭೂರ್ಭುವಸ್ಸುವಃ । ಎಂಬುದರಿಂದ ಪ್ರಚೋದಯಾತ್ । ಎಂಬಲ್ಲಿಯವರೆವಿಗೂ ಪೂರ್ಣ ಪಾಠವನ್ನು ಜಪಿಸುವುದು ಕೆಲವರ ಕ್ರಮವಾದರೆ ಈ ಪೂರ್ಣಪಾಠವು ಗಾಯತ್ರೀ ಮಂತ್ರೋಪದೇಶದ ಕಾಲದಲ್ಲಿ ಮಾತ್ರ ಬರುತ್ತದೆ; ಜಪ ಹಾಗೂ ಹೋಮದಲ್ಲಿ 'ಭೂರ್ಭುವಸ್ಸುವಃ' ಎಂಬ ಪಾದ ಬರುವುದಿಲ್ಲ. ಸಂಧ್ಯಾ ವಂದನೆಯ ಜಪ ಸಂಕಲ್ಪದಲ್ಲಿ "ಚತುರ್ವಿಂಶತ್ಯಕ್ಷರಾ ತ್ರಿಪದಾ...." ಎಂದೇ ಹೇಳುವ ಕಾರಣದಿಂದ ಜಪಕಾಲದಲ್ಲಿ ಗಾಯತ್ರಿ ಮಂತ್ರದ ಭಾಗವನ್ನು ಆಯ್ಕೆ ಮಾಡಿಕೊಳ್ಳುವ ವಿಚಾರವು ಅವರವರ ಸಂಪ್ರದಾಯಾನುಸಾರವಾಗಿರುವುದು ಸಮಾಧಾನಕರವಾದುದು. "ಓಂ ತತ್ಸವಿತುರ್ವರೇಣ್ಯಂ । ಭರ್ಗೋದೇವಸ್ಯ ಧೀಮಹಿ । ಧಿಯೋಯೋನಃ ಪ್ರಚೋದಯಾತ್ ॥" ಎಂಬುದು ಸರ್ವಮಾನ್ಯ ವೆನಿಸುವುದಾದರೆ ಸೂಕ್ತವಾದ ಭಾಗವಾಗಿರುತ್ತದೆ.

೩೯. ಮಾನಸ ಪೂಜೆ : (ಈ ಹಿಂದೆ ವಿವರಿಸಿರುವಂತೆ)

೪೦. ಜಪಾಂತ್ಯಮುದ್ರಾ (ಉತ್ತರಮುದ್ರಾಪ್ರದರ್ಶನ) : ಜಪ ಆರಂಭದ ಮುದ್ರಾಪ್ರದರ್ಶನದಂತೆಯೇ ಜಪಾಂತ್ಯಮುದ್ರಾಪ್ರದರ್ಶನ ಭಾಗವೂ ಕೆಲವರಲ್ಲಿ ರೂಢಿಯಲ್ಲಿಲ್ಲ. ಆದರೂ ಈ ಭಾಗವನ್ನು ಎಲ್ಲರೂ ಆಚರಿಸುವುದ ರಲ್ಲಿ ದೋಷವೇನಿಲ್ಲ.

"ಸುರಭಿ, ಜ್ಞಾನ, ಚಕ್ರ, ಯೋನಿ, ಶಂಖ, ಪಂಕಜ, ಲಿಂಗ, ನಿರ್ವಾಣ" ಎಂಬ ಅಷ್ಟಮುದ್ರಿಕೆಗಳನ್ನು ಮಾಡುತ್ತ "ಸುರಭಿಜ್ಞಾನ...." ಎಂಬ ಶ್ಲೋಕ ವನ್ನು ಹೇಳುವುದು. (ಈ ಮುದ್ರಿಕೆಗಳ ವಿನ್ಯಾಸವನ್ನೂ ಕೂಡ ಪುಸ್ತಕ ಗಳಲ್ಲಿ ವಿವರಿಸಿರುವುದು ಕಾಣಬರುವುದಿಲ್ಲ. ತಿಳಿದವರು ಇದನ್ನು ಕುರಿತು ಸರಳವಾದ ವಿವರಣೆಯೊಂದಿಗೆ ವಿನ್ಯಾಸವನ್ನು ಸೂಚಿಸುವುದು ಅಪೇಕ್ಷಣೀಯ).

Sri Vidyabharathi Book Centre, Sringeri

CC-O. In Public Domain. Digitized by eGangotri

೪೧. ಕರನ್ಯಾಸ : (ಈ ಹಿಂದೆ ವಿವರಿಸಿರುವಂತೆ)

೪೨. ಹೃದಯಾದಿನ್ಯಾಸ : (ಈ ಹಿಂದೆ ವಿವರಿಸಿರುವಂತೆ)

೪೩. ದಿಗ್ಬಂಧ ವಿಮೋಚನ : ನೂರೆಂಟು ಹಾಗೂ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜಪಮಾಡುವವರು ಜಪದ ನಂತರ ಕರ, ಹೃದಯಾದಿ ನ್ಯಾಸವಾದ ಮೇಲೆ "ಭೂರ್ಭುವಸ್ಸುವ ರೋಮಿತಿ ದಿಗ್ವಿಮೋಕಃ" ಎಂದು ಹೇಳುತ್ತ ಒಂದು ಉದ್ಧರಣೆ ನೀರನ್ನು ಅರ್ಘ್ಯ ಪಾತ್ರೆಗೆ ಬಿಡುವುದು.

೪೪. ಧ್ಯಾನ : (ಈ ಮೊದಲು ವಿವರಿಸಿರುವಂತೆ)

೪೫. ಉಪಸ್ಥಾನ :

ಅ) ಪ್ರಾತಃಸಂಧ್ಯೆಗೆ : "ಪ್ರಜೆಗಳನ್ನು ಕಾಪಾಡುವ ಪರಮಾತ್ಮ ಸ್ವರೂಪ ನಾದ ಸೂರ್ಯ ಭಗವಾನನ ಕೀರ್ತಿಯನ್ನು ಹೊಗಳುತ್ತೇನೆ.

ಜನರೆಲ್ಲರೂ ಅವರವರ ಕರ್ಮಗಳನ್ನು ಮಾಡುವಂತೆ ಎಲ್ಲವನ್ನೂ ತಿಳಿದ ಸೂರ್ಯ ಭಗವಾನನು ನಿಯೋಜಿಸುತ್ತಾನೆ. ಸೂರ್ಯ ಭಗವಾನನು ಭೂ ಲೋಕವನ್ನೂ ; ದ್ಯುಲೋಕವನ್ನೂ ಧರಿಸಿದ್ದಾನೆ. ಅವನು ಮನುಷ್ಯರನ್ನೂ ; ದೇವತೆಗಳನ್ನೂ ಚೆನ್ನಾಗಿ ನೋಡಿಕೊಳ್ಳುತ್ತಾನೆ. ಸತ್ಯಾತ್ಮನಾದ ಅವನಿಗೆ ತುಪ್ಪದಿಂದ ಕೂಡಿದ ಹವಿಸ್ಸನ್ನು ಕೊಡುತ್ತೇವೆ.

ಓ ! ಸೂರ್ಯ ಭಗವಾನನೇ, ನಿನ್ನ ವ್ರತದಿಂದ ಅನುಷ್ಠಾನ ಮಾಡು ವುದಕ್ಕೆ ಶಕ್ತನಾಗಬೇಕೆಂದು ಇಚ್ಛಿಸುವವನಿಗೆ ಹಾಲು ಮೊದಲಾದ ದ್ರವ್ಯಗಳು ದೊರೆಯಲಿ. ನಿನ್ನಿಂದ ರಕ್ಷಿಸಲ್ಪಟ್ಟವನನ್ನು ಯಾರೂ ಕೊಲ್ಲಲಾರರು, ಜಯಿಸಲಾರರು. ಪಾಪವು ಅವನ ಹತ್ತಿರ ಬರಲಾರದು" ಎಂಬ ಅರ್ಥ ವನ್ನುಳ್ಳ "ಓಂ ಮಿತ್ರಸ್ಯ ಚರ್ಷಣೀ ಧೃತ...." ಎಂಬ ಮಂತ್ರವನ್ನು ಹೇಳು ವುದು (ಕೆಲವರು "ಮೇರು ಪರ್ವತದ ಮೇಲ್ಭಾಗದಲ್ಲಿ ಹುಟ್ಟಿದ ಸಂಧ್ಯಾ ದೇವಿಯೇ ಉತ್ತಮ ಶಿಖರದಲ್ಲಿ ವಾಸಮಾಡಲು ಯಾವಾಗಲೂ ನಿನ್ನ ಉಪಾಸನೆ ಮಾಡುವ ಬ್ರಾಹ್ಮಣರಿಂದ ಅನುಜ್ಞೆ ಪಡೆದವಳಾಗಿ ಸುಖವಾಗಿ ಹೋಗು" ಎಂಬ ತಾತ್ಪರ್ಯವನ್ನುಳ್ಳ "ಉತ್ತಮೇಶಿಖರೇ...." ಎಂಬ ಮಂತ್ರ ವನ್ನು ಹೇಳುತ್ತಾರೆ)

Sri Vidyabharathi Book Centre, Sringeri

CC-O. In Public Domain. Digitized by eGangotri

ಆ) ಮಾಧ್ಯಾಹ್ನಿಕಕ್ಕೆ : "ನಾವು ಪ್ರಪಂಚದ ಮೇಲಿರುವ ಹೆಚ್ಚು ಪ್ರಕಾಶ ಮಾನನಾದ ಸೂರ್ಯಭಗವಾನನನ್ನು ಕತ್ತೆತ್ತಿ ನೋಡುವವರಾಗಿ, ದೇವತೆ ಗಳೊಳಗಿರುವ ಉತ್ತಮ ಪ್ರಕಾಶನಾದ ಸೂರ್ಯದೇವನನ್ನು ಶ್ರೇಯಸ್ಸಿಗಾಗಿ ಹೊಂದಿದೆವು.

ಆ ದೇವನಾದ ಅಗ್ನಿಯನ್ನು ರಶ್ಮಿಗಳು ಎಲ್ಲರಿಗೂ ದರ್ಶನಕ್ಕಾಗಿ ಎಬ್ಬಿಸುತ್ತವೆ.

ದೇವತೆಗಳ ಆಶ್ಚರ್ಯವಾದ ಸೂರ್ಯನ, ವರುಣನ, ಅಗ್ನಿಯ ಕಣ್ಣಾ ಗಿರುವ ; ಸೈನ್ಯವಾಗಿರುವ ಸೂರ್ಯನು ಉದಯಿಸಿದನು. ಈ ಸೂರ್ಯ ಭಗವಾನನು ಸಕಲ ಚರಾಚರ ಜಗತ್ತಿನ ಆತ್ಮವಾಗಿದ್ದಾನೆ.

ಶುದ್ಧವಾದ ದೇವತೆಗಳಿಗೆ ಹಿತವಾದ ಕಣ್ಣಾದ ಸೂರ್ಯ ಭಗವಾನನು ಪೂರ್ವದಿಕ್ಕಿನಲ್ಲಿ ಉದಯಿಸಿದನು. ನಾವು ನೂರಾರು ವರ್ಷಗಳು ಅವನನ್ನು ನೋಡೋಣ. ನೂರಾರು ವರ್ಷಗಳು ಬದುಕಿರೋಣ. ನೂರಾರು ವರ್ಷ ಗಳು ಸಂತೋಷಪಡೋಣ. ನೂರಾರು ವರ್ಷಗಳು ಇರೋಣ. ನೂರಾರು ವರ್ಷಗಳು ಒಳ್ಳೆಯಮಾತುಗಳನ್ನು ಕೇಳೋಣ. ಉತ್ತಮವಾಗ್ಮಿಗಳಾಗೋಣ. ಅಜೇಯರಾಗಿರೋಣ. ಪ್ರಕಾಶಮಾನನಾದ ಸೂರ್ಯ ಭಗವಾನನನ್ನು ನೋಡೋಣ. ಮಹಾಸಮುದ್ರ ಮೇಲಿನಿಂದ ಉದಯಿಸಿದವನಾಗಿರುವ, ನೀರಿನಮಧ್ಯದಲ್ಲಿ ಪ್ರಕಾಶಿಸುತ್ತಿರುವ, ವಿದ್ವಾಂಸನಾದ, ಶ್ರೇಷ್ಠನಾದ ಮತ್ತು ಕೆಂಪು ಕಣ್ಣುಳ್ಳ ಸೂರ್ಯ ಭಗವಾನನು ನನ್ನನ್ನು ಒಳ್ಳೆಯ ಮನಸ್ಸಿನಿಂದ ಶುದ್ಧ ನನ್ನಾಗಿ ಮಾಡಲೀ ಎಂಬ ಅರ್ಥವನ್ನುಳ್ಳ "ಉದ್ವಯಂ ತಮಸಸ್ಪರಿ...." ಎಂಬ ಮಂತ್ರವನ್ನು ಹೇಳುವುದು. ಕೆಲವರು ಈ ಮಂತ್ರಗಳಿಗೆ ಮೊದಲು.... "ಆ ಸತ್ಯೇನ ರಜಸಾ..." ಎಂಬ ಋಕ್ಕಿನಿಂದ ಪ್ರಾರಂಭಿಸಿ...."ವಿಪಶ್ಚಿನ್ಮನಸಾ ಪುನಾತು" ಎಂಬಲ್ಲಿಗೆ ಮುಕ್ತಾಯಮಾಡಿ ಅನಂತರ "ಉದಯು...." ಎಂಬ ಮಂತ್ರವನ್ನು ಹೇಳುತ್ತಾರೆ).

ಇ) ಸಾಯಂಸಂಧ್ಯೆಗೆ : "ಓ ಸೂರ್ಯ ಭಗವಾನನೇ ನನ್ನ ಪ್ರಾರ್ಥನೆ ಯನ್ನು ಕೇಳು. ಈಗ ನನ್ನನ್ನು ಸುಖಿಯನ್ನಾಗಿಮಾಡು. ನಿನ್ನಿಂದ ರಕ್ಷಣೆ ಯನ್ನು ಬಯಸಿ ಪ್ರಾರ್ಥಿಸುತ್ತೇನೆ.

ವೇದ ಮಂತ್ರಗಳಿಂದ ನಮಸ್ಕರಿಸುವವನಾಗಿ, ನಿನ್ನನ್ನು ಆಯುರ್ದಾನ ಕ್ಕಾಗಿ ಶರಣುಹೊಂದಿದ್ದೇನೆ. ಹವಿಸ್ಸಿನಿಂದ ಹೋಮಮಾಡುವ ಯಜಮಾನನೂ ಇದನ್ನೇ ಕೋರುತ್ತಾನೆ. ಓ ! ಸೂರ್ಯ ಭಗವಾನ್ ; ಅನಾದರಮಾಡದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಲೋಕದಲ್ಲಿ ನನ್ನ ಪ್ರಾರ್ಥನೆಯನ್ನು ಆಲಿಸು. ಮಂತ್ರಗಳಿಂದ ಹೊಗಳಲ್ಪಟ್ಟ ಸೂರ್ಯಭಗವಾನನೇ ನಮ್ಮ ಆಯಸ್ಸನ್ನು ಕಳೆಯಬೇಡ; ವೇದೋಕ್ತವಾದ ಆಯುಸ್ಸನ್ನು ಕೊಡು." ಎಂಬ ತಾತ್ಪರ್ಯವನ್ನುಳ್ಳ "ಓಂ ಇಮಂ ಮೇ ವರುಣ..." ಎಂಬ ಮಂತ್ರವನ್ನು ಹೇಳುವುದು. (ಕೆಲವರು "ತತ್ವಾಯಾಮಿ ಬ್ರಹ್ಮಣಾ...." ಎಂಬ ಋಕ್ಕು ಮುಕ್ತಾಯವಾದ ನಂತರ ಮುಂದಕ್ಕೆ...."ಯಚ್ಚಿದ್ಧಿತೆ....; "ಯತ್ಕಿಂಚೇದಂ....; ಕಿತವಾಸೋ...." ಎಂಬ ಇನ್ನೂ ಮೂರು ಋಕ್ಕುಗಳನ್ನು ಹೇಳುವುದುಂಟು).

೪೬. ದಿಗ್ದೇವತಾ ನಮಸ್ಕಾರ : "ಬ್ರಹ್ಮನಿಗೂ, ಅಗ್ನಿಗೂ, ಭೂಮಿಗೂ, ಓಷಧಿಗಳಿಗೂ, ವಾಕ್ಕಿಗೂ, ವಾಗಧಿಪತಿಗೂ, ವಿಷ್ಣುವಿಗೂ ಮತ್ತು ಬ್ರಹ್ಮಕ್ಕೂ ನಮಸ್ಕಾರ ಮಾಡುತ್ತೇನೆ" ಎಂಬ ಅರ್ಥದ "ಓಂ ನಮೋ ಬ್ರಹ್ಮಣೇ...." ಎಂಬ ಮಂತ್ರವನ್ನು ಹೇಳುತ್ತ ಪ್ರಾತಃಕಾಲದಲ್ಲಿ ಪೂರ್ವ ದಿಂದಲೂ ಸಾಯಂಕಾಲದಲ್ಲಿ ಪಶ್ಚಿಮದಿಂದಲೂ ಆರಂಭಿಸಿ ದಿಗ್ದೇವತೆಗಳಿಗೆ ನಮಸ್ಕರಿಸುವುದು.

"ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕುಗಳಿಗೂ, ಆ ದಿಕ್ಕುಗಳಲ್ಲಿ ವಾಸಿಸುವ ದೇವತೆಗಳಿಗೂ, ಮೇಲೆ ಇರುವ ದಿಕ್ಕಿಗೂ, ಕೆಳಗಿರುವ ದಿಕ್ಕಿಗೂ, ಈ ಎರಡೂ ದಿಕ್ಕುಗಳ ಮಧ್ಯದ ದಿಕ್ಕಿಗೂ, ಗಂಗಾ ಯಮುನಾ ನದಿಗಳ ಮಧ್ಯೆ ವಾಸಮಾಡುತ್ತ ಪ್ರಸನ್ನಾತ್ಮರಾಗಿ ಜೀವಿತವನ್ನು ಬಹುಕಾಲವೂ ಸಂಪದ್ಭರಿತವೂ ಮಾಡಿಕೊಳ್ಳುವವರಿಗೆ ನಮಸ್ಕರಿಸುತ್ತೇನೆ" ಎಂಬ ಅರ್ಥದ "ನಮಃ ಪ್ರಾಚ್ಯೈದಿಶೇ...." ಎಂಬ ಮಂತ್ರವನ್ನು ಕೆಲವರು ಹೇಳುವುದುಂಟು. ಇನ್ನು ಕೆಲವರು "ಓಂ ಇಂದ್ರಾಯನಮಃ.... ಎಂಬುದರಿಂದ ಆರಂಭಿಸಿ ; ವಿಶ್ವ ರೂಪಾಯಪ್ಮೈ ನಮೋ ನಮಃ" ಎಂಬಲ್ಲಿಯವರೆವಿಗೂ ಹೇಳುತ್ತ ನಮಸ್ಕರಿಸು ವುದುಂಟು.

೪೭. ನದಿ, ಮುನಿ, ದೇವ, ಋಷಿ ವಂದನ : "ಗಂಗಾ ಯಮುನಾ ನದಿಗಳಿಗೆ ನಮಸ್ಕಾರ. ಮುನಿಗಳಿಗೆ, ಸಂಧ್ಯಾದೇವಿಗೆ, ಸಾವಿತ್ರೀದೇವಿಗೆ, ಗಾಯತ್ರೀದೇವಿಗೆ, ಸರಸ್ವತೀದೇವಿಗೆ ಎಲ್ಲರಿಗೂ ನಮಸ್ಕಾರ. ದೇವ ದೇವತೆ ಗಳಿಗೆ ನಮಸ್ಕಾರ. ಮುನಿಗಳಿಗೆ, ಋಷಿಗಳಿಗೆ, ಗುರುಗಳಿಗೆ, ತಾಯಿಗೆ, ತಂದೆಗೆ, ಆಚಾರ್ಯರಿಗೆ, ಕಾಮಾಭಿಮಾನಿ ದೇವತೆಗಳಿಗೆ ನಮಸ್ಕಾರ. ಭೂಮಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ನೀರು, ತೇಜಸ್ಸು, ವಾಯು, ಆಕಾಶರೂಪಿಯಾದ ಭಗವಂತ ವಾಸುದೇವನಿಗೆ ; ಸಕಲ ಚರಾಚರ ಭೂತರಾಶಿಗಳಲ್ಲಿಯೂ ನೆಲೆಸಿರುವ, ಸದಾಕಾಲವೂ ನಮಸ್ಕರಿಸಲ್ಪಡುವ ಶ್ರೀ ಸಾವಿತ್ರೀಸಂಧ್ಯಾದೇವಿಗೆ ನಮಸ್ಕಾರ. ಶಿವರೂಪದ ವಿಷ್ಣು ; ವಿಷ್ಣುರೂಪದ ಶಿವ ಶಿವನ ಹೃದಯದಲ್ಲಿರುವ ವಿಷ್ಣು ; ವಿಷ್ಣುವಿನ ಹೃದಯದಲ್ಲಿರುವ ಶಿವ. ವಿಷ್ಣುವು ಶಿವಮಯನಾಗಿರುವಂತೆ ; ಶಿವನು ವಿಷ್ಣುಮಯನಾಗಿದ್ದಾನೆ. ಇವರಿಬ್ಬರಲ್ಲೂ ಭೇದವನ್ನು ಕಾಣಬಾರದು.

ಹಾಲಿನಲ್ಲಿ ಮಿಂದು ಚಂದನವನ್ನು ಪೂಸಿಕೊಂಡು ಬಿಲ್ವಪತ್ರೆಯಿಂದ ಪೂಜಿಸಲ್ಪಟ್ಟಿರುವ ದುರ್ಗಿಗೆ ಶರಣಾಗತನಾಗಿ ನಮಸ್ಕರಿಸುತ್ತಿದ್ದೇನೆ.

ಬ್ರಾಹ್ಮಣದೇವನೂ, ಗೋಬ್ರಾಹ್ಮಣರ ಹಿತಚಿಂತಕನೂ, ಜಗತ್ತಿನ ಹಿತಚಿಂತಕನೂ ಆದ ಕೃಷ್ಣನಿಗೆ ಗೋವಿಂದನಿಗೆ ನಮಸ್ಕಾರ.

ಜಗತ್ತ್ರಯಗಳಲ್ಲೂ, ಸರ್ವಭೂತಗಳಲ್ಲಿಯೂ ವಾಸಿಸುವ ವಾಸುದೇವನಿಗೆ ನಮಸ್ಕಾರ. ಸಹಸ್ರಮೂರ್ತಿಯೂ, ಸಹಸ್ರಪಾದ-ಕಣ್ಣು-ಕೈಗಳನ್ನುಳ್ಳವನೂ ; ಸಹಸ್ರನಾಮಗಳನ್ನುಳ್ಳವನೂ, ಶಾಶ್ವತಪುರುಷನೂ, ಸಹಸ್ರ ಕೋಟಿಯುಗಗಳನ್ನು ಧರಿಸಿದವನೂ ಆದ ಅನಂತನಿಗೆ ನಮಸ್ಕಾರಗಳು.

ಆಕಾಶದಿಂದ ಬೇರೆ ಬೇರೆ ಸ್ಥಳಗಳಲ್ಲಿ ಬಿದ್ದ ನೀರು ಸಮುದ್ರಕ್ಕೇ ಸೇರುವಂತೆ ; ಎಲ್ಲ ದೇವರ ನಮಸ್ಕಾರಗಳೂ ಕೇಶವನಿಗೆ ಸೇರುತ್ತವೆ.

ಸಕಲ ವೇದ ಪಾರಾಯಣದಿಂದ, ಸಕಲತೀರ್ಥಗಳ ಸ್ನಾನದಿಂದ ಯಾವ ಫಲ ಸಿಗುತ್ತದೆಯೋ ಅದು ಸರ್ವಶಕ್ತನಾದ ಜನಾರ್ಧನನನ್ನು ಸ್ತುತಿಸುವುದರಿಂದ ದೊರೆಯುತ್ತದೆ" ಎಂಬ ತಾತ್ಪರ್ಯವನ್ನುಳ್ಳ "ನಮೋ ಗಂಗಾಯಮುನಾಯೋ...." ಮುಂತಾದ ಸ್ತೋತ್ರಗಳನ್ನು ಹೇಳುವುದು.

೪೮. ಸ್ತುತಿ: "ಇದಂ ದ್ಯಾವಾಪೃಥಿವೀ ಸತ್ಯಮಸ್ತು...." ಎಂಬ ಋಕ್ಕಿನಿಂದ ಸ್ತುತಿಸುವುದು.

೪೯. ಗಾಯತ್ರೀ ವಿಸರ್ಜನೆ : "ಬ್ರಹ್ಮರೂಪಳಾದ ಗಾಯತ್ರಿಯೇ ಜಪವನ್ನು ಮಾಡಿದ ಸ್ಥಾನದ ಸಿದ್ಧಿಗಾಗಿ ಜಾಗ್ರತೆಯಾಗಿ ನನ್ನ ಹೃದಯವನ್ನು ಪ್ರವೇಶಿಸು" ಎಂಬ ಅರ್ಥವನ್ನುಳ್ಳ "ಆಗಚ್ಛದೇವಿ...." ಎಂಬ ಮಂತ್ರ ಹೇಳಿ ಮೇಲಕ್ಕೆದ್ದು ಆಸನವನ್ನು ತೆಗೆದು ; ಭೂಮಿಯನ್ನು ಮುಟ್ಟಿ ಹೃದಯವನ್ನು ಸ್ಪರ್ಶಿಸುವುದು (ಕೆಲವರು "ಋತಂ ಚ ಸತ್ಯಂ...." ಎಂಬ ಋಕ್ಕನ್ನು ಹೇಳಿ ಶಾಂತಿ ಮಂತ್ರ ಹೇಳುವುದುಂಟು).

Sri Vidyabharathi Book Centre, Sringeri

CC-O. In Public Domain. Digitized by eGangotri

೫೦. ಅಭಿವಾದನ: "೪ ಸಾಗರಗಳ ವ್ಯಾಪ್ತಿಯಲ್ಲಿರುವ ಗೋವುಗಳಿಗೂ ಬ್ರಾಹ್ಮಣರಿಗೂ ಶುಭವಾಗಲೀ" ಎಂಬ ತಾತ್ಪರ್ಯದ "ಚತುಸ್ಸಾಗರ.... ಎಂಬ ಇಷ್ಟಾರ್ಥ ವಾಕ್ಯವನ್ನು ಹೇಳಿ ; ಅವರವರ ಋಷಿ ಪರಂಪರೆ ಗೋತ್ರ, ಸೂತ್ರ, ಶಾಖೆ ಸಹಿತವಾದ ಹೆಸರನ್ನು ಹೇಳಿಕೊಂಡು ನಮಸ್ಕರಿಸುವುದು. (ಋಷಿ ಪರಂಪರೆಯಲ್ಲಿ ಒಬ್ಬರು, ಇಬ್ಬರು, ಮೂವರು, ನಾಲ್ವರು, ಐವರು. ಆರುಜನ ಅಥವಾ ಏಳು ಜನ ಋಷಿಗಳು ಇರುವುದುಂಟು. ಗೋತ್ರ ಹಾಗೂ ಸೂತ್ರಗಳು ಹಲವಾರಿರುತ್ತವೆ. ಶಾಖೆಗಳು ನಾಲ್ಕು. ಈ ಭಾಗದಲ್ಲಿ ಸೂಚಿಸಿರುವ ಗೋತ್ರ ಸೂತ್ರಗಳ ಪ್ರವರವು ಒಂದು ಉದಾಹರಣೆ ಮಾತ್ರ).

೫೧. ಆಚಮನ : (ಈ ಮೊದಲು ಸೂಚಿಸಿರುವಂತೆ)

೫೨. ಭಗವದರ್ಪಣ : "ಯಸ್ಯಸ್ಮೃತ್ಯಾಚ...." ಮಂತ್ರವನ್ನು ಹೇಳಿಕೊಂಡು "ನಾನು ಮಾಡಿದ ಪ್ರಾತಃ/ಮಾಧ್ಯಾಹ್ನಿಕ/ಸಾಯಂಸಂಧ್ಯಾವಂದನೆಯು ಎಲ್ಲ ಆತ್ಮಗಳಲ್ಲೂ ಇರುವ ಭಗವಂತನಾದ ವಾಸುದೇವನಿಗೆ ಪ್ರಿಯವಾಗಲೀ" ಎಂಬ ಭಾವದಿಂದ ಅರ್ಪಿಸುವುದು. ತಮ್ಮ ತಮ್ಮ ಸಂಪ್ರದಾಯಾನುಸಾರವಾಗಿ ಪರಮೇಶ್ವರ, ವಾಸುದೇವ, ಮಧ್ವೇಶ ಮುಂತಾದವರಿಗೆ ಅರ್ಪಣೆ ಮಾಡುವುದು).

೫೩. ನಾಮತ್ರಯಜಪ : "ನಾನು ಸಂಧ್ಯಾವಂದನೆಯನ್ನಾಚರಿಸುವ ಸಮಯದಲ್ಲಿ ಮಂತ್ರ, ತಂತ್ರ, ಸ್ವರ, ವರ್ಣಗಳನ್ನು ಹೇಳುವಾಗ ಉಂಟಾಗುವ ಹೆಚ್ಚು ಕಡಿಮೆಯ ತಪ್ಪುಗಳಿಗಾಗಿ ಪ್ರಾಯಶ್ಚಿತ್ತ ಜಪವನ್ನು ಮಾಡುತ್ತೇನೆ" ಎಂಬ ತಾತ್ಪರ್ಯದ "ಮಧ್ಯೆಮಂತ್ರ..." ಎಂಬ ಸಂಕಲ್ಪ ಮಂತ್ರದೊಂದಿಗೆ ಅಚ್ಯುತಾನಂತ ಗೋವಿಂದ ಹಾಗೂ ಹರಮೃಡಶಂಕರ ಎಂಬ ನಾಮತ್ರಯ ಜಪಮಾಡುವುದು.

೫೪. ಆಚಮನ : (ಈ ಮೊದಲು ಸೂಚಿಸಿರುವಂತೆ)

೫೫. ಭೂ ಪ್ರಾರ್ಥನೆ ; "ಅದ್ಯಾನೋದೇವ ಸವಿತಃ...." ಎಂಬ ಮಂತ್ರವನ್ನು ಹೇಳಿ, ಜಪಮಾಡಿದ ಸ್ಥಳದಲ್ಲಿ ಒಂದು ಉದ್ಧರಣೆ ನೀರು ಬಿಟ್ಟು ಮಧ್ಯಮ ಹಾಗೂ ಅನಾಮಿಕ ಬೆರಳುಗಳಿಂದ ಭೂಸ್ಪರ್ಶಮಾಡಿ ಹೃದಯವನ್ನೂ ಕಣ್ಣುಗಳನ್ನೂ ಮುಟ್ಟಿಕೊಂಡು ಕೈಮುಗಿಯುವುದು.

Sri Vidyabharathi Book Centre, Sringeri

ಇಲ್ಲಿಗೆ ತ್ರಿಕಾಲ ಸಂಧ್ಯಾವಂದನ ವಿಧಿಯು ಮುಕ್ತಾಯವಾಗುತ್ತದೆ.

CC-O. In Public Domain. Digitized by eGangotri

ಯುಕ್ತಾಯುಕ್ತ ವಿಚಾರ

ತಾತ್ಪರ್ಯ ಸಹಿತವಾದ ತ್ರಿಕಾಲಸಂಧ್ಯಾವಂದನೆಯ ಕ್ರಮವನ್ನು ತಿಳಿದ ನಂತರ ನಮ್ಮ ಅಂತರಂಗಕ್ಕೆ ಸಂಧ್ಯೋಪಾಸನೆಯ ಮಹತ್ವ ಹಾಗೂ ಅದರ ಅಂತರಾರ್ಥವೇನೆಂಬುದು ವೇದ್ಯವಾಗಬೇಕು.

"ತನ್ನ ಜೀವಿತಾವಧಿಯ ನಂತರ ವ್ಯಕ್ತಿಯು ಸರ್ವಶಕ್ತನಾದ ಭಗವಂತನಲ್ಲಿ ಸೇರ್ಪಡೆಯಾಗುವುದೇ ಜೀವನದ ಗುರಿ. ಆ ರೀತಿಯಲ್ಲಿ ಸೇರ್ಪಡೆಯಾಗುವ ಅರ್ಹತೆಪಡೆಯುವ ದಿಸೆಯಲ್ಲಿ ಪ್ರತಿದಿನವೂ ತ್ರಿಕಾಲದಲ್ಲಿ ಕಾಯಾವಾಚಾಮನಸಾ ಶುದ್ಧಿಹೊಂದುವುದು ಹಾಗೂ ಭಗವಂತನನ್ನು ಶ್ರದ್ಧಾಭಕ್ತಿಯಿಂದ ಧ್ಯಾನಿಸುವುದೇ" ನಮ್ಮ ಈ ಸಂಧ್ಯೋಪಾಸನೆಯ ಅಂತರಾರ್ಥವಾಗಿದೆಯೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ.

ವೇದೋಪನಿಷತ್ತುಗಳು ; ಶೃತಿ–ಸ್ಮೃತಿ ಹಾಗೂ ಪುರಾಣಗಳಲ್ಲಿ ಅಂದಿನ ಋಷಿಮುನಿಗಳು ಸೂಚಿಸಿದ ಮಾರ್ಗವನ್ನನುಸರಿಸಿಕೊಂಡು ಇಂಥ ಸಂಧ್ಯೋಪಾಸನೆಯ ಕ್ರಮಗಳು ಪರಂಪರಾಗತವಾಗಿ ರೂಢಿಗೆಬಂದಿವೆ ಎಂಬುದು ನಮಗೆ ವೇದ್ಯವಾಗಿದೆ.

ಸಂಧ್ಯೋಪಾಸನೆಯನ್ನಾಚರಿಸುವ ಕ್ರಮದಲ್ಲಿ ಸ್ವಲ್ಪಮಟ್ಟಿನ ವೈವಿಧ್ಯತೆ ಕಾಣಬಹುದಾದರೂ, ಅಲ್ಲಿ ಹೇಳುವ ಮಂತ್ರಗಳು ಒಂದೇ ಎಂಬುದೂ ನಮಗೆ ವೇದ್ಯವಾಗಿದೆ. ಅಂದಮೇಲೆ ದ್ವಿಜ ಸಮೂಹದಲ್ಲಿ ಆಚರಣೆಯಲ್ಲಿರುವ ಸಂಧ್ಯೆಯು ಸಹಸ್ರವಿಧ ಎಂಬುದಕ್ಕೆ ಅವಕಾಶವಾದರೂ ಎಲ್ಲಿದೆ ? ಎಂಬುದನ್ನು ಕುರಿತು ವಿವೇಕಿಗಳು ಚಿಂತಿಸಬೇಕಾದ ಅಗತ್ಯ ಉಂಟಾಗಿದೆ.

ಅನಂತವಾದ ಕಾಲದ ಪರಿಧಿಯಲ್ಲಿ ಪ್ರವಹಿಸುವ ಮನುಕುಲದ ಜೀವನಾವಧಿಯಲ್ಲಿ ಪ್ರಾಕೃತಿಕವಾದ ಕೆಲವೊಂದು ಬದಲಾವಣೆಗಳು ಅನಿವಾರ್ಯ. ಇಂಥ ಬದಲಾವಣೆಗಳಿಗನುಗುಣವಾಗಿ ವೇದೋಪನಿಷತ್ತುಗಳು ಸೂಚಿಸುವ 'ಸರ್ವಶಕ್ತನಾದ ಭಗವಂತ' ಎಂಬ ಕಲ್ಪನೆಯಲ್ಲಿ ಕೆಲವೊಂದು ಕಾಲಾವಧಿಯಲ್ಲಿ ಬ್ರಹ್ಮ, ಪರಬ್ರಹ್ಮ. ಪರಮೇಶ್ವರ, ಶಿವ, ಈಶ್ವರ, ವಿಷ್ಣು, ಸೂರ್ಯ, ಅಗ್ನಿ, ಶಕ್ತಿ, ಗಣಪತಿ ಮುಂತಾದ ದೇವತಾ ವಿಶೇಷಗಳು ಪ್ರಾಮುಖ್ಯತೆ ಪಡೆದಿದ್ದುವು. ಇದಕ್ಕನುಗುಣವಾಗಿ ಪುರಾಣ–ಪುಣ್ಯಕಥೆಗಳು ಹುಟ್ಟಿಬೆಳೆದುವು. ಅಲ್ಲಿಂದ ಮುಂದಿನ ಜನಾಂಗವು ತಮ್ಮ ಬುದ್ಧಿಶಕ್ತಿ, ವಿಚಾರಶಕ್ತಿ, ವಾಕ್‌ಶಕ್ತಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯವಹಾರಜ್ಞಾನಕ್ಕೆ ಅನುಗುಣವಾಗಿ ಇಂಥ ಪುರಾಣ–ಪುಣ್ಯಕಥೆಗಳನ್ನು ಆಧರಿಸಿ ಅಭ್ಯಸಿಸುತ್ತ; ತಾವೂ ಅವುಗಳಿಗೆ ಹೊಸಭಾಗಗಳನ್ನು ಸೇರಿಸುತ್ತಾ ಅವುಗಳನ್ನು ಆಧಾರವಾಗಿ ಪರಿಗಣಿಸಿ, ತಮ್ಮ ಮುಂದಿನ ತಲೆಮಾರಿನ ಜನಜೀವನದಪ್ರವಾಹದಲ್ಲಿ ಅವು ಪ್ರಮುಖಪಾತ್ರ ವಹಿಸುವಂತೆ ವ್ಯವಸ್ಥೆ ಮಾಡಿತು. ಇದೇ ಹಾದಿಯಲ್ಲಿ ಏಸುಕ್ರಿಸ್ತ, ಮಹಮದ್ ಪೈಗಂಬರ್, ಮಧ್ವಾಚಾರ್ಯ, ಗೌತಮಬುದ್ಧ, ಮಹಾವೀರ, ಬಸವಣ್ಣ, ರಾಮಾನುಜಾಚಾರ್ಯ, ಗುರು ಗೋವಿಂದಸಿಂಗ್ ಮುಂತಾದ ಮಹಾತ್ಮರು ಮನುಕುಲದಲ್ಲಿ ಹುಟ್ಟಿ ಬೆಳೆದು, ಸನಾತನ ಧರ್ಮದ ಆಚರಣೆಯಲ್ಲಿ ಕಾಲಾನುಕ್ರಮದಲ್ಲಿ ತಮಗೆ ಕಾಣಬಂದ ನ್ಯೂನತೆಗಳನ್ನು ನಿವಾರಿಸುವ ಪ್ರಯತ್ನ ನಡೆಸಿ, ಈ ಧರ್ಮದ ಮೂಲಪ್ರವಾಹದಿಂದ ಬೇರೆಯೆನಿಸುವಷ್ಟು ಪ್ರತ್ಯೇಕತೆಯನ್ನು ಹೊಂದಿದ ನೂತನ ತತ್ತ್ವಸಿದ್ಧಾಂತಗಳನ್ನು ಪ್ರತಿಪಾದಿಸಿ ಪ್ರಚಾರಕ್ಕೆ ತಂದರು. ಇಂಥ ಎಲ್ಲ ಪ್ರಯತ್ನಗಳ ಉದ್ದೇಶವೂ ಕೂಡ ಒಂದೇ ಆಗಿದೆ. ಈ ಮನುಕುಲದ ಆತ್ಮೋನ್ನತಿಯೊಂದೇ ಇವೆಲ್ಲದರ ಮೂಲಗುರಿ! ಧರ್ಮ ಹಾಗೂ ಧರ್ಮಾಚರಣೆಯ ಮೂಲ ಉದ್ದೇಶವು ಈ ರೀತಿ ಇದ್ದರೂ ಕೂಡ ಧರ್ಮಪ್ರಚಾರಕರು, ಅವರ ಉತ್ತರಾಧಿಕಾರಿಗಳು ಹಾಗೂ ಸಂಬಂಧಿಸಿದ ಧರ್ಮ ಪಂಥಾನುಯಾಯಿಗಳ ಅಂತರ್ಯದಲ್ಲಿ ಸ್ವಾಭಾವಿಕವಾಗಿ ಕಾಣಬರುವ ಸ್ವಯಂಶ್ರೇಷ್ಠತೆ ಹಾಗೂ ಅನ್ಯದ್ವೇಷದ ಪರಿಣಾಮವಾಗಿ ಕೆಲವಾರು ಅಸಂಬದ್ಧ ವಿಚಾರಗಳ ಅಪಪ್ರಚಾರ ರೂಢಿಗೆ ಬಂದಿರುತ್ತವೆ. ನಿರ್ವಿಕಾರ ಚಿತ್ತದಿಂದ, ನಿರ್ಮಮಕಾರದಿಂದ, ನಿಷ್ಪಕ್ಷಪಾತವಾಗಿ ವಿವೇಚಿಸಿದರೆ ಅಂಥ ಅಸಂಬದ್ಧ ವಿಚಾರಗಳ ಮಹತ್ವ ಎಷ್ಟು ಕ್ಷುಲ್ಲಕವಾದುದೆಂಬ ಸಂಗತಿಯು ಎಂಥವರಿಗೂ ಕೂಡಲೇ ವೇದ್ಯವಾಗಿಬಿಡುತ್ತವೆ.

ಉದಾಹರಣೆಗೆ ಸಂಧ್ಯಾವಂದನೆಯ ಕ್ರಿಯೆಯಲ್ಲಿ ರೂಢಿಯಲ್ಲಿರುವ ಲಾಂಛನಧಾರಣೆಯ ವಿಚಾರ ಗಮನಿಸಿರಿ. ದ್ವಿಜರಲ್ಲಿ ಅದರಲ್ಲೂ ಬ್ರಾಹ್ಮಣರಲ್ಲಿ ರೂಢಿಯಲ್ಲಿರುವ ತ್ರಿಮತಸ್ಥರು ತಮ್ಮದೇ ಆದ ಪ್ರತ್ಯೇಕ ಲಾಂಛನಗಳನ್ನು ಹೊಂದಿರುವುದು ಸರ್ವವೇದ್ಯ. ಸ್ಮಾರ್ತ ಸಂಪ್ರದಾಯದವರು ಭಸ್ಮಧಾರಣೆ ಮಾಡಿಕೊಂಡರೆ; ಶ್ರೀವೈಷ್ಣವರು ಶ್ವೇತ ಮೃತ್ತಿಕೆಯಿಂದ ನಾಮಧಾರಣೆ ಮಾಡಿಕೊಳ್ಳುತ್ತಾರೆ. ಮಾಧ್ವಪಂಥಾನುಯಾಯಿಗಳು ಗೋಪೀಚಂದನದಿಂದ ಮುದ್ರಾಧಾರಣೆಮಾಡಿಕೊಳ್ಳುತ್ತಾರೆ. ಮೂಲತಃ ಇವೆಲ್ಲವುಗಳ ಅಂತರಾರ್ಥವೂ ಒಂದೇ ಆಗಿದ್ದರೂ, ಕೆಲವರ ಅಂತರಂಗದಲ್ಲಿ ತಾವು ಆರಾಧಿಸುವ ದೇವತಾ ವಿಶೇಷ ಹಾಗೂ ಧರಿಸುವ ಲಾಂಛನ ಮಾತ್ರ ಶ್ರೇಷ್ಠವಾದುದು, ಉಳಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ವರದು ಕನಿಷ್ಠತಮವಾದುದು ಎಂಬ ನಿಕೃಷ್ಟಭಾವನೆ ಬೆಳೆದುಬಂದಿರುತ್ತದೆ. ಜಗತ್ತಿನ ಸಕಲ ವಸ್ತುಗಳಲ್ಲಿಯೂ ಪರಮಾತ್ಮನಿರುವುದರಿಂದ ಆತನನ್ನು ಧ್ಯಾನಿಸುತ್ತಲೇ ಕರ್ಮಾದಿಗಳನ್ನಾಚರಿಸಬೇಕು. ಶ್ರೀಮನ್ನಾರಾಯಣನನ್ನು ಆರಾಧಿಸುವವರಿಗೆ ಇತರ ದೇವತೆಗಳನ್ನಾರ್ಚಿಸಬೇಕಾದ ಅವಶ್ಯಕತೆ ಇಲ್ಲ" ಎಂಬ ತಾತ್ಪರ್ಯದೊಂದಿಗೆ

ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುಃ । ವನಾನಿವಿಷ್ಣುರ್ಗಿರಯೋದಿಶಶ್ಚ ॥
ನದ್ಯಸ್ಸಮುದ್ರಾಶ್ಚ ಸ ಏವ ಸರ್ವಂ । ಯದಸ್ತಿಯನ್ನಾಸ್ತಿಚ ವಿಪ್ರವರ್ಯ ॥

ಎಂಬ ಶ್ಲೋಕವನ್ನುದಾಹರಿಸಿ, ತೊಪ್ಪಲ್ ರಾಘವಾಚಾರ್ಯರು ತಮ್ಮ ಶ್ರೀವೈಷ್ಣವ ಯಜುರ್ವೇದ ಸಂಧ್ಯಾವಂದನೆಯಲ್ಲಿ ವಿಷ್ಣುಪಾರಮ್ಯವನ್ನು ಪ್ರತಿಪಾದಿಸಿದ್ದಾರೆ.

ಊರ್ಧ್ವ ಪುಂಡ್ರವಿನಾವಕ್ತ್ರಂ ಸ್ಮಶಾನ ಸದೃಶಂ ಸ್ಮೃತಂ ।
ಅವಲೋಕತಾದ್ಯಶಂ ವಿಪ್ರಸದ್ಯಃ ಸೂರ್ಯಂ ವಿಲೋಕಯೇತ್ ॥

—ಗೋಪಿಚಂದನದ ನಾಮಗಳನ್ನು ಧರಿಸದ ಮುಖವು ಸ್ಮಶಾನ ವಿದ್ದಂತೆ. ಅಂಥ ಬ್ರಾಹ್ಮಣನನ್ನು ನೋಡಿದರೆ ಕೂಡಲೇ ಪ್ರಾಯಶ್ಚಿತ್ತ ರೂಪವಾಗಿ ಸೂರ್ಯನನ್ನು ನೋಡಬೇಕು ಎಂಬ ತಾತ್ಪರ್ಯದೊಂದಿಗೆ ಶ್ರೀನೃಸಿಂಹ ಪುರಾಣದಲ್ಲಿ ಉಕ್ತವಾಗಿರುವುದೆಂಬ ಶ್ಲೋಕವನ್ನು ಚಂದ್ರಿಕಾ ಸ್ಟೋರ್ಸ್‌ನವರು ಪ್ರಕಟಿಸಿರುವ "ಋಗ್ವೇದೀಯ ತ್ರಿಕಾಲ ಸಂಧ್ಯಾವಂದನೆ" ಯಲ್ಲಿ ಕಾಣಬಹುದು.

ಅನ್ಯ ಪಂಥಗಳ ಸಂಪ್ರದಾಯ ಹಾಗೂ ಪಂಥಾನುಯಾಯಿಗಳ ವಿಚಾರ ದಲ್ಲಿ ಈ ಪಂಥಾನುಯಾಯಿಗಳು ವ್ಯಕ್ತಪಡಿಸಿ ಪ್ರಚಾರಮಾಡುವ ನಿಕೃಷ್ಟ ಭಾವನೆಗಳ ಪೈಕಿ ಇದೊಂದು ತೀರಾ ಸಾಮಾನ್ಯವಾದ ಉದಾಹರಣೆಯಾಗಿದೆ. ಇದಕ್ಕೆ ಪ್ರತಿಯಾಗಿ ಶೈವ ಪಂಥಾನುಯಾಯಿಗಳು ವ್ಯಕ್ತಪಡಿಸುವ ಭಾವನೆಯು ಎಂಥದೆಂಬುದನ್ನು ತಿಳಿಯಲು ತೈತ್ತಿರಿಯೋಪನಿಷತ್ತಿನಲ್ಲಿ ಉಕ್ತವಾಗಿದ್ದು ತ್ರಿಕಾಲಸಂಧ್ಯಾವಂದನೆಯಲ್ಲಿ ಶೈವ ಪಂಥೀಯರು ಪ್ರತಿದಿನವೂ ಹೇಳುವ ಈ ಮಂತ್ರ ಭಾಗವನ್ನಷ್ಟು ಗಮನಿಸೋಣ :

ಶಿವಾಯವಿಷ್ಣುರೂಪಾಯ ಶಿವರೂಪಾಯ ವಿಷ್ಣುವೇ ।
ಶಿವಸ್ಯ ಹೃದಯಂ ವಿಷ್ಣುಃ ವಿಷ್ಣೋಶ್ಚ ಹೃದಯಂ ಶಿವಃ ॥
ಯಥಾ ಶಿವಮಯೋವಿಷ್ಣುಃ ಏವಂ ವಿಷ್ಣುಮಯಃಶಿವಃ ।
ಯಥಾಂತರಂ ನಪಶ್ಯಾಮಿ ತಥಾಮೇ ಸ್ವಸ್ತಿರಾಯುಷಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವಶಕ್ತನನ್ನು ಶಿವ ಹಾಗೂ ವಿಷ್ಣು ಎಂಬ ಭೇದಭಾವ ರಹಿತವಾದ ಹರಿಹರ ರೂಪದಿಂದ ಆರಾಧಿಸುವ ಶೈವ ಪಂಥೀಯರ ಇಂಥ ಉದಾರ ಚರಿತೆಯಿಂದಲ್ಲವೇ ಮಾನವನು ವಿಶ್ವಮಾನವನಾಗಿ, ದೈವತ್ವಕ್ಕೇರಿ, ಪರಮಾತ್ಮದೊಂದಿಗೆ ವಿಲೀನವಾಗುವ ಮಹಾತ್ಮನೆನಿಸುವ ಅವಕಾಶ ಹೊಂದುವುದು ?

ವಿವೇಕಿಗಳು ಇಂಥ ಸಾರ್ವತ್ರಿಕ ಸತ್ಯಸಂಗತಿಗಳ ವಿಚಾರದಲ್ಲಿ ಕುರುಡರಂತೆ ಕುಳಿತರೆ ಉಪಯೋಗವಿಲ್ಲ. ಭಗವಂತನು ಕರುಣಿಸಿರುವ ಜ್ಞಾನ ಚಕ್ಷುವನ್ನುಪಯೋಗಿಸಿ, ಮೋಕ್ಷಸಾಧನೆಯ ದಾರಿಯಲ್ಲಿ ಕ್ರಮಿಸುವ ಪ್ರಯತ್ನ ಮಾಡಬೇಕು. ಹಾಗಿಲ್ಲವಾದರೆ, ಅಂಥ ಜೀವನವು ಗಾಳಿಯನ್ನು ಗುದ್ದಿ ಮೈಕೈ ನೋಯಿಸಿಕೊಂಡ ಮೇಧಾವಿಯ ಜೀವನಕ್ರಮವೆನಿಸುವುದು ನಿಸ್ಸಂಶಯ.

ಹಿನ್ನುಡಿ

ಜಗತ್ತಿನ ಪ್ರತಿಯೊಂದು ಚರಾಚರ ಜೀವಜಂತುಗಳಲ್ಲೂ ಸೃಷ್ಟಿ ನಿಯಮಕ್ಕನುಗುಣವಾಗಿ ಆತ್ಮ ಹಾಗೂ ದೇಹ ಎಂಬ ಎರಡು ಭಾಗಗಳಿರುತ್ತವೆ. ಸಚ್ಚಿದಾನಂದಸ್ವರೂಪಿಯಾದ ಪರಮಾತ್ಮದ ಅಂಶವಾದ ಆತ್ಮವು ನಾಶರಹಿತವಾದುದು. ಪರಮಾತ್ಮ ತತ್ತ್ವಕ್ಕಿಂತ ಸ್ವಲ್ಪಮಾತ್ರ ಕಡಿಮೆಮಟ್ಟದ್ದಾದ ಪ್ರಕೃತಿಯ ಅಂಶದಿಂದ ರೂಪುಗೊಂಡ ಶರೀರವು ಒಂದು ನಿರ್ದಿಷ್ಟ ಅವಧಿಯವರೆವಿಗೆ ಮಾತ್ರ ಆತ್ಮದ ಉಪಯೋಗಕ್ಕೆ ಅರ್ಹವೆನಿಸಿ ; ಕಾಲಕ್ರಮೇಣ ಜೀರ್ಣವಾಗತೊಡಗಿ ಅತ್ಯಲ್ಪ ಕಾಲಾವಧಿಯಲ್ಲೇ ಪ್ರಕೃತಿಯಲ್ಲಿ ವಿಲೀನವಾಗುವಂಥದು. ಈ ಕಾರಣದಿಂದ ಇದು ನಾಶವಾಗುವುದೆನಿಸಿದೆ. ನಾಶರಹಿತವಾದ ಆತ್ಮ ಹಾಗೂ ನಾಶಬದ್ಧವಾದ ಶರೀರವು ಸಮರಸದಿಂದ ವ್ಯವಹರಿಸುವಿಕೆಯೇ ಜೀವನವೆನಿಸಿದೆ. ಇದು ಸೃಷ್ಟಿಚಕ್ರದ ಚಾಲನೆಯು ಪ್ರಾರಂಭಗೊಂಡಂದಿನಿಂದಲೂ ನಡೆದು ಬಂದಿರುವ ಕ್ರಿಯೆ. ಈ ಕ್ರಿಯೆಗೆ ಸಂಬಂಧಿಸಿದ ಸಮಸ್ತ ವಿಚಾರಗಳನ್ನೂ ವಿವರಿಸುವ ಅನಾದಿಯೂ ಅನಂತವೂ ಆದ ನಿಯಮಗಳ ರಾಶಿ ; ಸೃಷ್ಟಿಕ್ರಮದ ಮಾರ್ಗದರ್ಶಿ ವೇದೋಪನಿಷತ್ತುಗಳು.

ಸೃಷ್ಟಿಚಕ್ರದಲ್ಲಿ ಪ್ರವೇಶಿಸಿದ ಆತ್ಮವು ತನ್ನ ಪಯಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಪುನಃ ಪರಮಾತ್ಮ ತತ್ತ್ವದಲ್ಲಿ ಶಾಶ್ವತವಾಗಿ ವಿಲೀನ

Sri Vidyabharathi Book Centre, Sringeri

 CC-O. In Public Domain. Digitized by eGangotri

ಗೊಳ್ಳುವ ಕ್ರಿಯೆಯಲ್ಲಿ ಮಾನವಜನ್ಮವು ಅತ್ಯಂತ ಪ್ರಮುಖವಾದ ಭಾಗ. ಈ ಭಾಗದಲ್ಲಿ ಆತ್ಮನು ಸೃಷ್ಟಿಯ ನಿಯಮಗಳಿಗೆ ಅನುಗುಣವಾಗಿ ವ್ಯವಹರಿಸಿದ್ದರೆ, ತನ್ನ ವ್ಯವಹಾರಕ್ಕನುಗುಣವಾದ ಪುನರ್ಜನ್ಮಗಳನ್ನು ಪಡೆದು, ಪುನಃ ಜೀವನಯಾತ್ರೆಯ ಕೊನೆಯ ಭಾಗಕ್ಕೆ ಪ್ರವೇಶಿಸಬೇಕಾಗುತ್ತದೆ. ಇದು ಯುಗಯುಗಾಂತರದವರೆವಿಗೂ ವ್ಯಾಪಿಸಿರುವ ಕಾಲಾವಧಿಯಲ್ಲಿ ವಿಸ್ತಾರವಾಗಿ ಹರಡಿರುವ ಕ್ರಿಯೆಯಾಗಿದೆ. ಈ ಸನ್ನಿವೇಶದಲ್ಲಿ ಸೃಷ್ಟಿಚಕ್ರದ ಚಲನೆಯು ಪ್ರಾರಂಭವಾದುದಾದರೂ ಏಕೆ? ಎಂಬ ಪ್ರಶ್ನೆ ಕೆಲವರಲ್ಲಿ ಉಂಟಾಗುವುದು ಸಹಜ. ಪರಮಾತ್ಮತತ್ತ್ವದಲ್ಲಿ 'ಚೈತನ್ಯ'ವೆಂಬುದಿಲ್ಲದೇ 'ಜಡತೆ'ಯೊಂದೇ ಮುಖ್ಯವಾಗಿದಿದ್ದರೆ, ಸೃಷ್ಟಿ ಚಕ್ರದಚಾಲನೆಯು ಪ್ರಾರಂಭವಾಗುವ ಪ್ರಶ್ನೆಯೇ ಇರುತ್ತಿರಲಿಲ್ಲ! ಆದರೆ ಜಡತೆಗಿಂತಲೂ ಚೈತನ್ಯವು ಪ್ರಭಾವಶಾಲಿಯಾದ ಕಾರಣ ಸ್ವಾಭಾವಿಕವಾಗಿಯೇ ಸೃಷ್ಟಿಚಕ್ರದ ಚಾಲನೆಯು ತನಗೆ ತಾನೇ ಪ್ರಾರಂಭವಾಗಿದೆ. ಇದೊಂದು ಅನಾದಿಯಾದ ಕ್ರಿಯೆ. ಇದರ ವಿಚಾರವಾಗಿ ಸಮಗ್ರವಾದ ತಿಳುವಳಿಕೆಪಡೆಯಬೇಕಾದರೆ, ನಮಗೆ ಅರ್ಥವಾಗಬಲ್ಲ ಯಾವುದೇ ಭಾಷೆಯಲ್ಲಾದರೂ ಆಗಲೀ ಸಮಗ್ರವಾದ : ಸಮರ್ಪಕವಾದ ಶಾಸ್ತ್ರಗಳ ಮಾಹಿತಿಯನ್ನು ಅರಿಯಬೇಕು. ಇಂಥ ಅರಿವನ್ನು ಹೊಂದಿ ಸಾರ್ಥಕವಾದ ಬದುಕನ್ನು ಸಾಗಿಸುವುದು ವಿವೇಕಗಳ ಮಾರ್ಗ. ಇದು ಹಿಂದಿನಿಂದ ನಡೆದುಬಂದಿರುವ ಪರಂಪರೆ.

ಜೀವನದ ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿದಂತೆಯೇ ಆಗಿರಲೀ, ಶ್ರೇಷ್ಠ ಪರಂಪರೆಯನ್ನು ಗೌರವಿಸಿ, ಶ್ರದ್ಧೆಯಿಂದ ಅದರ ಮೂಲಭೂತ ವಿಚಾರಗಳನ್ನು ತಿಳಿದುಕೊಂಡು, ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದುದು ಅನಿವಾರ್ಯ. ಇದು ಆತ್ಮೋನ್ನತಿಯಮಾರ್ಗ. ಆತ್ಮವು ಅವಿನಾಶಿಯೂ ಸತ್ಯವೂ ಆಗಿರುವುದರಿಂದ ಈ ಮಾರ್ಗದಲ್ಲಿ ಬದಲಾವಣೆಯೆಂಬುದೇ ಇಲ್ಲ. ಆದರೆ, ಜೀವನದಲ್ಲಿ ಆತ್ಮದ ಭಾಗವನ್ನು ಕಡೆಗಣಿಸಿ, ದೇಹದ ಭಾಗಕ್ಕಷ್ಟೇ ನಾವು ಪ್ರಾಧಾನ್ಯತೆ ಕೊಟ್ಟು ಜೀವನ ಸಾಗಿಸಿದರೆ ಅಲ್ಲಿ ಕ್ರಮಿಸುವ ಮಾರ್ಗದ ಪರಿಯೇ ಬೇರೆ ರೀತಿಯದು.

ದೇಹವು ಬಯಸುವ ಪ್ರತಿಯೊಂದು ಅಗತ್ಯಗಳನ್ನೂ ಪೂರೈಸುವುದಕ್ಕಾಗಿ ವಿಜ್ಞಾನವು ಪ್ರಗತಿಪಥದಲ್ಲಿ ಕ್ರಮಿಸುತ್ತಿದೆ. ಈ ಉದ್ದೇಶ ಸಾಧನೆಗಾಗಿ ಪ್ರಕೃತಿಯ ರಹಸ್ಯಗಳನ್ನು ಬಯಲಿಗೆಳೆದು, ವಿಶ್ವನಿಯಮಗಳನ್ನು ಉಲ್ಲಂಘಿಸುವ ಕಾರ್ಯ ಬಿರುಸಿನಿಂದ ನಡೆಯುತ್ತಿದೆ. ಪ್ರತಿಯೊಂದು ದೇಹದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಗತ್ಯತೆಯೂ ಬೇರೆ ಬೇರೆಯದಾಗಿರುವುದರಿಂದ ಅವುಗಳಲ್ಲಿ ಸ್ವಾಭಾವಿಕವಾಗಿಯೇ ಹಲವಾರು ವೈವಿಧ್ಯತೆಗಳಿರುತ್ತವೆ. ಇಂಥ ವೈವಿಧ್ಯಗಳು ಸತ್ಯವೂ ಅಲ್ಲ; ನಿತ್ಯವೂ ಅಲ್ಲ. ಕೇವಲ ಮಿಥ್ಯೆ. ಅಂದರೆ ಅಶಾಶ್ವತವಾದುವು. ನಾಶಬದ್ಧವಾದುವು. ಪರಿವರ್ತನ ಶೀಲವಾದುವು. ದೇಹ ಮತ್ತು ಅದರ ಸಮೀಪವರ್ತಿಯಾದ ಮನಸ್ಸು ಹಾಗೂ ಆತ್ಮ ಇವೆರಡೂ ಬೇರೆ ಬೇರೆಯಾದವುಗಳು. ಇವುಗಳ ಸ್ವರೂಪ–ಗುಣಲಕ್ಷಣಗಳೂ ಸಂಪೂರ್ಣವಾಗಿ ಬೇರೆಯಾದವುಗಳೇ. ಇವುಗಳಿಗೆ ಸುಖ, ದುಃಖ, ಸಂತೋಷ, ವ್ಯಥೆ ಮುಂತಾದ ಭಾವಾನುಭವಗಳನ್ನುಂಟುಮಾಡುವ ವಸ್ತು ವಿಷಯಗಳಲ್ಲಿಯೂ ಇದೇ ರೀತಿಯ ಭಿನ್ನತೆ ಇರುತ್ತದೆ.

ಆತ್ಮೋನ್ನತಿಗೆ ಶಾಸ್ತ್ರೋಕ್ತ ಜೀವನಕ್ರಮವೊಂದೇ ಮಾರ್ಗ. ಇದು ಏಕತಾನವಿದ್ದಂತೆ ಎಂದು ಬೇಕಾದರೂ ಭಾವಿಸಬಹುದು. ವೈವಿಧ್ಯಪೂರ್ಣವೆನಿಸುವ ದೇಹಸಂಬಂಧವಾದ ವಿಚಾರಗಳು ರಂಜನೀಯವೆನಿಸುತ್ತವೆ. ದೇಹ ಮನಸ್ಸುಗಳನ್ನು ತೃಪ್ತಿಪಡಿಸುವ ದಿಸೆಯಲ್ಲಿ ರಂಜನೆಯು ಪ್ರಮುಖಪಾತ್ರ ವಹಿಸುತ್ತದೆ. ವೈವಿಧ್ಯಮಯವಾದ ರಂಜನೆಯು ಸ್ವಾಭಾವಿಕವಾಗಿಯೇ ಎಲ್ಲರನ್ನೂ ಆಕರ್ಷಿಸುತ್ತದೆ. ಆದರೆ ಸಾಮಾನ್ಯರ ದೃಷ್ಟಿಯಲ್ಲಿ ನಿಸ್ಸಾರದ್ದೆನಿಸುವ ಶಾಸ್ತ್ರದ ವಿಚಾರಗಳು ಶುಷ್ಕವೆನಿಸುತ್ತವೆ. ಹೇಳಿದ್ದನ್ನೇ ಹೇಳುವುದೆನಿಸುತ್ತದೆ. ಅವು ಆಸಕ್ತಿ ಕೆರಳಿಸಿ, ಗಮನಸೆಳೆಯುವುದು ಅಪರೂಪ. ಆದ್ದರಿಂದ ಶಾಸ್ತ್ರದ ವಿಚಾರವಾಗಿ ತಿಳಿಯುವುದು ಅದರಂತೆ ನಡೆಯುವುದೂ ಸಾಮಾನ್ಯವಾಗಿ ಎಲ್ಲರಿಗೂ ಬೇಸರದ ಸಂಗತಿ. ಕಠಿಣವಾದ ಹಾದಿ. ಮನರಂಜನೆಯು ಸಂತೋಷದ ಸಂಗತಿ; ಸುಲಭವಾದ ಮಾರ್ಗ.

ಆತ್ಮೋನ್ನತಿಯ ವಿಚಾರ ವಿಚಾರದೊಂದಿಗೆ ಮನರಂಜನೆಯನ್ನೂ ಪ್ರಮುಖ ಗುರಿಯಾಗಿ ಹೊಂದಿದ ಸಾಹಿತ್ಯದಲ್ಲಿ ಹೇಳಿದ್ದನ್ನೇ ಹೇಳುವುದಕ್ಕೆ ಪುನರುಕ್ತಿ ದೋಷವೆಂದು ಆಕ್ಷೇಪಿಸುವುದು ಕ್ರಮ. ಆದರೆ ಆತ್ಮೋನ್ನತಿಯನ್ನೇ ಮೂಲ ಉದ್ದೇಶವನ್ನಾಗಿ ಹೊಂದಿ ರಚಿತವಾಗುವ ಸಾಹಿತ್ಯ ಕೃತಿಗಳಲ್ಲಿ ಇಂಥ ದೋಷವನ್ನು ಗುರುತಿಸುವುದು ಸಾಧುವಲ್ಲ. ಲೌಕಿಕ ವಿಚಾರಗಳನ್ನು ಕುರಿತ ಮನರಂಜನೆಯ ಓದು ಒಂದೇ ಸಲಕ್ಕೆ ತೃಪ್ತಿ ನೀಡಿದರೂ ನೀಡಬಹುದು. ಎರಡನೆಯ ಸಲದ ಓದಿಗೆ ಅದರಲ್ಲಿ ಆಸಕ್ತಿ ಉಂಟಾಗುವುದೂ ಅಪರೂಪ. ಆದರೆ ಪಾರಮಾರ್ಥಿಕ ವಿಚಾರಗಳನ್ನು ಕುರಿತ ಓದು ಈ ರೀತಿಯದಲ್ಲ. ಪ್ರಾರಂಭದಲ್ಲಿ ಅನೇಕ ಕೃತಿಗಳ ಮೂಲಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದೇ ವಿಚಾರವನ್ನು ಕುರಿತು ಹಲವಾರು ಸಲ ಓದಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೂ ಅದು ಸಾಮಾನ್ಯರ ಆಲೋಚನೆಯ ಹಿಡಿತಕ್ಕೇ ಸಿಕ್ಕದೆ ಜಾರಿ ಹೋಗುವ ಸಂಭವ ಹೆಚ್ಚು. ಹೀಗಾಗಿ ನಮ್ಮ ಜೀವನದಲ್ಲಿ ಆತ್ಮಕ್ಕೆ ಸಂಬಂಧಿಸಿದ ಪಾರಮಾರ್ಥಿಕ ವಿಚಾರಗಳನ್ನು ಎಷ್ಟು ಕೃತಿಗಳಲ್ಲಿ ಎಷ್ಟು ಸಲ ವಿವರಿಸಿ ಹೇಳಿದ್ದರೂ, ಅದನ್ನು ಲೆಕ್ಕವಿಲ್ಲದಷ್ಟು ಸಲ ಪ್ರತಿದಿನವೂ ಪಾರಾಯಣ ಮಾಡುತ್ತಿದ್ದರೂ ಅವು ವಿವರಿಸುವ ಮೂಲಅಂಶಗಳು ನಮ್ಮ ಮನಸ್ಸಿಗೆ ವೇದ್ಯವಾಗಿ, ವಿಷಯವು ಪೂರ್ಣ ಪರಿಣಾಮಬೀರುವುದು ಅಪರೂಪದ ಸಂಗತಿ. ಕಳ್ಳತನ, ಕೊಲೆ, ಸುಲಿಗೆ, ವ್ಯಭಿಚಾರ, ವಂಚನೆ, ಕುಡಿತ, ಕುಣಿತ ಮುಂತಾದ ವಿಚಾರಗಳಿಗೆ ಸಂಬಂಧಿಸಿದ ಮನರಂಜನೆಯ ಸಾಹಿತ್ಯದಲ್ಲಿ ಕಾಣಬರುವ ಮಾಹಿತಿಗಳೂ 'ಹಾಡಿದ್ದೇ ಹಾಡೋ ಕಿಸುಬಾಯಿದಾಸ' ಎಂಬಂತಿದ್ದರೂ ಅದರಲ್ಲಿ ಲೇಖಕನ ಬುದ್ಧಿಶಕ್ತಿಯ ಪರಿಣಾಮವಾಗಿ ಕಾಣಬರುವ ನಿರೂಪಣಾ ಶೈಲಿಯ ಆಕರ್ಷಣೆಯಿಂದಾಗಿ ಸಾಮಾನ್ಯ ಓದುಗರನ್ನು ಸೆರೆಹಿಡಿಯುವುದು ಅವುಗಳಿಗೆ ಸುಲಭವೆನಿಸುತ್ತದೆ. ಇದೇ ತಂತ್ರವನ್ನು ಪಾರಮಾರ್ಥಿಕ ವಿಚಾರಕ್ಕೆ ಸಂಬಂಧಿಸಿದ ಸಾಹಿತ್ಯದಲ್ಲೂ ಅಳವಡಿಸಬಹುದಾದರೂ, ವಿಷಯದ ಏಕತಾನತೆಯಿಂದಾಗಿ ಅದು ನಿರೀಕ್ಷಿಸಿದ ಪರಿಣಾಮಬೀರುವ ಸಾಧ್ಯತೆ ಬಹಳ ಕಡಿಮೆ. ಆದ್ದರಿಂದ ಪಾರಮಾರ್ಥಿಕ ವಿಚಾರ ಕುರಿತ ಸಾಹಿತ್ಯದಲ್ಲಿ ವಸ್ತು, ವಿಷಯ, ಪಾರಿಭಾಷಿಕ ಪದಗಳ ಪುನರುಕ್ತಿಯು ಅನಿವಾರ್ಯವಾದುದಾಗಿರುತ್ತದೆ. ಆಸಕ್ತಿಯುಳ್ಳ ಓದುಗರಿಗೆ ಇವು ಮನವರಿಕೆಯಾಗಿ, ಅವರ ನಿತ್ಯಜೀವನದಲ್ಲಿ ಇವುಗಳ ನಿರಂತರ ಅನುಷ್ಠಾನವು ರೂಢಿಗೆ ಬರುವವರೆವಿಗೂ ಅನಂತರವೂ ಕೂಡ ಇಂಥ ಸಾಹಿತ್ಯ ಕೃತಿಗಳಲ್ಲಿ ವಿಷಯಗಳನ್ನು ಹಲವಾರು ಸಲ ಒತ್ತಿ ಒತ್ತಿ ವಿವರಿಸಿ ಹೇಳಬೇಕಾದುದು ಅತ್ಯಗತ್ಯ. ಇದೊಂದು ಅನುಭವ ವೇದ್ಯವಾದ ಸಂಗತಿ.

ಡಿ॥ ಕೋ.ವಾ. ಕಾರಂತರಂಥ ಮಹನೀಯರು ಇಂಥ ಅನುಭವ ಪಡೆದವರಾದ ಕಾರಣ, ತಮ್ಮ ಸಾಹಿತ್ಯ ಕೃತಿಗಳೆಲ್ಲದರಲ್ಲಿಯೂ ಶಾಸ್ತ್ರಸಂಬಂಧವಾದ ಮಾಹಿತಿಗಳನ್ನು ಬಹಳ ವಿವರವಾಗಿ, ಸರಳವಾಗಿ, ಒತ್ತಿ ಒತ್ತಿ ತಿಳಿಯ ಹೇಳಿದ್ದಾರೆ. ಅವರ ಸಾರ್ಥಕ ಸಾಹಿತ್ಯದಿಂದ ಪ್ರಭಾವಿತನಾದ ನಾನೂ ನನ್ನ ಇತಿಮಿತಿಯಲ್ಲಿ ವಿವೇಚಿಸಿ ; ಈ ಕ್ಷೇತ್ರದಲ್ಲಿ ನನ್ನಿಂದಾದ ಸೇವೆ ಸಲ್ಲಿಸುವ ಉದ್ದೇಶದಿಂದ ಕಾರ್ಯೋನ್ಮುಖನಾಗಿರುವುದರಿಂದ ಕಾರಂತರು ಅನುಸರಿಸಿದ ಮಾರ್ಗವನ್ನೇ ಅನುಸರಿಸುವುದು ನನಗೆ ಅನಿವಾರ್ಯವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನು ಈ ಕಿರುಹೊತ್ತಿಗೆಯಲ್ಲಿ ಸೂಚಿಸಿರುವ ನಿತ್ಯವಿಧಿಯನ್ನು ಕುರಿತು ಒಂದು ಮಾತು; ದಿನ ಬೆಳಗಾದರೆ ಸಿಕ್ಕಿದ್ದನ್ನು ತಿಂದು, ಕುಡಿದು, ಸಿಕ್ಕಲ್ಲಿ ಮಲಗಿ ನಿದ್ರಿಸುವುದು. ಹಗಲಿರುಳೂ ದುಡಿದು ಹಣ ಸಂಪಾದಿಸುವುದು. ಮನಸೋ ಇಚ್ಛೆ ಜೀವಿಸುವುದು ಮುಂತಾದ ವರ್ತನೆಯು ನಮ್ಮ ಜೀವನದಲ್ಲಿ ಪ್ರವೃತ್ತಿಯ ಮಾರ್ಗವೆನಿಸುತ್ತದೆ. ಅಂದರೆ, ಲೆಕ್ಕವಿಲ್ಲದಷ್ಟು ಜನ್ಮಗಳನ್ನೆತ್ತಿಯೂ ಇಂಥ ಅಲ್ಪ ತೃಪ್ತಿಯ ಕಾರ್ಯದಲ್ಲಿ ತೊಳಲಾಡುವುದರಲ್ಲೇ ಪೂರ್ಣ ಆಸಕ್ತಿವಹಿಸುವುದಾಗುತ್ತದೆ. ಇದನ್ನು ತೊರೆದು, ಆತ್ಮ ಸಂಬಂಧವಾದ ವಿಚಾರದಲ್ಲಿ ಆಸಕ್ತಿವಹಿಸಿ, ಶಾಸ್ತ್ರೋಕ್ತ ಜೀವನ ಪಥವನನ್ನನುಸರಿಸಿ, ಜೀವನ ಮರಣಗಳ ಸಂಕಟದಿಂದ ಪಾರಾಗಿ, ಪರಮಾತ್ಮನೊಂದಿಗೆ ಶಾಶ್ವತವಾಗಿ ಸೇರ್ಪಡೆಯಾಗಲು ಪ್ರಯತ್ನಿಸುವುದು ನಿವೃತ್ತಿಮಾರ್ಗವೆನಿಸುತ್ತದೆ. ಪ್ರತಿಯೊಂದು ಆತ್ಮವೂ ಒಂದಿಲ್ಲೊಂದು ದಿನ ಇಂಥ ನಿವೃತ್ತಿಮಾರ್ಗಾವಲಂಬಿಯಾಗಲೇಬೇಕಾದುದು ಅನಿವಾರ್ಯ. ಇಂಥ ನಿವೃತ್ತಿಮಾರ್ಗಕ್ಕೆ ಒಲವು ಹೊಂದುವ ಮನೋಭಾವವನ್ನು 'ವೈರಾಗ್ಯ' ಎಂದೂ ಸೂಚಿಸಲಾಗುತ್ತದೆ. ವೈರಾಗ್ಯವೆಂದರೆ, ಪಾರಮಾರ್ಥಿಕ ಚಿಂತನೆಯೊಂದನ್ನು ಹೊರತುಪಡಿಸಿ, ಉಳಿದೆಲ್ಲ ಲೌಕಿಕ ವಿಚಾರಗಳಲ್ಲೂ ನಿರಾಸಕ್ತರಾಗುವುದು ಎಂದರ್ಥ.

ಲೌಕಿಕ ಜೀವನದಲ್ಲಿ ವ್ಯಕ್ತಿಗಳು ನಿರಾಸಕ್ತರಾಗುವುದಕ್ಕೆ ಜಾತಿ, ಮತ, ಪಂಥ, ಪಂಗಡ, ವಿದ್ಯೆ ವಯೋಮಾನ ಮುಂತಾದ ಯಾವುದೇ ವಿಚಾರವಾಗಿಯೂ ನಿರ್ದಿಷ್ಟವಾದ ಅರ್ಹತಾಮಟ್ಟವೆಂಬುದೇನಿಲ್ಲ. ತಮ್ಮ ಜೀವಿತದ ಎಂಟನೇ ವಯಸ್ಸಿಗೇ ಪೂರ್ಣವೈರಾಗ್ಯ ಪಡೆದಿದ್ದ ಶಂಕರ ಭಗವತ್ಪಾದರಂಥ ಮಹಾತ್ಮರಿರುವಂತೆಯೇ ಜೀವಿತದಲ್ಲಿ ಎಂಬತ್ತು ಸಂವತ್ಸರಗಳನ್ನು ಕಳೆದರೂ ಲೌಕಿಕ ವಿಚಾರಗಳಲ್ಲಿ ಲಂಪಟರೆನಿಸುವವರೂ ಇರುವುದುಂಟು. ಹುಟ್ಟಿನೊಂದಿಗೇ ಮಹಾತ್ಮರೆನಿಸಿಕೊಂಡವರಿರುವಂತೆಯೇ ಸಾಯುವವರೆವಿಗೂ ಸತ್ತನಂತರವೂ ಯೋಗ್ಯರೆನಿಸಿಕೊಳ್ಳದಿರುವವರೂ ಉಂಟು. ಇದು ಜೀವನದಲ್ಲಿ ವೈರಾಗ್ಯಕ್ಕೆ ಸಂಬಂಧಿಸಿದಂತೆ ನಾವು ಕಾಣಬಹುದಾದ ಪರಿಧಿ.

ಜೀವನಚಕ್ರದಲ್ಲಿ ವೈರಾಗ್ಯವೆಂಬುದು ಯಾವ ಆತ್ಮವನ್ನೂ ಬಿಡುವಂಥದಲ್ಲ. ಪ್ರತಿಯೊಂದು ಆತ್ಮವೂ ಒಂದಿಲ್ಲೊಂದು ಜನ್ಮದಲ್ಲಿ ಇಂಥ ವೈರಾಗ್ಯದ ಭಾವನೆಯನ್ನು ಸಂಪೂರ್ಣವಾಗಿ ಮೈಗೂಡಿಸಿಕೊಳ್ಳುವುದು ನಿಸ್ಸಂಶಯ. ವೈರಾಗ್ಯಕ್ಕೆ ವಿರುದ್ಧವಾದುದು ಲೌಕಿಕ ಜೀವನಾಸಕ್ತಿ. ಇದು ಸಾಮಾನ್ಯವಾಗಿ ಎಲ್ಲರಲ್ಲೂ ಕಾಣಬರುವಂಥದು. ದೈಹಿಕಶಕ್ತಿ, ಸಾಮರ್ಥ್ಯ, ಧೈರ್ಯ,

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಹಸ, ರೂಪು, ಯೌವನ, ಸಂಪತ್ತು, ಆಕರ್ಷಣೆ, ಸ್ತ್ರೀಪುರುಷ ವ್ಯಾಮೋಹ ಮುಂತಾದುವುಗಳು ಪ್ರತಿಯೊಬ್ಬ ವ್ಯಕ್ತಿಯಲ್ಲೂ ತುಂಬಿರುವುದು ಸಹಜ. ಆದರೆ ಇದು ಶಾಶ್ವತವಾದುದಲ್ಲ ! ಈ ಜನ್ಮದಲ್ಲಿ ನಮಗೆ ತಿಳುವಳಿಕೆ ಬರುವ ಮೊದಲು ಜಗತ್ತಿನಲ್ಲಿ ಎಷ್ಟೆಲ್ಲ ಮಹಾನ್ ಸಾಮರ್ಥ್ಯಶಾಲಿಗಳು ತಮ್ಮ ಜೀವನ ನಾಟಕದಲ್ಲಿ ವಿಜೃಂಭಿಸಿ ಕೊನೆಗೆ ಪ್ರಕೃತಿನಿಯಮಕ್ಕೆ ಶರಣಾಗಿರುವುದನ್ನು ಕಾಣುತ್ತೇವಲ್ಲವೆ? ನಮ್ಮ ಸಮಕಾಲೀನರಾಧ ಕುಪ್ರಸಿದ್ಧ ವ್ಯಭಿಚಾರಿಗಳು, ಕಳ್ಳಕಾಕರು, ದರೋಡೆಗಾರರು, ಸಮಾಜದ್ರೋಹಿಗಳು, ನಯವಂಚಕರು, ರಾಜಕಾರಣಿಗಳು, ಜೀವನದ ವಿವಿಧ ಕ್ಷೇತ್ರಗಳಲ್ಲಿ ಪ್ರಖ್ಯಾತರೋ, ಕುಖ್ಯಾತರೋ ಆದವರು; ಚಾರಿತ್ರಿಕ ಮಹತ್ವ ಹೊಂದಿರುವವರು, ಪೌರಾಣಿಕ ಪಾತ್ರಗಳು ಮುಂತಾದವರೆಲ್ಲರ ಜೀವನಚರಿತ್ರೆಯನ್ನೂ ನಾವು ಗಮನಿಸಿದರೆ, ಯಾರೊಬ್ಬರ ಜೀವನದಲ್ಲೂ ಇಂಥ ಲೌಕಿಕ ಜೀವನಾಸಕ್ತಿಯು ಶಾಶ್ವತವಾಗಿ ಉಳಿದು ಬಾಳಿದ್ದನ್ನು ಕಾಣಲು ಸಾಧ್ಯವಿಲ್ಲ ! ಅಂದಮೇಲೆ ನಮ್ಮ ಜೀವನದಲ್ಲಿ ಮಾತ್ರ ಇಂಥ ಲೌಕಿಕ ಸುಖ ಸಂತೋಷ, ಭೋಗಜೀವನಾಸಕ್ತಿ ಮುಂತಾದುವು ಶಾಶ್ವತವಾಗಿ ವಿಜೃಂಭಿಸುವುದೆಂಬ ಭ್ರಮೆ ಹೊಂದುವುದರಲ್ಲಿ ಅರ್ಥವೇನಿದೆ ? ಇದೊಂದು ಸಾರ್ವಕಾಲಿಕ ಪ್ರಶ್ನೆ. ಈ ಪ್ರಶ್ನೆಗೆ ಸಾಂಕೇತಿಕವಾಗಿ, ಸಮರ್ಪಕವಾಗಿ ಉತ್ತರನೀಡುವುದೇ ಸಂಧ್ಯೋಪಾಸನೆಯಲ್ಲಿ ಅಡಗಿರುವ ಮೂಲರಹಸ್ಯವೆಂಬುದನ್ನು ನಾವು ಅರಿತಿರಬೇಕು.

ಈ ಜಗತ್ತಿನ ಸೃಷ್ಟಿಯಲ್ಲಿ ಪಂಚಮಹಾಭೂತಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಕಲ ಸೃಷ್ಟಿಯೂ ತನ್ನ ಅಂತ್ಯದಲ್ಲಿ ಈ ಪಂಚಮಹಾಭೂತಗಳಲ್ಲೇ ವಿಲೀನವಾಗುವುದು ಸರ್ವವಿದಿತ. ಇದನ್ನು ಪ್ರತಿದಿನವೂ ಗಮನದಲ್ಲಿ ಇರಿಸಿಕೊಂಡು, ನಮ್ಮ ಜೀವನವನ್ನು ವಿಶ್ವನಿಯಮಗಳಿಗೆ ಅನುಗುಣವಾಗಿ ಮುನ್ನಡೆಸಲು ತರಬೇತಿ ನೀಡುವುದಕ್ಕಾಗಿಯೇ ಸಂಧ್ಯೋಪಾಸನೆಯು ನಿತ್ಯವಿಧಿಯಲ್ಲಿ ಅಗ್ನಿಯ ಸಂಕೇತವಾದ ಭಸ್ಮ ಹಾಗೂ ಪೃಥ್ವಿಯ ಸಂಕೇತವಾದ ಗೋಪೀಚಂದನದಿಂದ ಲಾಂಛನಗಳನ್ನು ಧರಿಸುವ ಕ್ರಮ ರೂಢಿಗೆ ಬಂದಿದೆ. ನಾವು ಎಷ್ಟೇ ಸಾಮರ್ಥ್ಯಶಾಲಿಗಳಾಗಿದ್ದರೂ—ಎಷ್ಟೇ ಬುದ್ಧಿಶಕ್ತಿ, ಹಣ, ಮನೆ, ಸೌಂದರ್ಯ, ಸುಂದರಿಯರು—ಮುಂತಾದುವನ್ನು ಹೊಂದಿದ್ದರೂ, ಕೊನೆಗೊಂದುದಿನ ಹಿಡಿಬೂದಿಯೋ ಹುಡಿಮಣ್ಣೋ ಆಗುವುದು ನಿಸ್ಸಂಶಯವೆಂಬ ವಿಚಾರವನ್ನು ಇದು ಪ್ರತಿನಿತ್ಯವೂ ನಮಗೆ ನೆನಪು ಮಾಡುತ್ತಿರುತ್ತದೆ ! ಇದು ಸೃಷ್ಟಿಯನಿಯಮ. ಈ ನಿಯಮಕ್ಕೆ ಶರಣಾಗದೇ ನಮಗೆ ಬೇರೆದಾರಿಯೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲ. ಮೇಲುನೋಟಕ್ಕೆ ಅಷ್ಟೇನೂ ಹಿತವೆನಿಸದ, ಆಸಕ್ತಿತಾರದ ಇಂಥ ನಿವೃತ್ತಿಮಾರ್ಗದಲ್ಲಿ ಸಾಗುವುದು ಪ್ರಾರಂಭದಲ್ಲಿ ತುಂಬಾ ಕಷ್ಟ ಸಾಧ್ಯವೆನಿಸುತ್ತದೆ. ಆದರೆ ಕ್ರಮೇಣ ನಮ್ಮ ಹೃದಯ, ಬುದ್ಧಿ, ಮನಸ್ಸು ದೇಹಭಾವನೆಯನ್ನು ತೊರೆದು ; ಆತ್ಮದ ಸತ್ಯತೆಯನ್ನು ಮನಗಾಣುವ ಪ್ರಯತ್ನದಲ್ಲಿ ಒಂದೊಂದೇ ಹೆಜ್ಜೆ ಇರಿಸಿದಂತೆ ಇಂಥ ನಿವೃತ್ತಿ ಮಾರ್ಗದಲ್ಲಿ ಆಸಕ್ತಿ ಕೆರಳುವುದು ಸರಾಗವೆನಿಸುತ್ತದೆ. ಈ ಕಾರ್ಯವನ್ನು ಸುಲಭವಾಗಿ ಮಾಡಲು ಪ್ರತಿಯೊಬ್ಬ ವ್ಯಕ್ತಿಗೂ ಸೂಕ್ತ ತರಬೇತಿ ನೀಡುವುದೇ ನಮ್ಮ ಶಾಸ್ತ್ರ ಸಂಪ್ರದಾಯಗಳ ಮೂಲ ಉದ್ದೇಶವಾಗಿದೆ. ಜೀವನ್ಮುಕ್ತಿಗಾಗಿ ಪ್ರತಿಯೊಬ್ಬ ವ್ಯಕ್ತಿಯೂ ಅನುಸರಿಸಬೇಕಾದ ಜೀವನಕ್ರಮವನ್ನು ಈ ಶಾಸ್ತ್ರಸಂಪ್ರದಾಯಗಳು ನಿರ್ದೇಶಿಸುತ್ತವೆ. ಸದಾಚಾರ, ಪರೋಪಕಾರ, ನಿರ್ವಂಚನೆ, ಶ್ರಮದದುಡಿಮೆ, ಸೌಹಾರ್ದ ಜೀವನ, ದಾನ, ಸಂಧ್ಯೋಪಾಸನೆ, ದೇವತಾರಾಧನೆ, ಶ್ರಾದ್ಧಾದಿ ಪಿತೃಕಾರ್ಯಗಳು, ಜಪ ತಪಸ್ಸು ಮುಂತಾದ ಪ್ರಾಯಶ್ಚಿತ್ತ ಕ್ರಿಯೆಗಳು, ಮೋಕ್ಷಾಕಾಂಕ್ಷೆಯುಕ್ತವಾದ ವೈರಾಗ್ಯ ಜೀವನ ಇತ್ಯಾದಿ ಕ್ರಮಗಳನ್ನು ಅದು ಆದೇಶಿಸಿದೆ. ಇವು ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯಿಸುವ ಆದೇಶಗಳು. ವರ್ಣಾಶ್ರಮ ಧರ್ಮಕ್ರಮದಲ್ಲಿ ದ್ವಿಜರೆನಿಸಿದವರಿಗೆ ; ಅದರಲ್ಲೂ ಬ್ರಾಹ್ಮಣರಿಗೆ ಈ ನಿಯಮಗಳು ಸ್ಪಷ್ಟವಾಗಿ ಅನ್ವಯಿಸುತ್ತವೆ. ಅದರಲ್ಲೂ ವಿಶೇಷವಾಗಿ ದ್ವಿಜರು ನಿತ್ಯ ಕರ್ಮವಾದ ಸಂಧ್ಯೋಪಾಸನೆಯನ್ನು ತಪ್ಪದೇ ಆಚರಿಸಲೇಬೇಕೆಂಬ ಕಡ್ಡಾಯ ಇದೆ.

ಸಂಧ್ಯೋಪಾಸನೆಯನ್ನು ಶ್ರದ್ಧೆಯಿಂದ ಆಚರಿಸಬೇಕು. ಕೇವಲ ತೋರಿಕೆಯ ಧರ್ಮಾಚರಣೆಗಾಗಿ ಆಚರಿಸಿದರೆ ಉಪಯೋಗವಿಲ್ಲ. ಮನೆಯಲ್ಲಿ ಪಿತ್ರಾರ್ಜಿತವಾದ ಇಲ್ಲವೇ ಪತ್ನ್ಯಾರ್ಜಿತವಾದ ಧನಸಂಪತ್ತನ್ನು ಸ್ವಾಧೀನ ಪಡಿಸಿಕೊಳ್ಳುವ ದುರಾಲೋಚನೆಯಿಂದಲೇ ಸಂಬಂಧಿಸಿದವರಇಚ್ಛಾನಿಚ್ಛೆಗಳಿಗೆ ಅನುಗುಣವಾಗಿ ಶಾಸ್ತ್ರೋಕ್ತ ಕ್ರಮವೆಂದು ಉಪನಯನ, ವಿವಾಹ, ಶ್ರಾದ್ಧಾದಿ ಧಾರ್ಮಿಕ ಕಾರ್ಯಗಳನ್ನು ಶಾಸ್ತ್ರ ವಿರುದ್ಧವಾದ ಕ್ರಮದಲ್ಲಿ ನಡೆಸುವ ನಾಟಕ ಮಾಡುವವರಿಗೆ ಇವುಗಳ ಆಚರಣೆಯಿಂದ ಶಾಸ್ತ್ರೋಕ್ತವಾದ ಯಾವುದೇ ಫಲವೂ ಲಭಿಸದೇ, ಅದು ನಿಷ್ಪ್ರಯೋಜಕವಾಗುವುದು ನಿಸ್ಸಂಶಯ. ಶಾಸ್ತ್ರಗಳೇ ಇದನ್ನು ಸಾರಿ ಸಾರಿ ಹೇಳುತ್ತಿರುವುದನ್ನು ನಾವು ಗಮನಿಸಬಹುದು.

"ಶಾಸ್ತ್ರೋಕ್ತವಾದ ಕರ್ಮಗಳನ್ನು ಶಾಸ್ತ್ರೋಕ್ತವಾದ ಕ್ರಮದಲ್ಲಿ ನಡೆಸಿದರೆ ಮಾತ್ರವೇ ನಮಗೆ ಅದರ ಪೂರ್ಣ ಪ್ರಯೋಜನ ಲಭಿಸುವುದು. ಇಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದಲ್ಲಿ ಅಂಥ ಕರ್ಮಾಚರಣೆ ವ್ಯರ್ಥ; ನಮ್ಮ ಇಂದಿನ ಸಾಮಾಜಿಕಪರಿಸರದಲ್ಲಿ ಇಂಥ ಕರ್ಮಗಳನ್ನು ಸಂಬಂಧಿಸಿದ ನಿಯಮಗಳಿಗೆ ಅನುಗುಣವಾಗಿ ನಿರ್ವಹಿಸಲು ಸಾಧ್ಯವಿಲ್ಲ. ಆದ್ದರಿಂದ ಇವುಗಳ ಆಚರಣೆ ಇಂದಿನಪರಿಸರಕ್ಕೆ ಅನುಗುಣವಾಗಿಲ್ಲ"ವೆಂದು ನಿರ್ಧರಿಸಿ ಅವುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ, ಕೈಬಿಡುವುದೇ ಇಂದಿನ ದಿನಗಳಲ್ಲಿ ಸಾರ್ವತ್ರಿಕವಾಗಿ ಕಾಣಬರುವ ಸಂಗತಿಯಾಗಿದೆ. ನಿಜಕ್ಕೂ ಇದು ಶಾಸ್ತ್ರ ಒಪ್ಪುವ ನಿರ್ಧಾರವಲ್ಲ. ನಮ್ಮ ಆಚರಣೆಗಳಿಂದ ಯಾವುದೇ ಸತ್ಫಲ ಅಥವಾ ದುಷ್ಫಲವಿದ್ದರೂ ಅದನ್ನು ಅನುಭವಿಸುವವರು ನಾವು. ಅಂದರೆ ನಮ್ಮ ಆತ್ಮವೇ ವಿನಃ ಆದರಿಂದ ಶಾಸ್ತ್ರ-ಸಂಪ್ರದಾಯಗಳಿಗೆ ಆಗಬೇಕಾದ್ದೇನೂ ಇಲ್ಲ! ನಮ್ಮ ಆತ್ಮೋನ್ನತಿಯಿಂದ ಬೇರೊಂದು ಆತ್ಮಕ್ಕೆ ಆಗಬೇಕಾದದ್ದೂ ಹೆಚ್ಚಿನದೇನಿಲ್ಲ. ಪರಮಾವಧಿಯೆಂದರೆ ನಮ್ಮ ಪೂರ್ವಿಕರ ಆತ್ಮಗಳಿಗೆ ವಿಶೇಷ ಆನಂದ ಉಂಟಾಗಬಹುದಷ್ಟೆ. ಅವುಗಳಿಂದ ನಮಗೆ ಇನ್ನೂ ಹೆಚ್ಚಿನ ಉನ್ನತಿಗಾಗಿ ಸೂಕ್ತ ಮಾರ್ಗದರ್ಶನ-ನೆರವು ದೊರೆಯುವ ಅವಕಾಶವಿರುವುದು ಖಚಿತ.

ನಮ್ಮೆಲ್ಲ ಒಳ್ಳೆಯ ಅಥವಾ ಕೆಟ್ಟ ಕರ್ಮಾಚರಣೆಗಳಿಗೆ ನಮ್ಮ ಆತ್ಮವೇ ಸಂಪೂರ್ಣವಾಗಿ ವಾರಸುದಾರನೆಂಬುದನ್ನು ತಿಳಿದನಂತರವಾದರೂ ನಮ್ಮಲ್ಲಿ ಯುಕ್ತವಾದ ಕ್ರಮದಲ್ಲಿ ಸತ್ಕರ್ಮಾಚರಣೆಯು ಒಲವು ಉಂಟಾಗಲೇಬೇಕು. ಇದು ಉನ್ನತಿಯಮಾರ್ಗದಲ್ಲಿ ಆತ್ಮವು ಸಾಗುತ್ತಿರುವುದರ ಸ್ಪಷ್ಟಸೂಚನೆ. ಹಾಗಿಲ್ಲವಾದರೆ ಅಂಥ ಆತ್ಮವು ಅವನತಿಯ ಮಾರ್ಗದಲ್ಲಿ ಪ್ರವಹಿಸುತ್ತ, ತನ್ನನ್ನು ತಾನು ಅತ್ಯಂತ ಕೀಳುಮಟ್ಟದ ಪ್ರಾಣಿ-ಕ್ರಿಮಿಕೀಟಗಳ ಜನ್ಮಕ್ಕೆ ಯೋಗ್ಯವನ್ನಾಗಿಸುತ್ತಿದೆ ಎಂದು ಖಚಿತವಾಗಿ ತಿಳಿಯಬಹುದು.

ದೇಹದಂಡನೆ, ಧನದಂಡನೆ, ಜೈಲುವಾಸ ಮುಂತಾದ ಲೌಕಿಕ ಶಿಕ್ಷೆಯ ಭಯದಿಂದಲೇ ಮಾನವತ್ವಹೊಂದಿದ ಎಲ್ಲ ವ್ಯಕ್ತಿಗಳೂ ಬಹುಪಾಲು ಯೋಗ್ಯರಾಗಿ ಜೀವಿಸುವ ಆಕಾಂಕ್ಷೆ ಹೊಂದುತ್ತಾರೆ. ದುಷ್ಟಮೃಗಗಳ ಸಂಸ್ಕಾರವನ್ನು ಹೊಂದಿದವರು ಮಾತ್ರ ಇದಕ್ಕೆ ಹೊರತಾಗಿರುತ್ತಾರೆ. ಅದಮೇಲೆ ಮಲ ಮೂತ್ರಗಳಲ್ಲಿ ಜೀವಿಸುವ ಕ್ರಿಮಿಕೀಟಗಳು, ನಾಯಿ, ಹಂದಿ ಇತ್ಯಾದಿ ಕ್ಷುದ್ರ ಪ್ರಾಣಿಗಳಜನ್ಮವನ್ನು ನಮಗೆ ಶಿಕ್ಷೆಯರೂಪದಲ್ಲಿ ಖಂಡಿತವಾಗಿಯೂ ನೀಡುವ ಭಗವಂತನ ವಿಶ್ವನಿಯಮವನ್ನು ಕುರಿತಾಗಿ ನಾವು ಎಷ್ಟು ಭಯಭೀತಿಗಳಿಂದ ವರ್ತಿಸಿ ಯೋಗ್ಯರಾಗಿ ಬಾಳ್ವೆ ನಡೆಸಬೇಕಿದೆಯೆಂಬುದನ್ನು ಈಗ ವಿವೇಚಿಸಬೇಕಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾನವಜನಾಂಗಕ್ಕೆ ದೇವತೆಗಳೋಪಾದಿಯಲ್ಲಿ ಜೀವಿಸಬೇಕಾದ ದ್ವಿಜರು ಇಂದು ತಮ್ಮ ಸಾಮಾಜಿಕ ಹಾಗೂ ವೈಯಕ್ತಿಕ ಜೀವನದಲ್ಲಿ ಹೊಂದಿರುವ ಕಷ್ಟಕಾರ್ಪಣ್ಯಗಳು ; ಅನುಭವಿಸುತ್ತಿರುವ ದುಃಖ ದುಮ್ಮಾನಗಳು ಅವರ್ಣ ನೀಯ. ಇದಕ್ಕೆ ಮೂಲಕಾರಣ : ಅವರ ಧರ್ಮವಿರುದ್ಧವಾದ ಜೀವನದ ಒಲವು. ಇಂಥ ಕೆಟ್ಟ ಒಲವಿಗೆ ಪ್ರೇರಣೆ ಬಂದದ್ದಾದರೂ ಹೇಗೆ ? ಸಂಧ್ಯೋ ಪಾಸನೆಯನ್ನು ಕೈಬಿಟ್ಟು ಆಲಸಿಗರಾಗಿರಲು ದ್ವಿಜಸಮೂಹವು ಅಪೇಕ್ಷೆ ಹೊಂದಿದುದೇ ಇದಕ್ಕೆ ಮೂಲಕಾರಣ.

ನಮ್ಮ ಆತ್ಮವಿಕಾಸದ ದಿಸೆಯಲ್ಲಿ ಅಷ್ಟೇನೂ ಮಹತ್ವದ್ದಲ್ಲದ ಲೌಕಿಕ ಸುಖೋಪಭೋಗಗಳು ಮತ್ತು ಸಾಮಾಜಿಕ ವರ್ಚಸ್ಸಿನ ಹಂಬಲ ಮುಂತಾದ ಹುಂಬಕಾರಣಗಳಿಂದ ಪ್ರೇರಿತರಾಗಿ : ತಲೆತಲಾಂತರಗಳಿಂದಲೂ ಶ್ರದ್ಧಾಸಕ್ತಿ ಯಿಂದ ನಡೆದು ಬಂದಿದ್ದ ಸಂಧ್ಯೋಪಾಸನೆಯಂಥ ಮಹತ್ವಪೂರ್ಣವಾದ ಧಾರ್ಮಿಕ ವಿಧಿಯನ್ನು ನಾವು ಉಪೇಕ್ಷಿಸಿ, ಅದರ ವಿಧಿಬದ್ಧ ಅನುಷ್ಠಾನ ಕ್ರಮ ವನ್ನು ತಿಳಿಯದವರಾಗಿರುವುದು ನಮ್ಮ ಪೂರ್ವಾರ್ಜಿತ ಕರ್ಮಫಲ ! ಇದಕ್ಕೆ ಸೂಕ್ತವಾದ ಶಿಕ್ಷೆಯನ್ನು ದ್ವಿಜಸಮೂಹವು ತನ್ಮೂಲಕ ಮಾನವ ಸಮಾಜವೂ ಸಾಕಷ್ಟು ಅನುಭವಿಸಿದ್ದಾಗಿದೆ. ಅದಕ್ಕಾಗಿ ಪಶ್ಚಾತ್ತಾಪಪಟ್ಟು, ಹಿಂದೆ ಆಗಿ ಹೋದ ತಪ್ಪನ್ನು ತಿದ್ದಿ, ಸರಿಪಡಿಸಿಕೊಳ್ಳುವುದೊಂದೇ ಈಗ ಉಳಿದಿರುವ ಉತ್ತಮವಾದ ದಾರಿ. ಭಗವಂತನು ಅತ್ಯಂತ ಉದಾರಿ. ಕೃಪಾಳು. ಕರುಣಾಳು. ನಮ್ಮ ಆತ್ಮವು ಪಶ್ಚಾತ್ತಾಪದಿಂದ ಪರಿವರ್ತನೆ ಹೊಂದಬಯ ಸಿರುವುದನ್ನು ಕಂಡೊಡನೆಯೇ ನಮ್ಮ ನೆರವಿಗೆ ಸಹಾಯಹಸ್ತ ಚಾಚುತ್ತಾನೆ. ಈ ಭರವಸೆಯಿಂದ ಇಂದಿನ ದ್ವಿಜಸಮೂಹವೆಲ್ಲವೂ ಏಕವ್ಯಕ್ತಿಯಾಗಿ. ಸಂಧ್ಯೋಪಾಸನೆಯ ಕ್ರಮವನ್ನು ನಮ್ಮ ಜೀವನದಲ್ಲಿ ಪುನರಾರಂಭಿಸುವ ನಿರ್ಧಾರ ಮಾಡಬೇಕು. ಈ ನಿರ್ಧಾರ ಅಚಲವಾಗಿರಬೇಕು. ಜಗತ್ತಿನ ಯಾವ ಲೌಕಿಕ ಆಸಕ್ತಿಯೂ ನಮ್ಮ ಈ ನಿರ್ಧಾರವನ್ನು ಕದಲಿಸುವಂತಿರಬಾರದು.

ಈಗ ಮೊಟ್ಟಮೊದಲನೆಯದಾಗಿ ರೂಢಿಗೆ ಬರಬೇಕಿರುವುದು ನಿತ್ಯ ಸಂಧ್ಯೋಪಾಸನೆಯ ಸಾಮಾನ್ಯಕ್ರಮ. ಸಂಧ್ಯಾವಂದನೆಯಲ್ಲಿ ಬಳಕೆಯಾಗುವ ಮಂತ್ರಗಳು ಹೃದ್ಗತವಾಗಿ, ಆ ಮಂತ್ರಗಳ ತಾತ್ಪರ್ಯವು ನಮ್ಮ ಅಂತರಂಗಕ್ಕೆ ವೇದ್ಯವಾದರೆ, ಅದರಿಂದ ನಮ್ಮಲ್ಲಿ ಸಂಧ್ಯೋಪಾಸನೆಯ ಬಗ್ಗೆ ಸಂಪೂರ್ಣ ಶ್ರದ್ಧೆ ಮತ್ತು ಆಸಕ್ತಿ ಉಂಟಾಗುತ್ತದೆ. ಈ ರೀತಿಯ ಪೂರ್ಣ ಆಸಕ್ತಿಯು ಪ್ರಚೋದಿತವಾದನಂತರ ಸಂಧ್ಯೋಪಾಸನೆಯಲ್ಲಿ ಅನುಸರಿಸಬೇಕಾದ ಆಚಮನ

Sri Vidyabharathi Book Centre, Sringeri

CC-0. In Public Domain. Digitized by eGangotri

ಪ್ರಾಣಾಯಾಮ, ಅಂಗನ್ಯಾಸ, ಹೃದಯನ್ಯಾಸ, ಜಪಾರಂಭದ ಮೊದಲಿನ ಮುದ್ರಾಪ್ರದರ್ಶನ, ಜಪಾನಂತರ ಉತ್ತರ ಮುದ್ರಾಪ್ರದರ್ಶನ ಮೊದಲಾದುವು ಗಳಿಗೆ ಸಂಬಂಧಿಸಿದಂತೆ ಪರಂಪರಾಗತವಾಗಿ ರೂಢಿಯಲ್ಲಿರುವ ಕ್ರಮ-ಕಲಾಪ ಗಳನ್ನು ಬಲ್ಲವರಿಂದ ತಿಳಿದುಕೊಂಡು, ಶಾಸ್ತ್ರೋಕ್ತ ಕ್ರಮದಲ್ಲೇ ಸಂಧ್ಯಾವಂದನೆ ಯನ್ನು ಆಚರಿಸುವುದೇನೂ ಕಷ್ಟದ ಕಾರ್ಯವಾಗುವುದಿಲ್ಲ.

ಈ ಅಭಿಪ್ರಾಯವನ್ನು ಕೆಲವುಶ್ರದ್ಧಾಳುಗಳು ಒಪ್ಪದಿರುವ ಸಾಧ್ಯತೆಯು ಸ್ವಾಭಾವಿಕವಾದುದು. ಆದರೆ, "ಬರಿಯ ಕೈಗಳಿಗಿಂತಲೂ ಹಿತ್ತಾಳೆಯ ಕಡಗ ಲೇಸು" ಎಂಬ ನಾಣ್ಣುಡಿಗನುಗುಣವಾಗಿ, ಸಂಧ್ಯೋಪಾಸನೆಯನ್ನು ಸಂಪೂರ್ಣ ವಾಗಿ ಕೈಬಿಡುವ ಭ್ರಷ್ಟತನಕ್ಕಿಂತಲೂ ಅದನ್ನು ಪುನರಾರಂಭಿಸುವ ದಿಸೆಯಲ್ಲಿ ಅನುಸರಿಸುವ ಇಂಥ ಪರಿಷ್ಕೃತ ಪದ್ಧತಿಯು ಹೆಚ್ಚು ದೋಷಯುಕ್ತವಾಗಲಾರ ದೆಂಬುದು ನನ್ನ ಅನಿಸಿಕೆ. ಆದರೆ ಈ ಸನ್ನಿವೇಶದಲ್ಲಿ ಸಾಧಕರು ಕೇವಲ ಸಂಧ್ಯೋಪಾಸನೆಯನ್ನು ಈ ರೀತಿ ಪುನರಾರಂಭಿಸುವುದರಲ್ಲಷ್ಟೇ ತೃಪ್ತರಾಗದೇ ಮುಂದಿನ ಹಂತವಾದ ಶಾಸ್ತ್ರೋಕ್ತ ವಿಧಿ ವಿಧಾನಗಳನ್ನರಿತುಕೊಂಡು, ಸಂಪೂರ್ಣವಾಗಿ ಶಾಸ್ತ್ರೋಕ್ತ ಕ್ರಮದಲ್ಲೇ ಸಂಧ್ಯೋಪಾಸನೆಯನ್ನು ತಮ್ಮ ಜೀವಮಾನ ಪರ್ಯಂತ ಅವಿಚ್ಛಿನ್ನವಾಗಿ ಮುಂದುವರೆಸುವ ಪ್ರಯತ್ನ ನಡೆಸ ಬೇಕು. ಇದೊಂದು ಅತ್ಯವಶ್ಯಕವಾದ ಎಚ್ಚರಿಕೆ. ಇದನ್ನು ವಿವೇಕಿಗಳೆಲ್ಲರೂ ಮನ್ನಿಸುವರೆಂಬ ವಿಶ್ವಾಸದೊಂದಿಗೆ ನನ್ನ ಈ ಒಸ್ನುಡಿಯನ್ನು ಮುಕ್ತಾಯ ಗೊಳಿಸುತ್ತಿದ್ದೇನೆ. —ಸುಧಾರ್ಥಿ, ಹಾಸನ

ಗಾಯತ್ರೀ ಸೇವಾ ಪ್ರತಿಷ್ಠಾನ

ದಿವಂಗತ ಕೋಟ ವಾಸುದೇವ ಕಾರಂತರು ಹೊಂದಿದ್ದ ಧರ್ಮಾಭಿ ಮಾನ ಹಾಗೂ ಲೋಕಹಿತಚಿಂತನೆಯ ಮನೋಭಾವವು ಅವರ ಸಾಹಿತ್ಯಕೃತಿ ಗಳ ಮೂಲಕ ಹೊರಹೊಮ್ಮಿ ಸಾವಿರಾರು ಜನರಜೀವನದಲ್ಲಿ ಮಹತ್ತರವಾದ ಪರಿಣಾಮವನ್ನುಂಟುಮಾಡಿ ಅವರನ್ನು ಪರಿವರ್ತನೆಯ ಹಂತಕ್ಕೆ ತಂದಿರಿಸಿತು. ಜೀವನದಲ್ಲಿ ಆ ರೀತಿಯ ಪರಿವರ್ತನೆಯ ಹಾದಿ ಹಿಡಿದವರ ಪೈಕಿ ನಾನೂ ಒಬ್ಬ. ನಮ್ಮ ಇಂದಿನ ಲೋಕದ ಆಗುಹೋಗುಗಳು ನನ್ನನ್ನು ಸಾಕಷ್ಟು ಚಿಂತಿಸುವಂತೆ ಮಾಡಿವೆ. ಅತಿವೃಷ್ಟಿ, ಅನಾವೃಷ್ಟಿ, ಅಗ್ನಿವೃಷ್ಟಿ, ವಿಷವೃಷ್ಟಿ, ಜಲಾಭಾವ, ಆಹಾರಾಭಾವ, ಇತಿಮಿತಿ ಇಲ್ಲದ ದ್ವೇಷಾಸೂಯೆಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂತಾದ ಹಲವಾರು ಸಂಕಷ್ಟಗಳ ಪರಿಣಾಮವಾಗಿ ಪಶುಪಕ್ಷಿಗಳಿರಲೀ ಮಾನವರ ಜೀವನವೂ ಕೂಡ ಅತ್ಯಂತ ಹೀನಸ್ಥಿತಿಗಿಳಿದಿರುವುದನ್ನು ಎಲ್ಲೆಲ್ಲೂ ಕಾಣಬಹುದು. ಸರ್ವಶಕ್ತನಾದ ಭಗವಂತನಿಂದ ಮಾತ್ರ ಇಂಥ ದಾರುಣ ಪರಿಸ್ಥಿತಿಯು ಬದಲಾವಣೆ ಸಾಧ್ಯ. ಅಂಥ ಸರ್ವಶಕ್ತನನ್ನು ಸಾಮೂಹಿಕವಾಗಿ ಎಲ್ಲರೂ ಪ್ರಾರ್ಥಿಸುವುದೊಂದೇ ಈ ಜಾಗತಿಕ ಸಮಸ್ಯೆಗೆ ಇರುವ ಸಾರ್ವಕಾಲಿಕ ಪರಿಹಾರ ಎಂಬ ವಿಚಾರ ನನಗೆ ಖಚಿತವಾಯಿತು. ಇದನ್ನು ನನ್ನ ಆತ್ಮೀಯರ ಮುಂದಿರಿಸುವ ಮೂಲಕ ವ್ಯಾಪಕವಾಗಿ ಪ್ರಸಾರ ಮಾಡಬೇಕು ಎಂಬುದು ನನ್ನ ಸಂಕಲ್ಪವಾಯಿತು. ಈ ಉದ್ದೇಶಕ್ಕಾಗಿ 'ಗಾಯತ್ರೀ ಸೇವಾ ಪ್ರತಿಷ್ಠಾನ' ಎಂಬ ಹೆಸರಿನಲ್ಲಿ ಪ್ರಚಾರ ಕಾರ್ಯವನ್ನು ಪ್ರಾರಂಭಿಸಿ, ನನ್ನ ಪರಿಚಯದ ಕೆಲವರ ಹೆಸರುಗಳೊಂದಿಗೆ "ಲೋಕಹಿತಾರ್ಥವಾಗಿ ಯಥಾಶಕ್ತಿ ಗಾಯತ್ರೀ ಜಪಮಾಡಲು ಬ್ರಾಹ್ಮಣರಿಗೆ ಮನವಿ" ಎಂಬ ಶೀರ್ಷಿಕೆಯಲ್ಲಿ ಕರಪತ್ರವೊಂದನ್ನು ಮುದ್ರಿಸಿ, ಸೀಮಿತ ಪರಿಧಿಯಲ್ಲಿ ವಿತರಿಸಲಾಯಿತು.

ವಿಜ್ಞಾನದ ಬೆಂಬಲವಿದೆಯೆಂಬ ಹಮ್ಮಿನಿಂದ ನಾವು ಪ್ರಕೃತಿಯ ವಿರುದ್ಧ ನಡೆಸಿರುವ ಅತ್ಯಾಚಾರ, ಅದಕ್ಕಾಗಿ ಮುನಿದಿರುವ ಪ್ರಕೃತಿಯು ನಮಗೆ ಎದಿರೇಟಿನ ಕಠಿಣಶಿಕ್ಷೆ ನೀಡುವ ದಿಸೆಯಲ್ಲಿ ತಂದೊಡ್ಡುತ್ತಿರುವ ಕಷ್ಟಪರಂಪರೆಯ ವಿವರ ; ಇದರಿಂದ ಪಾರಾಗಲು ಮನುಕುಲವು ಅನುಸರಿಸಬೇಕಾದ ಶಾಸ್ತ್ರೋಕ್ತಮಾರ್ಗವಾವುದೆಂಬ ವಿಚಾರ; ಇತ್ಯಾದಿಗಳನ್ನು ಸೂಚಿಸಿ, ಲೋಕಹಿತಾರ್ಥವಾಗಿ ಬ್ರಾಹ್ಮಣರೆಲ್ಲರೂ ಯಥಾಶಕ್ತಿ ಗಾಯತ್ರೀಜಪ ಮಾಡಬೇಕೆಂಬುದರ ವ್ಯಾಪಕವಾದ ಪ್ರಚಾರಕ್ಕೆ ಆಸಕ್ತಿ ಇರುವವರು ನೆರವಾಗಬೇಕು ಎಂದು ಆ ಕರಪತ್ರದಲ್ಲಿ ಕೋರಲಾಗಿತ್ತು. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಪಡೆಯಲು ೨ ರೂ.ಗಳ ಅಂಚೆಚೀಟಿಯೊಂದಿಗೆ ಪತ್ರ ಬರೆಯಲು ಸೂಚನೆ ನೀಡಲಾಗಿತ್ತು. ಸಾವಿರಾರು ಕರಪತ್ರಗಳ ವಿತರಣೆಯ ಅನಂತರವೂ ನಮ್ಮ ಜನ ಅದರತ್ತ ಅಷ್ಟಾಗಿ ಗಮನ ಹರಿಸಲಿಲ್ಲ. ಹಳೆಯ ಮಿತ್ರರಾದ ಶ್ರೀ ಕೆ. ಶೇಷಾದ್ರಿಯವರು ಮಾತ್ರ ಈ ಬಗ್ಗೆ ಸಾಕಷ್ಟು ಗಮನಹರಿಸಿ, ತಮ್ಮ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಹಾಸನ ಮಾಧ್ಯಮ' ದಿನಪತ್ರಿಕೆಯಲ್ಲಿ ಈ ಕರಪತ್ರದ ಪೂರ್ಣಪಾಠವನ್ನೇ ಮುದ್ರಿಸಿ ಪ್ರಚುರಪಡಿಸಿದ್ದು ಒಂದು ವಿಶೇಷ ಸಂಗತಿ.

ಈ ಪ್ರಚಾರಕಾರ್ಯವನ್ನು ಯಾವ ಕಾರಣದಿಂದಲೂ ನಿಲ್ಲಿಸದೆ, ವ್ಯಾಪಕವಾಗಿ ಮುಂದುವರೆಸುವ ನಿರ್ಧಾರ ನನ್ನದಾಗಿದ್ದ ಕಾರಣ, ನನ್ನ ಪರಿಚಯದ

Sri Vidyabharathi Book Centre, Sringeri

CC-O. In Public Domain. Digitized by eGangotri

ವರ ಹೆಸರುಗಳ ಬದಲಿಗೆ ಅನಂತ ಪ್ರಕಾಶನ ಹಾಗೂ ಕೋ.ವಾ. ಕಾರಂತ ಸಾಹಿತ್ಯಮಾಲೆಯ ಕಾರ್ಯಚಟುವಟಿಕೆಗಳ ಪ್ರಚಾರವನ್ನೂ ಸೇರಿಸಿ ; ಹೆಚ್ಚಿನ ಪ್ರಮಾಣದಲ್ಲಿ ಕರಪತ್ರವನ್ನು ಮುದ್ರಿಸಿ, ರಾಜ್ಯದಾದ್ಯಂತವಿರುವ ಸುಮಾರು ೭೦೦ಕ್ಕೂ ಮೀರಿದ ಬ್ರಾಹ್ಮಣ ಸಂಘಸಂಸ್ಥೆಗಳಿಗೂ, ಸಾವಿರಾರು ವ್ಯಕ್ತಿಗಳಿಗೂ ಹಲವಾರು ಪ್ರತಿಗಳಂತೆ ಅಂಚೆಯ ಮೂಲಕ ಉಚಿತವಾಗಿ ವಿತರಿಸಲಾಯಿತು. ಈ ವಿಚಾರವಾಗಿ ಹೆಚ್ಚು ಜನಗಳಿಂದ ನಿರೀಕ್ಷಿತ ಪ್ರತಿಕ್ರಿಯೆ ಬಾರದಿದ್ದರೂ ; ಕಾಕತಾಳೀಯವಾಗಿ ರಾಜ್ಯದಾದ್ಯಂತ ಈ ವರ್ಷ ಸಮೃದ್ಧಿಯ ಮಳೆಬೆಳೆಗಳಾಗಿ, ರಾಜ್ಯದ ಜನತೆಯ ಕುಡಿಯುವ ನೀರಿನ ಸಮಸ್ಯೆ ಮಾತ್ರವಲ್ಲ ; ಸಾಕಷ್ಟು ಮಟ್ಟಿಗೆ ಆಹಾರ ಸಮಸ್ಯೆಯೂ ಪರಿಹಾರವಾಗಲು ಅವಕಾಶವಾಯ್ತು. ಇದರಿಂದಾಗಿ ನನ್ನ ಅಂತರ್ಯದಲ್ಲಿದ್ದ ಧರ್ಮದ ಮೇಲಣ ನಂಬಿಕೆ, ಶ್ರದ್ಧೆ ಹೆಚ್ಚು ದೃಢಗೊಂಡು, ನನ್ನಂತೆಯೇ ಜೀವನದ ಒಲವು ಹೊಂದಿರುವವರ ಅಂತರಂಗದಲ್ಲಿ ಅಡಗಿರುವ ಧಾರ್ಮಿಕ ಶ್ರದ್ಧೆಯನ್ನು ಸಾರ್ಥಕವಾಗಿ ಪ್ರಚೋದಿಸುವ ವ್ಯವಸ್ಥಿತ ಪ್ರಯತ್ನ ನಡೆಸಬೇಕೆಂಬ ಅಪೇಕ್ಷೆ ನನ್ನಲ್ಲುಂಟಾಯಿತು.

ದ್ವಿಜರ ಮನೆಗಳಲ್ಲಿ ಹುಟ್ಟಿ ಬೆಳೆದಿರುವ ಯುವಜನತೆಯು ನಿಶ್ಚಲವಾದ ಶುದ್ಧಾಂತಃಕರಣವನ್ನು ಬೆಳೆಸಿಕೊಂಡು, ಶ್ರದ್ಧೆಯಿಂದ ಸಂಧ್ಯೋಪಾಸನೆ ಹಾಗೂ ಶಕ್ತ್ಯಾನುಸಾರವಾಗಿ ಗಾಯತ್ರೀ ಜಪಮಾಡುವ ಕ್ರಮವನ್ನು ರೂಢಿಸಿಕೊಳ್ಳಲು ಪ್ರಚೋದಿಸುವುದಕ್ಕೆ ಸಹಕಾರಿಯಾಗುವ ರೀತಿಯಲ್ಲಿ ಸಂಧ್ಯೋಪಾಸನೆಯ ಕ್ರಮವನ್ನು ಕುರಿತು ಒಂದು ವಿವರವಾದ ಕಿರುಹೊತ್ತಿಗೆಯನ್ನು ಬರೆದು ಪ್ರಕಟಿಸುವ ಸಂಕಲ್ಪ ಮಾಡಿಕೊಂಡೆ. ಜಗನ್ಮಾತೆಯ ಕೃಪಾಕಟಾಕ್ಷದಿಂದ ಈ ಕಾರ್ಯವು ನನ್ನ ಅಂತರ್ಯಕ್ಕೆ ಸಾಕಷ್ಟು ತೃಪ್ತಿತರುವ ಮಟ್ಟದಲ್ಲೇ ಕೈಗೂಡಿದುದು ನನಗೆ ಸಂತಸ ತಂದಿದೆ. ಗಾಯತ್ರೀ ಸೇವಾ ಪ್ರತಿಷ್ಠಾನದ ಉದ್ದೇಶವು ನನ್ನ ಮಟ್ಟಿಗೆ ಸಾರ್ಥಕವಾದಂತೆನಿಸಿದೆ. ಇಂಥ ಸೀಮಿತವಾದ ಆಕಾಂಕ್ಷೆ, ಆದರೆ ವ್ಯಾಪಕವಾದ ಪರಿಣಾಮವನ್ನು ಹೊಂದಿದ ಈ ಕಾರ್ಯವನ್ನು ಯೋಜಿಸುವ ಸನ್ನಿವೇಶದಲ್ಲಿ, ನನ್ನ ಅಂತರಂಗದಲ್ಲಿದ್ದ ವಿಚಾರಗಳೇನು ? ಎಂಬುದನ್ನು ಕುರಿತು ಇಲ್ಲಿ ಸ್ವಲ್ಪ ವಿವರಿಸುವುದು ಅಗತ್ಯವೆಂದು ಭಾವಿಸಿದ್ದೇನೆ.

ಸನಾತನ ಧರ್ಮವು ಅನಾದಿಕಾಲದಿಂದಲೂ ಅತ್ಯಂತ ಶ್ರೇಷ್ಠವಾದುದೆಂದು ಸಾರುತ್ತ ಬಂದಿರುವ 'ಬ್ರಾಹ್ಮಣ' ಕುಟುಂಬದಲ್ಲಿ ಜನಿಸಿರುವ ನಮಗೆ ಬ್ರಾಹ್ಮಣ್ಯದ ಮಹಿಮೆ, [illegible] ಯುವಿರಲೇಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂಸುರರೆಂದೂ, ದ್ವಿಜರೆಂದೂ, ವಿಪ್ರರೆಂದೂ ಪ್ರಸಿದ್ಧಿ ಪಡೆದಿರುವ ಈ ಜನಾಂಗದಲ್ಲಿ ಜನ್ಮ ಪಡೆದಿರುವುದರ ಹಿನ್ನೆಲೆಯಲ್ಲಿ ನಮ್ಮ ಹಿಂದಿನ ಲಕ್ಷಾಂತರ ಜನ್ಮಗಳ ಸಾಧನೆಯ ಫಲ ಇದ್ದೇ ಇದೆ. ಅಪಾರವಾದ ಶ್ರಮವಹಿಸಿ ನಡೆಯುವ ಯಾವುದೇ ಸಾಧನೆಯೂ ನಿಷ್ಪ್ರಯೋಜಕವಾಗುವುದು ಅವಿವೇಕದ ಪರಮಾವಧಿ. ಆದರಂತೆಯೇ ನಮ್ಮ ಬ್ರಾಹ್ಮಣ್ಯದಲ್ಲಿನ ಜನ್ಮವೂ ನಿಷ್ಪ್ರಯೋಜಕವಾಗಲು ನಾವು ಬಿಡಬಾರದು. ನಿತ್ಯಸತ್ಯವೂ ಸರ್ವಶಕ್ತನೂ, ಸರ್ವಾಂತರ್ಯಾಮಿಯೂ, ಪರಮಾನಂದ ಸ್ವರೂಪನೂ ಆದ ಭಗವಂತನೆಂಬ ವ್ಯಾಪಕತತ್ತ್ವದೊಂದಿಗೆ ಸಂಯೋಗವಾಗುವುದೇ ಈ ಜಗತ್ತಿನ ಜೀವರಾಶಿಗಳೆಲ್ಲದರ ಮೂಲ ಉದ್ದೇಶ. ಆ ದಿಸೆಯಲ್ಲೇ ನಮ್ಮೆಲ್ಲರ ಜೀವನಯಾತ್ರೆ ಮುಂದುವರೆದಿದೆ. ಯಾತ್ರೆಯೆಂದ ಮೇಲೆ ಅಡ್ಡಿ ಆತಂಕಗಳ ಅಡಚಣೆ ಇರುವುದು ಸ್ವಾಭಾವಿಕ. ನಮ್ಮ ಇಂದಿನ ಲೌಕಿಕ ಜೀವನವೂ ಕೂಡ ಇಂಥ ಅಡ್ಡಿ ಆತಂಕಗಳ ಪರಮಾವಧಿಯ ಒತ್ತಡಕ್ಕೆ ಸಿಲುಕಿ ನುಚ್ಚುನೂರಾಗಿದೆ. ನಮ್ಮೆಲ್ಲರ ಇಂದಿನ ಜೀವನವು ಇಷ್ಟೊಂದು ದುರ್ಭರವಾಗುವಲ್ಲಿ ನಮ್ಮೆಲ್ಲರ ಕಾಣಿಕೆಯೂ ಅಪಾರವಾದುದೇ ಆಗಿದೆ! ನಾವೆಲ್ಲರೂ ಸನಾತನ ಧರ್ಮದ ಜೀವನ ಪದ್ಧತಿಯಿಂದ ದೂರಾಗಿ ಜೀವಿಸುತ್ತಿರುವುದು ಅತ್ಯಂತ ಘೋರ ಅಪರಾಧವಾಗಿದೆ. ಈ ಜಗತ್ತು ಧರ್ಮದಲ್ಲಿ ಪ್ರತಿಷ್ಠಿತವಾಗಿರುವುದರಿಂದ ಧರ್ಮವಿರುದ್ಧವಾದ ಜೀವನಕ್ಕೆ ತೀವ್ರವಾದ ಶಿಕ್ಷೆಯುಂಟಾಗುವುದು ಶತಸ್ಸಿದ್ಧ. ಇಂದಿನ ಲೌಕಿಕ ಜೀವನದಲ್ಲಿ ಈ ಜಗತ್ತಿನ ಜನಗಳೆಲ್ಲರೂ ಅನುಭವಿಸುತ್ತಿರುವ ಕಷ್ಟಕಾರ್ಪಣ್ಯಗಳು, ದುಃಖ, ದಾರಿದ್ರ್ಯಗಳು ರೋಗರುಜಿನಗಳು, ಮಾನಸಿಕ ಕ್ಲೇಶ, ಪರಸ್ಪರ ದ್ವೇಷಾಸೂಯೆಗಳು ಮುಂತಾದುವುಗಳಿಗೆಲ್ಲ ಈ ಧರ್ಮಬಾಹಿರವಾದ ಜೀವನಕ್ರಮವೇ ಪ್ರಮುಖ ಕಾರಣವಾಗಿದೆ. ವಿವೇಕಿಗಳಾದವರು ಕೂಡಲೇ ಇತ್ತ ಗಮನಹರಿಸಿ, ಇಂಥ ಕಠಿಣಶಿಕ್ಷೆಯ ನೋವಿನಿಂದ ತಾವೂ ಪಾರಾಗಿ, ತಮ್ಮೊಂದಿಗಿನ ಜಗತ್ತನ್ನೂ ಗಂಡಾಂತರದಿಂದ ಪಾರುಮಾಡಬೇಕಿದೆ.

ಈ ಜಗತ್ತನ್ನು ವಿಪತ್ತಿನಿಂದ ಪಾರುಮಾಡಲು ಸರ್ವಶಕ್ತನಾದ ಪರಮಾತ್ಮನೊಬ್ಬನಿಂದ ಮಾತ್ರವೇ ಸಾಧ್ಯ. ಆವನ ಕೃಪೆಯಿಂದ ಮಾತ್ರವೇ ನಮ್ಮೆಲ್ಲರ ಜೀವನದ ಗುರಿ ಸಾಧನೆಯಾಗುತ್ತದೆ. ಜಗತ್ತೆಲ್ಲವೂ ಭಗವದಂಶ ಸಂಭೂತವೇ ಆದರೂ, ಪ್ರತಿಯೊಬ್ಬರ ಜೀವಿತವೂ ಅವರ ಸಂಕಲ್ಪ ಹಾಗೂ ಕರ್ಮಫಲವನ್ನವಲಂಬಿಸಿದುದಾದ ಕಾರಣ, ಜೀವನದಲ್ಲಿ ಅವರವರ ಅಭಿರುಚಿಗನುಗುಣವಾದ ಕಷ್ಟನಷ್ಟಗಳನ್ನು ಅನುಭವಿಸಲೇಬೇಕಾದುದು ಅನಿವಾರ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದು ನಮ್ಮ ಸನಾತನಧರ್ಮವು ಅನಾದಿಕಾಲದಿಂದಲೂ ಸಾರುತ್ತ ಬಂದಿರುವ ಜೀವನಧರ್ಮದ ಸಾರಸರ್ವಸ್ವ. ನಮ್ಮೆಲ್ಲರ ಲೌಕಿಕಜೀವನದ ಸಂಕಟವೂ ಪರಿಹಾರವಾಗಬೇಕಾದರೆ, ನಾವೆಲ್ಲರೂ ಅನನ್ಯವಾದ ಕಳಕಳಿಯಿಂದ ಭಗವಂತನನ್ನು ಪ್ರಾರ್ಥಿಸುವುದೊಂದೇ ಯುಕ್ತವಾದ ದಾರಿಯಾಗಿದೆ. ಇಷ್ಟೊಂದು ಸುಲಭ ತರದ್ದಾದ ಉಪಾಯವನ್ನನುಸರಿಸಿ ಜೀವನದಲ್ಲಿ ನೆಮ್ಮದಿಯನ್ನನುಭವಿಸುವುದು ಈ ಜಗತ್ತಿನಲ್ಲಿ ಪ್ರತಿಯೊಂದು ಜೀವಿಗೂ ಸುಲಭ ಸಾಧ್ಯವಿರುವುದೇ ಆಗಿದೆ. ಆದರೂ ಇಂಥ ಕ್ರಮವನ್ನನುಸರಿಸಲು ಸೂಕ್ತವಾದ ಮಾರ್ಗದರ್ಶನ ಅತ್ಯಗತ್ಯ. ತಿಳಿದವರು ಮಾತ್ರವೇ ಈ ಬಗ್ಗೆ ತಿಳುವಳಿಕೆ ನೀಡಬಲ್ಲರು. ಅನಾದಿಕಾಲದಿಂದಲೂ ಬ್ರಾಹ್ಮಣರು ಇಂಥ ಸಾರ್ಥಕವೂ ಲೋಕೋಪಕಾರಿಯೂ ಆದ ಕಾರ್ಯವನ್ನು ನಿರ್ವಹಿಸುತ್ತ, ಲೋಕಪೂಜ್ಯರಾಗಿದ್ದರು. ಆದರೆ ಕಾಲಕ್ರಮದಲ್ಲಿ ಬದಲಾದ ಸಾಮಾಜಿಕ ಪರಿಸ್ಥಿತಿಗನುಗುಣವಾಗಿ ರೂಢಿಯಲ್ಲಿ ಇಂಥ ನಂಬಿಕೆಗಳು ಅಪಮೌಲ್ಯಗೊಂಡಿವೆ. ಆದರೂ ಇವು ಮೌಲ್ಯರಹಿತವಾದ ಸಂಗತಿಗಳಲ್ಲ. ಈ ಅಂಶವನ್ನು ಇಂದಿಗೂ ಯಾರು ಬೇಕಾದರೂ ಪರೀಕ್ಷಿಸಿ ಪ್ರಮಾಣೀಕರಿಸಬಹುದು.

ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳ ಕಾರಣಕರ್ತನೂ ತನ್ನ ಜೀವಿತದಲ್ಲಿ ತಪ್ಪದೇ ಉಪಾಸಿಸುವ ಮಹಾನ್‌ಶಕ್ತಿ 'ಗಾಯತ್ರೀಮಾತೆ' ನಮ್ಮ ಸನಾತನ ಧರ್ಮರಹಸ್ಯದಲ್ಲಿ ಸ್ಪಷ್ಟವಾಗಿ ಕಾಣಬರುವ ನಿತ್ಯಸತ್ಯ ಇದು. ಇಂಥ ಮಹತ್ವಪೂರ್ಣಶಕ್ತಿಯನ್ನು ಅತ್ಯಂತ ಸುಲಭವಾಗಿ ಆರಾಧಿಸಿ, ಲೋಕಕಲ್ಯಾಣವನ್ನು ಸಾಧಿಸಬಹುದಾದ ಸದವಕಾಶವು ಇಂದಿನ ಬ್ರಾಹ್ಮಣ್ಯದ ಪಾಲಿಗೆ ಪರಂಪರಾಗತವಾಗಿ ದೊರೆತ ವರವಾಗಿದೆ. ಇದರ ಬಗ್ಗೆ ನಿರ್ಲಕ್ಷ್ಯದಿಂದಿದ್ದು ಕುರುಡರಂತೆ ವರ್ತಿಸುತ್ತ ಗೋಳಿಡುವುದು ನಮ್ಮ ಅವಿವೇಕತನಕ್ಕೆ ಪ್ರತ್ಯಕ್ಷ ಸಾಕ್ಷಿ.

ಭೂಮಂಡಲದಲ್ಲೇ ಅತ್ಯಂತ ಪವಿತ್ರತಮವೆನಿಸಿದ ಭರತಖಂಡದಲ್ಲಿ ಜನಜೀವನವು ಇಷ್ಟೊಂದು ಕ್ಷೋಭೆಗೊಳಗಾಗುವ ದಿಸೆಯಲ್ಲಿ, ಇಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಧರ್ಮಬಾಹಿರ ನಡತೆಯೂ ಮುಖ್ಯ ಕಾರಣವೆಂಬುದು ನಿಸ್ಸಂಶಯವಾದರೂ ; ಇಲ್ಲಿನ ಜನತೆಗೆ ಸೂಕ್ತಸಮಯದಲ್ಲಿ ಸಮರ್ಪಕವಾಗಿ ಮಾರ್ಗದರ್ಶನ ಮಾಡಬೇಕಾದ ಗುರುತರವಾದ ಹೊಣೆಗಾರಿಕೆ ಹೊತ್ತ ಬ್ರಾಹ್ಮಣರು ಹೊಣೆಗೇಡಿಗಳಾಗಿ ಅಲ್ಪರಲ್ಲಿ ಅಲ್ಪರಂತೆ ಕೀಳುಮಟ್ಟದ ಜೀವನ ಕ್ರಮಕ್ಕೆ ಧಾವಿಸಿದ್ದು ದೊಡ್ಡ ದುರಂತವಾಗಿದೆ ಎಂಬುದು ತುಂಬಾ ಅಪ್ರಿಯವಾದ ಕಟು ಸತ್ಯ. ಈಗಲೂ ಕಾಲ ಮಿಂಚಿಲ್ಲ. ಇಂದಿನ ಬ್ರಾಹ್ಮಣ್ಯದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾರಸಂದಾರರು ಶಾಂತಚಿತ್ತದಿಂದ ಆಲೋಚಿಸಿ, ವಿವೇಚನೆಯಿಂದ ವರ್ತಿಸುವ ನಿರ್ಧಾರ ಮಾಡಿ, ತಮ್ಮ ಜೀವನಕ್ರಮವನ್ನು ಸಾಧ್ಯವಿರುವಷ್ಟು ಧರ್ಮಬದ್ಧಗೊಳಿಸಿದರೆ ; ಇಂದಿನ ಜಗತ್ತು ಸಂಪೂರ್ಣವಾಗಿ ಬದಲಾವಣೆ ಹೊಂದಿ ನವ ಚೈತನ್ಯಶಾಲಿಯಾಗುವುದು ನಿಸ್ಸಂಶಯ.

ಈ ವಿಚಾರವನ್ನು ನಾಡಿನಾದ್ಯಂತ ಪಸರಿಸಿ, ಬ್ರಾಹ್ಮಣರನ್ನು ಜಾಗ್ರತಗೊಳಿಸಿ, ಬ್ರಾಹ್ಮಣ್ಯದ ಸಾತ್ವಿಕಬಲದಿಂದ ಸಮಾಜಜೀವನವನ್ನು ಧರ್ಮಬದ್ಧವಾದ ಪಥದಲ್ಲಿ ಪುನಶ್ಚೇತನಗೊಳಿಸುವುದು ನಮ್ಮೆಲ್ಲರ ಜೀವಿತದ ಉದ್ದೇಶವಾಗಲಿ. ಇಂಥ ಸದುದ್ದೇಶ ಸಾಧನೆಗಾಗಿ ನಾವು ಮಾಡಬೇಕಾದುದಿಷ್ಟೇ :

೧) ಲೌಕಿಕ ಜೀವನದ ಅವಶ್ಯಕತೆಗಳನ್ನು ಅತಿಯಾಗಿ ಬೆಳೆಸಿಕೊಳ್ಳಬಾರದು. (೨) ದ್ವೇಷಾಸೂಯೆ ಹಾಗೂ ದುರಾಶೆಯನ್ನು ಹೊಂದಿರಬಾರದು. (೩) ಧರ್ಮ ಹಾಗೂ ದೇವರು ಕಣ್ಣಿಗೆ ಕಾಣಿಸುವುದಿಲ್ಲವೆಂಬ ಕಾರಣದಿಂದ ಅವನ್ನು ಧಿಕ್ಕರಿಸಬಾರದು. (೪) ಎಷ್ಟೇ ಲೌಕಿಕಸಂಪತ್ತನ್ನು ಸಂಗ್ರಹಿಸಿದರೂ ಈ ಲೋಕದ ಜೀವನದಿಂದ ನಾವು ನಿರ್ಗಮಿಸಲೇಬೇಕು. ಹಾಗೆ ನಿರ್ಗಮಿಸುವಾಗ ಇಲ್ಲಿಂದ ಏನನ್ನೂ ಕೊಂಡುಹೋಗಲಾರೆವು ಎಂಬ ಕಟುಸತ್ಯವನ್ನು ನಾವು ಎಂದೆಂದಿಗೂ ಮರೆಯಬಾರದು. (೫) ಧೂಮಪಾನ, ಮದ್ಯಪಾನಾದಿ ದುರ್ವ್ಯಸನಗಳಲ್ಲಿ ಆಸಕ್ತಿ ವಹಿಸಬಾರದು. (೬) ವಚನಭಂಗ, ಕರ್ತವ್ಯಭ್ರಷ್ಟತೆ, ಲಂಚ–ವಂಚನೆಗಳಲ್ಲಿ ಆಸಕ್ತಿ ಹೊಂದಬಾರದು. (೭) ಯಾವ ಕಾರಣಕ್ಕೇ ಆಗಲೀ, ಪರರ ಸ್ವತ್ತಿನ ಅಪಹರಣ, ದುರ್ಬಲರ ಪೀಡನೆ ಮಾಡಬಾರದು. (೮) ಅನ್ಯರ ಪ್ರತಿಭೆ, ಜ್ಞಾನ, ಪರಿಶ್ರಮ, ಸಾಧನೆ ಮುಂತಾದುವನ್ನು ನಿರ್ಲಕ್ಷಿಸಬಾರದು. (೯) ದೀನದಲಿತರು ಹಾಗೂ ಪಶುಪಕ್ಷಿಗಳ ವಿಚಾರದಲ್ಲಿ ಎಂದೆಂದಿಗೂ ಕಠಿಣವಾಗಿ ವರ್ತಿಸಬಾರದು. (೧೦) ಸರ್ವೇಜನಾಃ ಸುಖಿನೋ ಭವಂತು । ಸಮಸ್ತ ಸನ್ಮಂಗಳಾನಿ ಭವಂತು । ಮುಂತಾದ ಉಪನಿಷದ್ವಾಕ್ಯಗಳು ಇಂದಿನ ಬ್ರಾಹ್ಮಣರೆಲ್ಲರ ಅಂತರಂಗದಲ್ಲೂ ನಿಶ್ಚಯವಾಗಿ, ನಿರ್ವಂಚನೆಯಿಂದ, ನಿರಂತರವಾಗಿ ಮೊಳಗುವಂತಾಗಬೇಕು.

ಲೋಕದಿಂದ ನನಗೇನಾಯಿತೆಂಬುದು ಮುಖ್ಯವಲ್ಲ ; ನನ್ನಿಂದ ಈ ಲೋಕಕ್ಕೇನಾಯಿತೆಂಬುದೇ ಅತಿಮುಖ್ಯವಾದ ಸಂಗತಿ. ಆಗ ಮಾತ್ರ ನಮ್ಮ ಇಂದಿನ ಲೌಕಿಕ ತೊಂದರೆಗಳು ತಪ್ಪುತ್ತವೆ. ಜೀವನದಲ್ಲಿ ಇದಿಷ್ಟು ನಿಯಮಗಳನ್ನು ತಪ್ಪದೇ ಪಾಲಿಸುವುದರಿಂದ ಬ್ರಾಹ್ಮಣರಜೀವನದಲ್ಲಿ ಮಹತ್ತರವಾದ ಬದಲಾವಣೆಗಳುಂಟಾಗಿ, ಅವರ [illegible] ಮಯವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಾಹ್ಮಣರ ಜೀವನಕ್ರಮವನ್ನೇ ಅನುಕರಿಸುವ ಅಭ್ಯಾಸವನ್ನು ಪರಂಪರಾಗತ ವಾಗಿ ರೂಢಿಸಿಕೊಂಡಿರುವ ಉಳಿದ ಜನಾಂಗಗಳೂ ಸ್ವಾಭಾವಿಕವಾಗಿಯೇ ಇಂಥ ಬದಲಾವಣೆಗಳಿಂದ ಆಕರ್ಷಿತರಾಗಿ, ತಾವೂ ಧರ್ಮಬದ್ಧವಾದ ಜೀವನ ಕ್ರಮಕ್ಕೆ ಧಾವಿಸುತ್ತಾರೆ. ಆಗ ಮಾತ್ರ ಬ್ರಾಹ್ಮಣರೆಂದರೆ ಲೋಕಪೂಜ್ಯರು, ಮನುಕುಲದ ದೇವತೆಗಳು ಎಂಬ ಹೇಳಿಕೆಗಳು ಸತ್ಯವೆನಿಸುತ್ತವೆ. ಇದರಿಂದಾಗಿ ಸಮಾಜದ, ನಾಡಿನ, ರಾಷ್ಟ್ರದ, ತನ್ಮೂಲಕ ಜಗತ್ತಿನ ಜನಜೀವನವು ಸಹ್ಯ ವೆನಿಸುತ್ತದೆ. ಸುಂದರವಾಗುತ್ತದೆ. ಇದೊಂದು ಅತ್ಯವಶ್ಯಕವಾದ ಪರಿವರ್ತ ನೆಯ ಪ್ರಯತ್ನ. ಈ ಪರಿವರ್ತನೆಯು ನಾವು ಅಪೇಕ್ಷಿಸುವಷ್ಟು ಶೀಘ್ರವಾಗಿ ನಿಂತಹೆಜ್ಜೆಯಲ್ಲೇ ಒಂದೆರಡು ದಿನಗಳಲ್ಲಿ ನಡೆಯುವ ಪವಾಡವಲ್ಲ. ಆದರೂ ಇಂದಿನ ಬ್ರಾಹ್ಮಣರು ಇಂದಿನಿಂದಲೇ ದೃಢನಿಶ್ಚಯದಿಂದ ಇತ್ತ ಗಮನ ಹರಿಸಿ ದರೆ ; ನಮ್ಮೆಲ್ಲರ ಜೀವಿತಾವಧಿಯಲ್ಲೇ ಇಂಥ ಪವಾಡ ನಡೆಯುವುದರಲ್ಲಿ ಸಂಶಯವೇನಿಲ್ಲ.

ಪವಾಡಗಳ ಬಗ್ಗೆ, ಬ್ರಾಹ್ಮಣ್ಯದ ಹಿರಿಮೆಯ ಬಗ್ಗೆ ಸದಭಿಪ್ರಾಯವಿಲ್ಲ ದವರು ತಕ್ಷಣವೇ ಈ ಮಾತುಗಳನ್ನೊಪ್ಪಲಾರರೆಂಬುದು ಸ್ವಾಭಾವಿಕವಾದ ಸಂಗತಿ. ಆಗ ಪ್ರತಿಯೊಬ್ಬರೂ ಅನುಸರಿಸಬೇಕಾದ ಜೀವನಧರ್ಮ ಯಾವು ದೆಂಬ ಪ್ರಶ್ನೆ ಎದುರಾಗುತ್ತದೆ. ವರ್ಣಾಶ್ರಮ ಧರ್ಮವನ್ನು ವಿರೋಧಿಸು ವವರು "ವಿಶ್ವಮಾನವ ಧರ್ಮ" ಎಂದು ತಮ್ಮ ಅನಿಸಿಕೆಗಳನ್ನು ಪ್ರತಿಪಾದಿ ಸುತ್ತ "ಜಗತ್ತಿನ ಮಾನವರೆಲ್ಲರೂ ಒಂದೇ. ಅವರಲ್ಲಿ ಮೇಲು ಕೀಳು ಎಂಬ ವಿಂಗಡಣೆ ಸರಿಯಲ್ಲ" ಎಂದು ವಾದಿಸುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿ ದಂತೆ ನಮ್ಮ ಶಾಸ್ತ್ರಗಳ ನಿರ್ಣಯ ಬಹಳ ಸ್ಪಷ್ಟವಾಗಿದೆ. ಮನುಕುಲದ ಉನ್ನತಿಗೆ ವರ್ಣಾಶ್ರಮ ಧರ್ಮ ಅತ್ಯವಶ್ಯಕ. ಎಲ್ಲ ಮನುಷ್ಯರ ಸಂಸ್ಕಾರವೂ ಒಂದೇ ಎನ್ನಲು ಆಸ್ಪದವೇ ಇಲ್ಲ. ಪ್ರತಿಯೊಬ್ಬನಿಗೂ ಅವನವನ ಕರ್ಮ ಹಾಗೂ ಸಂಸ್ಕಾರಕ್ಕೆ ಅನುಗುಣವಾಗಿ ಅವನ ಜೀವನಧರ್ಮವು ನಿರ್ಣಯ ವಾಗಿರುತ್ತದೆ. ಅವನು ಅದನ್ನು ಪಾಲಿಸಲೇಬೇಕಾದುದು ಕಡ್ಡಾಯ. ತಪ್ಪಿ ದರೆ ವಿಶ್ವಧರ್ಮದ ನಿಷ್ಠುರ ಶಿಕ್ಷೆ ಕಟ್ಟಿಟ್ಟ ಬುತ್ತಿ. ಈ ಕಾರಣದಿಂದಾಗಿಯೇ ಶಾಸ್ತ್ರಗ್ರಂಥಗಳಲ್ಲಿ 'ಸ್ವಧರ್ಮೇ ನಿಧನಃ ಶ್ರೇಯಃ' ಎಂದಿದೆ. ಹೊರಗಿನ ತೋರಿಕೆಗೆ ಪರಧರ್ಮವು ಬಹಳ ಹಿತವಾಗಿ ಕಾಣಿಸಬಹುದು, ಆದರೆ ಪ್ರಾಣ ಹೋದರೂ ಸರಿ ; ಸ್ವಂತ ಧರ್ಮವನ್ನು ತಿರಸ್ಕರಿಸಿ ಅನ್ಯಧರ್ಮವನ್ನವಲಂಬಿಸ ಬಾರದೆಂಬುದು ಇದರ ಅರ್ಥ. ಅಂದಮಾತ್ರಕ್ಕೆ ಕನಿಷ್ಠ ಸಂಸ್ಕಾರವಿರುವವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲ್ಮಟ್ಟದ ಸಂಸ್ಕಾರಕ್ಕೆ ತರಬೇತಿ ಪಡೆಯಬಾರದೆಂಬ ಕಟ್ಟುಪಾಡೇನಿಲ್ಲ. ಶಾಸ್ತ್ರವು ಬ್ರಾಹ್ಮಣವರ್ಗಕ್ಕೆ ಕಡ್ಡಾಯವಾಗಿ ವಿಧಿಸಿರುವ ವಿಧಿ-ನಿಷೇಧಗಳನ್ನು ತಿರಸ್ಕರಿಸಿ, ಇತರರಂತೆ ಜೀವಿಸಲು ಧಾವಿಸುವುದು ಶಿಕ್ಷಾರ್ಹ ಅಪರಾಧ. ಆದರೆ ಬ್ರಾಹ್ಮಣರಿಗೆ ಶಾಸ್ತ್ರವು ವಿಧಿಸಿರುವ ಕಟ್ಟುಪಾಡುಗಳನ್ನು ಪಾಲಿಸುತ್ತ ಜೀವಿಸುವ ಕಠಿಣ ಕ್ರಮವನ್ನು ಇತರರೂ ಅನುಕರಿಸುವುದಾದರೆ ಅದಕ್ಕೆ ಅಡ್ಡಿಯಿಲ್ಲ. ಈ ಸನ್ನಿವೇಶದಲ್ಲಿ ಊಟೋಪಚಾರಗಳು, ವಿವಾಹ ಸಂಬಂಧವಾದ ಚಟುವಟಿಕೆಗಳು ಮುಂತಾದ ತಮಗೆ ಹಿತವೆನಿಸುವ ವಿಚಾರಗಳಲ್ಲಿ ಮಾತ್ರ ಕೆಳವರ್ಗದವರು ಮೇಲ್ವರ್ಗದವರೊಂದಿಗೆ ಸರಿಸಮಾನರಂತೆ ಜೀವಿಸಬಯಸುವುದನ್ನು ಶಾಸ್ತ್ರೀಯವಾಗಿಯಾಗಲೀ, ಲೌಕಿಕವಾಗಿಯಾಗಲೀ ಯಾರೂ ಒಪ್ಪಲಾಗದ ಸಂಗತಿಯಾಗಿದೆ. ಆದ್ದರಿಂದ ಜಗತ್ತಿನ ಜನಗಳೆಲ್ಲರೂ ಸಮಾನರೆಂಬ ವಾದವು ಅರ್ಥಹೀನವಾದುದು.

ಲೌಕಿಕಜೀವನದಲ್ಲಿ ಕಾಣಬರುವ ತಾರತಮ್ಯವನ್ನು ಕುರಿತಂತೆ ಬ್ರಾಹ್ಮಣವರ್ಗದಲ್ಲಿಯೂ ಒಂದು ರೀತಿಯ ಅಸಮಾಧಾನ ತುಂಬಿದೆ. ಸಮಾಜಜೀವನದ ಸುಗಮ ಸಂಚಾರಕ್ಕೆ ಎಲ್ಲ ವ್ಯಕ್ತಿಗಳಲ್ಲೂ ಉದಾರತೆ ತುಂಬಿರಬೇಕು. ಆದರೆ ಉದಾರತೆಯು ಬ್ರಾಹ್ಮಣರಲ್ಲಿ ಮಾತ್ರ ಏಕಮುಖವಾಗಿರಬೇಕೆಂಬುದು ಸರಿಯಲ್ಲ ಎಂದು ಕೆಲವು ಬ್ರಾಹ್ಮಣರು ಸೂಚಿಸುತ್ತಾರೆ. ಬೇರೆಯವರಲ್ಲಿರದ ಔದಾರ್ಯ ಬ್ರಾಹ್ಮಣರಲ್ಲೇಕೆ? ಎಂಬುದು ಅವರ ಪ್ರಶ್ನೆ.

ಇಂದಿನ ರಾಜಕೀಯ ಹಾಗೂ ಸಾಮಾಜಿಕ ಪರಿಸರದಲ್ಲಿ ಕಾಣಬರುವ ಪಕ್ಷಪಾತ ಪೂರಿತವಾದ ಅವ್ಯವಸ್ಥೆಯನ್ನು ಗಮನದಲ್ಲಿರಿಸಿಕೊಂಡು "ಬ್ರಾಹ್ಮಣರಿಂದ ಸಮಾಜ ಹಾಳಾಗಿದೆ. ಬ್ರಾಹ್ಮಣರನ್ನು ಬಿಟ್ಟು ಉಳಿದೆಲ್ಲರೂ ಹಿಂದುಳಿದವರು. ಹೀಗೆ ಹಿಂದುಳಿದವರನ್ನು ಮುಂದುವರೆಸಲು ಜೀವನದ ಎಲ್ಲ ಕ್ಷೇತ್ರಗಳಲ್ಲೂ ಅವರಿಗೆ ವಿಶೇಷಸವಲತ್ತು ಇರಬೇಕು" ಎಂಬ ಸಾರ್ವತ್ರಿಕ ನಿರ್ಣಯ ಜಾರಿಗೆ ಬರುತ್ತಿದೆ. ಇಂಥ ಅನುಚಿತ ನಿರ್ಣಯಗಳನ್ನು ಗಮನದಲ್ಲಿರಿಸಿಕೊಂಡು ಬ್ರಾಹ್ಮಣರು ತಮಗಾಗುವ ಅನಾನುಕೂಲಗಳನ್ನು ಲೆಕ್ಕಹಾಕುತ್ತ "ಅನರ್ಹರು ಈ ದೇಶದಲ್ಲಿ ಲೌಕಿಕ ಸುಖವನ್ನನುಭವಿಸಲು ನಾವೇಕೆ ನಮ್ಮ ಹಕ್ಕನ್ನು ತ್ಯಾಗ ಮಾಡಬೇಕು?" ಎಂದು ಆಕ್ರೋಶ ಪಡುವಂತಾಗಿದೆ! ಈ ಎರಡೂ ಪಂಗಡದವರೂ ತಮ್ಮ ಹಠ ಬಿಟ್ಟು, ಕಾಲೋಚಿತವಾದ ಧರ್ಮಬದ್ಧವಾಗಿ, ಶಾಂತಚಿತ್ತದಿಂದ ವಿವೇಚಿಸಿದರೆ ಈ ಸಮಸ್ಯೆಯು ಅತ್ಯಂತ ಸುಲಭವಾಗಿ ಪರಿಹಾರವಾಗುವ[illegible]ದಿಂದ ಮಾತ್ರ ಯಾವ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಸ್ಯೆಯು ಸಮರ್ಪಕವಾಗಿ ಪರಿಹಾರವಾಗಲಾರದೆಂಬುದು ವಿಶ್ವನಿಯಮ. ಆದ್ದರಿಂದ ವಿವೇಕಿಗಳಾದ ಬ್ರಾಹ್ಮಣ ವರ್ಗವಾದರೂ ಇತರ ವರ್ಗದವರಂತೆ ಜೀವನದಲ್ಲಿ ಘರ್ಷಣೆಯ ಹಾದಿ ಹಿಡಿಯದೆ ಸಂಯಮದಿಂದ, ಸಾಧ್ಯವಿರುವ ಮಟ್ಟಿಗೂ ತಮ್ಮ ವರ್ಣಾಶ್ರಮ ಧರ್ಮವನ್ನು ಪಾಲಿಸುತ್ತ ಗಮನ ಹರಿಸ ಬೇಕಾದುದು ಅನಿವಾರ್ಯ. ಅಲ್ಲದೇ ಉಳಿದವರಲ್ಲಿ ಔದಾರ್ಯ, ಸಹನೆ, ಅನು ಕಂಪ ಮುಂತಾದ ಗುಣಗಳು ಇರಲೀ ಇಲ್ಲದಿರಲೀ ಬ್ರಾಹ್ಮಣರಲ್ಲಂತೂ ಇವು ಇರಲೇಬೇಕು. ಇವಿಲ್ಲದವರನ್ನು ಲೌಕಿಕರು ಬ್ರಾಹ್ಮಣರೆಂದು ಭಾವಿಸಬಹುದೇ ಹೊರತು ; ಶಾಸ್ತ್ರವಂತೂ ಖಂಡಿತವಾಗಿಯೂ ಅವರಿಗೆ ಬ್ರಾಹ್ಮಣರ ಪಟ್ಟ ಕಟ್ಟುವುದಿಲ್ಲ. ಈ ಸನ್ನಿವೇಶದಲ್ಲಿ ಇಂಥ ಉದಾರ ಗುಣಗಳನ್ನು ಹೇಡಿತನ, ದೌರ್ಬಲ್ಯ, ಷಂಡತನ ಎಂದು ಯಾರೂ ತಪ್ಪಾಗಿ ಅರ್ಥೈಸಿಕೊಳ್ಳಬಾರದು. ಲೋಕವು ಎಂದೆಂದಿಗೂ ಮೆಚ್ಚಿ ಗೌರವಿಸುವುದು ಉದಾರಗುಣಗಳನ್ನೇ ವಿನಃ ಹೇಡಿತನವನ್ನಲ್ಲ ; ಷಂಡತನವಲ್ಲ.

ನಮ್ಮ ರಾಷ್ಟ್ರದ ಸಾಮಾಜಿಕ ಜೀವನಕ್ರಮಕ್ಕೆ ಸಂಬಂಧಿಸಿದಂತೆ ಸುಮಾರು ನೂರಿನ್ನೂರು ವರ್ಷಗಳ ಐತಿಹಾಸಿಕ ಮಾಹಿತಿಗಳನ್ನು ಪರಿಶೀಲಿಸಿದರೂ ಕೂಡ; ಈ ಸತ್ಯಸಂಗತಿಯನ್ನು ಯಾರೂ ಬೇಕಾದರೂ ಮನಗಾಣಬಹುದಾ ಗಿದೆ. ಆದರೆ, ಅಂಥ ಮಾಹಿತಿಗಳನ್ನು ಗಮನಿಸುವ ತಾಳ್ಮೆ, ಅರ್ಥಮಾಡಿ ಕೊಳ್ಳುವ ಸಾಮರ್ಥ್ಯ ಅತ್ಯಗತ್ಯ. ಇಂಥ ಅರ್ಹತೆ ಇರುವ ಯಾರು ಬೇಕಾ ದರೂ 'ಬ್ರಾಹ್ಮಣರು ನಮ್ಮ ರಾಷ್ಟ್ರಜೀವನದ ಮಾರ್ಗದರ್ಶಕರಾಗಿದ್ದರು. ದೇವತೆಗಳಂತಿದ್ದರು, ಲೋಕಪೂಜ್ಯರಾಗಿದ್ದರು, ಪರಕೀಯರ ದುರಾಕ್ರಮಣ ಅದರಲ್ಲೂ ವಿಶೇಷವಾಗಿ ಆಂಗ್ಲರ ಕುತ್ಸಿತ ಮನೋಭಾವದಿಂದಾಗಿ ಪರಂಪರಾ ಗತವಾಗಿದ್ದ ನಮ್ಮ ಸಾಮಾಜಿಕ ವ್ಯವಸ್ಥೆಯು ನಾಶಗೊಂಡು ಇಂದು ನಾವು ಕಾಣುತ್ತಿರುವ ಭೀಕರ ಪರಿಸರ ನಿರ್ಮಾಣವಾಗಿದೆ' ಎಂಬ ಸತ್ಯಸಂಗತಿಯನ್ನು ತಿಳಿಯಬಹುದು. ಈ ಅಂಶಗಳನ್ನು ಅರ್ಥಮಾಡಿಕೊಂಡು ನಮ್ಮ ರಾಷ್ಟ್ರ ಜೀವನದ ಪುನರುತ್ಥಾನಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ಯಶಸ್ಸು ಸಿಗು ವುದರಲ್ಲಿ ಸಂಶಯವೇನಿಲ್ಲ. ಈ ನಂಬಿಕೆಯಿಂದಲೇ ನನ್ನ ಅನಿಸಿಕೆಗಳನ್ನು ಈ ಮೂಲಕ ನಾಡಿನ ಜನತೆಯ ಮುಂದಿಡುವ ಕಾರ್ಯಕ್ಕೆ ಕೈ ಹಾಕಿದ್ದೇನೆ. ಇದೊಂದು ಸಾರ್ವಜನಿಕ ಪ್ರಯತ್ನ. ಈ ಪ್ರಯತ್ನದ ಸದುಪಯೋಗ ಪಡೆ ಯುವತ್ತ ಇಂದಿನ ಬ್ರಾಹ್ಮಣ್ಯರು ಈಗಲಾದರೂ ಸ್ವಲ್ಪಮಟ್ಟಿಗೆ ಗಮನಹರಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ವರೆಂದು ನಂಬಿದ್ದೇನೆ. ಸರ್ವಶಕ್ತನು ಎಲ್ಲರಿಗೂ ಇಂಥ ಸದ್ಬುದ್ಧಿಯನ್ನು ಕರುಣಿಸಲಿ. ಇತಿ ಸನಾತನ ಧರ್ಮಾಭಿಮಾನಿ, —**ಸುಧಾರ್ಥಿ, ಹಾಸನ**

ಗೌರವ ಕಾರ್ಯದರ್ಶಿ, ಗಾಯತ್ರೀ ಸೇವಾ ಪ್ರತಿಷ್ಠಾನ
'ಬೃಂದಾವನ' (ಹಿಮ್ಮನೆ), ನಂ. ೧೫, ರಂಗರಾವ್ ರಸ್ತೆ
ಶಂಕರಪುರ, ಬೆಂಗಳೂರು–೫೬೦ ೦೦೪

ಜನಿವಾರದ ವಿಚಾರ

ತಲೆಯಲ್ಲಿ ಜುಟ್ಟು ಹಾಗೂ ಹೆಗಲಲ್ಲಿ ಜನಿವಾರವನ್ನು ಧರಿಸಿರುವುದು ಅನಾದಿಕಾಲದಿಂದಲೂ ಬ್ರಾಹ್ಮಣ್ಯದ ಸಂಕೇತವಾಗಿ ಉಳಿದು ಬಂದಿದೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಬ್ರಾಹ್ಮಣರೂ ತಲೆಗೂದಲು ಕತ್ತರಿಸಿಕೊಂಡು 'ಕ್ರಾಪ್' ಮಾಡಿಸಿಕೊಳ್ಳುವ ಕ್ರಮ ರೂಢಿಗೆ ಬಂದ ನಂತರ ಬ್ರಾಹ್ಮಣರ ತಲೆಯಲ್ಲಿ ಜುಟ್ಟನ್ನು ಕಾಣುವುದು ಅಪರೂಪವಾಯಿತು. ಲೌಕಿಕ ಬ್ರಾಹ್ಮಣರು ; ವೈದೀಕ ಬ್ರಾಹ್ಮಣರು ಎಂಬ ಅಶಾಸ್ತ್ರೀಯವಾದ ಸ್ವಯಂ ಘೋಷಿತ ವಿಂಗಡಣೆಯು ಪ್ರಾರಂಭವಾದನಂತರ, ಲೌಕಿಕ ಬ್ರಾಹ್ಮಣರೆನಿಸಿ ಕೊಂಡವರಲ್ಲಿ ಬಹಳಷ್ಟು ಮಂದಿ ಜನಿವಾರ ಧರಿಸುವ ವಿಚಾರದಲ್ಲಿ ಸಂಪೂರ್ಣ ನಿರ್ಲಕ್ಷ್ಯ ಮಾಡುವಂತಾಗಿದೆ, ಆದರೂ ಮನೆಯಲ್ಲಿ ಸುಸಂಸ್ಕೃತರಾದ ಹೆಂಗಸರ ಒತ್ತಾಯಕ್ಕೆ ಮಣಿದು ಅಥವಾ ಸಮಾಜದಲ್ಲಿ ಸಾರ್ವಜನಿಕವಾಗಿ ತಾನೂ ಸನಾತನ ಧರ್ಮದ ಅನುಯಾಯಿ ಎಂಬುದನ್ನು ತೋರ್ಪಡಿಸುವ ಹಂಬಲ ಹೊತ್ತವರು ಒಂದು ರೀತಿಯ ಕಾಟಾಚಾರಕ್ಕಾಗಿ ಜನಿವಾರ ಧರಿಸುವ ರೂಢಿ ಇಟ್ಟುಕೊಂಡಿರುವುದುಂಟು. ಇದು ಸರಿಯೋ ತಪ್ಪೋ ಎಂಬುದರ ಜಿಜ್ಞಾಸೆ ಗಿಂತಲೂ, ಶಾಸ್ತ್ರಾನುಸಾರವಾಗಿ ಇದರ ಮಹತ್ವವೇನೆಂಬುದನ್ನು ಸನಾತನ ಧರ್ಮಾನುಯಾಯಿಗಳೆಲ್ಲರೂ ತಿಳಿದಿರಲೇಬೇಕಾದುದು ಅತ್ಯಗತ್ಯ. ಈ ಹಿನ್ನೆಲೆ ಯಲ್ಲಿ 'ಜನಿವಾರ'ಎಂದರೇನೆಂಬುದನ್ನು ಸ್ವಲ್ಪ ತಿಳಿದುಕೊಳ್ಳೋಣ.

ಜನಿವಾರವೆಂದರೇನು ?

ಜನಿವಾರವೆಂಬ ಶಬ್ದದಲ್ಲಿ ಜನಿ+ವಾರಯುತಿ ಎಂಬ ಎರಡು ಶಬ್ದಗಳು ಸೇರಿವೆ. ಜನಿ ಎಂದರೆ ; ಹುಟ್ಟನ್ನು ಎಂದರ್ಥ. ವಾರಯುತಿ ಎಂದರೆ ; ನಿವಾರಿಸುವುದು ಎಂದರ್ಥ. ಹುಟ್ಟನ್ನು ನಿವಾರಿಸುವುದು ಎಂಬುದು ಜನಿವಾರ ವೆಂಬ ಶಬ್ದದ ಒಟ್ಟು ಅರ್ಥ. ... ದಿನದಲ್ಲಿ ಕೊನೆಯ ಹಂತ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದ ಸನ್ಯಾಸಾಶ್ರಮವನ್ನು ಪ್ರವೇಶಿಸುವಾಗ ಜನಿವಾರವನ್ನು ತೆಗೆದುಹಾಕ ಲಾಗುತ್ತದೆ. ಅಂದರೆ, ಗೃಹಸ್ಥಾಶ್ರಮಿಯು ಜನಿವಾರ ಧರಿಸಲೇಬೇಕೆಂಬುದು ಶಾಸ್ತ್ರವಾಕ್ಯ.

ಜನಿವಾರವನ್ನು ಯಜ್ಞೋಪವೀತವೆಂದೂ ಕರೆಯಲಾಗುತ್ತದೆ. ಈ ಶಬ್ದ ದಲ್ಲಿ ಯಜ್ಞ+ಉಪವೀತ ಎಂಬ ಎರಡು ಶಬ್ದಗಳು ಸೇರಿವೆ. ದೇವ, ಋಷಿ, ಪಿತೃ ಸಂಬಂಧವಾಗಿ ನಾವು ಆಚರಿಸಲೇಬೇಕಾದ ಪ್ರತಿಯೊಂದು ಕಾರ್ಯವೂ ಯಜ್ಞವೆನಿಸಿಕೊಳ್ಳುತ್ತದೆ. ಇಂಥ ಯಜ್ಞಕಾರ್ಯವನ್ನು ನಡೆಸುವಾಗ ನಾವು ಧರಿಸಲೇಬೇಕಾದ ವಸ್ತ್ರವು ಉಪವೀತವೆನಿಸಿಕೊಳ್ಳುತ್ತದೆ.

ಯಜ್ಞಯಾಗಗಳ ಮಹತ್ವ

ಸಂಧ್ಯೋಪಾಸನೆರಹಿತವಾಗಿ ಮಾಡುವ ಶಾಸ್ತ್ರೋಕ್ತವಾದ ಯಾವುದೇ ಯಜ್ಞಕಾರ್ಯವೂ ಉದ್ದೇಶಿತ ಫಲ ನೀಡದು ಎಂಬ ಶಾಸ್ತ್ರವಚನವಿರು ವಂತೆಯೇ, ಜನಿವಾರರಹಿತವಾಗಿ ನಡೆಸುವ ಸಂಧ್ಯಾವಂದನಾದಿ ಯಜ್ಞಕಾರ್ಯ ಗಳೂ ಕೂಡ ನಿಷ್ಫಲವೆಂಬ ಶಾಸ್ತ್ರವಚನವೂ ಇದೆ.

ಸೃಷ್ಟಿಯ ಪ್ರಾರಂಭದಲ್ಲಿ ಬ್ರಹ್ಮನು ದೇವತೆಗಳು, ಮಾನವರು ಹಾಗೂ ದಾನವರು ಎಲ್ಲರನ್ನೂ ಒಂದೆಡೆಯಲ್ಲೇ ಸೃಷ್ಟಿಸಿದ. ಶಾಸ್ತ್ರೋಕ್ತವಾಗಿ ಯಜ್ಞಯಾಗಗಳನ್ನು ನಡೆಸುವ ಮೂಲಕ ಸ್ವರ್ಗಾದಿ ಉತ್ತಮಲೋಕಗಳನ್ನು ಹೊಂದಿ ಸುಖಿಸುವ ಮಾರ್ಗ ಸೂಚಿಸಿದ. ಶಾಸ್ತ್ರಕ್ರಮಗಳನ್ನು ಸರಿಯಾಗಿ ಅರಿಯದ ದಾನವರು ದುಡುಕುಬುದ್ಧಿಯಿಂದ ಅಶಾಸ್ತ್ರೀಯವಾಗಿ ಯಜ್ಞ ಯಾಗಗಳನ್ನು ಆಚರಿಸಿದರೂ, ಸ್ವರ್ಗವನ್ನು ಕಾಣಲಾರದೇ ಕಂಗಾಲಾದರು ಶಾಸ್ತ್ರೋಕ್ತ ಕ್ರಮದಲ್ಲೇ ಯಜ್ಞಯಾಗಗಳನ್ನು ಸಮರ್ಪಕವಾಗಿ ಆಚರಿಸಿದ ದೇವತೆಗಳು ಸ್ವರ್ಗವನ್ನು ಸೇರಿ ಸುಖಿಸಿದರು ಎಂದು ಪುರಾಣಗಳು ಸೂಚಿಸು ತ್ತವೆ. ಕ್ರಮಪ್ರಕಾರ ಕಾರ್ಯನಿರ್ವಹಿಸುವುದೆಂದರೆ ; ಶಾಸ್ತ್ರೋಕ್ತವಾಗಿ ಕರ್ಮ ಮಾಡುವುದೆಂದರ್ಥ. ಮಾನವರು ತಮ್ಮ ಲೌಕಿಕ ಹಾಗೂ ಪಾರಮಾರ್ಥಿಕ ಜೀವನವನ್ನು ಸಾರ್ಥಕವಾಗಿ ಸಾಗಿಸುವ ದಿಸೆಯಲ್ಲಿ ಅನುಸರಿಸಲೇಬೇಕಾದ ನೀತಿ, ನಿಯಮಗಳನ್ನು ನಮ್ಮ ಶಾಸ್ತ್ರ ಸಂಪ್ರದಾಯಗಳು ನಿರ್ವಂಚನೆಯಿಂದ ಸೂಚಿಸುತ್ತವೆ. ಅವುಗಳನ್ನು ಗೌರವದಿಂದ ಅನುಸರಿಸುವುದು ಶ್ರದ್ಧಾಳುಗಳ ಶ್ರೇಯಸ್ಸಿಗೆ ನಿಸ್ಸಂಶಯವಾದ ವಿಚಾರವಾಗಿದೆ. ಈ ಹಿನ್ನೆಲೆಯಲ್ಲಿ ಜನಿವಾರದ ವಿಚಾರವಾಗಿ ಪ್ರಚಲಿತವಿರುವ ಕೆಲವೊಂದು ಮಾಹಿತಿಗಳನ್ನು ಗಮನಿಸೋಣ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಜ್ಞೋಪವೀತದ ಮಹತ್ವ

ಇಂದಿನ ಕೆಲವು ಸ್ವಯಂಘೋಷಿತ ಮೇಧಾವಿಗಳು ಸೂಚಿಸುವಂತೆ, ನಮ್ಮ ಶಾಸ್ತ್ರ ಸಂಪ್ರದಾಯಗಳು ಅರ್ಥಹೀನವೆಂದು ತಿಳಿಯುವುದು ಮೂರ್ಖ ತನದ ಪರಮಾವಧಿ. ವಿಜ್ಞಾನಾಂಧಃಕಾರ ಪೀಡಿತರಾದ ಇಂದಿನಮೇಧಾವಿಗಳು ಭಾವಿಸುವಂತೆ ನಮ್ಮ ಶಾಸ್ತ್ರ ಸಂಪ್ರದಾಯಗಳು ಹಳಿತು, ಕೊಳೆತು, ಹೊಲಸೆನಿಸುವಂತಾಗಲು ಅವು ನಿಂತ ನೀರಲ್ಲ. ಕ್ಷಣಕ್ಷಣಕ್ಕೂ ಬದಲಾಗುವ ಸೃಷ್ಟಿಯ ಚಿತ್ರ ವಿಚಿತ್ರಗಳನ್ನು ಸ್ಪಷ್ಟವಾಗಿ ತಿಳಿದ ಸರ್ವಶಕ್ತನು ಅದರ ನಿಯಂತ್ರಣಕ್ಕೆ ಕಾಲಾನುಗುಣವಾದ ನಿಯಮಗಳನ್ನು ವಿಧಿಸುವುದಕ್ಕಾಗಿ, ಋಷಿ, ಮುನಿಗಳ ಮೂಲಕ ಶ್ರುತಿ, ಸ್ಮೃತಿ, ಶಾಸ್ತ್ರ ಮುಂತಾದುವುಗಳನ್ನು ಜಗತ್ತಿಗೆ ನೀಡಿದ್ದಾನೆ. ಯುಗ ಯುಗಗಳ ಅವಧಿಗೆ ಮಾತ್ರ ಇಂಥ ಶಾಸ್ತ್ರ ಸಂಪ್ರದಾಯಗಳಲ್ಲಿ ಬದಲಾವಣೆ ಇರುತ್ತದೆ. ಉಳಿದಂತೆ ಆಪದ್ಧರ್ಮವೆಂಬ ತಿದ್ದುಪಡಿಗಳು ಮಾತ್ರ ಇರುತ್ತವೆ. ಇದೊಂದು ಅತ್ಯಂತ ಮಹತ್ವದ ವಿಚಾರ. ಇದನ್ನು ಎಲ್ಲರೂ ಸದಾಕಾಲವೂ ನೆನಪಿನಲ್ಲಿಟ್ಟುಕೊಳ್ಳಲೇಬೇಕು.

ಯಜ್ಞಕಾಲದಲ್ಲಿ ಧರಿಸಬೇಕಾದ ವಸ್ತ್ರವನ್ನು ಯಜ್ಞೋಪವೀತವೆಂದೂ; ಇದನ್ನೇ ಹುಟ್ಟನ್ನು ನಿವಾರಿಸುವ ಅಂದರೆ ; ಮೋಕ್ಷವನ್ನು ದೊರಕಿಸುವುದೆಂಬ ಅರ್ಥದಲ್ಲಿ ಜನಿವಾರವೆಂದೂ ಸೂಚಿಸಲಾಗುತ್ತದೆಂಬ ವಿಚಾರವನ್ನು ತಿಳಿದಾಗಿದೆ. ಈ ಯಜ್ಞೋಪವೀತದ ಸ್ವರೂಪ, ತಯಾರಿಸುವ ವಿಧಾನ, ಅದು ಪ್ರತಿನಿಧಿಸುವ ಮಹಾನ್ ತತ್ತ್ವ, ಅದನ್ನು ಧರಿಸುವ ಕ್ರಮ, ರಕ್ಷಿಸುವ ಕ್ರಮ, ವಿಸರ್ಜಿಸುವ ಕ್ರಮ ಮುಂತಾದುವುಗಳನ್ನು ಕುರಿತು ಶಾಸ್ತ್ರಗಳಲ್ಲಿ ಅತ್ಯಂತ ಸ್ಪಷ್ಟವಾದ ಮಾರ್ಗದರ್ಶನಗಳು ಕಾಣಬರುತ್ತವೆ.

ಸಾಮಾನ್ಯವಾಗಿ ಪರಿಗಣಿಸಿದಾಗ ಈ 'ಜನಿವಾರ' ಎಂಬ ವಸ್ತುವು ಹತ್ತಿಯ ನೂಲಿನಿಂದ ತಯಾರಿಸಿದ ಮೂರು ಎಳೆಗಳನ್ನುಳ್ಳ ಒಂದು ದಾರ. ಬೀಗದ ಕೈ ಹಾಗೂ ತಾಯಿತ ಮುಂತಾದುವುಗಳನ್ನು ಕಟ್ಟಿಕೊಳ್ಳಲು ಅಥವಾ ಬೆನ್ನನ್ನು ಉಜ್ಜಿಕೊಳ್ಳಲು ಮಾತ್ರ ಇದರ ಉಪಯೋಗ ಎಂಬ ಕುಚೋದ್ಯದ ಹೇಳಿಕೆಗಳು ರೂಢಿಯಲ್ಲಿವೆ. ಆದರೆ ಶಾಸ್ತ್ರೋಕ್ತ ಕ್ರಮದಲ್ಲಿ ಸಿದ್ಧವಾದ ಜನಿವಾರವು ಪ್ರತಿನಿಧಿಸುವ ತತ್ತ್ವವು ಮಹತ್ತರವಾದುದು. ಪ್ರಕೃತಿದತ್ತವಾದ ಹತ್ತಿಯ ನೂಲಿನಿಂದ ತಯಾರಿಸಿದ ಜನಿವಾರದ ಸುತ್ತಳತೆಯು ಸಾಮಾನ್ಯವಾಗಿ ಅದನ್ನು ಧರಿಸುವ ವ್ಯಕ್ತಿಯ ಎತ್ತರಕ್ಕೆ ಸಮಾನವಾದುದಾಗಿರುತ್ತದೆ. ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನೂ ಬೆರಳಿನ (ಅಂಗುಲಿ)

Sri Vidyabharathi Book Centre, Sringeri

CC-O. In Public Domain. Digitized by eGangotri

ಅಳತೆಯಲ್ಲಿ ೯೬ ಅಂಗುಲಿ ಎತ್ತರವಿರುತ್ತಾನೆ. ಈ ಆಧಾರದಲ್ಲಿ ನಾಲ್ಕು ಬೆರಳುಗಳ ಬುಂಡದ ಸುತ್ತ, ೬೯ ಸುತ್ತು, ಸುತ್ತಿದ ಬೇರೆ ಬೇರೆಯ ಮೂರು ನೂಲಿನ ಎಳೆಗಳನ್ನು ಸೇರಿಸಿ ಹೊಸೆದು, ಮೂರು ಸಮಭಾಗಗಳಾಗಿ ಮಡಿಸಿ ಹೊಸೆದು, ಪುನಃ ಮೂರು ಭಾಗಗಳಾಗಿ ಮಡಿಸಿ, ಶಾಸ್ತ್ರೋಕ್ತವಾದ ಮಂತ್ರ ಹಾಗೂ ಮಂತ್ರ ಜಲದಿಂದ ಸಂಸ್ಕರಿಸಿ, ಗಾಯತ್ರೀ ಮಹಾಮಂತ್ರ ಪೂರ್ವಕವಾಗಿ ಬ್ರಹ್ಮ ವಿಷ್ಣು ಮಹೇಶ್ವರರನ್ನು ಧ್ಯಾನಿಸಿ ; ಭಾವಿಸಿ, ಬ್ರಹ್ಮಗಂಟನ್ನು ಹಾಕಿ ಜನಿವಾರವನ್ನು ಸಿದ್ಧಪಡಿಸಲಾಗುತ್ತದೆ.

ಈ ರೀತಿ ಸಿದ್ಧಪಡಿಸಿದ ಜನಿವಾರದಲ್ಲಿ ೩ ಎಳೆಗಳಿದ್ದು ಪ್ರತಿಯೊಂದು ಎಳೆಯಲ್ಲೂ ೯ ಬಿಡಿ ಎಳೆಗಳಿರುತ್ತವೆ. ಶಾಸ್ತ್ರೋಕ್ತವಾಗಿ ತಯಾರಿಸಿದ ಇಂಥ ಜನಿವಾರ ಅಥವಾ ಯಜ್ಞೋಪವೀತವು ಅದನ್ನು ಧರಿಸುವ ವ್ಯಕ್ತಿಯ ದ್ವಿಜ ಜನ್ಮದ ಸೂಕ್ಷ್ಮ ದೇಹವನ್ನು ಪ್ರತಿನಿಧಿಸುತ್ತದೆ. ಅಲ್ಲದೇ, ಮೂರು ಎಳೆಗಳು ಭೂರ್ಭುವಸ್ಸುವಃ ಎಂಬ ೩ ಲೋಕಗಳನ್ನೂ ; ಋಗ್ಯಜುಸ್ಸಾಮ ವೆಂಬ ೩ ವೇದಗಳನ್ನೂ ; ಬ್ರಹ್ಮ ವಿಷ್ಣು ಮಹೇಶ್ವರರೆಂಬ ಸೃಷ್ಟಿ ಸ್ಥಿತಿ ಲಯ ಕಾರಣಾಧಿದೇವತೆಗಳು ಮೂವರನ್ನೂ ; ದಕ್ಷಿಣ ಗಾರ್ಹಪತ್ಯ ಆಹವನೀಯ ವೆಂಬ ೩ ಅಗ್ನಿಗಳನ್ನೂ ; ಅಕಾರ ಉಕಾರ ಮಕಾರ ಪೂರಿತವಾದ ಓಂಕಾರ ವನ್ನೂ ಪ್ರತಿನಿಧಿಸುತ್ತದೆ.

೧೫ ತಿಥಿ ; ೭ ವಾರ, ೨೭ ನಕ್ಷತ್ರ, ೨೫ ತತ್ತ್ವ, ೪ ವೇದ, ೩ ಗುಣ, ೩ ಕಾಲ, ೧೨ ಮಾಸ ಮುಂತಾದುವುಗಳೇ ಪ್ರಪಂಚ ಅಥವಾ ಬ್ರಹ್ಮವೆನಿಸುತ್ತವೆ. ಇವುಗಳ ಒಟ್ಟು ಮೊತ್ತ ೯೬. ಈ ಕಾರಣದಿಂದಾಗಿ ಅಂಗುಲಿಗಳ ಸುತ್ತ ೯೬ ಸುತ್ತು ಸುತ್ತಿದದಾರದಿಂದ ತಯಾರಿಸಿದ ಜನಿವಾರವು ಬ್ರಹ್ಮಸೂತ್ರವೆನಿಸಿ, ಸರ್ವಾಂತರ್ಯಾಮಿಯಾದ ಪರಬ್ರಹ್ಮದ ಪ್ರತಿನಿಧಿಯೆನಿಸಿದೆ. ಇದಕ್ಕೂ ಮಿಗಿಲಾಗಿ, ಗಾಯತ್ರೀ ಮಹಾಮಂತ್ರದಲ್ಲಿರುವ ೨೪ ಅಕ್ಷರಗಳನ್ನು ನಾಲ್ಕು ವೇದಗಳಿಂದ ಗುಣಿಸಿದಾಗ ಬರುವ ಗುಣಲಬ್ಧವು ೯೬. ಗಾಯತ್ರೀ ಮಹಾ ಮಂತ್ರವನ್ನು ಜಪಿಸುವುದನ್ನೇ ಪ್ರಧಾನ ಕ್ರಿಯೆಯನ್ನಾಗಿ ಹೊಂದಿರುವ ಸಂಧ್ಯೋಪಾಸನಾದಿ ಸಕಲ ಶಾಸ್ತ್ರೋಕ್ತ ಕರ್ಮದಲ್ಲಿಯೂ ಕಡ್ಡಾಯವಾಗಿ ಧರಿಸಿರಲೇಬೇಕೆಂಬ ಆದೇಶ ಹೊಂದಿದ ಜನಿವಾರವು ಇಂಥ ಮಹಾನ್ ಗಾಯತ್ರೀಮಾತೆಯನ್ನು ಪ್ರತಿನಿಧಿಸುವ ಸಂಕೇತವೂ ಆಗಿದೆ.

ಗೃಹಸ್ಥಾಶ್ರಮಿಯು ಸಾಯುಜ್ಯ ಮೋಕ್ಷಾಪೇಕ್ಷಿಯಾಗಿ ಸನ್ಯಾಸದೀಕ್ಷೆ ಪಡೆಯುವಾಗ ಮಾತ್ರ ಯಜ್ಞೋಪವೀತದ ಸಂಪರ್ಕ ಸಂಪೂರ್ಣವಾಗಿ ತಪ್ಪು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತದೆ. ಅಮವರೆವಿಗೂ ಅದು ದ್ವಿಜರ ಹೆಗಲಿನಲ್ಲಿ ಇರಲೇಬೇಕಾದ ಅವರ ದೇಹದ ಅವಿಭಾಜ್ಯ ಅಂಗವಾಗಿದೆ.

ಜನಿವಾರವನ್ನು ಧರಿಸುವುದಕ್ಕೆ; ಮೈಲಿಗೆಯಾದಾಗ ವಿಸರ್ಜಿಸುವುದಕ್ಕೆ: ಮೈಲಿಗೆಯಾಗದಿದ್ದರೂ ನಾಲ್ಕು ತಿಂಗಳಿಗೊಮ್ಮೆ ಜೀರ್ಣವಾದ ಯಜ್ಞೋಪವೀತವನ್ನು ತೆಗೆದು ಹೊಸದನ್ನು ಧರಿಸುವುದಕ್ಕೆ ಮುಂತಾಗಿ ಶಾಸ್ತ್ರೋಕ್ತವಾದ ನಿಯಮಗಳಿವೆ. ಅವುಗಳನ್ನೆಲ್ಲ ವಿವರವಾಗಿ ತಿಳಿದು ಆಚರಿಸುವುದು ಆತ್ಮಶ್ರೇಯಸ್ಸಿನ ಹಾದಿ. ಇದಕ್ಕೆ ಸಂಬಂಧಿಸಿದ ಉಪಯುಕ್ತ ಮಾಹಿತಿಗಳಿಗಾಗಿ ಶ್ರೀದೇವಕೀ ಸುಬ್ರಮಣ್ಯ ಭಟ್ಟರು ಬರೆದಿರುವ 'ಯಜ್ಞೋಪವೀತ ಅಥವಾ ಜನಿವಾರ' ಎಂಬ ಕೃತಿಯನ್ನು ಗಮನಿಸುವುದು ಉಪಯುಕ್ತವಾದೀತು.

ಯಜ್ಞೋಪವೀತದ ತಯಾರಿಕೆ, ಧರಿಸುವಿಕೆ, ವಿಸರ್ಜನೆ ಮುಂತಾದುವಕ್ಕೆ ಸಂಬಂಧಿಸಿದಂತೆ ಹಲವಾರು ನಿಬಂಧನೆಗಳಿವೆಯೆಂಬುದನ್ನು ಈಗಾಗಲೇ ಸೂಚಿಸಲಾಗಿದೆ. ಅಕ್ಷರಶಃ ಇವುಗಳನ್ನು ಪಾಲಿಸುವುದೆಂದರೆ; ಇಂದು ಲೌಕಿಕರಿರಲೀ ಪುರೋಹಿತರಲ್ಲೇ ಬಹಳಷ್ಟು ಜನ ಜನಿವಾರ ಧರಿಸಲು ಸಾಧ್ಯವಾಗದೆನಿಸುತ್ತದೆ. ಅಂದಮಾತ್ರಕ್ಕೆ ನಿಯಮಗಳು ನಿರುಪಯೋಗಿಯಾದುವು; ಉಲ್ಲಂಘನೀಯವೆಂದು ಅರ್ಥವಲ್ಲ. ಸಂಧ್ಯಾವಂದನೆಯ ಅನುಷ್ಠಾನಕ್ಕೆ ಇಚ್ಛಾಶಕ್ತಿಯೇ ಪ್ರಧಾನವಾದುದೆಂದು ನಾನು ಈ ಕೃತಿಯ ಪ್ರಾರಂಭದಲ್ಲಿ ವಿವರಿಸಿರುವಂತೆ, ಜನಿವಾರದ ವಿಚಾರಕ್ಕೆ ಸಂಬಂಧಿಸಿದಂತೆಯೂ ಇದೇ ಅಭಿಪ್ರಾಯವನ್ನು ಹೇಳಬೇಕಾಗಿದೆ.

ಶಾಸ್ತ್ರೋಕ್ತವಾದ ನಿಯಮಗಳಿರುವುದು ಸಂಬಂಧಿಸಿದ ವಸ್ತು ವಿಚಾರದ ಪಾವಿತ್ರ್ಯ ಹಾಗೂ ಮಹತ್ವವನ್ನು ಉಳಿಸಿ, ಬೆಳೆಸುವುದಕ್ಕಾಗಿ ಮಾತ್ರ ಎಂಬುದು ನಮ್ಮ ಗಮನದಲ್ಲಿರಬೇಕು. ಅಂದಿನ ಸಾಮಾಜಿಕ ಪರಿಸರವನ್ನನುಸರಿಸಿ ಇಂಥ ನಿಯಮಗಳು ರೂಢಿಗೆ ಬಂದಿರುತ್ತವೆ. ಕಾಲಕ್ರಮದಲ್ಲಿ ಕೆಲವಾರು ಅತ್ಯುತ್ಸಾಹಿಗಳ ಅಸಮಂಜಸ ಚಿಂತನೆಯ ಫಲವಾಗಿ, ಅನುಸರಿಸಲಾಗದಂಥ ಕೆಲವಾರು ನಿಯಮಗಳೂ ನಮ್ಮ ಶಾಸ್ತ್ರದ ಹೆಸರಿನಲ್ಲಿ ಸೇರ್ಪಡೆಯಾಗಿರುವ ಸಂಭವವಿರುತ್ತವೆ. ಇದನ್ನೂ ಗಮನದಲ್ಲಿರಿಸಿಕೊಂಡು ಜನಿವಾರ ಹಾಗೂ ಸಂಧ್ಯೋಪಾಸನೆಯ ವಿಚಾರದಲ್ಲಿ ಶಾಸ್ತ್ರೋಕ್ತವೆಂದು ಹೇಳಲಾಗುವ ನಿಯಮಗಳಲ್ಲಿ ಯಾವುದು ಅನುಲ್ಲಂಘನೀಯ; ಹಾಗೂ ಯಾವುದರ ಉಲ್ಲಂಘನೆ ಅನಿವಾರ್ಯವಾದುದು ಎಂಬುದನ್ನು ಶಾಂತಚಿತ್ತದಿಂದ ವಿವೇಚಿಸಿ, ನಿರ್ಧರಿಸಿಕೊಳ್ಳಬೇಕಾದುದು ಇಂದಿನ ಪ್ರಬುದ್ಧ ಉಪಾಸಕರ ಜವಾಬ್ದಾರಿ.

Sri Vidyabharathi Book Centre, Sringeri

CC-O, In Public Domain. Digitized by eGangotri

ಆದರೂ ಈ ವಿಚಾರಗಳಲ್ಲಿ ನಮಗೆ ಪೂರ್ಣಶ್ರದ್ಧೆ ಬಂದನಂತರ, ಶಾಸ್ತ್ರದ ಮಾಹಿತಿಯನ್ನು ಸಂಪೂರ್ಣವಾಗಿ ತಿಳಿದವರೂ; ಪಾರಮಾರ್ಥಿಕ ಹಾಗೂ ಲೌಕಿಕ ವಿಚಾರಗಳಲ್ಲಿ ಉದಾರಿಗಳೂ ಆದ ಮಹನೀಯರ ಮಾರ್ಗದರ್ಶನ ಪಡೆಯುವುದು ಶ್ರೇಯಸ್ಕರವೆಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಈ ದಿಸೆಯಲ್ಲಿ ನಮಗೆ ಮನಸ್ಸಿದ್ದರೆ, ಸೂಕ್ತವಾದ ಮಾರ್ಗವಿರುವುದು ನಿಶ್ಚಯ ವಾದುದು.

ಶರೀರದ ನಶ್ವರತೆಯನ್ನು ಮನವರಿಕೆ ಮಾಡಿಕೊಡುವ ದಿಸೆಯಲ್ಲಿ ಸಂಧ್ಯೋಪಾಸನೆಗೆ ಮೊದಲು ಲಾಂಛನಧಾರಣೆ ಮಾಡಿಕೊಳ್ಳುವುದರ ಮಹತ್ವ ವಿರುವಂತೆಯೇ, ಪರಮಾತ್ಮತತ್ವವೊಂದರ ವಿನಃ ಉಳಿದೆಲ್ಲ ವಸ್ತುಗಳೂ ನಶ್ವರ ವಾದುವೆಂಬುದನ್ನು ಪ್ರತಿನಿಧಿಸುವಂತೆ ಯಜ್ಞೋಪವೀತವನ್ನು ಸೂಕ್ಷ್ಮ ಶರೀರ ಹಾಗೂ ಜಗತ್ತಿನ ಸಂಕೇತವಾಗಿ ಭಾವಿಸಲಾಗುತ್ತದೆ. ಸರ್ವಸಂಗ ಪರಿತ್ಯಾಗ ಮಾಡಿ, ಸಾಯುಜ್ಯ ಮೋಕ್ಷ ಸಾಧನೆಯ ದಿಸೆಯಲ್ಲಿ ಸನ್ಯಾಸ ಸ್ವೀಕಾರ ಮಾಡು ವಾಗ ಮಾತ್ರ ಈ ಯಜ್ಞೋಪವೀತದ ಸಂಬಂಧವೂ ಕಳಚಿಬೀಳುತ್ತದೆ. ಈ ಅಂಶವನ್ನು ಗಮನಿಸಿದಾಗ ಜಗತ್ತಿನಲ್ಲಿ ಬ್ರಹ್ಮ ಒಂದರ ವಿನಃ ಬೇರೊಂದು ಯಾವುದೂ ಇಲ್ಲವೆಂಬ ಅದ್ವೈತ ಸಿದ್ಧಾಂತದ ಸತ್ಯತೆಯು ಎಂಥ ಸಾಮಾನ್ಯ ರಿಗೂ ಮನವರಿಕೆಯಾಗುತ್ತದೆ.

ಯಜ್ಞೋಪವೀತಧಾರಣೆಯ ಕ್ರಮ

ಸ್ನಾನ, ಆಚಮನ, ಪ್ರಾಣಾಯಾಮ, ದೇಶಕಾಲ ಸಂಕೀರ್ತನೆಯ ನಂತರ ಅಗತ್ಯವಿರುವ ಜನಿವಾರವನ್ನು ಬಿಡಿಸಿಕೊಂಡು ಎರಡೂ ಹಸ್ತದಲ್ಲಿ ಮಧ್ಯದ ಮೂರು ಬೆರಳುಗಳು ಹೊರಗೂ ಉಳಿದೆರಡು ಬೆರಳುಗಳು ಒಳಗೂ ಇರುವಂತೆ ಜನಿವಾರವನ್ನು ಹಿಡಿದುಕೊಂಡು,

"ಯಜ್ಞೋಪವೀತ ಮಿತ್ಯಸ್ಯ ಮಂತ್ರಸ್ಯ
ಗೌತಮಾತ್ರೇಯ ವಸಿಷ್ಠಾ ಋಷಯಃ ಶ್ವೇತವರ್ಣಂ ।
ಶಕ್ತಿ ಬೀಜಂ ಋಗ್ಯಜುಸ್ಸಾಮ ವೇದಾತ್ಮಕಂ ।
ಆಹವನೀಯ–ಗಾರ್ಹಪತ್ಯ–ದಕ್ಷಿಣಾ ಅಗ್ನೇಯಸ್ಥಾನಂ ।
ಮಮ ಚತುರ್ವಿಧ ಫಲ ಪುರುಷಾರ್ಥ ಸಿದ್ಧ್ಯರ್ಥಂ
ಯಜ್ಞೋಪವೀತಧಾರಣೇ ವಿನಿಯೋಗಃ ॥

ಎಂಬ ಮಂತ್ರದೊಂದಿಗೆ ಸಂಕಲ್ಪ ಮಾಡಿಕೊಂಡು, ಯಜ್ಞ ಸ್ವರೂಪಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾದ ಮಹಾವಿಷ್ಣುವಿನ ಸವಿಶಾಪದಿಂದ; ವಿವಿಧ ಜೀವ ಸ್ವರೂಪವಾಗಿ; ಪಾಪನಾಶಕವಾಗಿ; ಚತುರ್ಮುಖ ಬ್ರಹ್ಮನ ಸರ್ವವಿಧವಾದ ವ್ಯವಹಾರಗಳ ಕಾರಣವಾಗಿ; ದೇಹೇಂದ್ರಿಯಂಗಳ ಒಡಹುಟ್ಟಿ; ಪೂರ್ಣಾಯುವಾಗಿರುವ ನೀನು ಅವಿದ್ಯಾದಿಗಳ ಸಂಪರ್ಕದಿಂದ ನಮ್ಮನ್ನು ಬಿಡಿಸು. ನಿತ್ಯಕರ್ಮಗಳನ್ನು ಮಾಡುವುದಕ್ಕಾಗಿ ಕಾರ್ಪಾಸಸೂತ್ರ ರೂಪವಾಗಿ ಹೃದಯಂದಲ್ಲಿ ಧರಿಸಲ್ಪಡುವ ಕಾರಣದಿಂದ ಶ್ರೌತ ಸ್ಮಾರ್ತ ಕರ್ಮಾನುಷ್ಠಾನ ಫಲ ಪ್ರಸಾದ ಸಾಮರ್ಥ್ಯ ಉಳ್ಳದ್ದೂ, ಬ್ರಹ್ಮ ವರ್ಚಸ್ಸುಳ್ಳದ್ದೂ ಆಗಲೀ" ಎಂಬ ತಾತ್ಪರ್ಯವನ್ನುಳ್ಳ

ಯಜ್ಞೋಪವೀತಂ ಪರಮಂ ಪವಿತ್ರಂ
ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ ।
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ
ಯಜ್ಞೋಪವೀತಂ ಬಲಮಸ್ತು ತೇಜಃ ॥

ಎಂಬ ಮಂತ್ರವನ್ನು ಹೇಳುತ್ತ ಎರಡೂ ಕೈಗಳಲ್ಲಿ ಹಿಡಿದುಕೊಂಡಿರುವ ಯಜ್ಞೋಪವೀತದ ನಡುವೆ ಬಲತೋಳು ಹಾಗೂ ತಲೆಯನ್ನು ಸೇರಿಸಿ, ಎಡ ಹೆಗಲ ಮೇಲೆ ಎಳೆಗಳು ಬರುವಂತೆ ಧರಿಸುವುದು.

ಬ್ರಹ್ಮಚಾರಿಗಳು ಒಂದು, ಗೃಹಸ್ಥಾಶ್ರಮಿಗಳು ಎರಡು ಜನಿವಾರ ಗಳನ್ನು ಧರಿಸುವುದು ರೂಢಿ.

ಗೃಹಸ್ಥಾಶ್ರಮಿಗಳು "ಗೃಹಸ್ಥಾಶ್ರಮ ಯೋಗ್ಯತಾ ಸಿದ್ಧ್ಯರ್ಥಂ ದ್ವಿತೀಯ ಯಜ್ಞೋಪವೀತ ಧಾರಣ ಮಹಂಕರಿಷ್ಯೇ" ಎಂದು ಸಂಕಲ್ಪಮಾಡಿ ಕೊಂಡು ಈ ಮೊದಲು ತಿಳಿಸಿರುವ ಯಜ್ಞೋಪವೀತಧಾರಣ ಮಂತ್ರವನ್ನು ಹೇಳಿಕೊಂಡು ಎರಡನೇ ಜನಿವಾರವನ್ನು ಧರಿಸುವುದು. ಅನಂತರ ಆಚಮನ.

ಯಜ್ಞೋಪವೀತದ ವಿಸರ್ಜನ ಕ್ರಮ

ಉಪವೀತಂ ಭಿನ್ನತಂತುಂ ಜೀರ್ಣಂ ಕಶ್ಮಲದೂಷಿತಂ ।
ವಿಸೃಜಾಮಿ ಪರಬ್ರಹ್ಮವರ್ಚೋ ದೀರ್ಘಾಯುರಸ್ತುಮೇ ॥

ಎಂಬ ಮಂತ್ರವನ್ನು ಹೇಳಿಕೊಂಡು ಹಳೆಯದಾದ ಜನಿವಾರವನ್ನು ತಲೆಯ ಮೂಲಕವಾಗಿಯಾಗಲೀ ಸೊಂಟ-ಪಾದಗಳ ಮೂಲಕವಾಗಿಯಾಗಲೀ ಹೆಗಲಿನಿಂದ ಹೊರತೆಗೆದು ಜಲಾಶಯದಲ್ಲಿ ಹಾಕುವುದು. ಅನಂತರ ಆಚಮನ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಾಹ್ಮಣರಿಗೆ ಎಚ್ಚರಿಕೆ !

ಸಂಧ್ಯೋಪಾಸನೆಯು ಅತಿ ಮುಖ್ಯ ಭಾಗವು ಗಾಯತ್ರೀ ಜಪ. ನಮಗೆ ಗಾಯತ್ರಿಗಿಂತ ಶ್ರೇಷ್ಠ ಮಂತ್ರ ಬೇರೆ ಇಲ್ಲ. ಅದು ವೇದದ ಮಾತೆ; ಜಗನ್ಮಾತೆ; ಬ್ರಹ್ಮ ಮೊದಲಾದ ದೇವರುಗಳಿಂದಲೂ ಸಂಧ್ಯಾಕಾಲದಲ್ಲಿ ಜಪಿಸಲ್ಪಡುವ ಮಹಾ ಮಂತ್ರ. ನಮಗೀಗ ಅದರ ಜಪಕ್ಕೆ ಅಧಿಕಾರ ಸಿಕ್ಕಿದ್ದು ಹಲವು ಜನ್ಮಗಳ ಸಾಧನಾ ಫಲವಾಗಿ. ಇಂಥ ಮಹತ್ತುಳ್ಳ ಯೋಗ್ಯತೆಯಿರುವವರು ಲೋಕದಲ್ಲಿ ಸಾವಿರಕ್ಕೊಬ್ಬರು ಮಾತ್ರ! ಬ್ರಾಹ್ಮಣ್ಯ ಬರುವುದು ಕೇವಲ ತಂದೆ ತಾಯಿಗಳಿಂದಲ್ಲ. ಸಕಾಲದಲ್ಲಿ ಶಾಸ್ತ್ರೋಕ್ತವಾಗಿ ಮಾಡಿದ ಉಪನಯನದಲ್ಲಿ ಗಾಯಿತ್ರೀದೇವಿಯಿಂದಲೇ ನಮಗೆ ನಿಜವಾದ ಬ್ರಾಹ್ಮಣ್ಯ ಬರುತ್ತದೆ.

"ಜಪ ಮಾಡುವವನನ್ನು ನಾನು ಕಾಪಾಡುತ್ತೇನೆ" ಎಂದು ಗಾಯತ್ರೀ ದೇವಿಯ ಅಭಯವಾಕ್ಯವಿದೆ. ಶ್ರದ್ಧೆಯಿಂದ ಜಪ ಮಾಡಿದವನಿಗೆ ಅವಳು ಬುದ್ಧಿಶಕ್ತಿ, ಆರೋಗ್ಯ, ಆಯುಷ್ಯ. ಧೈರ್ಯ, ಮನಸಿನ ತುಷ್ಟಿ, ಕುಟುಂಬ ಸುಖ, ತುಂಬಾ ಧಾರ್ಮಿಕ ಶಕ್ತಿ, ಮುಂದೆ ಅತ್ಯುತ್ತಮ ಜನ್ಮ ಕೊಡುತ್ತಾಳೆ. ತೀರಾ ಚಿಕ್ಕದಾದ ನಮ್ಮ ಬ್ರಾಹ್ಮಣ ಸಮಾಜವು ಹಲವು ಸಾವಿರ ವರ್ಷಕಾಲ ಈ ದೇಶದ ಧಾರ್ಮಿಕ ಸಂಸ್ಕೃತಿಯ ಮೇಲೆ ಅಪಾರ ವರ್ಚಸ್ಸನ್ನು ಬೀರಿದುದು ಅವಳ ಬೆಂಬಲದಿಂದಾಗಿ. ಇದನ್ನು ನೆನಪಿಗೆ ತಂದುಕೊಂಡು ಬ್ರಾಹ್ಮಣರು ಈಗಲೂ ತಮ್ಮ ಜೀವನದಸಮಸ್ಯೆ ಬಗೆಹರಿಸಲು ಅಲ್ಪರಿಗೆ ಶರಣುಹೋಗುವ ಬಗ್ಗೆ, ಅಧಾರ್ಮಿಕ ಜೀವನ ಕ್ರಮಗಳನ್ನನುಸರಿಸುವ ಬಗ್ಗೆ, ಆ ಸರ್ವಶಕ್ತಳ ಸಹಾಯ ಪಡೆಯುವುದೇ ಅತ್ಯುತ್ತಮ ದಾರಿ.

ಬ್ರಾಹ್ಮಣರಿಗೆ ಗಾಯತ್ರಿಯಂಥ ಶ್ರೇಷ್ಠ ಮಂತ್ರವು ಅನಾಯಾಸವಾಗಿ ಲಭಿಸಲಿಕ್ಕೂ, ಗಾಯತ್ರೀದೇವಿಯು ಅವರಿಗೆ ಬ್ರಾಹ್ಮಣ್ಯ ಕೊಟ್ಟು ವಿಶೇಷ ವಾತ್ಸಲ್ಯ ತೋರಿಸಲಿಕ್ಕೂ, ಕಾರಣವನ್ನು ಪ್ರತಿ ಬ್ರಾಹ್ಮಣನೂ ಅಗತ್ಯವಾಗಿ ತಿಳಿದಿರಬೇಕು. ನಮ್ಮ ಶಾಸ್ತ್ರದ ಹೇಳಿಕೆಯಂತೆ ಧರ್ಮದ ಪ್ರಚಾರ ಬ್ರಾಹ್ಮಣರಿಂದ ನಡೆಯಬೇಕಾದುದು. ಯುದ್ಧಕ್ಕೆ ಉತ್ತಮ ಯೋಧರನ್ನು ಪ್ರೋತ್ಸಾಹಿಸಿ ಸೈನ್ಯಕ್ಕೆ ಸೇರಿಸಿಕೊಂಡಂತೆ, ಧೀಶಕ್ತಿ ಪ್ರೇರಿಸುವ ಗಾಯತ್ರಿಯು ನಮಗೆ ಬ್ರಾಹ್ಮಣ್ಯ ಕೊಟ್ಟು ತನ್ನ ಧರ್ಮಪ್ರಚಾರದ ಪಡೆಗೆ ಸೇರಿಸಿಕೊಂಡಿದ್ದಾಳೆ. ತುಂಬಾ ಜಪ ಮಾಡಿ ಧಾರ್ಮಿಕ ಶಕ್ತಿ ಬೆಳೆಸಿಕೊಂಡು ಧಾರಾಳವಾಗಿ ಧರ್ಮ ಪ್ರಚಾರ ಮಾಡಿ, ಉತ್ತಮ ಧಾರ್ಮಿಕ ಜೀವನ ನಡೆಸಿ ತಮ್ಮ ಮೇಲ್ಪಂಕ್ತಿ

Sri Vidyabharathi Book Centre Sringeri

CC-O. In Public Domain. Digitized by eGangotri

ಯಿಂದ ಇತರರನ್ನು ಆ ತರದ ಜೀವನಕ್ಕೆ ಪ್ರೇರಿಸಲಿ, ತನ್ಮೂಲಕ ಧರ್ಮ ಬಾಳಲಿ, ಎಂಬುದು ಅವಳ ಉದ್ದೇಶ ಹೊರತು ಜಪ ಮಾಡಿದವರ ಪೀಳಿಗೆ ಯಲ್ಲಿ ಹುಟ್ಟಿ ರಕ್ತಾನುಗತವಾಗಿ ಬಂದ ಹೆಚ್ಚಿನ ಬುದ್ಧಿಶಕ್ತಿಯ ಸಹಾಯದಿಂದ ಪ್ರಸಿದ್ಧ ವಕೀಲನಾಗಿಯೋ, ಹೋಟೆಲು ಮಾಲಿಕನಾಗಿಯೋ, ವ್ಯಾಪಾರಿ ಯಾಗಿಯೋ, ಐ. ಎ. ಎಸ್. ಪಾಸಾಗಿಯೋ, ಕಾದಂಬರಿ ಬರೆದೋ ವಿಪರೀತ ಹಣ ಸಂಪಾದಿಸಿ, ಜಪ ಬಿಟ್ಟು ಸ್ವಾರ್ಥಜೀವಿಯಾಗಿ ಬಾಳಲಿ ಎಂಬುದು ಅವಳ ಉದ್ದೇಶವಲ್ಲ. ಗಾಯತ್ರಿಯ ಕೃಪೆಯಿಂದ ಹೀಗೆ ಬ್ರಾಹ್ಮಣ್ಯ ಪಡೆದವನು ಜಪ ಬಿಟ್ಟರೆ ಅವನ ಬ್ರಾಹ್ಮಣ್ಯ ನಾಶವಾಗಿ ಶೂದ್ರನಾಗುತ್ತಾನೆ; ನಂತರ ನರಕಯಾತನೆ ಹೊಂದುತ್ತಾನೆ ; ಆಮೇಲೆ ನಾಯಿಯ ಜನ್ಮ ಪಡೆಯುತ್ತಾನೆ ; ಎನ್ನುತ್ತದೆ ಶಾಸ್ತ್ರ.

ಇದು ಪ್ರತಿ ಬ್ರಾಹ್ಮಣನೂ ತುಂಬಾ ಯೋಚಿಸಬೇಕಾದ ವಿಚಾರ. ಜಪ ಬಿಟ್ಟು ಶೂದ್ರತ್ವ ಪಡೆದವನು ನಡೆಸುವ ಮಗನ ಉಪನಯನ, ಮಗಳ ಮದುವೆ, ಪಿತೃಗಳ ಪ್ರೇತತ್ವ ತಪ್ಪಿಸಲಿಕ್ಕಿರುವ ಅಂತಿಮ ಕ್ರಿಯೆ ಶ್ರಾದ್ಧ, ಮುಂತಾದ ವೈದಿಕ ಕರ್ಮಗಳು ಅವನ ಶೂದ್ರತ್ವದಿಂದಾಗಿ ಫಲ ಕೊಡಲಾರವು ಎಂದು ಶಾಸ್ತ್ರ ಹೇಳುತ್ತದೆ. ಎಂದರೆ ಅವನು ಕೆಟ್ಟು ತನ್ನ ಬ್ರಾಹ್ಮಣ್ಯ ನಂಬಿ ಬಂದ ಹೆಂಡತಿಯ, ತನ್ನನ್ನು ಕಷ್ಟಪಟ್ಟು ಬೆಳೆಸಿದ ಪಿತೃಗಳ, ತನ್ನ ಪ್ರೀತಿಯ ಮಕ್ಕಳ ಧರ್ಮವನ್ನೂ ಕೆಡಿಸುತ್ತಾನೆ. ಇತರ ರೀತಿಗಳಲ್ಲಿ ಅವರೆಲ್ಲರ ಆರೈಕೆಗೆ ತುಂಬಾ ಶ್ರಮಿಸುವ ಅವನು ದಿನಕ್ಕೆರಡು ಬಾರಿ ಕೇವಲ ೧೦ ನಿಮಿಷ ಜಪ ಮಾಡದೆ, ಅವರ ಅವನತಿ ಉಂಟು ಮಾಡುವುದು ಎಂಥ ಮೂರ್ಖತನ! ಸಮಯ ಸಾಲದೆ? ನಮಗೆ ದಿನದ ಎಚ್ಚರ ಕಾಲದ ಖರ್ಚಿಗೆ ೧,೦೦೦ ನಿಮಿಷ ಇಲ್ಲವೇ? ಅವನು ಅಷ್ಟೊಂದು ಮಟ್ಟಿಗೆ ತನ್ನ ಮರ್ಕಟ ಮನಸ್ಸಿನ ಗುಲಾಮನಾಗಬೇಕೆ? ಅಂಥವನಿಗೆ ಮಕ್ಕಳನ್ನು ತಿದ್ದುವ ಅರ್ಹತೆ ಸಾಕೇ?

ಪಾಪ ಮಾಡಿದವನಿಗೆ ನಾಯಿ, ಹಂದಿ ಮುಂತಾದ ಜನ್ಮ ಬರುತ್ತದೆ ಎಂದು ವೇದವೇ ಹೇಳುತ್ತದೆ. ಈ ಕಾಲದಲ್ಲಿ ಪತ್ರಿಕೆಗಳಲ್ಲಿ ಕೆಲವು ವೇಳೆ ಬಂದ ಪುನರ್ಜನ್ಮದ ಕತೆಗಳಲ್ಲಿ ಮನುಷ್ಯನು ಪ್ರಾಣಿಜನ್ಮಪಡೆದ ಕತೆಗಳೂ ಇವೆ. ಜನರಿಗೀಗ ಧರ್ಮದ ಧಿಕ್ಕಾರ ಸುಲಭ ತೋರುತ್ತದೆ. ಆದರೆ ಸತ್ತ ಮೇಲೆ ಸರ್ವಸಮರ್ಥ ವಿಶ್ವಧರ್ಮದ ಕೈಯಿಂದ ಅವರು ಬಿಡುಗಡೆಹೊಂದುವುದೆಂಬುದುಂಟೆ? ಅಪರಿಮಿತ ಸೂರ್ಯಮಂಡಲಗಳುಳ್ಳ ವಿಶ್ವವನ್ನು ಕೋಟ್ಯಾನುಕೋಟಿ ವರ್ಷಕಾಲ ಪಾಲಿಸುತ್ತ ಬಂದ ಅನಂತ ಶಕ್ತಿಯುಳ್ಳ ಧರ್ಮದ ಧಿಕ್ಕಾರ ಕೇವಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂರ್ಖತನ. "ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ"; ಎಂದರೆ ತನ್ನ ಧರ್ಮವನ್ನು ನಾಶಮಾಡಿಕೊಂಡವನನ್ನು ಅದು ನಾಶಮಾಡುತ್ತದೆ; ಅದನ್ನು ರಕ್ಷಿಸಿದವನನ್ನು ಅದು ರಕ್ಷಿಸುತ್ತದೆ. ಜೈಲು ಶಿಕ್ಷೆ ಎಂದರೆ ಎಷ್ಟಕ್ಕೂ ಬೆದರುವ ನಾವು ಮುಂದೆ ಕಾದಿರುವ ಭಯಂಕರ ತರದ್ದಾದ ಮೂಕ ನಾಯಿಯ ಜನ್ಮಕ್ಕೆ ಎಷ್ಟೋ ಹೆಚ್ಚು ಹೆದರಬೇಡವೆ ?

ನೆಹರೂ ಕಾಲದಿಂದ ನಮ್ಮ ರಾಜಕೀಯ ಪ್ರತಿನಿಧಿಗಳು ಜಾತಿ ನಾಶವಾಗಬೇಕು ಎಂದರೆ ಬ್ರಾಹ್ಮಣ್ಯ ನಾಶವಾಗಬೇಕು ಎಂದು ಸಾರುತ್ತಲೇ ಇದ್ದಾರೆ; ತನ್ಮೂಲಕ ಅಪಾರ ಸಂಖ್ಯೆಯ ಬ್ರಾಹ್ಮಣ ಯುವಕರನ್ನು ಈಗಾಗಲೇ ಧರ್ಮಭ್ರಷ್ಟರನ್ನಾಗಿ ಮಾಡಿದ್ದಾರೆ. ಆದರೆ ಈ ಪ್ರತಿನಿಧಿಗಳನ್ನು ಜನರು ಆರಿಸಿದ್ದು ಕೇವಲ ರಾಜಕೀಯ ಕ್ಷೇತ್ರಕ್ಕೆ; ಧಾರ್ಮಿಕ ಕ್ಷೇತ್ರಕ್ಕಲ್ಲ ಅವರು ನಮ್ಮ ಧರ್ಮಬೇಡವಾದವರು; ಅದನ್ನು ಸರಿಯಾಗಿ ಅಭ್ಯಾಸಿಸದವರು; ಅದರ ಮಹತ್ವ ತಿಳಿಯದವರು. ಅವರು ನಮ್ಮ ಧಾರ್ಮಿಕ ಪ್ರತಿನಿಧಿಗಳಲ್ಲ. ಅದಕ್ಕೆ ಅವರಲ್ಲಿ ಎಷ್ಟಕ್ಕೂ ಯೋಗ್ಯತೆಯಿಲ್ಲ. ಪ್ರಜಾಪ್ರಭುತ್ವವಿರುವ ಇತರ ಎಲ್ಲೆಲ್ಲೂ ಕೇವಲ ರಾಜಕೀಯ ರಂಗಕ್ಕೆ ಆರಿಸಲ್ಪಟ್ಟವರು ಧಾರ್ಮಿಕಕ್ಷೇತ್ರಕ್ಕೆ ಕೈಹಾಕುವುದೆಂಬುದಿಲ್ಲ. ಹಾಗೆ ಮಾಡುವುದು ತೀರಾ ಅನ್ಯಾಯ; ಅನರ್ಥಕ್ಕೆ ಕಾರಣ. ಜಡ್ಜನು ಎಷ್ಟೇ ಬುದ್ಧಿವಂತನಿದ್ದರೂ ಶಸ್ತ್ರಚಿಕಿತ್ಸೆ ನಡೆಸಲು ಹೋಗುತ್ತಾನೆಯೇ ! ಅದಕ್ಕೆ ಸರ್ಜನನೇ ಬೇಕಲ್ಲವೇ ? ಹಿಂದುಗಳಲ್ಲಿ ಒಗ್ಗಟ್ಟಿಲ್ಲವೆಂಬುದರಿಂದ ಮಾತ್ರ ಇವರ ಈ ಅನಾಚಾರ ನಡೆಯುತ್ತದೆ. ಇದರ ಪರಿಣಾಮವಾಗಿ ಭೂಲೋಕದ ಅತ್ಯಂತ ಧಾರ್ಮಿಕ ದೇಶದಲ್ಲಿ ಕೇವಲ ೪೫ ವರ್ಷಗಳಲ್ಲಿ ನಮ್ಮ ಧರ್ಮಬೇಡವಾದ ಸರಕಾರದಿಂದಾಗಿ, ಎಷ್ಟೆಲ್ಲ ಶೀಲದ ನಾಶ ನಡೆದಿದೆ! ಸ್ವಾರ್ಥಪರತೆ ಬೆಳೆದಿದೆ ! ಪಾಪದಭೀತಿ ಇಲ್ಲದಾಗಿದೆ ! ಸಹನೆ ಉದಾರತೆ ಗುರುಭಕ್ತಿ ಮಾಯವಾಗಿವೆ !

ತಮ್ಮ ಅಲ್ಪ ಸ್ವಲ್ಪ ಧರ್ಮಾಚರಣೆಗಳನ್ನು ರಕ್ಷಿಸುವ ಪ್ರತಿ ಕ್ರಿಶ್ಚನನಿಗೆ ನಮ್ಮ ದೇಶವೆಲ್ಲ ಕ್ರಿಶ್ಚನ್ ಆಗಬೇಕೆಂಬ ಉತ್ಸಾಹವಿದೆ. ಪ್ರತಿ ಮುಸಲ್ಮಾನನಿಗೆ ನಮ್ಮ ಇಡೀ ದೇಶವೆಲ್ಲ ಇಸ್ಲಾಮ್ ಆಗಬೇಕೆಂಬ ಬಯಕೆ ಇದೆ. ಆದರೆ ನಮ್ಮ ರಾಜಕೀಯ ಮುಖಂಡರ ಹಾಳು ಬೋಧನೆಯಿಂದಾಗಿ ಹಿಂದೂ ಯುವಕರಿಗೆ ಮಾತ್ರ ತಮ್ಮ ಪವಿತ್ರ ಧರ್ಮದ ಬಗ್ಗೆ ಸಂಪೂರ್ಣ ತಾತ್ಸಾರ! ಜಾತಿಯ ಆಚಾರಗಳು ಬೇಡ, ಕಾರ್ಖಾನೆಗಳೇ ನಮ್ಮ ದೇವರು, ಎಂಬ ಮುಂತಾದ ಇವರ ಹಾಳು ಪ್ರಚಾರದ ಪರಿಣಾಮ ನಮ್ಮ ಧರ್ಮವನ್ನು ಎಂಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಯಂಕರ ಪರಿಸ್ಥಿತಿಗೆ ತಂದಿದೆ! ಮಕ್ಕಳ ಮಟ್ಟದಲ್ಲಿ ಜಾತೀಯ ಆಚಾರಗಳ ಅಭ್ಯಾಸವೇ ಧರ್ಮದ ಅಭ್ಯಾಸ. ಆದ್ದರಿಂದಲೇ ಆಚಾರ ಬಿಟ್ಟ ಮಕ್ಕಳಿಗೆ ಹಿಂದೂ ಧರ್ಮವೇ ಬೇಡವಾಗುತ್ತಿದೆ!

ಆದ್ದರಿಂದ ಜಾತಿ ಬೇಡ ಎನ್ನುವ ಬೋಧನೆಗೆ ಎಷ್ಟಕ್ಕೂ ಲಕ್ಷ್ಯಕೊಡ ಬೇಡಿರಿ. ನಮಗೆ ಹಿಂದೂಧರ್ಮ ಪ್ರಿಯವಾಗಲಿ. ಅದರ ಉದ್ಧಾರಕ್ಕೆ ಸಹಾಯ ಮಾಡುವವರಿಗೆ ಮಾತ್ರ ನಮ್ಮ ಓಟು, ಬೆಂಬಲ, ವಿಶ್ವಾಸವಾಗಲಿ. ಹಿಂದೂ ಧರ್ಮ ಇಹಕ್ಕೂ ಪರಕ್ಕೂ ನಮ್ಮ ಮಾತೆ. ಅದಕ್ಕೆ ಈಗ ಅಪಾರ ಹಾನಿಯಾಗುತ್ತಿರುವುದು ನಿಮಗೆ ಕಾಣುವುದಿಲ್ಲವೇ? ನಾವಾಯಿತು, ನಮ್ಮ ಪಾಡಾಯಿತು, ಎಂಬ ಪ್ರತಿ ಹಿಂದೂವಿನ ಅತ್ಯಂತ ಸಂಕೋಚ ಭಾವನೆ ಇನ್ನಾದರೂ ತ್ಯಜಿಸಿರಿ.

ಮಕ್ಕಳಿಗಾಗಿ ಜೀವ ಸವೆಯುವ ತಂದೆ ಸ್ವಲ್ಪ ಯೋಚಿಸಬೇಕು. ಪಾಶ್ಚಾತ್ಯರಲ್ಲಿ ಮುದಿ ತಂದೆ ತಾಯಿಗಳು ಯಾರಿಗೂ ಬೇಡವಾಗಿದ್ದಾರೆ. ಅವರು ಮಾನವ ಪ್ರೀತಿಯ ತುಣಕನ್ನೂ ಕಾಣದ ಸರಕಾರೀ ದೊಡ್ಡಿಗಳಲ್ಲಿ ಅಥವಾ ವ್ಯಾಪಾರೀ ಹೋಟೆಲುಗಳಲ್ಲಿ ಭಯಂಕರ ಮಟ್ಟದ ಒಕ್ಕಂಟೀ ಜೀವನವನ್ನು ನಿರ್ಗತಿಕ ನಾಯಿಗಳಂತೆ ಕಳೆಯುತ್ತಾರೆ. ದೇವರು ಇಲ್ಲದ ವಿದ್ಯೆ, ಆಚಾರಹೀನ ಮಿಶ್ರ ಹಾಸ್ಟೆಲ್ ಜೀವನ, ಎಲ್ಲಿ ಕಂಡರೂ ಸರಕಾರವು ಬೆಳೆಸಿರುವ ಸ್ವಾರ್ಥಪರತೆಯ ದೃಷ್ಟಾಂತ ಇವುಗಳಿಂದಾಗಿ ಮಕ್ಕಳು, ಹದ್ದುಗಳಂತೆ ರೆಕ್ಕೆ ಬಲವಾಗುವವರೆಗೆ ಮಾತ್ರ ತಂದೆತಾಯಿಗಳಲ್ಲಿ ಪ್ರೀತಿತೋರಿಸಿ, ಅನಂತರ ಅವರಿಂದ ದೂರವಾಗುವ ಅಸಹ್ಯವರ್ತನೆ ನಮ್ಮಲ್ಲೂ ಆರಂಭಿಸಿದೆ. ಮಕ್ಕಳು ಯಾರ್ಯಾರನ್ನೋ ಮದುವೆಯಾಗಿ ತಂದೆತಾಯಿಗಳ ಸೇವೆಯ ಜವಾಬ್ದಾರಿಕೆ ಧಿಕ್ಕರಿಸಿ, ಭಯಂಕರ ಕೃತಘ್ನತಾ ಪಾಪಕಟ್ಟಿಕೊಳ್ಳುವುದೂ ಉಂಟು. ನಮ್ಮ ಸರಕಾರಕ್ಕೂ ಇದೇ ಬೇಕಾಗಿದೆ! ನಮ್ಮ ಧರ್ಮ ಬೋಧಿಸುವ "ಮಾತೃ ದೇವೋ ಭವ" ಅಲ್ಲ; ಶ್ರೀರಾಮನ ಪಿತೃಭಕ್ತಿಯ ಆದರ್ಶವಲ್ಲ. ಇದು ಬೆಳೆದಂತೆ ನಮ್ಮ ಮುದುಕರ ಅವಸ್ಥೆ ಭಯಂಕರವಾಗದಿರದು. ನಿಮ್ಮ ಮಗನನ್ನು ನಿಮ್ಮವನನ್ನಾಗಿ ಉಳಿಸಿಕೊಳ್ಳಬೇಕಾದರೆ ತಪ್ಪದೆ ಜಪಮಾಡಿರಿ; ಮನೆಯಲ್ಲಿ ದೇವರಿಗೆ ಸ್ಥಾನಕೊಟ್ಟು ಮಕ್ಕಳಲ್ಲಿ ಧರ್ಮದ ಭಾವನೆ ಬೆಳೆಸಿರಿ; ಮಕ್ಕಳಿಂದ ಜಪ ಮಾಡಿಸಿರಿ. ಆಚಾರಹೀನ ಮಿಶ್ರ ಹಾಸ್ಟೆಲಿಂದ ದೂರ ಇಡಿರಿ. ಆಹಾರದ ಪರಿಶುದ್ಧತೆ ಕಾಪಾಡಿರಿ. ಮೂಲ ಬಂಡವಾಳವೇ ನಾಶವಾಗುವ ವ್ಯಾಪಾರದಂಥ ಧರ್ಮಹೀನ ಮಾನವ ಕಾರುಬಾರಿಕೆ ನಡೆಸುತ್ತಿದ್ದರೇನು? ಮಗನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಆರ್ಥಿಕ ಪಿತ್ರಾರ್ಜಿತವಲ್ಲ ; ದೇವರಲ್ಲಿ ಶ್ರದ್ಧೆ ಬರುವಂತೆ ಮಾಡುವುದೇ ಅತ್ಯಂತ ದೊಡ್ಡ ಪಿತ್ರಾರ್ಜಿತ.

ಬ್ರಾಹ್ಮಣರಿಗೆ ಧರ್ಮದ ರಕ್ಷಣೆಯ ಹೊಣೆ ಬಹಳ ಹೆಚ್ಚು. ನಮ್ಮ ಕಾಲದಲ್ಲಿ ಧರ್ಮ ಇಷ್ಟೆಲ್ಲ ಹಾಳುಮಾಡಲು ಬಿಟ್ಟುದರ ಪಾಪ ನಮ್ಮ ತಲೆಯ ಮೇಲೆಬಾರದೆ ? ಇನ್ನಾದರೂ ಧರ್ಮದ ಉತ್ತಮ ಅಭ್ಯಾಸಕ್ಕೆ, ಅದರ ಧಾರಾಳ ಸೇವೆಗೆ, ಸೊಂಟ ಕಟ್ಟುವ. ನಮ್ಮ ಅಪಾರ ಉದಾಸೀನತೆ, ಆಲಸ್ಯ, ತೀರಾ ಪಾಪಕರ ಎಂದು ಶಾಸ್ತ್ರ ಹೇಳುತ್ತದೆ. ಕೆಲವರು, ಬ್ರಾಹ್ಮಣ ಜನ್ಮ ವೆಂಬುದು ಕೇವಲ ಅಕಸ್ಮಾತ್ತು, ಅದಕ್ಕೆ ಅರ್ಥವಿಲ್ಲ, ಎಂದು ಬೋಧಿಸುವು ದುಂಟು. ಎಂದರೆ ದೇವರ ಸರಕಾರದಲ್ಲೂ ಅವ್ಯವಸ್ಥೆಯೇ ? ನಮಗೆ ಉತ್ತಮ ಬ್ರಾಹ್ಮಣನ ಮನೆಯಲ್ಲಿ ಜನ್ಮವನ್ನು ದೇವರು ಬೇಕೆಂದೇ ಕೊಟ್ಟಿರು ವನು ಎಂಬ ಶ್ರದ್ಧೆಯಿದ್ದರೆ ಮೇಲಕ್ಕೇರಲು ಬೇಕಾದ ಉತ್ತಮ ಧಾರ್ಮಿಕ ಆಚರಣೆಗಳ ಅಭ್ಯಾಸ ಸುಲಭವಾಗುತ್ತದೆ. ಜೀವನದ ಸಫಲತೆಗೆ ಉತ್ತಮ ಧ್ಯೇಯಬೇಕು. ನಮಗೆ ಬ್ರಾಹ್ಮಣ್ಯದಲ್ಲಿ ನಂಬಿಕೆಯು ಅಂಥ ಧ್ಯೇಯ ಕೊಡು ತ್ತದೆ. ಅದಕ್ಕೆ ಬೆಲೆ ಕಟ್ಟದಿರುವುದು ಮೂರ್ಖತನ.

ಜಪ ಚೆನ್ನಾಗಿ ನಡೆಸಲು ಉತ್ಸಾಹ ತಂದುಕೊಳ್ಳಿರಿ. ಬ್ರಾಹ್ಮಣನಿಗೆ ಐಶ್ವರ್ಯ ಮುಖ್ಯವಲ್ಲ. ಜಪಕ್ಕೆ ತೊಡಕಂತಿರುವ ಅಶುದ್ಧ ಆಹಾರ, ಹಾಳು ಓದು, ಸದಾಚಾರಕ್ಕೆ ಅನುಕೂಲವಲ್ಲದ ವೃತ್ತಿಗಳು, ಭ್ರಷ್ಟ ಸಂಗಾತಿಗಳಿರುವ ವಾತಾವರಣ, ಮುಂತಾದುವನ್ನು ಖಂಡಿತ ತ್ಯಜಿಸಿರಿ. ಬೇಗ ಬೆಳಗ್ಗೆ ಎದ್ದೊಡನೆ ಮಿಂದು ಜಪಮಾಡುವುದು ಚೆನ್ನಾಗಿ ಜಪ ನಡೆಸಲು ತುಂಬಾ ಸಹಾಯ. ಬ್ರಾಹ್ಮಣ ಗುಣಗಳಾದ ಸತ್ಯಪರತೆ, ಮನಃಪೂರ್ವಕತೆ, ಸುಲಭ ಜೀವನ, ಪಾಪದ ಭೀತಿ, ದಯೆ ಮುಂತಾದುವನ್ನು ಬೆಳೆಸಿರಿ. ನಿಮ್ಮ ಉದ್ಯೋಗದಲ್ಲಿ, ನಿಮ್ಮ ವರ್ತನೆಯಲ್ಲಿ, ನಿಮ್ಮ ನಡತೆಯಲ್ಲಿ ಇತರರಿಗೆ ಆದರ್ಶವಾಗಿ ಬಾಳಿರಿ, ಲಂಚ, ಮೋಸ, ಅಲ್ಪತೆ, ಕೃತಘ್ನತೆ, ದಕ್ಷತೆಯಿರದ ಕೆಲಸ, ಬ್ರಾಹ್ಮಣರಿಗೆ ಎಷ್ಟಕ್ಕೂ ಬೇಡವಾಗಲಿ. ಬ್ರಾಹ್ಮಣ್ಯದ ಉದ್ಧಾರಕ್ಕೆ ಸಹಾಯ, ಅದರ ಬೆಂಬಲಕ್ಕೆ ತ್ಯಾಗ, ಮಾಡಲು ಕಲಿಯಿರಿ. ನಮ್ಮ ಧರ್ಮ ಬೇಡವಾದವರೂ ಅಪಾರವುಟ್ಟದಲ್ಲಿ ಸ್ವಾರ್ಥಿಗಳೂ ಆದವರ ಹಿಂಸೆಯಿಂದ ಸನಾತನ ಧರ್ಮ ವನ್ನು, ಹಿಂದೂ ಸಂಸ್ಕೃತಿಯನ್ನು, ರಕ್ಷಿಸಲು ಪ್ರತಿದಿನ ದೇವರನ್ನು ಪ್ರಾರ್ಥಿಸು ವುದೂ ನಮ್ಮ ಕರ್ತವ್ಯವಾಗಲಿ. ಗಾಯತ್ರೀದೇವಿಯು ಬ್ರಾಹ್ಮಣಪ್ರಿಯಳು. ಅವಳು ಮೆಚ್ಚುವಂತೆ ಬಾಳಿರಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಎರಡು ಮಾತು

ಜೀವನ ಸುಗಮಮಾಡುವ ವಿದ್ಯೆ ಕಲಿಯಲಿಕ್ಕೆ ಅತ್ಯುಪಯುಕ್ತ ಸಾಧನ ಬುದ್ಧಿಶಕ್ತಿ. ಅದನ್ನು ಗಾಯತ್ರೀದೇವಿಯು ತನ್ನ ಉಪಾಸಕರಿಗೆ ಕೊಡ ಬಲ್ಲಳು. ಆದ್ದರಿಂದ ಗಾಯತ್ರೀ ಜಪವನ್ನು ತಪ್ಪದೆ ಮಾಡಿರಿ. ಮಂತ್ರದ ಪ್ರತಿ ಶಬ್ದ ಅರ್ಥಕಲಿತು, ಜಪಮಾಡುವಾಗ ಮನಸ್ಸಿಗೆ ತಂದುಕೊಳ್ಳಿರಿ. ಏಕಾಗ್ರತೆಗೆ ಬೇಕಾದರೆ ದೇವಿಯ ಚಿತ್ರ ಎದುರಿಗೆ ಇಟ್ಟುಕೊಳ್ಳಿರಿ. ತಾಯಿ ಯೊಡನೆ ಬೇಡಿದಂತೆ ಅವಳೊಡನೆ ಸಮರ್ಥನೆ, ಹಿರಿಮೆಕೊಡಲು ಪ್ರಾರ್ಥಿಸು ತ್ತಿರಿ. ಹೆಚ್ಚಿನ ಹಿಂದೂ ಯುವಕರು ಈ ಕಾಲದಲ್ಲಿ ಹಿಂದೂಧರ್ಮದ ಅಪಾರ ಹಿರಿಮೆಯ ವಿಚಾರ ಏನೂ ತಿಳಕೊಳ್ಳದೆ ಅದರ ಬಗ್ಗೆ ತಾತ್ಸಾರ ತೋರಿಸುತ್ತ, ಪಾಶ್ಚಾತ್ಯರ ನಾಗರಿಕತೆಯ ಅನುಕರಣೆ ಮಾಡುತ್ತಿರುವುದು ತೀರಾ ತಪ್ಪು. ಅವರ ವೈಜ್ಞಾನಿಕ ಸಾಧನೆಗಳು ಬಹಳ ವಿಶೇಷ ತರದವು ಸರಿ, ಜೀವನಕ್ಕೆ ಹಲವು ಅನುಕೂಲತೆಗಳನ್ನು ಕೊಟ್ಟಿವೆ ಸರಿ. ಆದರೆ ನಮ್ಮ ನಿಜತ್ವವಾದ ಆತ್ಮದ ಏಳಿಗೆಗೆ ಅವು ಏನೂ ಮಾಡಲಿಲ್ಲ; ಮಾತ್ರವಲ್ಲ, ಬಹಳ ಕೆಡುಕನ್ನೇ ಉಂಟುಮಾಡಿವೆ. ಆ ನಾಗರಿಕತೆ ಯಾವ ದೇಶದಲ್ಲೂ ಜನರ ನೈತಿಕಮಟ್ಟ, ಶೀಲ, ಧಾರ್ಮಿಕ ಜೀವನ, ಸತ್ಯತೆ, ಅಹಿಂಸೆ ಏರಿಸಿದ್ದಿಲ್ಲ. ಅದರ ಬಗ್ಗೆ ಅಮೇರಿಕದ ಅಪಾರ ಕೊಲೆಪಾತಕಗಳನ್ನು, ಸ್ವೀಡನ್ನಿನ ಆತ್ಮಹತ್ಯೆಗಳನ್ನು, ಎಲ್ಲೆಲ್ಲೂ ಕುಡುಕತನವನ್ನು, ಕೇವಲ ಮಕ್ಕಳಲ್ಲಿ ಕೂಡ ವ್ಯಭಿಚಾರವನ್ನು ಮಾನಸಿಕ ರೋಗಗಳನ್ನು, ಯುದ್ಧದ ಭಯಂಕರ ಕೊಲೆಗಳನ್ನು ವಿಪರೀತ ಏರಿಸಿದ್ದೇ ಕಾಣುತ್ತೇವೆ. ಪಾಶ್ಚಾತ್ಯರ ನಿಕಟ ಅನುಕರಣೆಗೆ ನಾವೇನೂ ಹಿಂದೆ ನಾಗರಿಕತೆ ಇಲ್ಲದ ಕಾಡುಜನರಾಗಿದ್ದೆವೆ? ನಮ್ಮ ನಾಗರಿಕತೆ ೧೦,೦೦೦ ವರ್ಷ ಬಾಳಿ ಬಂದ ಅಪಾರ ಯೋಗ್ಯತೆಯದು. ಅವರದ್ದು ಕೇವಲ ೩೦೦ ವರ್ಷ ಗಳಲ್ಲೇ ವಿನಾಶದ ದಾರಿ ಹಿಡಿದದ್ದೆಂದು ಬಲ್ಲವರು ಹೇಳುವಂತಾದದ್ದು. ಆದ್ದರಿಂದ ಸ್ವಲ್ಪ ವಿವೇಚನೆ ಮಾಡಿರಿ!

ಮದ್ಯಮಾಂಸ ತ್ಯಜಿಸುವ ಶಕ್ತಿ ಬ್ರಾಹ್ಮಣರಿಗೆ ಸುಲಭವಾಗಿ ಬಂದಿದೆ. ಅದರಿಂದ ಪುಣ್ಯ ಬಹಳ. ಅವಕ್ಕೆ ಎಷ್ಟಕ್ಕೂ ಬಲಿ ಬೀಳಕೂಡದು. ಬ್ರಹ್ಮ ಚರ್ಯಕ್ಕೆ ನಮ್ಮ ಧರ್ಮ ಅಪಾರ ಬೆಲೆ ಕಟ್ಟುತ್ತದೆ, ಸ್ತ್ರೀಯರ ಸಲುಗೆಯ ಸಂಪರ್ಕ, ಹೊಲಸು ಓದು ಮತ್ತು ಚಿತ್ರಗಳು, ವ್ಯಭಿಚಾರ ಎಲ್ಲ ಹೆಚ್ಚುತ್ತಿ ರುವ ಈ ಕಾಲದಲ್ಲಿ ಬ್ರಾಹ್ಮಣ ಯುವಕರು ಬಹಳ ಜಾಗ್ರತೆಯಲ್ಲಿರಬೇಕು. ಒಂದು ಹೊಲಸು ಪುಸ್ತಕ ನೂರು ಒಳ್ಳೆಯ ಪುಸ್ತಕಗಳಿಗಿಂತ ಬಲವಂತ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದುದು. ಉಡಿಗೆಯು ತೀರಾ ನಿರಾಡಂಬರ ಕ್ರಮ, ಶುದ್ಧ ಆಹಾರ, ಒಬ್ಬನೇ ಮಲಗುವುದು, ಪವಿತ್ರ ತರದ ಓದು ಮುಂತಾದ ಸಹಾಯಕಗಳನ್ನು ಅಗತ್ಯವಾಗಿ ಉಪಯೋಗಿಸಿಕೊಳ್ಳಿರಿ.

ಈ ಕಾಲದಲ್ಲಿ ಪುಸ್ತಕಗಳೂ ಜನಸಾಮಾನ್ಯರ ಓದುವ ಶೀಲವೂ ಬಹಳ ಹೆಚ್ಚುತ್ತಿವೆ. ಓದು ನಾವು ಮನಸ್ಸಿಗೆ ಕೊಡುವ ಆಹಾರ. ದೇಹಕ್ಕೆ ಕೊಡುವ ಆಹಾರವು ಶುದ್ಧವೂ ಹಿತಕರವೂ ಆಗಿರಬೇಕಾದುದು ಹೇಗೆ ಅತ್ಯಾವಶ್ಯಕವೋ ; ಅಂತೆಯೇ ಮನಸ್ಸಿಗೆ ಕೊಡುವ ಈ ಆಹಾರವೂ ಶುದ್ಧವೂ ಪೌಷ್ಟಿಕವೂ ಆಗಿರಬೇಕಲ್ಲವೇ ? ಈಗ ಕೆಟ್ಟಓದು ಬಹಳ ಹೆಚ್ಚುತ್ತಿದೆ. ಅದನ್ನು ಅಮೃತ, ಅನ್ನ, ಅಮಲು, ಅಮೇಧ್ಯ ಎಂದು ವರ್ಗೀಕರಿಸಬಹುದು. ನಮ್ಮ ಶಾಸ್ತ್ರಗ್ರಂಥಗಳು, ಸಂತರ ಚರಿತ್ರೆಗಳು, ಅವರ ಬೋಧೆ ಮುಂತಾದುವು ಪುನಃಪುನಃ ಓದಿದಷ್ಟಕ್ಕೂ ನಮ್ಮ ಜೀವನವನ್ನು ಪವಿತ್ರಗೊಳಿಸಲಾಪ ಅಮೃತ ತರದ ಓದು. ಅದನ್ನು ನಿತ್ಯವೂ ಸ್ವಲ್ಪವಾಗಿ, ರಜಾಕಾಲದಲ್ಲಿ ಧಾರಾಳವಾಗಿ, ಸೇವಿಸುವುದು ಅಗತ್ಯ. ಲೆಕ್ಕ, ಚರಿತ್ರೆ ಮುಂತಾದ ಓದು ಅನ್ನದಂತೆ ನಮ್ಮ ಜೀವನ ನಡೆಸಲಿಕ್ಕೆ ಅಗತ್ಯವಾದರೂ ಅದರಲ್ಲೇ ಮುಳುಗಿದ್ದು ಅನ್ನದ ರಾಶಿಯು ಅಡಿಬಿದ್ದು ಸಾಯುವವನಂತಾಗಕೂಡದು. ಕತೆ ಕಾದಂಬರಿಗಳಲ್ಲಿ ಬಹು ಹೆಚ್ಚಿನವು ಅಮಲು. ಮದ್ಯವು ದೇಹಕ್ಕೆ ಅಮಲು ಮಾತ್ರ ಕೊಟ್ಟು, ಪುಷ್ಟಿಕೊಡದಿರುವಂತೆ ಕಾದಂಬರಿಗಳು ನಮ್ಮ ಮನಸ್ಸಿಗೆ ಧಾರಾಳವಾಗಿ ಅಮಲನ್ನು ಕೊಡುತ್ತವೆ. ಆದರೆ ಮನಸ್ಸಿಗೆ ಬೇಕಾದ ಶಕ್ತಿಯನ್ನು ಕೊಡುವುದಿಲ್ಲ. ಅವು ತಮ್ಮ ಸೆಳೆತದಿಂದ ನಮ್ಮ ಅಮೂಲ್ಯ ಸಮಯ ಅಪಹರಿಸುತ್ತವೆ. ಸಾವಿರಾರು ಕಾದಂಬರಿಗಳನ್ನು ಓದುತ್ತಿದ್ದರೂ ಜನರು ಸತ್ಯಪ್ರಿಯತೆ, ಮಾನಸಿಕ ಧೃಢತೆ, ಶೀಲ ಮುಂತಾದವನ್ನು ಬೆಳೆಸಿದ್ದೇನೂ ಕಾಣಲಾರೆವು. ನಾಲ್ಕನೆಯದಾದ ಅಮೇಧ್ಯ ಓದು ಹೊಲಸು ಮಾತ್ರವಲ್ಲ, ವಿಷವು ಆಗಬಹುದು. ಕಾಮದ ಭಾವನೆ ತುಂಬಿಸುವ ಪುಸ್ತಕಗಳು, ಧರ್ಮವನ್ನು ನಿಂದಿಸುವ ಪುಸ್ತಕಗಳು, ಜನರಲ್ಲಿ ರೋಷ, ದ್ವೇಷ, ಅಸಮಾಧಾನ, ಕೊಲೆಪಾತಕಗಳ ಭಾವನೆ, ಬೆಳೆಸುವ ಪುಸ್ತಕಗಳು, ಅಸತ್ಯವನ್ನು ಸತ್ಯವಾಗಿ ಚಿತ್ರಿಸಿ ಜನರನ್ನು ಬೆರಗು ಮಾಡಿ ವಂಚಿಸುವ ಪ್ರಚಾರ ಪುಸ್ತಕಗಳು ಎಲ್ಲವನ್ನೂ, ಮಲವನ್ನು, ವಿಷವನ್ನು ದೂರ ಇಟ್ಟಂತೆ ಇಡಲು ಕಲಿಯಬೇಕು.

ಬ್ರಾಹ್ಮಣನಿಗೆ ಧನವು ಬಹಳ ಪ್ರಧಾನವಾಗಕೂಡದು. ಉದ್ಯೋಗಕ್ಕೆಂದು ಯತ್ನಿ[illegible] ಅದಕ್ಕಿಂತ ಹೆಚ್ಚಾಗಿ ಕ್ರಿಶ್ಚನ್ನರ, ಮುಸ

Sri Vidyabharathi Book Centre, Sringeri

CC-O. In Public Domain. Digitized by eGangotri

ಲ್ಮಾನರ ಮಿಲಿಟರಿ ಅನ್ನ, ಪುರೋಹಿತರೂ ದೇವಸ್ಥಾನಗಳು ಇಲ್ಲದಲ್ಲಿ ಹುದ್ದೆ, ಅಲ್ಪರ ನಿಕಟ ಸಂಪರ್ಕದಿಂದ ಬಾಳಬೇಕಾದ ಜೀವನ, ನಮ್ಮ ಧರ್ಮಕ್ಕೆ ಬಹಳ ಕೇಡು ತರುವ ವೈದ್ಯಕ್ರಮ, ಇವನ್ನು ತ್ಯಜಿಸಬೇಕು. ಗುರು, ತಂದೆ ತಾಯಿ ಗಳನ್ನು ಗೌರವಿಸಬೇಕು. ಇಲ್ಲವಾದರೆ ಬಹಳ ಪಾಪ ಬರುತ್ತದೆ. ಹುದ್ದೆ ಕೊಟ್ಟ ಧನಿಗೆ ಕೇಡು ಬಯಸಕೂಡದು. ಬಹಳ ಜನ್ಮಗಳ ಫಲವಾಗಿ ಬಂದ ಬ್ರಾಹ್ಮಣ್ಯ ಕಾಪಾಡಿಕೊಳ್ಳಿರಿ.

—ಕೋಟ ವಾಸುದೇವ ಕಾರಂತ

ತಿದ್ದುಪಡಿ

ಪುಟ	ಪಂಕ್ತಿ	ತಪ್ಪು	ಸರಿ
೧೧	೭	ಶ್ರೀಯುತರಿಗೂ	ಶ್ರೀಯುತರಿಗೆ
೨೦	೨೪	ತಿಳಿಯುದಿದ್ದರೆ ;	ತಿಳಿದಿದ್ದರೆ ;
೩೬	೧೪	ದಿಗ್ಬಂದನೆಯು	ದಿಗ್ಬಂದನೆಯು
೪೫	೨೩	ವಾಂವನಾಯ	ವಾಮನಾಯ
೪೬	೧೫	ಬ್ರಹ್ಯಘಾತಕಃ	ಬ್ರಹ್ಮಘಾತಕಃ
೪೭	೧೦	ಮಂನುಪತಯಶ್ಚ	ಮನ್ಯುಪತಯಶ್ಚ
೫೧	೯	ಅಪಶುನ್ಧನ್ತು	ಆಪಶುನ್ಧನ್ತು
೫೨	೧೮	ಆರಾವಾದಿತ್ಯೋ	ಆಸಾವಾದಿತ್ಯೋ
೬೪	೮	ರುಪುಷಾಯಂ	ಪುರುಷಾಯಂ
೬೭	೧೯	ಅಮೃತಪೂ ಬ್ರಹ್ಯವೂ	ಅಮೃತವೂ ಬ್ರಹ್ಮವೂ
೬೮	೧೩	೧೨೦೦	೧೨,೦೦೦
೭೦	೧೬	ಪುಂಡ್ರ	ಪುಂಡ್ರ
೭೨	೧೧	ಕ್ರೋಧಾ	ಕ್ರೋಧ

(ಇಲ್ಲಿ ಸೂಚಿಸಿರುವ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಅನಂತರ ಪುಸ್ತಕ ಓದಬೇಕಾಗಿ ವಿನಂತಿ)

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಿಮತಸ್ಥ ಸಂಧ್ಯಾವಂದನೆ

(ಋಗ್ಯಜುಸ್ಸಾಮ ವೇದದವರಿಗೆ)

ಇಂದಿನ ವಿಜ್ಞಾನಯುಗದಲ್ಲೂ ತ್ರಿಕಾಲಜ್ಞಾನಿಗಳೆಂದು ಚಿರಪರಿಚಿತರಾಗಿದ್ದ ಮಹಾತಪಸ್ವಿ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಬ್ರಾಹ್ಮಣರ ನಿತ್ಯಕರ್ಮವಾದ ಸಂಧ್ಯಾವಂದನೆಯನ್ನು ಕುರಿತು,

ವಿಪ್ರೋ ವೃಕ್ಷಃ ತಸ್ಯಮೂಲಂ ಹಿ ಸಂಧ್ಯಾ । ವೇದಾಃ ಶಾಖಾಃ ಸರ್ವಕರ್ಮಾಣಿ ಪತ್ರಂ ।
ತಸ್ಮಾನ್ಮೂಲಂ ಸರ್ವಯತ್ನೇನ ರಕ್ಷೇತ್ । ಮೂಲೇನಷ್ಟೇ ನೈವಶಾಖಾ ನ ಪತ್ರಂ ॥

—ಎಂದಿದ್ದಾರೆ. ಅಂದರೆ ; "ಬ್ರಾಹ್ಮಣನೇ ವೃಕ್ಷವು, ಸಂಧ್ಯಾವಂದನೆಯೇ ಅದರ ಬೇರು, ವೇದಗಳೇ ಕೊಂಬೆಗಳು, ಶಾಸ್ತ್ರೋಕ್ತವಾದ ಕರ್ಮಗಳೇ ಎಲೆಗಳು (ಮರವು ಪುಷ್ಟಿಯಾಗಿ ಬೆಳೆದು ಫಲ ಕೊಡಬೇಕಾದರೆ). ಅದರ ಬೇರನ್ನು ಎಲ್ಲ ಪ್ರಯತ್ನಗಳಿಂದಲೂ ರಕ್ಷಿಸಬೇಕು. ಬೇರೇ ನಷ್ಟವಾದರೆ ಕೊಂಬೆಯೂ ಇಲ್ಲ; ಪತ್ರವೂ ಇಲ್ಲ" ಎಂದು ಎಚ್ಚರಿಕೆ ನೀಡಿದ್ದಾರೆ.

ಸೃಷ್ಟಿಕರ್ತನಾದ ಬ್ರಹ್ಮನೂ ಕೂಡ ಪ್ರತಿದಿನವೂ ಸಂಧ್ಯಾಕಾಲದಲ್ಲಿ ಸಂಧ್ಯೋಪಾಸನೆ ಮಾಡುವುದು ಶಾಸ್ತ್ರವಿದಿತ. ಸಂಧ್ಯಾವಂದನೆಯು ಸಹಸ್ರ ವಿಧ ಎಂಬ ಆಡುಮಾತು ರೂಢಿಯಲ್ಲಿದ್ದರೂ, ಸಂಧ್ಯೋಪಾಸನೆಯಲ್ಲಿ ಅತ್ಯಂತ ಮುಖ್ಯಭಾಗವಾದ ಅರ್ಘ್ಯ, ಜಪ ಹಾಗೂ ಉಪಸ್ಥಾನವು ಸರ್ವತ್ರ ಒಂದೇ ಎಂಬುದು ಗಮನಾರ್ಹ. ತ್ರಿಕಾಲ ಸಂಧ್ಯಾವಂದನೆ ಎಂಬುದು ಸರ್ವತ್ರ ಪ್ರಚಾರದಲ್ಲಿದ್ದರೂ ಮಾಧ್ಯಾಹ್ನಿಕಸಂಧ್ಯೆ ಇಲ್ಲವೆಂದು ಸೂಚಿಸುವವರೂ ಉಂಟು. ಸಂಧ್ಯೋಪಾಸನೆಯು ಕಾಲಾತೀತವಾಗಬಾರದೆಂಬುದಕ್ಕೆ ಮಹಾಭಾರತದಲ್ಲಿ ಧರ್ಮರಾಯನು ಜಲಾಭಾವದಿಂದ ರಣಾಂಗಣದ ಧೂಳಿನಿಂದಲೇ ಸಾಯಂಸಂಧ್ಯೆಯ ಅರ್ಘ್ಯ ನೀಡಿದ್ದನ್ನು ನಾವು ನೆನಪು ಮಾಡಿಕೊಂಡರೆ ಸಕಾಲದಲ್ಲಿ ಸಂಧ್ಯಾವಂದನೆಯನ್ನಾಚರಿಸಬೇಕಾದುದರ ಮಹತ್ವ ಅರಿವಾಗುತ್ತದೆ. ದ್ವಿಜರು ಕಡ್ಡಾಯವಾಗಿ ಪ್ರತಿದಿನವೂ ಆಚರಿಸಲೇಬೇಕಾದ ನಿತ್ಯಕರ್ಮವಾದ ಸಂಧ್ಯಾವಂದನೆಯನ್ನು ಕುರಿತು ಅತ್ಯಾವಶ್ಯಕವಾದ ಮಾಹಿತಿಗಳು ಈ ಕಿರು ಹೊತ್ತಿಗೆಯಲ್ಲಿ ಅಡಕವಾಗಿವೆ. ಇಂದಿನ ಯುವ ಪೀಳಿಗೆಗೆ ಇದೊಂದು ಅತ್ಯುತ್ತಮ ಮಾರ್ಗದರ್ಶಿ.

ರಕ್ಷಾಪುಟ ಮುದ್ರಣ : ಶ್ರೀ ಶಕ್ತಿ, ಗಣೇಶ್ ಪ್ರಿಂಟರ್ಸ್, ಬೆಂಗಳೂರು—೫೬೦ ೦೧೮

Sri Vidyabharathi Book Centre, Sringeri